


August 1974

ಅವಳಿಮಕ್ಕಳ ಕಥೆ

ಕೆಲವು ಸಾವಿರ ವರ್ಷಗಳ ಹಿಂದೆ ಶ್ರಾವಸ್ತಿ ನಗರವು ಅತ್ಯಂತ ವೈಭವಪೂರ್ಣವಾಗಿ ಬೆಳಗುತ್ತಿದ್ದಿತು. ಆಗ ಆ ನಗರವನ್ನು ದಾನಶೀಲನೆಂಬ ರಾಜನು ಧರ್ಮದಿಂದ ಪಾಲಿಸಿಕೊಂಡಿದ್ದನು.

ಸುತ್ತುಮುತ್ತಲಿನ ದೇಶಗಳ ಎಲ್ಲಾ ರಾಜರಿಗಿಂತಲೂ ದಾನಶೀಲ ಮಹಾರಾಜನೇ ದೊಡ್ಡವನೆನಿಸಿದ್ದನು. ಕಾರಣವೇನೆಂದರೆ ಅವನಿಗೆ ಬಲಿಷ್ಠ ಕೋಟಿಗಟ್ಟಲೆಯಲ್ಲಿ ಸೈನ್ಯವಿದ್ದಿತು. ಎಂತಹ ಬರಗಾಲದಲ್ಲಿಯೂ ಪೋಷಿಸಲಾಗುವಂತೆ ರಾಜನ ಧಾನ್ಯಾಗಾರವು ತುಂಬಿಕೊಂಡಿತ್ತು.


ಅಷ್ಟು ಮಾತ್ರವಲ್ಲದೆ, ಮುತ್ತು ರತ್ನ ವಜ್ರಗಳೂ, ಸ್ವರ್ಣದ ರಾಶಿಯೂ, ಬೆಳ್ಳಿ ಬಂಗಾರಗಳೂ ಧನಾಗಾರದಲ್ಲಿ ಯಥೇಷ್ಟವಾಗಿದ್ದುವು.

ಇಂತಹ ಬಲಿಷ್ಠನಾದ ರಾಜನನ್ನು ಕೆಣಕುವ ಧೈರ್ಯ ಯಾರಿಗೂ ಬರುತ್ತಿರಲಿಲ್ಲ. ಅವನ ಅಂತಃಪುರದಲ್ಲಿ ಲೆಕ್ಕವಿಲ್ಲದಷ್ಟು ದಾಸ ದಾಸಿಯರು ತುಂಬಿದ್ದರು.

ಎಲ್ಲವನ್ನೂ ಮೀರಿಸುವಂತೆ ಆ ರಾಜನಿಗೆ ಅನುಕೂಲವತಿಯೂ, ಮಹಾಸಾಧ್ವಿಯೂ ಅಪೂರ್ವ ಸುಂದರಿಯೂ ಆದ ಕಾಂತಿರೇಖೆ ಎಂಬುವಳು ಪಟ್ಟದ ರಾಣಿಯಾಗಿ ದೊರಕಿದ್ದಳು.

ಇಷ್ಟೆಲ್ಲ ವೈಭವಗಳಿದ್ದು ಎಲ್ಲ ವಿಧದಲ್ಲಿ ಸಂತೋಷವಾಗಿದ್ದರೂ ಆ ರಾಜನಿಗೆ ಎಳ್ಳಿನಷ್ಟು ಕೂಡಾ ಗರ್ವವೆಂಬುದಿರಲಿಲ್ಲ. ಬಡಬಗ್ಗರ ಮೇಲೆ ಅವನಿಗೆ ವಿಶೇಷ ದಯೆಯಿತ್ತು. ಇವೆಲ್ಲಕ್ಕೂ ಕಳಸವಿಟ್ಟ ಹಾಗೆ ರಾಜನ ಹೃದಯದಲ್ಲಿ ದೈವಭಕ್ತಿ ತುಂಬಿತ್ತು. ಅವನು ಮಾಡುವ ದಾನ ಧರ್ಮಗಳು ತುಂಬ ಪ್ರಸಿದ್ಧವಾಗಿದ್ದುವು. ದೇಹಿ ಎಂದವರಿಗೆ ಇಲ್ಲವೆಂದವನಲ್ಲ. ಹೆಸರಿಗೆ ತಕ್ಕಂತೆಯೇ ನಡೆಯುತ್ತ, "ಸಾರ್ಥಕ ನಾಮದ ರಾಜ" ಎನಿಸಿಕೊಂಡಿದ್ದನು.

ಹೀಗಿರುವಾಗ ಯಾವ ಜನ್ಮದ ಪಾಪದಿಂದಲೋ ಒಂದು ಗಂಡಾಂತರವು ಪ್ರಾಪ್ತವಾಯಿತು. ಯಾವ ರೋಗವೂ ಇಲ್ಲದೆ, ತುಂಬಾ ಆರೋಗ್ಯವಾಗಿ ಉತ್ಸಾಹದಿಂದಿದ್ದ ರಾಣಿ ಕಾಂತಿರೇಖೆ ಇದ್ದಕ್ಕಿದ್ದ



ಹಾಗೆ ತೀರಿಹೋದಳು. ಮುಂಚಿನ ರಾತ್ರಿ ಎಂದಿನಂತೆ ಮಲಗಿದವಳು ಬೆಳಗ್ಗೆ ತಲೆ ನೋವು ಎಂದು ನರಳಿ, ಸಾಯಂಕಾಲ ತೀರಿಹೋದಳು. ಅರ್ಧಾಂಗಿಯ ಆಕಸ್ಮಿಕ ಮರಣದಿಂದ ರಾಜನು ಶೋಕದಲ್ಲಿ ಮುಳುಗಿದನು. ಕಣ್ಣೀರಿಳಿಸಿ ಅತ್ತನು. ಪ್ರಜೆಗಳ ದುಃಖಕ್ಕೂ ಇತಿಮಿತಿಯಿರಲಿಲ್ಲ. ಏನಾದರೇನು ? ಸತ್ತುಹೋದ ರಾಣಿಯನ್ನು ತಿರುಗಿ ಹುಟ್ಟುವಂತೆ ಮಡಲು ಸಾಧ್ಯವಿಲ್ಲವಷ್ಟೆ ?

ಆದರೆ ರಾಜನು ವೈರಾಗ್ಯದಿಂದ ರಾಜ್ಯಪಾಲನೆಯಲ್ಲಿ ಪರಾಙ್ಮುಖನಾಗಿ ಕಾಡಿಗೆ ಹೋಗಲು ಸಿದ್ಧನಾದನು. ಆಗ ಮಂತ್ರಿ ಪುರೋಹಿತಾದಿಗಳು ರಾಜನಿಗೆ ವಿಧವಿಧವಾಗಿ ಬೋಧಿಸಿ, ಕರ್ತವ್ಯವನ್ನು ಜಾಗ್ರತಗೊಳಿಸಿ ಅವನಲ್ಲಿ ಸ್ಥೈರ್ಯವನ್ನು ಮೂಡಿಸಿದರು. ರಾಜನು ಶಾಂತನಾಗಿ ರಾಜ್ಯಪಾಲನೆಗೆ ಮನಸ್ಸು ಕೊಡಲು ತೊಡಗಿದನು. ರಾಜ ಪರಂಪರೆಯನ್ನು ಕಾಪಾಡಿಕೊಳ್ಳುವ ಧರ್ಮಕ್ಕಾಗಿ ಇನ್ನೊಂದು ವಿವಾಹ ಮಾಡಿಕೊಳ್ಳಬೇಕಾದುದು ಅಗತ್ಯವೆಂದು ಮಂತ್ರಿ ಪುರೋಹಿತರು ಬೋಧಿಸಿ ಕಡೆಗೆ ಅದಕ್ಕೂ ಅವನನ್ನು ಒಪ್ಪಿಸಿದರು. ಆ ರಾಜನಿಗೆ ತಕ್ಕ ರಾಣಿ ಸಿಕ್ಕಲು ತಡವಾಗಲಿಲ್ಲ. ಆಮೇಲೆ ಒಂದು ಒಳ್ಳೆಯ ಮುಹೂರ್ತದಲ್ಲಿ ರಾಜನಿಗೆ ಎರಡನೆಯ ವಿವಾಹವಾಯಿತು.

ಆದರೆ ದುರದೃಷ್ಟ, ಏನೋ ಕೆಟ್ಟ ಗ್ರಹವೇ ವಕ್ರಿಸಿರಬೇಕು. ಮದುವೆಯಾಗಿ ಕೆಲವೇ ದಿನಗಳಲ್ಲಿ ಆ ಹೆಂಡತಿ ಕೂಡಾ ತೀರಿಹೋದಳು.

ಈ ವಾರ್ತೆ ರಾಜ್ಯದಲ್ಲೆಲ್ಲಾ ವಿಶೇಷ ವಾರ್ತೆಯಾಗಿ ಹರಡ ತೊಡಗಿ ಸುತ್ತುಮುತ್ತು ಇರುವ ದೇಶಗಳಲ್ಲಿಯೂ ವ್ಯಾಪಿಸಿತು. ಮಂತ್ರಿ ಸಾಮಂತರೆಲ್ಲಾ ರಾಜನನ್ನು ನೋಡಲು ಬಂದು ಸಮಾಧಾನ ಹೇಳಿ, ಎಂದಿನಂತೆ ರಾಜನೂ, ರಾಜ್ಯವೂ ಊರ್ಜಿತವಾಗಿರಲು ಅವನು ಮೂರನೇಸಾರಿ ವಿವಾಹ ಮಾಡಿಕೊಳ್ಳಲೇ ಬೇಕೆಂದು ಒತ್ತಾಯ ಮಾಡಿ ಅದಕ್ಕೂ ಒಪ್ಪಿಸಿದರು.


ಆದರೆ ಈ ರಾಜನಿಗೆ ಮದುವೆಯಾದ ಕೆಲವೇ ದಿನಗಳಲ್ಲಿ ಅವನ ಹೆಂಡತಿ ತೀರಿಹೋಗುವಳೆಂಬ ಕೆಟ್ಟ ವಾರ್ತೆ ಗಟ್ಟಿಯಾಗಿ ಹಬ್ಬಿರುವಾಗ, ಯಾವ ತಂದೆ ತಾಯಿಗಳು ಅವನಿಗೆ ತಮ್ಮ ಮಗಳನ್ನು ಕೊಟ್ಟಾರು ? ರಾಜವಂಶದವರಂತೂ ಹೋಗಲಿ, ಸಾಧಾರಣ ಕುಟುಂಬಸ್ಥರು ಕೂಡಾ ತಮ್ಮ ಮಗಳನ್ನು ಈ ರಾಜನಿಗೆ ಕೊಡಲು ಒಪ್ಪಲಾರದೆ ಹೋದರು. ಆದರೆ ಪಟ್ಟುಬಿಡದ್ದೆ ಮಂತ್ರಿಗಳೂ ಪುರೋಹಿತರೂ, ಸಾಮಂತರೂ ದೇಶದ ಮೂಲೆ ಮೂಲೆಗಳಲ್ಲಿ ತಮ್ಮ ರಾಜನಿಗಾಗಿ ಹುಡುಗಿಯನ್ನು ಹುಡುಕಿಕೊಂಡಿದ್ದರು.

ಹೀಗೆ ಹುಡುಕುತ್ತಿರುವಾಗ ಕೆಲವು ದಿನಗಳ ಮೇಲೆ, ಒಬ್ಬಳು ಬಡತಾಯಿ ತನ್ನ ಮಗಳನ್ನು ದಾನಶೀಲ ರಾಜನಿಗೆ ಕೊಡಲು ಒಪ್ಪಿಕೊಂಡಳು

ಸೌಂದರ್ಯ್ಯದ ರಾಶಿಯಂತಿದ್ದ ಆ ಬಡವೆಯ ಮಗಳನ್ನು ನೋಡಿ ಮಂತ್ರಿ ಮುಂತಾದ ರಾಜ ಪರಿವಾರದವರು ಬಹಳ ಸಂತೋಷಪಟ್ಟರು. ಈ ಸಮಾಚಾರವನ್ನು ರಾಜನಿಗೂ ನಿವೇದಿಸಿಕೊಂಡರು. ಈ ಸಾರಿ ತನ್ನ ರಾಣಿಯಾಗಲಿರುವವಳು ಸಾಮಾನ್ಯ ಸ್ತ್ರೀ ಎಂಬುದನ್ನು ತಿಳಿದು ರಾಜನಿಗೆ ಚಿಂತೆಯಾಗಲಿಲ್ಲ. ಅದಕ್ಕೆ ಬದಲಾಗಿ ಸಂತೋಷದಿಂದಲೇ ಮಂತ್ರಿಗಳೊಂದಿಗೆ, "ನನ್ನ ಅದೃಷ್ಟ ವಿಚಿತ್ರವಾಗಿದೆ. ಮೃತ್ಯು ದೇವತೆಗೆ ಬಡವರೂ ಒಂದೇ, ಭಾಗ್ಯವಂತರೂ ಒಂದೇ. ಮನುಷ್ಯರೊಳಗೇ ಇದೆ ಈ ಭೇದಗಳು. ನಾನು ರಾಜನಾಗಿ ಇಷ್ಟೊಂದು ಐಶ್ವರ್ಯದಲ್ಲಿ ಮೆರೆದಾಡುತ್ತಿದ್ದರೂ ನನ್ನ ರಾಣಿಯರನ್ನು ರಕ್ಷಿಸಿಕೊಳ್ಳಲು ನನ್ನಿಂದಾಯಿತೇ ? ಆಯುಷ್ಯ ಗಟ್ಟಿಯಾಗಿದ್ದರೆ ಯಾರಾದರೂ ಬದುಕಿರುತ್ತಾರೆ. ಆದುದರಿಂದ ಬಡವೆಯ ಮಗಳೆಂಬುದಕ್ಕಾಗಿ ನಿರಾಕರಿಸಬೇಕಾಗಿಲ್ಲ. ಅವಳು ಅದೃಷ್ಟವತಿ ಯಾಗಿರಬಹುದು. ನನಗೆ ಹಿಡಿದ ಗ್ರಹಕ್ಕೆ ಈ ಬಡವೆಯ ಮೇಲೆ ದಯೆ ಬಂದರೂ ಬಂದೀತು. ಅವಳನ್ನು ಮಾಡಿಕೊಳ್ಳಲು ನನ್ನಿಂದ ಅಡ್ಡಿಯೇನಿಲ್ಲ" ಎಂದನು.

ಈ ಮಾತು ಕೇಳಿ ಎಲ್ಲರಿಗೂ ಬಹಳ ಸಂತೋಷವಾಯಿತು. ವಿವಾಹಕ್ಕೆ ಮುಹೂರ್ತ ನೋಡಿದರು. ಆ ಬಡವೆಯ ಮಗಳೊಂದಿಗೆ ರಾಜನ ವಿವಾಹಕ್ಕೆ ಸಕಲ ಏರ್ಪಾಡುಗಳೂ ಭರದಿಂದ ನಡೆದುವು. ಆದರೆ ಎಲ್ಲರಿಗೂ ಎದೆಯೊಳಗೆ ಒಂದು ಕಳ್ಳ ಭಯವು ಅಡಗಿಕೊಂಡಿದ್ದಿತು. ಈ ಮೊದಲು ರಾಜನು ವಿವಾಹ ಮಾಡಿಕೊಂಡ ಒಂದೇ ವಾರದೊಳಗೆ ಅವನ ಹೆಂಡತಿ ತೀರಿಹೋಗಿದ್ದಳೆಂಬ ನೆನಪು ಹೇಗೆ ಮರೆಯಲಾದೀತು ? ಈ ಹುಡುಗಿಯ ಆಯುಸ್ಸೂತ್ರ ಹೇಗೋ? ಎಲ್ಲರಿಗೂ ಹೃದಯದೊಳಗೆ ಭಯವೇ.

ವಿವಾಹ ಮುಗಿದು ಒಂದೊಂದೇ ದಿನಗಳುರುಳಿದುವು. ಕಳೆದ ಬಾರಿಯಂತೆ ಏನೂ ಆಗಲಿಲ್ಲ. ವಾರಗಳು ತಿಂಗಳುಗಳಾಗಿ ಸಾಗುತ್ತಿದ್ದುವು. ರಾಜನ ಈ ಮೂರನೇ ಹೆಂಡತಿಗೆ ಒಂದು ತಲೆ ನೋವೂ ಬರಲಿಲ್ಲ. ರಾಜನಿಗೂ ಮಂತ್ರಿಗಳಿಗೂ ಪ್ರಜೆಗಳಿಗೂ [illegible]





ಬಂದಿತು. ಪ್ರಜೆಗಳು ಬಹಳ ಸಂತೋಷಗೊಂಡು "ಈ ಮೂರನೇ ಹೆಂಡತಿಯಲ್ಲಾದರೂ ನಮ್ಮ ರಾಜನಿಗೆ ಸಂತಾನವಾಗಲಿ !" ಎಂದು ದೇವರನ್ನು ಪ್ರಾರ್ಥಿಸ ತೊಡಗಿದರು.

ಪ್ರಜೆಗಳ ಪ್ರಾರ್ಥನೆ ದೇವರ ಕಿವಿಗೆ ಕೇಳಿಸಿತೋ ಏನೋ ? ಎರಡನೇ ತಿಂಗಳಿನಲ್ಲಿ ರಾಣಿ ಗರ್ಭವತಿಯಾಗಿರುವಳೆಂದು ಅಂತಃಪುರದಿಂದ ಸವಿಯಾದ ಸುದ್ದಿ ಹೊರಟಿತು. ಈ ಸುದ್ದಿ ಕೇಳಿದ ಪ್ರಜೆಗಳ ಸಂತೋಷಕ್ಕೆ ಮೇರೆಯಿರಲಿಲ್ಲ, ಇನ್ನು ರಾಜಪರಿವಾರದವರ ಸಂಗತಿ ಕೇಳಬೇಕೆ ? ರಾಜನು ಸಂತೋಷದಿಂದ ದೇವಾಲಯಗಳಲ್ಲಿ ಪೂಜೆ ಮಾಡಿಸಿದನು. ಪ್ರಜೆಗಳೂ ರಾಜನಿಗೆ ಒಳ್ಳೆಯ ಸಂತಾನವಾಗಲೆಂದು ಪ್ರಾರ್ಥಿಸಿಕೊಂಡಿದ್ದರು.

ಕ್ರಮವಾಗಿ ಒಂಬತ್ತು ತಿಂಗಳು ತುಂಬಿದ ಮೇಲೆ ಒಂದು ಶುಭದಿನ, ಶುಭನಕ್ಷತ್ರದಲ್ಲಿ ರಾಣಿ ಪದ್ಮಮುಖಿಗೆ ಸುಖ ಪ್ರಸವವಾಗಿ, ಮೂರು ಅವಳಿಜವಳಿ ಮಕ್ಕಳನ್ನು ಹಡೆದಳು. ಮೂರೂ ಹೆಣ್ಣು ಮಕ್ಕಳೇ. ತಮ್ಮ ವಂಶವನ್ನು ಉದ್ಧರಿಸುವಂತಹ ಒಬ್ಬ ಮಗನು ಹುಟ್ಟಬಹುದೆಂದು ರಾಜನು ತುಂಬ ಆಶೆಯಿಂದಿದ್ದರೆ, ಹುಟ್ಟಿದ ಮೂರು ಮಕ್ಕಳು ಹೆಣ್ಣಾಗಿರುವುದನ್ನು ಕೇಳಿ ರಾಜನಿಗೆ ಸ್ವಲ್ಪ ಬೇಸರವಾಗದಿರಲಿಲ್ಲ.


ಆದರೆ ಆ ಧೀರರಾಜನು ತನ್ನ ಬೇಸರವನ್ನು ಸ್ವಲ್ಪ ಕೂಡ ಹೊರಗೆ ತೋರಗೊಡದೆ, ಹೆಣ್ಣಾದರೂ ಗಂಡಾದರೂ ದೇವರು ಕೊಡಿಸಿದುದನ್ನು ಸಂತೋಷವಾಗಿ ಸ್ವೀಕರಿಸೋಣವೆಂದುಕೊಂಡು ಸಮಾಧಾನದಿಂದಿದ್ದನು. ರಾಜನೂ ರಾಣಿಯೂ ತಮ್ಮ ಮನೆಯಲ್ಲಿ ಉದಯಿಸಿದ ಆ ಮೂರೂ ಹೆಣ್ಣು ಮಕ್ಕಳನ್ನು ತುಂಬ ಮುದ್ದಿನಿಂದ ಬೆಳೆಸ ತೊಡಗಿದರು.

ಮೂವರಿಗೂ ಸುಹಾಸಿನಿ, ಸುಭಾಷಿಣಿ, ಸುಕೇಶಿನಿ, ಎಂದು ಬಹಳ ವೈಭವದಿಂದ ನಾಮಕರಣ ಮಹೋತ್ಸವ ನಡೆಸಿದರು. ಮೂವರು ಹುಡುಗಿಯರೂ ದಿನದಿಂದ ದಿನಕ್ಕೆ ಬೆಳೆಯುತ್ತ ತಮ್ಮ ಸೌಂದರ್ಯದಿಂದ ಅರಮನೆಯನ್ನು ಬೆಳಗಿಸ ತೊಡಗಿದರು. ಆ ಹುಡುಗಿಯರ ಆಟಪಾಟ ಚುರುಕುತನಗಳನ್ನು ನೋಡಿದವರು "ಒಬ್ಬೊಬ್ಬಳೂ ಒಬ್ಬೊಬ್ಬ ಕುಮಾರನಿಗೆ ಸರಿಯಾದವಳು !" ಎಂದುಕೊಳ್ಳುತ್ತಿದ್ದರು. ರಾಜನಿಗೂ ಗಂಡು ಮಗವಿಲ್ಲವೆಂಬ ಸಣ್ಣ ಕೊರತೆಯೂ ಅಳಿಸಿ ಹೋಯಿತು.

ಇಷ್ಟೆಲ್ಲ ಆನಂದದಲ್ಲಿ ದಿನಗಳು ಕಳೆಯುತ್ತಿರುವಾಗ, ಮಧ್ಯೆಮಧ್ಯೆ ಚಿಕ್ಕಚಿಕ್ಕ ಭೀತಿಗಳು ಬಂದು ರಾಜನನ್ನೂ ರಾಣಿಯನ್ನೂ ಥಕ್ಕನೆ ಗಾಬರಿಗೊಳಿಸುತ್ತಿದ್ದುವು. ಆ ಮೂವರು ಹುಡಗಿಯರಲ್ಲಿ ಆಗಾಗ ಯಾರೋ ಒಬ್ಬಳು ಯಾವುದೋ ಒಂದು ಅಪಾಯದಲ್ಲಿ ಸಿಕ್ಕಿ, ಹೇಗೋ ತಪ್ಪಿಸಿಕೊಂಡು ಪಾರಾಗುವ ಘಟನೆ ಎಲ್ಲರ ಹೆದರಿಕೆಗೂ ಕಾರಣವಾಗ ತೊಡಗಿತು. ಒಂದುಸಾರಿ ಸುಹಾಸಿನಿ ತಂದೆಯೊಂದಿಗೆ ಹೂ

ದೋಟದಲ್ಲಿ ತಿರುಗಾಡಿಕೊಂಡಿದ್ದಾಗ, ದೊಡ್ಡದೊಂದು ಸರ್ಪವು ಆ ಹುಡುಗಿಯನ್ನು ಕಡಿಯಲು ಬಂದಿತು. ಆ ಸಮಯದಲ್ಲಿ ರಾಜನು ತನ್ನ ಕತ್ತಿಯಿಂದ ಆ ಸರ್ಪವನ್ನು ಕಡಿದು ಹಾಕಿ ಬಿಟ್ಟಿದ್ದನು. ಕೂದಲಿನೆಳೆಯಷ್ಟು ಹೆಚ್ಚು ಕಡಿಮೆಯಾಗಿದ್ದರೆ ಆದಿನ ಸುಹಾಸಿನಿಗೂ ಲೋಕಕ್ಕೂ ಇರುವ ಋಣವು ತೀರಿ ಹೋಗಿರುತ್ತಿತ್ತು.

ಮತ್ತೊಂದುಸಾರಿ ಸುಭಾಷಿಣಿ ತಾಯಿಯೊಂದಿಗೆ ನದಿಯ ಬದಿಯಲ್ಲಿ ವಿಹರಿಸಿಕೊಂಡಿದ್ದಳು. ಅಷ್ಟರವರೆಗೂ ಪ್ರಶಾಂತವಾಗಿದ್ದ ಆ ನದಿ ಒಮ್ಮೆಲೇ ಉಕ್ಕಿಕೊಂಡು ಬಂದು ಬದಿಯಲ್ಲಿ ನಿಂತಿದ್ದ ಸುಭಾಷಿಣಿಯನ್ನು ತನ್ನೊಳಗೆ ಎಳೆದುಕೊಂಡು ಹೋಯಿತು. ರಾಣಿಯ ಕಿರುಚಾಟ ಕೇಳಿ, ದೈವವಶಾತ್ ಒಬ್ಬ ಗ್ರಾಮಸ್ಥ ಓಡಿಬಂದು, ನಡೆದ ಗಂಡಾಂತರವನ್ನು ತಿಳಿದು ನದಿಗೆ ಹಾರಿ ಸುಭಾಷಿಣಿಯನ್ನು ಎತ್ತಿ ತೀರಕ್ಕೆ ತಂದು ಕಾಪಾಡಿದನು. ಆ ಹಳ್ಳಿ ಮನುಷ್ಯ ಬಾರದೆ ಹೋಗಿದ್ದರೆ ಅಂದು ಸುಭಾಷಿಣಿ ಉಕ್ಕಿಬಂದ ಆ ನದಿಯ ಗರ್ಭದಲ್ಲಿ ಸೇರಿ ಹೋಗಿರುತ್ತಿದ್ದಳು. ಇದರಂತೆಯೇ ಮತ್ತೊಂದುಸಾರಿ ಮೂರನೇ ಕುಮಾರಿಯಾದ ಸುಕೇಶಿನಿ ಕೂಡಾ ಒಂದು ಪ್ರಾಣಗಂಡದಿಂದ ಬದುಕಿ ಉಳಿದಳು. ಅದೇನೆಂದರೆ, ಒಂದು ದಿನ ಸುಭಾಷಿಣಿ, ಸುಹಾಸಿನಿ, ಸುಕೇಶಿನಿಯರು ಕೂಡಿಕೊಂಡು ಹೂಗಳನ್ನು ಕೊಯ್ಯೋಣವೆಂದು ಉದ್ಯಾನವನಕ್ಕೆ ಹೋದರು. ಮೂವರೂ ತಮ್ಮ ಕೈಯಲ್ಲಿದ್ದ ಬುಟ್ಟಿಯಲ್ಲಿ ಹೂಗಳನ್ನು ಕೊಯಿದು ತುಂಬಿಸಿಕೊಂಡು ಮನೆಗೆ ಹೊರಟರು. ಮುಂದೆ ಸುಭಾಷಿಣಿಯೂ ಅವಳ ಹಿಂದೆ ಸುಹಾಸಿನಿಯೂ, ಆ ಮೇಲೆ ಸುಕೇಶಿನಿಯೂ ನಡೆಯುತ್ತಿದ್ದರು. ದಾರಿಯಲ್ಲಿ ಇದ್ದಕ್ಕಿದ್ದ ಹಾಗೆ ಸುಕೇಶಿನಿ ಕಿಟ್ಟನೆ ಕಿರುಚಿ, ದಡೀಲನೆ ಬಿದ್ದಳು. ಉಳಿದ ಹುಡುಗಿಯರಿಬ್ಬರೂ ಹೆದರಿ ಏನು ಮಾಡಲೂ ತೋರದೆ ಕೂಗುತ್ತಾ ಓಡಿಹೋಗಿ ತಾಯಿಯ ಹತ್ತಿರ ನಡೆದ ಸಂಗತಿಯನ್ನು ಹೇಳಿದರು. ಮಕ್ಕಳ ಕೂಗಾಟ ಕೇಳಿ ಎಲ್ಲರೂ ಓಡಿಬಂದರು.





ತಾಯಿಯೂ ಹೆದರುತ್ತ ಅವರನ್ನು ಕರೆದು ಕೊಂಡು ಸುಕೇಶಿನಿ ಬಿದ್ದಿರುವ ಸ್ಥಳಕ್ಕೆ ಓಡಿ ಬಂದಳು. ನೋಡಿದಾಗ ಹೂಗಳ ಗುಂಪಿನಿಂದ ಕದಲಿಕೊಂಡು ಹೋಗುತ್ತಿದ್ದ ರಕ್ಕಸ ಚೇಳಿನಂತಹ ಮಂಡ್ರಗಪ್ಪೆ ! ಅದು ಸುಕೇಶಿನಿಯನ್ನು ಕಡಿದಿರಬೇಕೆಂದೂ ಅದಕ್ಕೇ ಅವಳು ಮೂರ್ಛೆ ಬಿದ್ದಿದ್ದಾಳೆಂದೂ ರಾಣಿಗೆ ತಿಳಿಯಿತು. ಅವಳು ಮಂಡ್ರಗಪ್ಪೆಯನ್ನು ಹೊಡೆದು ಕೊಂದು, ಸುಕೇಶಿನಿಯನ್ನು ಎತ್ತಿ ಮನೆಗೆ ತಂದು, ವೈದ್ಯರನ್ನು ಕರೆಯಿಸಿದಳು. ಅವರು ಬಂದು ಏನೇನೋ ಚಿಕಿತ್ಸೆ ಮಾಡಿದ ಮೇಲೆ ಸುಕೇಶಿನಿ ಎದ್ದು ಎಂದಿನಂತೆ ಆದಳು.

ಈ ವಿಧವಾಗಿ ಮಕ್ಕಳಿಗೆ ಆಗಾಗ ಏನೋ ಒಂದು ಅಪಾಯ ಕಾಡುತ್ತಿದ್ದರೆ ತಂದೆ ತಾಯಿಗಳಿಗೆ ಹೇಗಿದ್ದೀತು ? ಅದರ ಮೇಲೆ ಮಕ್ಕಳೇ ಇಲ್ಲದೆ ಬಹಳ ಕಾಲದ ಮೇಲೆ ಹುಟ್ಟಿದ ಮಕ್ಕಳು. ರಾಜನ ಮನಸ್ಸು ಏನೇನೋ ದುಶ್ಶಂಕೆಗಳಿಗೊಳಗಾಯಿತು. ಜಾತಕದಲ್ಲೇನಾದರೂ ದೋಷವಿರಬಹುದು. ಅದನ್ನು ತಿಳಿದು ತಕ್ಕ ಪರಿಹಾರ ಮಾಡಿದರೆ ಪೀಡೆ ನಿವಾರಣೆಯಾದೀತು, ಎಂದು ಮಂತ್ರಿಗಳು ರಾಜನಿಗೆ ಸಲಹೆ ಮಾಡಿದರು.

ಅದರಂತೆ ರಾಜನು ಒಂದುದಿನ ಜ್ಯೋತಿಷ್ಕನನ್ನು ಅರಮನೆಗೆ ಕರೆಯಿಸಿ, ತನ್ನ ಮೂರೂ ಮಕ್ಕಳ ಜಾತಕವನ್ನು ಅವನಿಗೆ ತೋರಿಸಿ ಒಳಿತು ಕೆಡುಕುಗಳನ್ನು ಹೇಳಬೇಕೆಂದು ಕೇಳಿದನು.

ಜ್ಯೋತಿಷ್ಕನು ಜಾತಕವನ್ನು ಪರಿಶೀಲಿಸಿ, ಲೆಕ್ಕ ಹಾಕಿ ದೀರ್ಘವಾಗಿ ಆಲೋಚನೆ ಮಾಡಿ, ಏನೂ ಹೇಳದೆ ಸುಮ್ಮನಿದ್ದುಬಿಟ್ಟನು.

ಇದನ್ನು ನೋಡಿ ರಾಜನು ಇನ್ನಷ್ಟು ಆತಂಕಗೊಂಡು, "ಏಕೆ ? ಏನಾಯಿತು ? ಅನುಮಾನ ಪಡದೆ ಇರುವುದನ್ನು ಇರುವ ಹಾಗೆ ಹೇಳಿರಿ. ನಿಜವನ್ನು ತಿಳಿಯಬೇಕೆಂಬ ಉದ್ದೇಶದಿಂದಲೇ ನಿಮ್ಮನ್ನು ಕರೆಯಿಸಿದ್ದೇನೆ. ನಾನು ಹೆದರುವೆನೆಂದು ಯೋಚಿಸಬೇಡಿರಿ. ಧೈರ್ಯದಿಂದ ಕೇಳುತ್ತೇನೆ. ನೀವು ಕೂಡಾ ಇದ್ದ ಸಂಗತಿಯನ್ನು ಧೈರ್ಯದಿಂದ ಹೇಳಿರಿ" ಎಂದು ಧೈರ್ಯ ಹೇಳಿದನು.

ಆಗ ಆ ಜ್ಯೋತಿಷ ಶಿಖಾಮಣಿ, "ಮಹಾರಾಜಾ, ಈ ಮಕ್ಕಳು ಅತ್ಯಂತ ಸುಂದರಿಯರಾಗಿ ಬೆಳೆಯುತ್ತಿರುತ್ತಾರೆ. ದಿನದಿಂದ ದಿನಕ್ಕೆ ಇವರ ಸೌಂದರ್ಯ ಹೆಚ್ಚಾಗುತ್ತಾ ಹೋಗುತ್ತದೆ. ಚಿಂತಿಸಬೇಕಾದ ವಿಷಯವೇನಂದರೆ, ಇವರಲ್ಲಿ ಕೂಡುವ ಅಪೂರ್ವ ಸೌಂದರ್ಯವೇ ಇವರಿಗೆ ಶತ್ರುವಾಗಿ ಪರಿಣಮಿಸುತ್ತದೆ. ದಿನದಿಂದ ದಿನಕ್ಕೆ ಈ ಬಾಲೆಯರ ಸೌಂದರ್ಯವು ಹೆಚ್ಚುವ ಹಾಗೆ ಅಪಾಯವೂ ನೆರಳಿನಂತೆ ಹಿಂಬಾಲಿಸುತ್ತದೆ. ಆದರಿಂದ ಇವರು ಮೂವರೂ ಹುಟ್ಟಿದಂದಿನಿಂದ ಏನೋ ಒಂದು ಅಪಾಯವನ್ನು ದಾಟಿಕೊಂಡೇ ಬರಬೇಕಾಗಿದೆ..." ಎಂದು ಮಾತನ್ನು ನಿಲ್ಲಿಸಿದನು.




CHITRA

ಜೋಯಿಸನ ಬಾಯಿಯಿಂದ ಹೊರಡುವ ಪ್ರತಿ ಮಾತಿಗೂ ರಾಜನ ಎದೆ ಹೊಡೆದುಕೊಳ್ಳತೊಡಗಿತು. ಅವನ ಕಣ್ಣುಗಳಿಂದ ನೀರಿಳಿಯುವುದನ್ನು ನೋಡಿಯೇ ಜೋಯಿಸನು ಹೇಳುವುದನ್ನು ನಿಲ್ಲಿಸಿಬಿಟ್ಟಿದ್ದನು. ಆದರೆ ರಾಜನು ಬಿಡಲಿಲ್ಲ. ತನ್ನ ದುಃಖವನ್ನು ಹತ್ತೊತ್ತಿಕೊಂಡು, ಜೋಯಿಸನ ಭುಜವನ್ನು ತಟ್ಟಿ. "ನಿಲ್ಲಿಸಬೇಡಿರಿ. ಪೂರಾ ಹೇಳಿರಿ" ಎಂದು ಒತ್ತಾಯ ಮಾಡಿದನು.

"ಮಹಾರಾಜರೆ, ನಿಜವನ್ನು ಹೇಳಿ ನಿಮ್ಮ ಮನಸ್ಸನ್ನು ನೋಯಿಸಬೇಕಾಗಿ ಬಂದುದಕ್ಕೆ ಚಿಂತಿಸುತ್ತೇನೆ. ಈ ಬಾಲಿಕೆಯರಿಗೆ ಎಂಟು ವಯಸ್ಸು ಬಂದ ಮೇಲೆ ಯಾವ ಭಯವೂ ಇಲ್ಲ. ಇವರಿಗೆ ಏಳು ವಯಸ್ಸು ತುಂಬುವವರೆಗೂ ಪ್ರತಿದಿನವೂ ಪ್ರಾಣಾಪಾಯದ ಭೀತಿಯುಂಟಾಗುತ್ತಾ ಇರುತ್ತದೆ. ಈ ಏಳು ವರ್ಷಗಳು ತುಂಬುವವರೆಗೆ ಎಲ್ಲಾ ಗಂಡಗಳಿಂದ ಬದುಕಿ ಉಳಿದುಬಿಟ್ಟರೆ, ಎಂಟನೆಯ ವಯಸ್ಸಿನಿಂದ ಯಾವ ಭಯವೂ ಇಲ್ಲ. ಉತ್ತರೋತ್ತರ ಅಭಿವೃದ್ಧಿಯಾಗಿ ದೀರ್ಘಾಯುಷಿಗಳಾಗಿರುತ್ತಾರೆ. ಜನ್ಮಾಂತದ ಉದ್ದಕ್ಕೂ ಒಳ್ಳೆಯ ಯೋಗಗಳಿವೆ. ಏನೂ ಭಯವಿಲ್ಲ. ಏಳುವರ್ಷ ಪ್ರಾಯ ತುಂಬುವವರೆಗೆ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡಿಕೊಂಡು ಬಂದರೆ ನಾವೆಲ್ಲಾ ಧನ್ಯರು. ಇದಕ್ಕೆ ಮೇಲೆ ಹೇಳುವಂತಹ ವಿಶೇಷವೇನೂ ಈ ಜಾತಕದಲ್ಲಿಲ್ಲ" ಎಂದು ಜ್ಯೋತಿಷ್ಕನು ಮಾತು ಮುಗಿಸಿದನು.

ರಾಜನು ಜ್ಯೋತಿಷ್ಕನನ್ನು ಸತ್ಕರಿಸಿ ಕಳುಹಿಸಿಕೊಟ್ಟನು. ತರುವಾಯ ರಾಣಿಯ ಬಳಿಗೆ ಹೋಗಿ ಜ್ಯೋತಿಷ್ಕನು ಹೇಳಿದ ಎಲ್ಲಾ ವಿವರಗಳನ್ನೂ ಅವಳಿಗೆ ಹೇಳಿದನು. ಏಕೆಂದರೆ ಹೆಣ್ಣು ಮಕ್ಕಳ ಆರೈಕೆಯ ವಿಷಯದಲ್ಲಿ ತಾಯಿಗೆ ಹೆಚ್ಚಿನ ಜವಾಬ್ದಾರಿ ಇರುತ್ತದಷ್ಟೆ? ಆದರೆ ರಾಜನು ಹೇಳಿದ ಮಾತನ್ನು ಕೇಳಿ ರಾಣಿ ಭಯವನ್ನು ತಡೆದುಕೊಳ್ಳಲಾಗದೆ ಮೂರ್ಛೆ ಹೋಗಿ ಬಿದ್ದಳು

ದಾಸಿಯರು ಉಪಚಾರಗಳನ್ನು ಮಾಡಿದ ಮೇಲೆ ರಾಣಿಗೆ ಎಚ್ಚರ ಬಂದಿತು. ರಾಜನು ಅವಳಿಗೆ ಧೈರ್ಯ ಹೇಳುತ್ತಾ ಕುಳಿತಿದ್ದಾಗ, ಮಕ್ಕಳನ್ನು ನೋಡಿಕೊಳ್ಳುತ್ತಿದ್ದ ದಾದಿಯೊಬ್ಬಳು ಓಡುತ್ತಾ ಬಂದು, "ನಮ್ಮ ಮೂವರು ಕುಮಾರಿಯರೂ ಮೂರ್ಛೆ ಹೋಗಿ ಬಿದ್ದರಮ್ಮಾ! ಇದ್ದಕ್ಕಿದ್ದ ಹಾಗೆ ತೋಟದಲ್ಲಿ ಬಿದ್ದುಬಿಟ್ಟರು." ಎಂದಳು ಅಳುತ್ತಾ.

ರಾಣಿ "ಹಾ ದೇವರೇ!" ಎಂದು ಕೂಗುತ್ತಾ ತೋಟದ ಕಡೆಗೆ ಓಡಿದಳು. ದಾಸಿಯರೂ ಅವಳ ಹಿಂದೆ ಓಡಿದರು. ರಾಜನು "ವೈದ್ಯರನ್ನು ಕರೆತನ್ನಿ" ಎಂದು ಸೇವಕರಿಗೆ ಆಜ್ಞೆ ಮಾಡಿ ತಾನೂ ಆ ಕಡೆಗೆ ಓಡಿದನು.

(ಇನ್ನೂ ಇದೆ)



ಅವಳಿಮಕ್ಕಳ ಕಥೆ

Sept 1974


೧

[ಶ್ರಾವಸ್ತಿ ನಗರವನ್ನಾಳುವ ದಾನಶೀಲ ಮಹಾರಾಜನಿಗೆ ಬಹಳ ಕಾಲ ಮಕ್ಕಳಿಲ್ಲದೆ ಕಡೆಗೆ ಮೂರು ಅವಳಿಜವಳಿ ಹೆಣ್ಣು ಮಕ್ಕಳು ಹುಟ್ಟಿದರು. ಆ ಮಕ್ಕಳು ಹುಟ್ಟಿದಂದಿನಿಂದಲೂ ಏನೋ ಒಂದು ಅಪಾಯಕ್ಕೆ ಗುರಿಯಾಗುತ್ತಲೇ ಇದ್ದರು. ರಾಜನು ಅವರ ಕ್ಷೇಮಕ್ಕಾಗಿ ಜೋಯಿಸರ ಹತ್ತಿರ ಮಾತಾಡುತ್ತಿರುವಾಗ ಮೂರು ಮಂದಿ ಮಕ್ಕಳೂ ಮೂರ್ಛೆ ಹೋಗಿ ಬಿದ್ದರೆಂದು ಸಮಾಚಾರ ತಿಳಿಯಿತು. ರಾಜನೂ ರಾಣಿಯೂ ಅವರ ಬಳಿಗೆ ಓಡಿದರು.]

ಮುಂದಿನಿಂದ ದಾಸಿಯರು ದಾರಿ ತೋರಿಸುತ್ತಾ ಓಡುತ್ತಿರಲು ರಾಜನೂ ರಾಣಿಯೂ ಅವರ ಹಿಂದೆ ಓಡುತ್ತಾ ಹೋದರು. ಕೆಲಮಂದಿ ಸೇವಕ ಸೇವಕಿಯರೂ ಅವರೊಂದಿಗೆ ಓಡಿದರು. ಅವರೆಲ್ಲ ಉದ್ಯಾನವನವನ್ನು ಸೇರಿದಾಗ ಅಲ್ಲೊಂದು ಮರದ ಳಗೆ ಮೂವರು ಬಾಲಿಕೆಯರೂ ಬಿದ್ದಿದ್ದರು. ಅವರ ಮುಖಗಳೆಲ್ಲ ಕಳೆಗೆಟ್ಟಿತ್ತು, ಕಾಂತಿ ಕುಂದಿತ್ತು. ದೇಹವು ತಣ್ಣಗಾಗತೊಡಗಿತ್ತು. ಕಣ್ಣುಗಳು ಅರ್ಧ ಮುಚ್ಚಿದ್ದುವು. ಶ್ವಾಸ ಕೂಡಾ ಆಗೊಮ್ಮೆ ಹೀಗೊಮ್ಮೆ ಆಡುತಿತ್ತು.

ಅದನ್ನು ನೋಡಿ ರಾಜನು ಗಾಬರಿಯಾಗಿ, "ಅಯ್ಯೋ ದೇವರೇ !" ಎಂದು ಕೂಗಿದ. "ನನ್ನ ಮಕ್ಕಳೇ !" ಎಂದು ರಾಣಿಯೂ ಕೂಗಿ ಬೊಂಬೆಯಂತೆ ಸ್ತಬ್ಧಳಾದಳು. ಅಷ್ಟರೊಳಗೆ ಯಾರೋ ಓಡಿಹೋಗಿ ರಾಜ ವೈದ್ಯನನ್ನು ಕರೆದುಕೊಂಡು ಬಂದರು. ವೈದ್ಯನು ಅಲ್ಲಿಯ ಪರಿಸ್ಥಿತಿಯನ್ನು ಗ್ರಹಿಸಿ, "ಹೆದರಬೇಡಿ ಪ್ರಭುಗಳೇ !" ಎಂದು ರಾಜನ ಭುಜ ತಟ್ಟಿದಾಗ ರಾಜನಿಗೆ ಪ್ರಜ್ಞೆ ಬಂತು.

"ಏನೂ ಅರಿಯದ ಈ ಪಾಪದ ಬಾಲಿಕೆಯರಿಗೆ ಏನಾಯಿತು ವೈದ್ಯರೇ ?" ಎಂದು ದೀನತೆಯಿಂದ



ಕೇಳಿದ ರಾಜ. ವೈದ್ಯನು ಬಾಲಿಕೆಯರ ನಾಡಿ ಹಿಡಿದು ನೋಡಿ, ಆ ಪ್ರದೇಶದ ಸುತ್ತುಮುತ್ತಲೂ ಕಣ್ಣೋಡಿಸಿದನು.

ಮಕ್ಕಳು ಬಿದ್ದಿರುವ ಸ್ಥಳಕ್ಕೆ ತುಸುದೂರದಲ್ಲಿ ಒಂದು ಹಣ್ಣು ಬಿದ್ದಿರುವುದು ಕಾಣಿಸಿತು. ವೈದ್ಯನು ಅದನ್ನು ತೆಗೆದು ಪರೀಕ್ಷಿಸಿದಾಗ, ಅದರಲ್ಲಿ ಹಲ್ಲಿನಿಂದ ಕಚ್ಚಿ ಮಾಡಿದ ಗೀರುಗಳು ಕಾಣಿಸಿದುವು. ಆಸ್ಥಾನ ವೈದ್ಯ ಶೇಖರನು ಆ ಹಣ್ಣಿನ ವಾಸನೆಯನ್ನು ನೋಡಿ, "ಓಹ್! ಈಗ ತಿಳಿಯಿತು. ಇದು ವಿಷದ ಹಣ್ಣು. ಇದನ್ನು ಕಚ್ಚಿದುದರಿಂದಲೇ ಈ ಬಾಲಿಕೆಯರು ಹೀಗೆ ಬಿದ್ದಿದ್ದಾರೆ" ಎಂದು ಹೇಳಿ, ಕೂಡಲೇ ತನ್ನ ಸಂಚಿಯೊಳಗಿನಿಂದ ಯಾವುದೋ ಔಷಧಿ ತೆಗೆದು ಮಕ್ಕಳ ಮೂಗಿಗೆ ಹಿಡಿದನು. ಆದರಿಂದ ಆ ಮಕ್ಕಳ ಮೂರ್ಛೆ ಹಾಗೆಯೇ ಇದ್ದರೂ, ಶ್ವಾಸ ಸ್ವಲ್ಪ ಚೆನ್ನಾಗಿ ಆಡತೊಡಗಿತು. ಕಣ್ಣುಗಳಲ್ಲಿ ಪ್ರಕಾಶ ಬರ ತೊಡಗಿತು. ಎಲ್ಲರಿಗೂ ಸಮಾಧಾನವಾಯಿತು.

ವೈದ್ಯನು ಆ ವಿಚಿತ್ರವಾದ ಹಣ್ಣನ್ನು ದಾಸಿಗೆ ತೋರಿಸುತ್ತ "ಇದು ಎಂತಹ ಹಣ್ಣು? ಎಲ್ಲಿಂದ ಬಂತು? ಇವರಿಗೆ ಹೇಗೆ ಸಿಕ್ಕಿತು? ನಿನಗೆ ಗೊತ್ತೇ?" ಎಂದು ಕೇಳಿದ,

ಅದಕ್ಕೆ ದಾಸಿ ಹೆದರುತ್ತ ಹೀಗೆಂದು ಉತ್ತರ ಕೊಟ್ಟಳು: "ಅದು ನನಗೂ ಗೊತ್ತಿಲ್ಲ ಸ್ವಾಮಿ. ನಾನು ಎಂದಿನ ಹಾಗೆ ಮಕ್ಕಳನ್ನು ಕರೆದುಕೊಂಡು ಉದ್ಯಾನದೊಳಕ್ಕೆ ಬಂದೆ. ಸ್ವಲ್ಪ ಹೊತ್ತು ಅಲ್ಲಿ ಇಲ್ಲಿ ತಿರುಗಾಡಿ ಕಡೆಗೆ ಈ ಮರದ ಬಳಿಗೆ ಬಂದು ಮಕ್ಕಳೆಲ್ಲ ಕುಳಿತರು. ನಾನೂ ಕುಳಿತೆ. ಆಗ ಮಕ್ಕಳು ಬಾಯಾರಿಕೆಯಾಗುತ್ತೆ, ನೀರು ಬೇಕು, ತಾರೆಂದು ನನಗೆ ಹೇಳಿದರು. ನಾನು ನೀರು ತೆಗೆದುಕೊಂಡು ಬರುವಷ್ಟರಲ್ಲಿ ದೊಡ್ಡವಳೂ ಎರಡನೆಯವಳೂ ಆಗಲೇ ಮೂರ್ಛೆ ಬಿದ್ದಿದ್ದರು. ಸಣ್ಣವಳು ಈ ಹಣ್ಣನ್ನು ಕಚ್ಚಿಕೊಂಡಿದ್ದಳು. ಎಂತಹ ಹಣ್ಣು ಇದು ಎಂದು ನಾನು ಕೇಳುವಷ್ಟರಲ್ಲಿ ಅವಳೂ ಮೂರ್ಛೆ ಬಿದ್ದುಬಿಟ್ಟಳು ಸ್ವಾಮಿ. ಹಣ್ಣು ಜಾ ಆಚೆಗೆ ಉರುಳಿ ಹೋಯಿತು. ನನಗೆ ಯಾವುದೂ ಅರ್ಥವಾಗಲಿಲ್ಲ. ಏನೂತೋರಲಿಲ್ಲ. ಇದಕ್ಕಿಂತ ಹೆಚ್ಚಿ ನನಗೇನೂ ಗೊತ್ತಿಲ್ಲ ಸ್ವಾಮಿ. ಕ್ಷಮಿಸಬೇಕು"

ಅವಳ ಮಾತನ್ನು ಕೇಳಿ ಆಸ್ಥಾನ ವೈದ್ಯನು ತಲ ಯೆತ್ತಿ ಆ ಮರದ ಮೇಲೆ ನೋಡಿದನು. ಆ ಮ ದಲ್ಲಿ ಯಾವ ಹಣ್ಣು ಕಾಯಿಗಳೂ ಇರಲಿಲ್ಲ. ಆದ ಮೇಲಿನ ಕೊಂಬೆಯಲ್ಲಿ ಒಂದು ಹದ್ದು ಕುಳಿತ ಕೊಂಡು ಚುರ್ರುಚುರ್ರನೆ ಕೆಳಗೇ ನೋಡಿಕೊಂಡಿತ್ತು

ವೈದ್ಯನು ಆವೇಶದಿಂದ, "ಅದೋ,- ಆ ಕೆಟ್ಟ ಕಣ್ಣಿನ ಹಾಳು ಹದ್ದೇ ಈ ನಂಜಿನ ಹಣ್ಣನ್ನು ಕೆಳ ಹಾಕಿದೆ. ಎಲ್ಲಿಂದ ತಂದಿತೋ ಏನೋ!" ಎಂದ ಕೂಡಲೇ ರಾಜನು ಕೋಪದಿಂದ, "ಯಾರಲ್ಲೀ ನೋಡುತ್ತೀರೇನು? ಕೊಲ್ಲಿರಿ ಈ ಹದ್ದನ್ನು!" ಎಂದು ಅರಚಿದ.

ಕೂಡಲೇ ಅಲ್ಲಿ ಸೇರಿದವರಲ್ಲಿ ವೀರಬಂಟನೊಬ್ಬ ತನ್ನ ಕೈಯಲ್ಲಿದ್ದ ಬಿಲ್ಲಿಗೆ ಬಾಣ ಹೂಡಿ ಆ ಹದ್ದನ್ನು ಹೊಡೆಯಬೇಕೆನ್ನುವುದರೊಳಗೆ, ಆ ಹದ್ದು ರಿವ್ವನೆ ಹಾರಿ ಆಕಾಶದಲ್ಲೆಲ್ಲೋ ಮಾಯವಾಗಿ ಹೋಯಿತು.

ಇಷ್ಟರಲ್ಲಿ ಆಸ್ಥಾನ ವೈದ್ಯನು ಕೊಟ್ಟ ಔಷಧವು ತನ್ನ ಪರಿಣಾಮವನ್ನು ತೋರಿಸತೊಡಗಿತು. ಮೂವರು ಬಾಲಿಕೆಯರೂ ಕದಲತೊಡಗಿದರು. ಕಣ್ಣು ಬಿಡಿಸಿ ಮುಚ್ಚಿ ಬಿಡಿಸತೊಡಗಿದರು. ಇದನ್ನು ನೋಡುವಾಗ ಅಲ್ಲಿ ಕೂಡಿದವರಿಗೆಲ್ಲ ಜೀವವು ಸ್ಥಿರವಾಗಿ ನಿಂತಿತು. ಮಕ್ಕಳು ಮೂವರೂ ಎದ್ದು ಕುಳಿತರು. ರಾಜನೂ ರಾಣಿಯೂ ಮಕ್ಕಳನ್ನು ಎತ್ತಿಕೊಂಡು ಆಸ್ಥಾನವೈದ್ಯನೊಂದಿಗೆ ಅರಮನೆಯ ಮಾಳಿಗೆಗೆ ಹೋದರು. ಈ ದಿನ ಯಮನ ಬಾಯಿಯಿಂದಲೇ ತಮ್ಮ ಪ್ರೀತಿಯ ಮಕ್ಕಳನ್ನು ಬಿಡಿಸಿಕೊಂಡ ಹಾಗೆ ಅವರಿಗೆ ಅನಿಸಿತು.

ಆಮೇಲೆ ಆಸ್ಥಾನ ವೈದ್ಯನು ಇನ್ನೊಂದು ಔಷಧವನ್ನು ತಯಾರಿಸಿ ಆ ಮಕ್ಕಳಿಗೆ ಕೊಡಿಸಿದನು. ಸ್ವಲ್ಪ ಹೊತ್ತಿಗೆ ಮಕ್ಕಳು ಎಂದಿನಂತೆ ನಕ್ಕು ಆಡತೊಡಗಿದರು. ಆಶ್ಚರ್ಯವೇನಂದರೆ, ಇಷ್ಟು ದೊಡ್ಡ ಗಂಡಾಂತರಕ್ಕೆ ಒಳಗಾದ ಆ ಮಕ್ಕಳು ಸ್ವಲ್ಪ ಕೂಡಾ ಆಯಾಸ ಪಟ್ಟವರಂತೆ ಕಾಣಲಿಲ್ಲ. ಎಂದಿನಂತೆ ನಗುಮುಖದಿಂದ ಮೊದಲಿನ ಉತ್ಸಾಹದ ಕಳೆಯಲ್ಲೇ ಇದ್ದರು. ಮಕ್ಕಳ ಆರೋಗ್ಯಕ್ಕೆ ಯಾವ ಹಾನಿಯೂ ಆಗಲಿಲ್ಲವೆಂದು ವೈದ್ಯನೂ ಭರವಸೆ ಹೇಳಿದ. ಆದರಿಂದಾಗಿ ರಾಜನಿಗೂ ರಾಣಿಗೂ ಬಹಳ ಸಮಾಧಾನವೆನಿಸಿ ದೇವರ ದಯವನ್ನು ಕೊಂಡಾಡಿದರು.

ಈ ಘಟನೆ ನಡೆದಾಗ ಆ ಬಾಲಿಕೆಯರ ವಯಸ್ಸು, ಕೇವಲ ನಾಲ್ಕು ವರ್ಷಗಳು. ಜ್ಯೋತಿಷ್ಯನು ಹೇಳಿದ ಲೆಕ್ಕ ಪ್ರಕಾರವಾದರೆ ಇನ್ನೂ ಮೂರು ವರ್ಷಗಳವರೆಗೆ, ಪ್ರತಿದಿನವೂ ಗಂಡಾಂತರವನ್ನೇ ಎದುರು ನೋಡುತ್ತಿರಬೇಕೆಂದು ರಾಜನು ನಿಶ್ಚಯಿಸಿಕೊಂಡಿದ್ದನು. ಈ ಮೂರು ವರ್ಷಗಳ ಪ್ರತಿದಿನ ರಾತ್ರಿಯೂ ಹಗಲೂ ಯಾವ ಆಪದವೂ ಬಾರದಂತೆ ಮಕ್ಕಳನ್ನು ಕಾಪಾಡುವುದು ಹೇಗೆ ?





ಇದೊಂದು ತೀವ್ರ ಚಿಂತೆಯಾಗಿ, ರಾಜನು ಸದಾ ಆಲೋಚನೆಯಲ್ಲಿರಂತಾಯಿತು. ಯಾವುದೇ ಶಬ್ದ ಕೇಳಿದರೂ ಮಕ್ಕಳಿಗೇನಾಯಿತೋ ಎಂದು ದಿಗಿಲು ಬೀಳುತ್ತಿದ್ದನು. ರಾಣಿಗೂ ಅಷ್ಟೇ.

ಒಂದುದಿನ ರಾಜನು ಒಬ್ಬಂಟಿಗನಾಗಿ ಆಲೋಚಿಸುತ್ತಾ ತೋಟದಲ್ಲಿ ಕಾಲಾಡಿಸಿಕೊಂಡೇ ಹೋದನು. ಅವನು ಈವರೆಗೂ ಹೋಗದಿರುವ ಜಾಗಕ್ಕೆ ಹೋದನು. ಅದೊಂದು ಪಾಳುಬಿದ್ದ ಸ್ಥಳದಂತೆ ತೋರಿತು. ಒಂದುಕಡೆ ನೆಲದಲ್ಲಿರುವ ಬಂಡೆಯ ಮೇಲೆ ಏನೋ ಅಕ್ಷರಗಳಿರುವುದನ್ನು ಗಮನಿಸಿ ಹತ್ತಿರ ಹೋಗಿ ನೋಡಿದನು.

"ನೆಲಮನೆ" ಎಂದು ಅದರಲ್ಲಿ ಬರೆಯಲಾಗಿತ್ತು. ಅತ್ಯಾಶ್ಚರ್ಯದಿಂದ ರಾಜನು ಆ ಬಂಡೆಯನ್ನು ಬದಿಗೆ ಸರಿಸಿ ನೋಡಿದಾಗ, ಒಂದು ದ್ವಾರವೂ ಅದರಲ್ಲಿ ಕೆಳಗಿಳಿಯಲು ಮೆಟ್ಟಿಲುಗಳೂ ಇದ್ದುವು. ರಾಜನು ಒಂದೊಂದೇ ಮೆಟ್ಟಿಲುಗಳನ್ನು ಇಳಿಯುತ್ತ ಹೋಗಿ ದೊಡ್ಡದೊಂದು ಮಹಲಿನಲ್ಲಿ ನಿಂತು ಸುತ್ತಲೂ ನೋಡಿದನು. ಆ ಮಹಲನ್ನು ಯಾರು ಯಾವಾಗ ಏತಕ್ಕಾಗಿ ಕಟ್ಟಿಸಿದರೆಂಬುದು ರಾಜನಿಗೆ ಗೊತ್ತಾಗಲಿಲ್ಲ.

ತನ್ನ ತೋಟದ ಒಂದು ಭಾಗದಲ್ಲೇ ಇಂತಹುದೊಂದು ದೊಡ್ಡ ನೆಲಮನೆಯಿರುವುದೆಂದರೆ ಏನು ಆಶ್ಚರ್ಯ! ಅದರ ಗೋಡೆಗಳೆಲ್ಲ ಹಾಲುಗಲ್ಲಿನಿಂದ ನಯವಾಗಿದ್ದುವು. ನೆಲಕ್ಕೆ ಸಂಗಮರವರೀ ಕಲ್ಲು ಚಪ್ಪಡಿಗಳನ್ನು ಹಾಸಲಾಗಿತ್ತು. ಮುಚ್ಚಿಗೆಯಲ್ಲಿ ಗೋಡೆಗಳಲ್ಲಿ, ಕಂಬಗಳಲ್ಲಿ ಚಿತ್ರವಿಚಿತ್ರವಾದ ಕಲಾಕೃತಿಗಳು ಅಂದವನ್ನು ಬೀರುತಿದ್ದುವು. ಗಟ್ಟಿಯಾದ ಬೆಲೆ ಬಾಳುವ ವಸ್ತುಗಳಿಂದಲೇ ಯಾರೋ ಬಹಳ ಶ್ರದ್ಧೆಯಿಂದ ಆ ನೆಲಮನೆಯನ್ನು ಕಟ್ಟಿಸಿದ್ದಾರೆ. ಕಟ್ಟಿಸಿ ಬಹಳ ಕಾಲವಾಗಿರಬೇಕು. ಬಹುಶಃ ತನ್ನ ತಾತನ ಕಾಲದಲ್ಲಿರಬಹುದು.

ರಾಜನು ಆ ನೆಲಮನೆಯೊಳಗೆಲ್ಲಾ ವಿಸ್ಮಯದಿಂದ ತಿರುಗಾಡುತ್ತಾ ನೋಡಿದನು. ಅನಂತರ ತಾನು ಬಂದ ದಾರಿಯಿಂದಲೇ ಹಿಂದಿರುಗಿ ತೋಟವನ್ನು ಸೇರಿದನು. ನೆಲಮನೆಯ ಬಾಗಿಲಿನ ಸಂಗತಿ ಇನ್ನೊಬ್ಬರಿಗೆ ಗೊತ್ತಾಗಬಾರದೆಂದುಕೊಂಡು ಅದರ ಅಕ್ಷರಗಳಿರುವ ಭಾಗವು ಕಾಣದ ಹಾಗೆ ಒಳಬದಿಗೆ ಮಾಡಿಟ್ಟು, ಆ ಬಂಡೆಯೇ ಕಾಣದ ಹಾಗೆ ಮಣ್ಣು ಹಾಕಿ, ಅದರ ಮೇಲೆ ಕಸಕಪ್ಪು ಸೊಪ್ಪು ಸೊದೆಗಳನ್ನೂ ಹರಡಿಸಿದನು.

ಅಲ್ಲಿಂದ ಅವನು ಅರಮನೆಗೆ ಹಿಂದಿರುಗಿ ಬಂದು ತಾನು ತೋಟದಲ್ಲಿ ನೋಡಿದ ನೆಲಮನೆಯನ್ನು ಯಾರಿಗೂ ಹೇಳದೆ, ತನ್ನ ಪ್ರಿಯ ರಾಣಿಗೂ ತಿಳಿಸದೆ ಸುಮ್ಮನಿದ್ದನು. ಆ ನೆಲಮನೆಯ ವಿಷಯ ತನ್ನ ಹೊರತು ಬೇರೊಂದು ಹುಳಕ್ಕೆ ಕೂಡಾ ತಿಳಿಯಬಾರದೆಂಬುದು ಅವನ ಗಟ್ಟಿ ಅಭಿಪ್ರಾಯ. ಅದು ತನಗೆ ಮಾತ್ರ ಆಕಸ್ಮಿಕವಾಗಿ ಕಾಣಸಿಕ್ಕಿದೆ. ಅದರಲ್ಲಿ







ತನ್ನ ಕುಮಾರಿಯರನ್ನು ಭದ್ರಪಡಿಸಿ ಗಂಡಗಳಿಂದ ತಪ್ಪಿಸಬಹುದು. ಈ ನಿಶ್ಚಯದಿಂದ ರಾಜನು ಅದಕ್ಕೆ ಬೇಕಾದ ಏರ್ಪಾಡುಗಳಿಗೆ ಪ್ರಾರಂಭಿಸಿದನು.

ಮೊತ್ತಮೊದಲು ರಾಜನು ಸುಮಾರು ನೂರು ಜನರಿಗೆ ಮೂರು ವರ್ಷಗಳಿಗೆ ಸಾಕಾಗುವಷ್ಟು ಆಹಾರ ಸಾಮಗ್ರಿ, ಉಡುಗೆತೊಡುಗೆ ಮುಂತಾದ ಎಲ್ಲವನ್ನೂ, ನಂಬುಗಸ್ಥರಾದ ಸೇವಕರ ಸಹಾಯದಿಂದ ಆ ನೆಲಮನೆಯೊಳಗೆ ಸೇರಿಸಿದನು. ಒಳಗೆ ಒಮ್ಮೆ ಹೋದ ಸೇವಕರು ಮತ್ತೆ ತಿರುಗಿ ಬಾರದಂತೆ ಅದರೊಳಗೇ ಬಂಧಿಸಿಟ್ಟು, ತಾನು ಮಾತ್ರ ಮೇಲೆ ಬಂದು ಎಂದಿನಂತೆ ಅರಮನೆಯನ್ನು ಸೇರಿದನು. ತರುವಾಯ ಮೂವರು ದಾಸಿಯರೊಡನೆ ತನ್ನ ಮೂವರು ಕುಮಾರಿಯರನ್ನೂ ಕರೆದುಕೊಂಡು ತೋಟಕ್ಕೆ ಹೋದನು.


ಇದನ್ನು ನೋಡಿದ ರಾಣಿ, ಎಂದಿನಂತೆ ರಾಜನು ಮಕ್ಕಳನ್ನು ತಿರುಗಾಡಲು ಕರೆದೊಯ್ಯುತ್ತಿದ್ದಾನೆ ಎಂದುಕೊಂಡಳೇ ಹೊರತು ಬೇರೆ ಸಂದೇಹವೇನೂ ಅವಳಿಗೆ ಬರಲಿಲ್ಲ. ಈ ದಿನ ರಾಜನ ಉದ್ದೇಶವೇ ಬೇರೆ.

ತೋಟಕ್ಕೆ ಹೋಗಿ, ಹಾಗೆಯೇ ಮುಂದೆ ಮುಂದೆ ಆ ನೆಲಮನೆಯ ಬಂಡೆಯ ಬಳಿಗೆ ತಲಪಿ, ರಾಜನು ಬಂಡೆಯ ಬಾಗಿಲನ್ನು ಬದಿಗೆ ಸರಿಸಿದನು. ದಾಸಿಯರಿಗೆ ಅತ್ಯಾಶ್ಚರ್ಯವಾಯಿತು. ರಾಜನು ಇನ್ನೇನು ಮಾಡುತ್ತಾನೋ ಎಂದು ಆತುರದಿಂದಲೂ ದಿಗಿಲಿನಿಂದಲೂ ನೋಡುತ್ತಿದ್ದರು.

ರಾಜನು ಮೊದಲು ದಾಸಿಯರನ್ನು ಮಕ್ಕಳೊಂದಿಗೆ ಮೆಟ್ಟಿಲಿನಲ್ಲಿ ಕೆಳಗಿಳಿಯಲು ಹೇಳಿ, ಅವರ ಹಿಂದೆ ತಾನೂ ಇಳಿದನು. ಇಳಿಯುವಾಗ ಅವರಿಗೆ ಗೊತ್ತಾಗದ ಹಾಗೆ ಮೇಲಿನ ಬಂಡೆಯ ಬಾಗಿಲನ್ನು ಸದ್ದಾಗದಂತೆ ಎಳೆದು ಮುಚ್ಚಿಯೂ ಬಿಟ್ಟನು.

ದಾಸಿಯರಿಗೆ ಒಂದುಕಡೆ ರಾಜನ ಆಜ್ಞೆಯ ಭಯ; ಇನ್ನೊಂದುಕಡೆ ಭೂಮಿಯೊಳಗೆ ಇಳಿಯುವ ಭೀತಿ. ಒಂದೊಂದೇ ಮೆಟ್ಟಿಲಿಳಿಯುತ್ತಿದ್ದಂತೆ ಅವರ ಭಯವೂ ಜಾಸ್ತಿಯಾಯಿತು. ರಾಜನು ತಮ್ಮನ್ನೂ ಮಕ್ಕಳನ್ನೂ ಹೀಗೆ ಯಾವ ಪಾತಾಳಕ್ಕೆ ಕರೆದೊಯ್ಯುವನೋ? ಈ ಸಂದೇಹವನ್ನು ಕೇಳಿ ತಿಳಿಯೋಣವೆಂದರೆ ಶಬ್ದ ಮಾಡಿದರೆ ಏನು ಅಪಾಯ ಬರುತ್ತೋ ಎಂಬ ಭೀತಿ. ಅವರು ಜೀವವನ್ನು ಕೈಯಲ್ಲಿಟ್ಟುಕೊಂಡು ಮೆಟ್ಟಿಲಿಳಿದು ಮಹಲನ್ನು ಸೇರಿದರು. ಅಲ್ಲಿ ಈ ಮೊದಲು ರಾಜನು ಬಂಧಿಸಿಡಲ್ಪಟ್ಟ ಸೇವಕಜನರನ್ನು ನೋಡಿದಾಗ ಆ ದಾಸಿಯರಿಗೆ ಸ್ವಲ್ಪ ಧೈರ್ಯ ಬಂತು. ರಾಜನು ಏನೋ ಮುಂದಾಲೋಚನೆಯಿಂದಲೇ ಗಟ್ಟಿ ಏರ್ಪಾಡು ಮಾಡಿದ್ದಾನೆಂದು ಅವರಿಗೆ ಗೊತ್ತಾಗಿ, ಸರಿಯಾಗಿ ಶ್ವಾಸ ಬಿಡತೊಡಗಿದರು. ಮಕ್ಕಳು ಉತ್ಸಾಹದಿಂದ ಆ ನೆಲಮನೆಯ ಅಂದ ಚೆಂದಗಳನ್ನು ನೋಡುತ್ತಿದ್ದರು.

ರಾಜನು ಅಲ್ಲಿರುವ ನೂರು ಮಂದಿ ಸೇವಕರಿಗೂ ಆ ಮೂವರು ದಾಸಿಯರಿಗೂ, ತನ್ನ ಮೂವರ



ಮಕ್ಕಳನ್ನು ಒಪ್ಪಿಸುತ್ತ, "ನನಗೆ ಗೊತ್ತು ನೀವೆಲ್ಲಾ ತುಂಬಾ ರಾಜವಿಶ್ವಾಸವುಳ್ಳ ಸೇವಕರು. ನನ್ನ ಈ ಮೂವರು ಮಕ್ಕಳನ್ನೂ ನಿಮ್ಮ ಆರೈಕೆಗೆ ಒಪ್ಪಿಸುತ್ತೇನೆ. ನಮಗೆ ಬಹಳ ಕಾಲ ಮಕ್ಕಳಿಲ್ಲದೆ ಕಡೆಗೆ ಹುಟ್ಟಿದ ಮಕ್ಕಳಿವರೆಂದು ನಿಮಗೆ ಗೊತ್ತಿದೆ. ಇವರಿಗೀಗ ನಾಲ್ಕನೇ ವರ್ಷ. ಈ ನಾಲ್ಕು ವರ್ಷಗಳಲ್ಲಿ ಒಂದಕ್ಕಿಂತ ಒಂದು ದೊಡ್ಡದಾದ ಅನೇಕ ಗಂಡಾಂತರಗಳಿಂದ ಪಾರಾಗಿದ್ದಾರೆ. ಜಾತಕದ ಲೆಕ್ಕದ ಪ್ರಕಾರ ಇವರಿಗೆ ಇನ್ನೂ ಮೂರುವರ್ಷ ಗಂಡಾಂತರದ ಕಾಲವೇ. ಈ ಮೂರು ವರ್ಷಗಳನ್ನು ಕಳೆದುಬಿಟ್ಟರೆ ಆಮೇಲೆ ಇವರಿಗೆ ಯಾವ ಭಯವೂ ಇಲ್ಲ. ಈ ಮೂರು ವರ್ಷಗಳವರೆಗೆ ಇವರನ್ನು ಈ ನೆಲಮನೆಯೊಳಗೆ ಅಡಗಿಸಿಟ್ಟು ನಿಮ್ಮ ವಶಕ್ಕೆ ಬಿಟ್ಟಿದ್ದೇನೆ. ಈ ನೆಲಮನೆಗೆ ಇನ್ನೊಂದು ಹುಳವೂ ನುಸುಳುವಂತಿಲ್ಲ. ಯಾವ ಭಯವೂ ನಿಮಗಿಲ್ಲ.

"ನನ್ನ ಮಕ್ಕಳನ್ನು ಈ ನೆಲಮನೆಯೊಳಗೆ ನೀವು ಕಾಪಾಡುವಿರೆಂಬ ಸಂಗತಿ ನಿಮಗೂ ನನಗೂ ಹೊರತು ಬೇರೆ ಯಾರಿಗೂ ತಿಳಿಯದು. ರಾಣಿಗೆ ಕೂಡಾ ನಾನು ಈ ಸಂಗತಿ ಹೇಳಲಿಲ್ಲ. ಹುಟ್ಟಿದಂದಿನಿಂದಲೇ ಯಾವುದೋ ಒಂದು ಕೆಟ್ಟ ಗ್ರಹವು ಈ ಮಕ್ಕಳ ಬೆನ್ನು ಬಿದ್ದಿದೆಯೆಂದು ಕಾಣುತ್ತದೆ. ಈಗ ಈ ಮಕ್ಕಳು ಈ ನೆಲಮನೆಯಲ್ಲಿರುವ ಸಂಗತಿ ಆ ದುಷ್ಟ ಗ್ರಹಕ್ಕೆ ತಿಳಿದುಬಿಟ್ಟರೆ ಏನು ಕೇಡು ಮಾಡುವುದೋ ಎಂದು ಹೆದರುತ್ತಿದ್ದೇನೆ. ಆದ್ದರಿಂದ ಈ ಸಂಗತಿ ಹೊರಗೆ ತಿಳಿಯದಂತೆ ತುಂಬಾ ಜಾಗರೂಕತೆಯಿಂದಿರಬೇಕಾದ್ದು ಬಹುಮುಖ್ಯ. ಇವರು ಇಲ್ಲಿರುವ ಸಂಗತಿ ಒಂದು ಗುಬ್ಬಚ್ಚಿಗೆ ತಿಳಿದುಬಿಟ್ಟರೂ ಅದು ನಿಮ್ಮಿಂದಾಗಲೀ ನನ್ನಿಂದಾಗಲೀ ಮಾತ್ರವೇ ತಿಳಿಯಬೇಕು. ನಾನು ಮಾತ್ರ ಮೂರುವರ್ಷಗಳ ವರೆಗೆ ಈ ವಿಷಯ ಬಾಯಿ ಬಿಚ್ಚಲಾರೆ. ಹಾಗೆಯೇ ನೀವು ಕೂಡಾ ಇರಬೇಕು. ಇದೇ ನೀವು ನಮಗೆ ಮಾಡುವ ಸಹಾಯ. ಇದಕ್ಕೆ ವಿಪರೀತವಾಗಿ ಏನಾದರೂ ನಡೆಯಿತೆಂದರೆ, ನೀವಾರೂ ಬದುಕಲಾರಿರಿ! ಎಚ್ಚರ! ಹೀಗೆ ನಂಬುಗೆಯಿಂದ ಮೂರು ವರ್ಷ ನಮ್ಮ ಮಕ್ಕಳನ್ನು ಕಾಪಾಡಿದಿರೆಂದರೆ ಗಡು ಕಳೆದ ಕೂಡಲೇ ನಿಮಗೆಲ್ಲಾ ಬಹಳ ದೊಡ್ಡ ಬಹುಮಾನಗಳನ್ನು ಕೊಡುತ್ತೇನೆ. ನಿಮ್ಮ ಏಳು ತಲೆಮಾರಿನವರೆಗೆ ಶ್ರೀಮಂತರಾಗಿರುವಿರಿ.

"ಈ ಮೂರು ವರ್ಷಗಳವರೆಗೆ ನಿಮಗೆಲ್ಲ ಬೇಕಾದ ಎಲ್ಲಾ ವಸ್ತು ಸಾಮಗ್ರಿಗಳೂ ಇಲ್ಲಿವೆ. ಇದುವರೆಗೆ ಅರಮನೆಯಲ್ಲಿ ಈ ಮಕ್ಕಳು ಹೇಗೆ ಸುಖವಾಗಿದ್ದರೋ ಈಗಲೂ ಹಾಗೆಯೇ ಯಾವ ಕೊರತೆಯೂ ಇಲ್ಲದೆ ಇರಬಹುದು. ಮಕ್ಕಳು ಇನ್ನೇನಾದರೂ ಬೇಕೆಂದು ನಿಮ್ಮನ್ನು ಕೇಳಿದರೆ ನನ್ನೊಡನೆ ಕೇಳಿರಿ. ಕೂಡಲೇ ಒದಗಿಸಿಬಿಡುತ್ತೇನೆ. ನಾನು ಆಗಾಗ ಬಂದು ನಿಮ್ಮನ್ನು ನೋಡಿಕೊಳ್ಳುತ್ತೇನೆ. ಸರಿ. ಇನ್ನು ನಾನು ಹೊರಡಲೆ?" ಎಂದನು.

ರಾಜನು ಹೇಳುತ್ತಿದ್ದ ಮಾತುಗಳನ್ನು ಎಲ್ಲರೂ ಮನಸ್ಸು ಕೊಟ್ಟು ಕೇಳಿದರು. ಸುಮ್ಮನೆ ಬೆಕ್ಕಸ ಬೆರಗಾಗಿ ನೋಡುತ್ತಾ ಕೇಳಿದರು. ರಾಜನು ಹೇಳಿದ ಎಲ್ಲಾ ಮಾತುಗಳನ್ನು ಕೇಳಿದಾಗ ಅವರೆಲ್ಲ ಸಂತೋಷದಿಂದ ರಾಜನ ಅಭಿಪ್ರಾಯಕ್ಕೆ ಒಪ್ಪಿದಂತೆ ತಲೆಯಾಡಿಸಿದರು. ಬಳಿಕ ಎಲ್ಲರೂ ಒಬ್ಬರನ್ನೊಬ್ಬರು ನೋಡಿ ದೃಢಮನಸ್ಸಿನಿಂದ ರಾಜನಿಗೆ ಕೈಮುಗಿದು, ಒಂದೇ ಕೊರಳಿನಿಂದ ಹೇಳಿದವರ ಹಾಗೆ "ನಿಮ್ಮಪ್ಪಣೆಯಂತೆಯೇ ನಡೆಯುತ್ತೇವೆ ಮಹಾಪ್ರಭುಗಳೇ. ಇದು ಸತ್ಯ, ಸತ್ಯ !" ಎಂದರು.


ದಾಸಿಯರಲ್ಲಿ ಒಬ್ಬಳು ಬಹಳ ವಿನಯದಿಂದ ರಾಜನನ್ನು ಕುರಿತು, "ಪ್ರಭುಗಳೇ, ಮೊದಲು ಇಲ್ಲಿಗೆ ಬರುವಾಗ ನಮಗೆಲ್ಲಾ ಏನೊಂದೂ ಅರ್ಥವಾಗದೆ ಬಹಳ ಭಯವಾಯಿತು. ಈಗ ನಿಜ ಸಂಗತಿ ತಿಳಿದ ಮೇಲೆ ನಮ್ಮ ಭಯ ಹೋಯಿತು. ಈ ಮಕ್ಕಳನ್ನು ಕಣ್ಣಿನ ರೆಪ್ಪೆಗಳ ಹಾಗೆ ನೋಡಿಕೊಂಡಿರುತ್ತೇವೆ. ಅದನ್ನು ಕುರಿತು ತಾವು ಇಷ್ಟೆಲ್ಲಾ ವಿವರಿಸಿ ಹೇಳಿ ಶ್ರಮಪಡ ಬೇಕಾಗಿರಲಿಲ್ಲ. ಇದು ನಮ್ಮ ಕರ್ತವ್ಯವೇ ಆಗಿದೆ. ಈ ವಿಷಯದಲ್ಲಿ ತಾವು ನಿಶ್ಚಿಂತೆಯಾಗಿರಬಹುದು. ಆದರೆ ನಮಗಿರುವ ಸಂದೇಹವೆಲ್ಲಾ ಒಂದೇ. ಈ ಬಾಲಿಕೆಯರನ್ನು ಇಲ್ಲಿ ಅಡಗಿಸಿಟ್ಟಿರುವ ಸಂಗತಿ ಮಹಾರಾಣಿಯವರಿಗೆ ಕೂಡಾ ತಿಳಿಯದೆಂದು ಹೇಳಿದಿರಿ. ಹಾಗಾದರೆ ಈಗ ನೀವು ಒಬ್ಬರೇ ಮನೆಗೆ ಹೋದರೆ, ರಾಣಿಯವರು ಮಕ್ಕಳೆಲ್ಲಿ ಎಂದು ನಿಮ್ಮನ್ನು ಕೇಳುವುದಿಲ್ಲವೆ ?' ಆಗ ನೀವೇನು ಹೇಳುವಿರೋ ? ನಿಮಗೆಷ್ಟು ಬಾಧೆಯಾಗುವುದೋ ? ಎಂದು ನಮಗೆ ಚಿಂತೆಯಾಗಿದೆ ಪ್ರಭುಗಳೇ" ಎಂದಳು.


"ಅದನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ. ನೀವು ನಾನು ಹೇಳಿದ ವಿಷಯ ಜಾಗ್ರತೆಯಾಗಿ ನೋಡಿಕೊಂಡಿದ್ದರೆ ಸಾಕು" ಎಂದು ಹೇಳಿ ರಾಜನು ಅರಮನೆಗೆ ಹೊರಟು ಹೋದನು.

ಅಲ್ಲಿ ರಾಣಿ ರಾಜನ ದಾರಿಯನ್ನೇ ನೋಡಿಕೊಂಡಿದ್ದಳು. ಮಕ್ಕಳನ್ನು ತೋಟಕ್ಕೆ ಕರೆದುಕೊಂಡು ಹೋದ ರಾಜನು, ಇನ್ನೂ ಏಕೆ ಬರಲಿಲ್ಲವೆಂದು ರಾಣಿ ಏನೇನೋ ಯೋಚನೆ ಮಾಡಿಕೊಂಡಿದ್ದಳು. ತಡವಾದಂತೆ ಮಕ್ಕಳಿಗೇನಾದರೂ ಅಪಾಯ ಬಂದಿತೆ ಎಂದು ದುಃಶಂಕೆಗೊಳಗಾಗುತ್ತಿದ್ದಳು.

ಆಗ ರಾಜನು ಗಟ್ಟಿಯಾಗಿ ಗೋಳಾಡುತ್ತಾ ಅವಳ ಬಳಿಗೆ ಬಂದನು. ತೋಟದಲ್ಲಿ ವಿಹರಿಸಲು ಮಕ್ಕಳೊಂದಿಗೆ ಹೋದ ರಾಜನು, ಗೋಳಾಡುತ್ತಾ ಒಬ್ಬನೇ ಬರುವುದನ್ನು ನೋಡಿ ರಾಣಿ, ಬುಡಕಡಿದ ಬಾಳೇಮರದಂತೆ ನೆಲಕ್ಕೆ ಬಿದ್ದಳು.

(ಇನ್ನೂ ಇದೆ)





ಅಮ್ಮ ಮಕ್ಕಳ ಕಥೆ

October 1974

೨

[ದಾನಶೀಲ ಮಹಾರಾಜನು ಒಂದುದಿನ ತೋಟದಲ್ಲಿ ವಿಹರಿಸುತ್ತಿದ್ದಾಗ, ನೆಲದಲ್ಲಿದ್ದ ಒಂದು ಬಂಡೆಯನ್ನೆತ್ತಿ ಬದಿಗೆ ಸರಿಸಿದ. ಅಲ್ಲಿ ಕಾಣಿಸಿದ ನೆಲಮನೆಯೊಳಗೆ ತನ್ನ ಮೂವರು ಕುಮಾರಿಯರನ್ನೂ ಅಡಗಿಸಿಟ್ಟು, ಅವರ ರಕ್ಷಣೆಗೆ ಸೇವಕರನ್ನೂ ನಿಯಮಿಸಿದ. ಇದಾವುದೂ ತಿಳಿಯದ ರಾಣಿ ಮಕ್ಕಳೊಂದಿಗೆ ಹೋದ ರಾಜನು ಒಬ್ಬನೇ ಬಂದುದನ್ನು ನೋಡಿ ಹೆದರಿ ಮೂರ್ಛೆ ಬಿದ್ದಳು.]

ರಾಜಭವನದಲ್ಲಿದ್ದ ದಾಸ ದಾಸಿಯರಿಗೆಲ್ಲಾ ಬಹಳ ...ಬರಿಯಾಯಿತು. ಆ ಕಡೆಯಿಂದ ರಾಜನು ...ೀಳಾಡುತ್ತಾನೆ, ಈ ಕಡೆಯಲ್ಲಿ ರಾಣಿ ಬಿದ್ದಿದ್ದಾಳೆ. ...ನ್ನೆಲ್ಲರ ತಲೆಯ ಮೇಲೆಯೂ ಆಕಾಶವು ಕಳಚಿ ...ದ್ದ ಹಾಗೆ ಅವರಿಗೆ ತೋರಿತು.

ಕೆಲವರು ರಾಜನಿಗೆ ಉಪಚರಿಸಲು ಹೋದರು. ...ವರು ರಾಣಿಯನ್ನು ಉಪಚರಿಸಲು ತೊಡಗಿ...ು. ಮತ್ತೆ ಕೆಲವರು ವೈದ್ಯರ ಬಳಿಗೆ ಓಡಿ...ು, ಕೆಲವರು ಮಂತ್ರವಾದಿಗಳ ಮನೆಯ...ಗೆ ಧಾವಿಸಿದರು.

"ನನಗೇನೂ ಆಗಿಲ್ಲ. ಎಲ್ಲಾ ನನ್ನ ಕಣ್ಣೆದಿರೇ ನಡೆದರೂ ಸಾಯದೆ ಬದುಕಿದ್ದೇನಲ್ಲಾ! ಇನ್ನು ರಾಣಿಯನ್ನು ರಕ್ಷಿಸಬೇಕು. ಅವಳು ಪಾಪ, ಹೇಗೆ ತಾಳಿಕೊಳ್ಳುವಳೋ!" ಎಂದು ರಾಜ ದುಃಖದಿಂದ ಮೊರೆಯಿಟ್ಟ. ಅರಮನೆಯ ಸುತ್ತಲೂ ಬಹಳ ಜನಗಳ ಗುಂಪು ಸೇರಿತು. ಮಂತ್ರಿ ಮಾಗಧರು ಅವರನ್ನೆಲ್ಲಾ ಅಲ್ಲಲ್ಲೇ ತಡೆದು ನಿಲ್ಲಿಸತೊಡಗಿದರು.

ಸ್ವಲ್ಪ ಹೊತ್ತಿನವರೆಗೆ ಅಲ್ಲಿ ಸೇರಿದವರ ಮುಖಗಳಲ್ಲಿ ಪ್ರೇತ ಕಳೆಯೇ ಕಂಡಿತು. ಅಷ್ಟರಲ್ಲಿ ಆಸ್ಥಾನ



ವೈದ್ಯನು ಬಂದುದನ್ನು ನೋಡಿ ಎಲ್ಲರ ಮುಖ ಗಳಲ್ಲಿಯೂ ಆಶಾಕಿರಣ ಮೂಡಿತು.

ಆಸ್ಥಾನ ವೈದ್ಯನು ನೇರಾಗಿ ರಾಣಿಯ ಬಳಿಗೆ ಹೋಗಿ ಏನೋ ಔಷಧದಿಂದ ಚಿಕಿತ್ಸೆ ನಡೆಸಲು, ರಾಣಿಗೆ ಎಚ್ಚರವಾಯಿತು. ಅದನ್ನು ನೋಡಿ ರಾಜನ ಮುಖದಲ್ಲಿ ಚೇತನ ಕೂಡಿತು.

ವೈದ್ಯನು ರಾಜನನ್ನು ಪರಾಮರ್ಶೆಗೆ ತೊಡಗಲು ರಾಜನು ಅವನನ್ನು ತಡೆದು, "ನನಗೇನೂ ಆಗಿಲ್ಲ ವೈದ್ಯರೇ. ನಾನೊಂದು ದುಃಖದಲ್ಲಿದ್ದೇನೆ ಅಷ್ಟೆ. ಅದನ್ನು ಹೇಳುವುದರೊಳಗೆ ರಾಣಿಯ ಗತಿ ಹೀಗಾಯಿತು. ಅದನ್ನು ಅವಳೊಡನೆ ಹೇಳದಿರಲಿಕ್ಕೂ ಆಗದು. ಕೇಳಿ ಸಹಿಸಿಕೊಳ್ಳುವ ಶಕ್ತಿ ಅವಳಿಗಿರಬೇಕಲ್ಲಾ! ಅದೇ ನನಗೊದಗಿರುವ ಹೊಸ ಭಯ" ಎಂದನು.

"ಏನಾಯಿತೋ ಹೇಳಿರಿ" ಎಂದು ರಾಣಿ ದುಃಖದಿಂದ ಧೈರ್ಯ ಹಿಡಿದು ಕೇಳಿಕೊಂಡಳು.

"ಅವರಿಗಿನ್ನೇನೂ ಆಗದು. ನೀವು ಧೈರ್ಯ ದಿಂದ ಹೇಳಿರಿ" ಎಂದ ವೈದ್ಯ. ರಾಜನು ಧೈರ್ಯ ದಿಂದ ಕೇಳಬೇಕೆಂದು ಅವಳಿಗೆ ಹೇಳಿ, ಹೀಗೆಂದನು: "ನಾನು ಎಂದಿನಂತೆ ದಾಸಿಯರೊಂದಿಗೆ ಮಕ್ಕಳನ ಕರೆದುಕೊಂಡು ತೋಟಕ್ಕೆ ತಿರುಗಾಡಲು ಹೋ ಈ ನಾಲ್ಕು ವರ್ಷಗಳಲ್ಲಿ ನಮ್ಮ ಮಕ್ಕಳು ಎಷ್ಟ ಗಂಡಾಂತರಗಳನ್ನು ದಾಟಿದರೆಂದು ಕಣ್ಣಾರೆ ನೋಡಿ ವನು ನಾನು. ಪ್ರತಿನಿಮಿಷವನ್ನೂ ಜಾಗರೂ ಯಿಂದ ನೋಡಿಕೊಂಡಿದ್ದೆ. ಮಕ್ಕಳನ್ನು ಹೊ ಕರೆದುಕೊಂಡು ಹೋಗುವಾಗ ಅವರ ರಕ್ಷಣ ಇರಲೀ ಅಂತ ನಾನು ನೂರು ಮಂದಿ, ಸೇವಕರನ ಒಟ್ಟಿಗೆ ಕರೆದೊಯ್ಯುತ್ತೇನೆ. ಹಾಗೆಯೇ ಈ ಕೂಡಾ ತೋಟದಲ್ಲಿ ಸುತ್ತಲೂ ನೂರು ಮಂ ಸೇವಕರನ್ನು ಕಾವಲು ನಿಲ್ಲಿ ಅವರ ಮಧ್ಯ ನಾನೂ ದಾಸಿಯರೂ ಮೂವರು ಬಾಲಿಕೆಯರನ ನೋಡಿಕೊಂಡಿದ್ದೆವು. ಆಗ ಒಂದು ದೊಡ್ಡ ಸುಳಿಗ ಬೀಸಿತು. ಇದ್ದಕ್ಕಿದ್ದ ಹಾಗೆ ಭೂಮಿಗೂ ಆಕಾಶಕ ಏಣಿ ಇಟ್ಟ ಹಾಗೆ ಉಂಡೆ ಉಂಡೆಯಾಗಿ ಧೂ ಮೇಲಕ್ಕೇರಿತು. ನಮ್ಮ ಮುಖವನ್ನೆಲ್ಲ ಆ ಧೂ ಮುತ್ತಿಗೆ ಹಾಕಲು ನಾವು ಒಂದು ಕ್ಷಣ ಕ ಮುಚ್ಚಿದೆವು. ಮತ್ತೆ ಕಣ್ಣು ಬಿಡಿಸುವಷ್ಟರಲ್ಲಿ ದೊ ದೊಡ್ಡ ಮೂರು ರಣ ಹದ್ದುಗಳು ಬಂದು ಮೂರೂ ಕಣ್ಮಣಿ ಮಕ್ಕಳನ್ನೂ ಎತ್ತಿಕೊ ಹೋಗುವುದು ಕಣ್ಣಿಗೆಬಿತ್ತು."


ಇಷ್ಟರಲ್ಲಿ ರಾಜನು ಮುಂದೆ ಹೇಳಲು ಸಾ ವಾಗದಂತೆ ರಾಣಿ "ಹಾ!" ಎಂದು ಚೀರಿ ಬ ಹೋಗಲು ಪರಿಚಾರಿಕೆಯರು ಆನಿಸಿ ಹಿ ಪನ್ನೀರು ಸಿಂಪಡಿಸಿ ಗಾಳಿ ಬೀಸುತ್ತ ಉಪ ತೊಡಗಿದರು. ವೈದ್ಯನೂ ಅವಳ ಮು ಹತ್ತಿರ ಯಾವುದೋ ಔಷಧದ ವಾಸನೆಯ ಹಿಡಿದ. ಸ್ವಲ್ಪ ಹೊತ್ತಿನ ಮೇಲೆ ರಾಣಿ ಕ

ಬಿಡಿಸಿ ನೋಡಿ ಸರಿಯಾಗಿ ಕುಳಿತು, "ಹುಂ. ಹೇಳಿ: ಮತ್ತೇನಾಯಿತೋ ಹೇಳಿ" ಎಂದಳು.

ರಾಜನು ಮುಂದುವರಿಸಿ ಹೇಳ ತೊಡಗಿದನು: "ಇದೆಲ್ಲವೂ ಕಣ್ಣು ಮುಚ್ಚಿ ಬಿಡಿಸುವುದರೊಳಗೆ ನಡೆದುಹೋಯಿತು. ಆ ರಣ ಹದ್ದುಗಳು ಹಾರಿಕೊಂಡು ಹೋಗುವದಿಕ್ಕಿಗೆ ನಾನೂ ನೂರು ಮಂದಿ ಸೇವಕರೂ ದಾಸಿಯರೂ ಓಡಿದೆವು. ನಡೆದು ಅಭ್ಯಾಸವಿಲ್ಲದ ನಾನು ಎಲ್ಲರಿಗಿಂತ ಹಿಂದೆ ಬಿದ್ದೆ. ನಾನು ನೋಡ ನೋಡುತ್ತಿದ್ದ ಹಾಗೆ ರಣ ಹದ್ದುಗಳು ಆಕಾಶದಲ್ಲಿ ಕಣ್ಮರೆಯಾಗಿ ಹೋದುವು. ಯಾರಿಗೂ ಏನೂ ತೋರದೆ ಹೋಯಿತು. ಎಲ್ಲಿಗೆಂದು ಓಡಬೇಕು? ನಾನೂ ಸೇವಕರೂ ದಾಸಿಯರೂ ಮುಖ ಮುಖ ನೋಡುತ್ತ ಸುಮ್ಮನೆ ನಿಂತೆವು. ಹಿಂದಿರುಗಲಿಕ್ಕೂ ಯಾರಿಗೂ ಕಾಲೇಳಲಿಲ್ಲ.

"ಆ ಸಮಯಲ್ಲಿ ಇನ್ನೊಂದು ವಿಚಿತ್ರವಾಯಿತು. ನನ್ನೊಂದಿಗಿದ್ದ ನೂರು ಮಂದಿ ಸೇವಕರೂ ಮೂರು ಮಂದಿ ದಾಸಿಯರೂ, ಹಿಂದಿರುಗಿ ಬರುತ್ತಿರುವಾಗ, ನನ್ನ ಕಣ್ಣೆದಿರೇ ಅವರೆಲ್ಲ ಒಂದೇಸಾರಿಗೆ ಹಕ್ಕಿಗಳಾಗಿ ಕೀಚ್ ಕೀಚ್ ಎಂದು ಕಿರಿಚುತ್ತಾ ಆ ರಣ ಹದ್ದುಗಳು ಹೋದ ದಿಕ್ಕಿಗೇ ಆಕಾಶದಲ್ಲಿ ಪಟಪಟನೆ ಹಾರಿಕೊಂಡು ಹೋದರು. ಇದನ್ನೆಲ್ಲಾ ನೋಡಿ ನನ್ನ ಮನಸ್ಸು ವಿಕಲವಾಗಿ ಹೋಯಿತು. ನಾನೂ ಹಕ್ಕಿಯಾಗಿ ಹಾರುತ್ತೇನೇನೋ ಅನಿಸಿತು. ಆಗಲಿಲ್ಲ. ಹೇಗೋ ನಡೆದುಕೊಂಡು ಇಲ್ಲಿಗೆ ಬಂದೆ. ದೇವರು ನನ್ನನ್ನು ಇನ್ನೂ ಈ ಲೋಕದಲ್ಲಿ ಏಕೆ ಬಿಟ್ಟಿದ್ದಾನೋ ಏನೋ? ಬಹುಶಃ ಪೂರ್ವ ಜನ್ಮದಲ್ಲಿ ನಾನು ಎಂತೆಂತಹ ಪಾಪ ಮಾಡಿದ್ದೇನೋ ಅವುಗಳ ಫಲವೇ ಇದೆಲ್ಲಾ!"

ಹೀಗೆ ಕಥೆಯನ್ನು ಮುಗಿಸಿ ದುಃಖಿಸಿದನು ರಾಜ. ಈ ಸಮಯದಲ್ಲಿ ಸಮಾಚಾರ ಕೇಳಿ ಜ್ಯೋತಿಷ್ಕನೂ ಅಲ್ಲಿಗೆ ಬಂದ. ಜ್ಯೋತಿಷ್ಯನನ್ನು ನೋಡಿದ ಕೂಡಲೇ ರಾಣಿ ಅವನ ಪಾದಕ್ಕೆ ಬಿದ್ದು, "ಸ್ವಾಮಿ, ನೀವು ಆದಿನ ಅಷ್ಟು ಎಚ್ಚರಿಕೆ ಹೇಳಿಯೂ ಸಹ ನಮ್ಮ ಮಕ್ಕಳನ್ನು





ಕಾಪಾಡಲಾರದೆ ಹೋದೆವು. ಅಯ್ಯಾ, ನನ್ನ ಮಕ್ಕಳು ನನ್ನ ಕಣ್ಣೆದಿರಿನಲ್ಲಿ ಇಲ್ಲದಿದ್ದರೂ ಒಂದು ಸಂಗತಿ ಮಾತ್ರ ಮರೆಮಾಜದೆ ಹೇಳಿಬಿಡಿ. ಕಡೇ ಪಕ್ಷ ಅವರು ಜೀವದೊಂದಿಗೆ ಇದ್ದಾರೋ ಇಲ್ಲವೋ ಎಂಬ ಸಂಗತಿ ಗೊತ್ತಾಗಬೇಕು. ಜೀವದಿಂದ್ದಾರೆಂದು ತಿಳಿದರೆ ಎಂದಾದರೂ ನೋಡುವೆನೆಂಬ ಆಶೆಯಿಂದ ಬದುಕಿಕೊಂಡಿದ್ದೇನು. ಇಲ್ಲದಿದ್ದರೆ ನಾನು ಬದುಕಲಾರೆ" ಎಂದು ಗಳಗಳನೆ ಅತ್ತಳು.

ಜ್ಯೋತಿಷ್ಯನು ಮತ್ತೆ ಜಾತಕವನ್ನು ತರಿಸಿ ಜಾಗರೂಕತೆಯಿಂದ ಪರಿಶೀಲಿಸಿ ಹೀಗೆಂದ: "ಜಾತಕದ ವಿಧಿ ಪ್ರಕಾರ ಈ ವರ್ಷದಲ್ಲಿ ಆ ಮಕ್ಕಳಿಗೆ ಯಾವ ಗಂಡವೂ ಕಾಣುವುದಿಲ್ಲವಲ್ಲ? ಹಾಗಿರುವಾಗ ಈ ಮಾಯಾಜಾಲ ಹೇಗೆ ಬಂತೆಂದು ಆಶ್ಚರ್ಯವಾಗಿದೆ. ಒಂದು ಮಾತ್ರ ನಿಜ. ಮಕ್ಕಳು ಎಲ್ಲಿ ಇದ್ದಾರೆಂಬುದನ್ನು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, ಇರುವ ಸ್ಥಳದಲ್ಲಿ ಮೂವರೂ ಕ್ಷೇಮವಾಗಿಯೇ ಇದ್ದಾರೆ. ಮಕ್ಕಳು ಮಾತ್ರವಲ್ಲ. ಅವರನ್ನು ರಕ್ಷಿಸುವ ಅಪೂರ್ವ ಇಚ್ಛೆಯಿಂದ ಹಕ್ಕಿಗಳಾಗಿ ಹಾರಿಹೋದ ಸೇವಕರೂ, ದಾಸಿಯರೂ ಆ ಮಕ್ಕಳೊಂದಿಗಿರುತ್ತಾರೆ. ಇನ್ನು ಮೂರು ವರ್ಷಗಳೊಳಗೆ ಯಾವುದೋ ಒಂದುದಿನ ಮತ್ತೆ ಅವರು ನಿಜ ರೂಪಗಳಲ್ಲಿ ಬರುತ್ತಾರೆಂದು ನಿಜವಾಗಿ ನಂಬಬಹುದು. ಆದುದರಿಂದ ದೇವರ ಮೇಲೆ ಭಾರ ಹಾಕಿ ಅಂತಹ ಸುದಿನವು ಯಾವಾಗ ಬರುತ್ತದೆಂದು ಎದುರು ನೋಡುವುದರಲ್ಲೇ ಸಮಾಧಾನ ಪಡೆಯಬೇಕು. ಬೇರೇನು ಮಾಡಲೂ ಸಾಧ್ಯವಿಲ್ಲ ತಾಯೇ."

ಜ್ಯೋತಿಷ್ಯನ ಮಾತು ರಾಣಿಗೆ ಸಂಜೀವಿಯಂತೆ ಪರಿಣಾಮ ಮಾಡಿತು. ಹೀಗೆ ರಾಜನು ಅದ್ಭುತವಾದೊಂದು ನಾಟಕವನ್ನು ಯಶಸ್ವಿಯಾಗಿ ನಡೆಸಿಬಿಟ್ಟನು. ಅವನು ಅಳುತ್ತಾ ಬಂದುದು, ಅದಕ್ಕೆ ಸರಿಯಾಗಿ ನಟಿಸಿ, ರಾಣಿ ನಂಬುವಂತೆ ಹೇಳಿದುದು ಎಲ್ಲವೂ ರಾಜ ಸ್ವಂತ ಕಲ್ಪನಾ ಶಕ್ತಿಯೇ ಎಂಬ ಗುಟ್ಟು ಅಲ್ಲಿರುವ ಯಾರಿಗೂ ತಿಳಿಯಲಿಲ್ಲ. ತನ್ನ ಮೂವರು ಮಕ್ಕಳೊಂದಿಗಿದ್ದ ಮೂವರು ದಾಸಿಯರೂ, ನೂರು ಮಂದಿ ಸೇವಕರೂ ಕಾಣೆಯಾಗಿ ಹೋದುದನ್ನು ನೋಡಿ ರಾಣಿ ಪ್ರಶ್ನೆ ಮಾಡುವ ಮೊದಲೇ ದಾರು ವೆನಿಸುವಂತಹ ಆ ಕಿರು ನಾಟಕವನ್ನು ಅದ್ಭುತವಾ ಆಡಿಸಿಬಿಟ್ಟ ರಾಜ. ಅದರಲ್ಲಿ ಅವನೂ ಬಹ ಚೆನ್ನಾಗಿ ನಟನೆ ಮಾಡಿದ.

ನೆಲಮನೆಯಲ್ಲಿ ಮಕ್ಕಳನ್ನು ಅಡಗಿಸಿಟ್ಟ ಸಂಗ ರಾಣಿಗೆ ಹೇಳಿಬಿಟ್ಟರೆ, ರಾಣಿಗೆ ಸಮಾಧಾನವಾಗ ವುದು ನಿಜವಾದರೂ, ಆ ಮಕ್ಕಳನ್ನು ನುಂಗಿ ನೀ ಕುಡಿಯಲು ನೋಡುವ ಯಾವುದೋ ದು ಗ್ರಹಕ್ಕೆ ಗೊತ್ತಾಗಿಬಿಡುತ್ತದೆ. ಏಕೆಂದರೆ ಹೆ ತಾಯಿ ಆ ಗುಟ್ಟನ್ನು ಯಾವುದೋ ಭಾವನೆಯಿಂ ದುಷ್ಟಗ್ರಹಕ್ಕೆ ತಿಳಿಯುವಂತೆ ಬಹಿರಂಗ ಪಡಿಸಿಬಿಟ್ಟ

ಗತಿಯೇನು ? ಆದುದರಿಂದಲೇ ರಾಜನು ಆ ಗುಟ್ಟು ರಾಣಿಗೆ ತಿಳಿಯದಂತೆ ಇಷ್ಟೆಲ್ಲ ಕಲ್ಪಿಸಬೇಕಾಯಿತು. ಅದರಲ್ಲಿ ತಾನೂ ನಾಯಕನಾಗಿ ಅಭಿನಯಿಸಿ ಒಂದು ವಿಧವಾಗಿ ಗೆದ್ದು ಹೊರಬಿದ್ದನು. ಅಷ್ಟೂ ಸೇವಕರು ಪಕ್ಷಿಗಳನ್ನಾಗಿ ಹಾರಿಸಿದ ತನ್ನ ಅದ್ಭುತ ಕಲ್ಪನೆಗೆ ತನ್ನೊಳಗೆ ತಾನೇ ನಕ್ಕನು ಕೂಡ.

ಪಾಪ, ರಾಜನ ಕಪಟ ನಾಟಕವನ್ನು ರಾಣಿ ಪೂರಾ ನಂಬಿದಳು. ಉಳಿದ ಸೇವಕರೂ ಇತರರೂ ನಂಬಿದರು. ಇಂತಹ ಘೋರ ದುಃಖದಲ್ಲಿಯೂ ತನ್ನ ಮಕ್ಕಳು ದಾಸದಾಸಿಯರ ಜತೆಯಲ್ಲಿ ಎಲ್ಲೋ ಒಂದು ಕಡೆ ಬದುಕಿಕೊಂಡಿದ್ದಾರೆಂಬುದೇ ರಾಣಿಗೆ ಆಶಾ ತಂತುವಾಯಿತು. ಅದಕ್ಕಾಗಿ ಮನಸ್ಸಿನಲ್ಲಿ ದೇವರಿಗೆ ಸಾವಿರ ನಾಮಾರ್ಚನೆ ಮಾಡಿದಳು.

ಹಾಗೆಂದು ಸುಮ್ಮನಿರಲು ಮನಸ್ಸು ಕೇಳುವುದೇ ? ರಾಜಭಟರನ್ನು ರಾಜ್ಯದ ಎಂಟು ದಿಕ್ಕುಗಳಿಗೂ ಕಳುಹಿಸಿ ಮಕ್ಕಳನ್ನು ಹುಡುಕಿಸಬೇಕೆಂದು ರಾಜನನ್ನು ಕಾಡ ತೊಡಗಿದಳು ರಾಣಿ. ಮಕ್ಕಳು ನೆಲಮನೆಯಲ್ಲಿರುವ ಸಂಗತಿ ರಾಜನಿಗೆ ಗೊತ್ತಿಲ್ಲವೆ ? ಆದರೂ ರಾಣಿಯ ಕೋರಿಕೆಯಂತೆ, ಅವಳ ತೃಪ್ತಿಗಾಗಿ ಭಟರನ್ನು ದೇಶದ ಮೂಲೆ ಮೂಲೆಗೂ ಕಳುಹಿಸಲೇ ಬೇಕಾಯಿತು. ನಿಜ ತಿಳಿಯದ ಆ ಭಟರು ...ಣ್ಣು ಕಷ್ಟಪಟ್ಟು ತಿರುಗಾಡುತ್ತಾ ಹುಡುಕುವರೆಂಬುದನ್ನು ನೆನೆಯುವಾಗ ರಾಜನಿಗೆ ಬಹಳ ಸಂಕಟವೂ ಆಯಿತು.

ರಾಜಭಟರು ಕುದುರೆಗಳ ಮೇಲೆ ಹೊರಟರು. ಆದರೆ ಭೂಮಿಯ ಮೇಲೆ ಆ ಮಕ್ಕಳು ಇದ್ದರೆ ತಾನೆ ? ಆದುದರಿಂದ ಹುಡುಕಲು ಹೋದವರೆಲ್ಲಾ ...ಳುಮೋರೆ ಮಾಡಿಕೊಂಡು, ರಾಜಕುಮಾರಿಯರು ಎಲ್ಲಿಯೂ ಕಾಣಿಸಲಿಲ್ಲವೆನ್ನುತ್ತಾ ಸುಮ್ಮನೆ ಹಿಂದಿರುಗಿ ಬಂದರು. ಹೀಗೆಯೇ ಪ್ರತಿಯೊಂದು ...ಗಳೂ ಕಳೆದಂತೆ ರಾಣಿಗೆ ಮಕ್ಕಳ ವಿಯೋಗ



ದುಃಖ ಹೆಚ್ಚಾಗುತ್ತಾ ಬರುತ್ತಿತ್ತು. ರಾಜನೇನೋ ಬಹಳ ಬುದ್ಧಿವಂತಿಕೆಯಿಂದ ನಾಟಕವಾಡಿ ತನ್ನ ಮಕ್ಕಳ ಸಂಗತಿ ಯಾರಿಗೂ ತಿಳಿಯದಂತೆ ಭದ್ರಪಡಿಸಿದೆನೆಂದು ತನ್ನೊಳಗೆ ತಾನೇ ಉಬ್ಬಿಕೊಂಡಿದ್ದನು. ಆದರೆ ಎಲ್ಲರ ಎದುರಿನಲ್ಲಿ ಮಕ್ಕಳನ್ನು ಕಳೆದುಕೊಂಡವನಂತೆ ದುಃಖವನ್ನು ನಟಿಸುತ್ತಲೂ ಇರಬೇಕಾಗಿವೆಯಲ್ಲವೆ ? ಬರಬರುತ್ತ ಇದೂ ಅವನಿಗೆ ದೊಡ್ಡ ಸಂಕಟವೆನಿಸಿತು.

ಅದರ ಮೇಲೆ ಒಂದು ಸಂದೇಹವೂ ದಿನೇ ದಿನೇ ಭಯವಾಗಿ ರಾಜನ ಮುಂದೆ ತಿರುಗ ತೊಡಗಿತು. ಅವನು ಪ್ರತಿ ದಿನವೂ ಯಾರಿಗೂ ಗೊತ್ತಾಗದ ಹಾಗೆ ನೆಲಮನೆಗೆ ಹೋಗಿ ಬರುತ್ತಿದ್ದ. ತನ್ನ ಪ್ರೀತಿಯ ಮೂರು ಮಕ್ಕಳೂ ಸುರಕ್ಷಿತವಾಗಿ ದಾಸದಾಸಿಯರ ನಡುವೆ ಬೆಳೆಯುತ್ತಿರುವುದನ್ನು ನೋಡಿ ಒಂದು ವಿಧದಲ್ಲಿ ನಿಶ್ಚಿಂತನಾಗಿಯೇ ಇದ್ದ. ಒಂದೆರಡು ವಾರ ಕಳೆಯುವಷ್ಟರಲ್ಲಿ ಇನ್ನೊಂದು ಅನುಮಾನ ಅವನನ್ನು



ಹಿಡಿದುಕೊಂಡಿತು. ಅದೇನಂದರೆ, ತನ್ನ ಕೃತಿಯೇ ಕೇಡಾಗಿ ಪರಿವರ್ತಿಸಿದರೆ? ತಾನು ನೆಲಮನೆಯೊಳಗೆ ಹೋಗಿ ಮಕ್ಕಳನ್ನು ನೋಡಿ ಅವರು ಕ್ಷೇಮವಾಗಿರುವರೋ ಇಲ್ಲವೋ ಎಂಬುದನ್ನು ತಿಳಿಯದಿದ್ದರೆ ಒಂದುದಿನ ಕೂಡ ತನಗೆ ಸಮಾಧಾನವಿರುವುದಿಲ್ಲ. ಆದರೆ ಯಾರಿಗೂ ತಿಳಿಯದಂತೆ ದಿನಾ ಕಳ್ಳತನದಿಂದ ನೆಲಮನೆಯೊಳಗೆ ಹೋಗಿ ಬರುವುದೆಂದರೆ ಬಹಳ ಕಷ್ಟವಾದ ಕೆಲಸ. ಒಂದಲ್ಲದಿದ್ದರೆ ಒಂದುದಿನ ದಿನ ಈ ಸಂಗತಿ ಯಾರೋ ಒಬ್ಬರಿಗೆ ತಿಳಿಯದೆ ಹೋಗಲಾರದು. ಆ ಮೇಲೆ ಇದು ಗುಟ್ಟಾಗಿರುವುದೆಲ್ಲಿಯದು? ಆ ಕಿವಿಗೆ ಈ ಕಿವಿಗೆ ಬಿದ್ದು, ಹೊಂಚು ಹಾಕುವ ಯಾವ ದುಷ್ಟಗ್ರಹವಿದೆಯೋ ಅದಕ್ಕೂ ತಿಳಿದುಬಿಡುತ್ತದೆ. ಮಕ್ಕಳ ಜಾಡು ತಿಳಿದುಬಿಟ್ಟಿತೆಂದರೆ ಆ ಗ್ರಹವು ಯಾವುದೋ ಮಾಯೋಪಾಯದಿಂದ ಆ ಮಕ್ಕಳನ್ನು ನುಂಗಿಬಿಡಬಹುದು. ಏನು ಗತಿ! ಈ ದಿಗಿಲಿನಿಂದ ರಾಜನು ಕುಂದಿಹೋಗ ತೊಡಗಿದ. ಎಷ್ಟು ಆಲೋಚನೆ ಮಾಡಿದರೂ ಯಾವ ಉಪಾಯವೂ ಕಾಣಲಿಲ್ಲ. ಹೀಗೆ ಮತ್ತೆ ನಾಲ್ಕಾರುದಿನ ಕಳೆದುವು.

ಅದೊಂದು ದಿನ ರಾಜನು ಸಾಯಂಕಾಲದಲ್ಲಿ ಗುಟ್ಟಾಗಿ ನೆಲಮನೆಗೆ ಹೋಗಿ ಮಕ್ಕಳನ್ನು ನೋಡಿ ಹಿಂದಿರುಗಿಬಂದನು. ಮಕ್ಕಳು ಯಾವ ತೊಂದರೆಯೂ ಇಲ್ಲದೆ ಸುರಕ್ಷಿತರಾಗಿದ್ದರು. ರಾಜನು ಸಮಾಧಾನದಿಂದ ತನ್ನ ಶಯನಾಗಾರದಲ್ಲಿ ಮಲಗಿ ಶ್ರಮನಿವಾರಣೆ ಮಾಡಿಕೊಳ್ಳುತ್ತಿದ್ದನು. ಆಗ ಅವನಿಗೆ ತಿಳಿಯದಂತೆಯೇ ನಿದ್ದೆ ಬಂದಿತು.

ಅವನು ಗಾಢನಿದ್ರೆಯಲ್ಲಿರುವಾಗ, ರಾತ್ರಿಯ ಹೊತ್ತಿನಲ್ಲಿ ಯಾರೋ ಮೆಲ್ಲನೆ ಬಂದು ತನ್ನನ್ನು ಮೃದುವಾಗಿ ತಟ್ಟುತ್ತಿರುವಂತೆ ತೋರಿತು. ಆದರಿಂದ ನಿದ್ರೆಯಿಂದ ಎಚ್ಚರವಾಗಿ ಕಣ್ಣು ತೆರೆದು ನೋಡಿದನು. ಕಣ್ಣಿಗೆ ಬಿದ್ದ ದೃಶ್ಯ ನಂಬುವುದೇ ಅಸಾಧ್ಯವೆನಿಸಿತು. ತನ್ನನ್ನು ತಟ್ಟಿ ಎಬ್ಬಿಸಿದವಳು ತನ್ನ ಪ್ರೀತಿಯ ಮಗಳು ಸುಹಾಸಿನಿಯೇ! ಇದೇನು ಸ್ವಪ್ನವೇ?

ಸ್ವಲ್ಪ ಹೊತ್ತಿನವರೆಗೆ ರಾಜನು ಅದನ್ನು ಕನಸೆಂದು ತಿಳಿದು ಸುಮ್ಮನೆ ಅವಳನ್ನು ನೋಡುತ್ತಾ ಇದ್ದನು. ಆಗ ಸುಹಾಸಿನಿ ಹಾಸಿಗೆಯ ಮೇಲೆ ಕುಳಿತು, ಮೆಲ ಕಾಲುಗಳಿಂದ ತಂದೆಯನ್ನು ತುಳಿಯುತ್ತ ಚೇ ಮಾಡುತ್ತ "ಅಪ್ಪ, ಅಪ್ಪ, ಏಳಿರಿ ಅಪ್ಪಾ, ಎಷ ಹೊತ್ತು ಮಲಗುತ್ತೀರಿ?" ಎಂದು ಮುದ್ದು ಮಾ ನಿಂದ ಕರೆಯ ತೊಡಗಿದಳು.

ಅಷ್ಟರಲ್ಲಿ ರಾಜನಿಗೆ ಇದು ಸ್ವಪ್ನವಲ್ಲವೆಂ ಗೊತ್ತಾಯಿತು. ತನ್ನ ಕಣ್ಣೆದಿರಿನಲ್ಲಿ ತ ಮುದ್ದು ಮಗಳು ಬಾಲಲೀಲೆಯಾಡುತ್ತಿರು ದನ್ನು ಸುಳ್ಳೆಂದು ತಿಳಿಯಲು ಸಾಧ್ಯವಾ ಲಿಲ್ಲ. ಗಿಳಿ ನುಡಿಗಳಿಂದ ತನ್ನನ್ನು ಕರೆಯುತ್ತಿದ್ದಾ ತನ್ನ ಶರೀರದ ಮೇಲೆ ಹೊರಳಾಡಿ ತನ



ಆನಂದದ ವೇದನೆ ನೀಡುತ್ತಿದ್ದಾಳೆ. ಕಿವಿಗೂ ಕಣ್ಣುಗಳಿಗೂ ಗೊತ್ತಾಗುವ ಇದು ಎಷ್ಟು ಮಾತ್ರಕ್ಕೂ ಸ್ವಪ್ನವಲ್ಲ, ನಿಜವೇ.

ರಾಜನು ತಟಕ್ಕನೆದ್ದು ಸುಹಾಸಿನಿಯನ್ನು ತನ್ನ ಎದೆಯ ಮೇಲೆ ಅಪ್ಪಿಕೊಳ್ಳುತ್ತ, "ಇದೇನಮ್ಮಾ, ಈ ನಡು ರಾತ್ರಿ ವೇಳೆಯಲ್ಲಿ ನೀನು ಇಲ್ಲಿಗೆ ಹೇಗೆ ಬಂದೆ? ದಾಸಿಯರೆಲ್ಲ ಎಲ್ಲಿದ್ದಾರೆ? ಪರಿವಾರದವ ಎಲ್ಲಿ? ಸೇವಕರೆಲ್ಲ ಏನು ಮಾಡುತ್ತಾರೆ? ಅವರನ್ನೆಲ್ಲ ಬಿಟ್ಟು ನೀನೊಬ್ಬಳೇ ಹೇಗೆ ಬಂದೆಯಮ್ಮಾ ಇಲ್ಲಿಗೆ? ಚಿತ್ರವಾಗಿದೆಯಲ್ಲಾ!" ಎಂದು ಆಶ್ಚರ್ಯ. ಆನಂದ ಆತುರಗಳಿಂದ ಪ್ರಶ್ನೆಗಳ ಮೇಲೆ ಪ್ರಶ್ನೆ ಮಾಡಿದ. ಸುಹಾಸಿನಿ ಸ್ವಲ್ಪ ಹೊತ್ತಿನವರೆಗೆ ಏನೂ ಹೇಳಲಿಲ್ಲ. ಮೇಲೆ ಅವಳು ತಂದೆಯ ಕೈಹಿಡಿದು ಮಂಚದಿಂದ ಕೆಳಗಿಳಿಯುವಂತೆ ಸೈಗೆ ಮಾಡಿದಳು.

ರಾಜನು ಆಶ್ಚರ್ಯಪಡುತ್ತ ಅವಳೊಂದಿಗೆ ಮಂಚದಿಂದಿಳಿದ ಮೇಲೆ ಅವಳು ಅವನನ್ನು ಹಿಡಿದು ಆ ಕೋಣೆಯಲ್ಲಿದ್ದ ಒಂದು ದೊಡ್ಡ ಚಿತ್ರ ಪಟದ ಬಳಿಗೆ ಕರೆದುಕೊಂಡು ಹೋಗಿ, "ಇದೋ ಈ ಬೊಂಬೆ ನೋಡಿದಿರಾ?" ಎಂದು ಕೇಳಿದಳು. ರಾಜನಿಗೇನೂ ಅರ್ಥವಾಗಲಿಲ್ಲ. ಒಂದು ವೇಳೆ ಮಗಳ ಬುದ್ಧಿಗೆ ಏನಾದರೂ ಭ್ರಮೆಯೋ ಮಂಕೋ ಕವಿದಿರಬಹುದೆ?

"ನೀನು ಇಲ್ಲಿಗೆ ಹೇಗೆ ಬಂದೆ ಎಂದು ಕೇಳಿದರೆ ಚಿತ್ರಪಟ ತೋರಿಸುವೆಯಲ್ಲಾ? ಆ ಚಿತ್ರಪಟ ನಿನಗೆ ಬೇಕೇನು? ಅದೇನು ಮಹಾ? ಅದಕ್ಕಿಂತಲೂ ಒಳ್ಳೆಯ ಚಿತ್ರಗಳನ್ನು ನಿನಗೆ ಕೊಡುತ್ತೇನೆ. ನೀನು ನನ್ನ ಈ ಕೋಣೆಗೆ ಹೇಗೆ ಬಂದೆ ಎಂಬುದನ್ನು ಮೊದಲು ಹೇಳು ನನ್ನ ಕಂದ" ಎಂದು ಒತ್ತಾಯ ಮಾಡಿದ.

"ಅದೇ ಅಪ್ಪಾ, ಆ, ಬೊಂಬೆ ಪಟದಿಂದಲೇ ಬಂದೆ" ಎಂದಳು ಸುಹಾಸಿನಿ ಮುಗ್ಧಭಾವದಿಂದ. ರಾಜನು ಆಶ್ಚರ್ಯದಿಂದ, ಪಟದೊಳಗಿನಿಂದ ಬರುವುದೆಂದರೇನು ಎಂದು ತಿಳಿಯದೆ ಆ ಚಿತ್ರಪಟವನ್ನು ಗೋಡೆಯಿಂದ ಎತ್ತಿದನು. ಆಗ ಅಲ್ಲಿ ಪ್ರತ್ಯಕ್ಷವಾದ



ದೃಶ್ಯದಿಂದ ಒಮ್ಮೆಲೇ ಸ್ತಂಭೀಭೂತನಾದನು. ಏಕೆಂದರೆ, ಪಟವಿದ್ದ ಗೋಡೆಯ ಜಾಗದಲ್ಲಿ ದೊಡ್ಡದೊಂದು ದ್ವಾರವಿದ್ದಿತು.

ಸ್ವಲ್ಪ ಹೊತ್ತಿಗೆ ರಾಜನು ಎಚ್ಚರಕ್ಕೆ ಬಂದು, ಮಗಳನ್ನು ಕರೆದುಕೊಂಡು ಆ ದ್ವಾರದಿಂದ ಒಳಗೆ ಹೊಕ್ಕನು. ಮುಂದೆ ಮುಂದೆ ಹೋಗುತ್ತಿದ್ದಂತೆ ಅದೊಂದು ಸುರಂಗ ಮಾರ್ಗವೆಂದು ತಿಳಿಯಿತು. ಆದುದರಿಂದ ಮಗಳನ್ನು ಎತ್ತಿಕೊಂಡು ಜಾಗರೂಕತೆಯಿಂದ ಹಜ್ಜೆಯ ಮೇಲೆ ಹಜ್ಜೆಯಿಡುತ್ತಾ ಕತ್ತಿಯಿಂದ ಕತ್ತಲೆಯಲ್ಲಿ ತಡವುತ್ತಾ ಹೋದನು.

ಸುರಂಗದಲ್ಲಿ ಸುಮಾರು ಅರ್ಧದೂರದಷ್ಟು ಹೋದಾಗ, ಸುಹಾಸಿನಿಯನ್ನು ನೋಡಿಕೊಳ್ಳುತ್ತಿದ್ದ ದಾಸಿ ಎದುರಾಗಿ ಬಂದಳು. ಸುಹಾಸಿನಿ ನೆಲಮನೆಯ ಕೋಣೆಯೊಳಗಿನಿಂದ ಮಾಯವಾದಾಗ ಆ ದಾಸಿ ಒಂದು ನಿಮಿಷ ತೂಕಡಿಸಿದಳು. ಮರುಕ್ಷಣದಲ್ಲಿ ಅವಳು ಎಚ್ಚೆತ್ತು ನೋಡಿದರೆ ತನ್ನ ಬಳಿಯಲ್ಲಿ ಸುಹಾಸಿನಿ ಕಾಣಿಸಲಿಲ್ಲ. ಅದಕ್ಕೆ ತಕ್ಕ ಹಾಗೆ ಗೋಡೆಯಲ್ಲಿದ್ದ ಕನ್ನಡಿಗೆ ಬದಲಾಗಿ ಒಂದು ದ್ವಾರವಿರುವುದನ್ನು ನೋಡಿ ಆ ದಾಸಿಗೆ ಬಹಳ ದಿಗಿಲಾಯಿತು.

ಅವಳು ಸುಹಾಸಿನಿಯನ್ನು ಹುಡುಕುತ್ತಾ ಆ ದ್ವಾರದಲ್ಲಿ ಹೊಕ್ಕು ಸುರಂಗದಲ್ಲಿ ಬರುತ್ತಿದ್ದಳು. ಮಗಳನ್ನು ಎತ್ತಿಕೊಂಡು ಬರುವ ರಾಜನನ್ನು ನೋಡಿ


ಅವಳಿಗೆ ಜೀವಬಂದಿತು. ಮೂವರೂ ಕೂಡಿ ನೆ
ಮನೆಯ ದ್ವಾರ ಕಡೆಗೇ ನಡೆದರು. ಆದರೆ ದಾ
ಒಳಗೆ ಹೊಕ್ಕ ಆ ದ್ವಾರವು ಈಗ ಕಾಣಿಸಲೇ ಇ
ಒಂದು ವೇಳೆ ಈ ಸುರಂಗದೊಳಗೆ ದಾರಿ ತಪ್ಪಿ ಬೆ
ಯಾವುದಾದರೂ ಕವಲು ಸುರಂಗದಲ್ಲಿ ಹೊಕ್ಕ
ಎಂಬ ಅನುಮಾನವಾಯಿತು ಅವರಿಗೆ.

ರಾಜನು ದಾಸಿಯನ್ನೂ ಸುಹಾಸಿನಿಯನ
ಅಲ್ಲಿಯೇ ನಿಂತಿರುವಂತೆ ಹೇಳಿ ತಾನು ತಿರ
ಸುರಂಗದ ಕೊನೆಯವರೆಗೂ ಹೋದನು. ಎ
ದೂರ ಹೋದರೂ ಒಂದೇ ಮಾರ್ಗ. ಎಲ್ಲಿಯ
ಕವಲೊಡೆದಿಲ್ಲ ಎಂಬುದು ಗೊತ್ತಾಯಿತು. ಕಡೆಗೆ
ಸುರಂಗ ರಾಜನ ಶಯ್ಯಾಗಾರಕ್ಕೇ ಅವನ
ಒಯ್ದಿತು. ರಾಜನು ಭೀತಿಯಿಂದ ತಲ್ಲಣಿಸು
ಸುರಂಗದಲ್ಲಿ ಹಿಂದಿರುಗಿ ದಾಸಿಯನ್ನೂ ಸುಹಾ
ಯನ್ನೂ ನಿಲ್ಲಿಸಿರುವ ಸ್ಥಳಕ್ಕೇ ಬಂದನ
ಇದೇನಾಯಿತು ?

ಒಂದೆರಡು ನಿಮಿಷದ ಕೆಳಗೆ ಅಲ್ಲಿ ಬಿಟ್ಟ
ದಾಸಿಯೂ ಕುಮಾರಿಯೂ ಎಲ್ಲಿ ಹೋದರು ? ಅ
ರಿಬ್ಬರೂ ಹೇಗೆ ಮಾಯವಾದರು ? ರಾಜ
ಹುಚ್ಚು ಹಿಡಿದಂತಾಯಿತು. ಏನೂ ತೋರದೆ
ಸುರಂಗದೊಳಗೇ ಆಚೆಗೂ ಈಚೆಗೂ ನಡೆದ
ತೊಡಗಿದ,

(ಇನ್ನೂ ಇ





Nov 1974

ಅವಳಿ ಮಕ್ಕಳ ಕಥೆ

೪


[ತನ್ನ ಮೂವರು ಕುಮಾರಿಯರನ್ನು ಹದ್ದುಗಳು ಹಾರಿಸಿಕೊಂಡು ಹೋದುವೆಂದು ರಾಜನು ಎಲ್ಲರನ್ನೂ ನಂಬಿಸಿದನು. ಒಂದುದಿನ ಮಧ್ಯ ರಾತ್ರಿಯಲ್ಲಿ ಹಿರಿಯ ಮಗಳು ಸುಹಾಸಿನಿ ಅಕಸ್ಮಾತ್ ರಾಜನ ಬಳಿಗೆ ಬಂದಳು. ರಾಜನು ಅವಳನ್ನು ಸುರಂಗದಲ್ಲಿ ಕರೆದುಕೊಂಡು ಹೋಗಿ ದಾಸಿಯ ಕೈಗೆ ಒಪ್ಪಿಸಿದನು. ಆ ಸುರಂಗವನ್ನು ಪರೀಕ್ಷಿಸುವಾಗ ದಾಸಿಯೂ ಮಗಳೂ ಕಾಣೆಯಾದರು.]

ಸುರಂಗ ಮಾರ್ಗದಲ್ಲಿ ನಿಂತಿದ್ದವರು ಇದ್ದಕ್ಕಿದ್ದ ಹಾಗೆ ಮಾಯವಾಗುವುದೆಂದರೆ ಹೇಗದು? ತಮ್ಮೆಲ್ಲರನ್ನೂ ಮಂತ್ರದ ಬಲೆ ಮುಸುಕಿಕೊಂಡಿದೆಯೋ? ಅಥವಾ ಮಾಯದ ಬಾಗಿಲುಗಳೇನಾದರೂ ಇವೆಯೆ? ಹಾಗೇನಾದರೂ ಇದ್ದರೆ ಈ ಸುರಂಗದ ದಾರಿ ಇನ್ನೂ ಎಲ್ಲೆಲ್ಲಿಗೆ ಒಯ್ದು ಬುದ್ಧಿಗೆ ಹುಚ್ಚು ಹಿಡಿಸುವುದೋ?

ರಾಜನು ಮಂಕು ಬಡಿದವನಾಗಿ ಸುರಂಗ ಮಾರ್ಗದಲ್ಲಿ ಸುಮ್ಮನೆ ಎಡತಾಕುತ್ತಿದ್ದಂತೆ, ಒಂದು ಕಡೆಯಲ್ಲಿ ಹಠಾತ್ತನೆ ಮೆಟ್ಟಿಬಿದ್ದ. ಕಾರಣ ಅಲ್ಲೊಂದು ಬಾಗಿಲು ಪ್ರತ್ಯಕ್ಷವಾಗಿತ್ತು. ಆ ಬಾಗಿಲಿನ ಮುಂದೆ ನಿಂತಿರುವವರು ದಾಸಿ ಮತ್ತು ಸುಹಾಸಿನಿಯೇ. "ಇಲ್ಲಿರುವಿಯಾ ನನ್ನ ಕಂದಾ!" ಎಂದು ರಾಜನು ಮಗಳನ್ನು ಆತುರದಿಂದ ಅಪ್ಪಿಕೊಂಡು, ದಾಸಿಯನ್ನು ಸಹಾ ಕರೆದುಕೊಂಡು ಸುರಂಗದಲ್ಲಿ ನಡೆದನು. ಅದು ಸುಹಾಸಿನಿಯು ಮಲಗುವ ಕೋಣೆಗೆ ಕೊಂಡೊಯ್ದು ಅವರನ್ನು ಬಿಟ್ಟಿತು.

ಈ ಸುರಂಗವೂ ನೆಲಮನೆಯೂ ಮಾಯ ಮಂತ್ರಗಳ ಜಾಲವೋ ತಂತ್ರಗಳ ಕೂಟವೋ ಎಂಬ ವಿವರಗಳನ್ನು ಬಗೆಹರಿಸಲು ರಾಜನು ಆ ಕೋಣೆಯನ್ನೆಲ್ಲಾ





ಶೋಧಿಸತೊಡಗಿದನು. ಸುರಂಗ ಮಾರ್ಗಗಳಿಗೆ ಸಂಬಂಧಿಸಿದ ಸೂತ್ರಗಳು ಅಲ್ಲೆಲ್ಲಾದರೂ ಇವೆಯೆ? ಸುಹಾಸಿನಿಯ ಶಯನಾಗಾರದ ಸುತ್ತಲೂ ಎಲ್ಲಿಯೂ ಸೂಜಿ ಕೂಡ ನುಸುಳಲು ಸಾಧ್ಯವಾಗದಂತೆ ಮೇಲ್ಮುಚ್ಚಿಗೆಯಿಂದ ನೆಲದವರೆಗೂ ಕನ್ನಡಿಗಳಿದ್ದುವು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಎಲ್ಲಾ ಕನ್ನಡಿಗಳು ಒಂದು ವಿಧವಾದರೆ, ಒಂದು ಕನ್ನಡಿ ಮಾತ್ರ ಬಹಳ ವಿಚಿತ್ರವಾಗಿರುವುದು ತಿಳಿಯಿತು. ಅದರ ಬುಡದಲ್ಲಿ ನೆಲದ ಮೇಲೆ ಒಂದು ಪುಟ್ಟ ಬೆಣೆ ಇದ್ದಿತು. ಅದರ ಮೇಲೆ ಪಾದವನ್ನಿಟ್ಟ ಕೂಡಲೇ ಆ ಕನ್ನಡಿ ಸದ್ದಿಲ್ಲದೆ ನೆಲದೊಳಗೆ ಇಳಿದು ಹೋಗಿ ಅಲ್ಲೊಂದು ದ್ವಾರವು ಗೋಚರಿಸುತ್ತದೆ. ಆ ದ್ವಾರದಿಂದ ಹೋದರೆ ಅದೇ ಸುರಂಗ ಮಾರ್ಗ. ಆ ಮಾರ್ಗದ ಪ್ರಾರಂಭದಲ್ಲಿ ಕೂಡಾ ಅಂತಹುದೇ ಒಂದು ಬೆಣೆಯಿದೆ. ಅದನ್ನು ಒತ್ತಿಬಿಟ್ಟರೆ ಇಳಿದು ಹೋದ ಕನ್ನಡಿ ಮೇಲೆದ್ದು ನಿಂತು ಬಾಗಿಲನ್ನು ಮುಚ್ಚಿಬಿಡುತ್ತದೆ. ಮತ್ತೆ ಬೆಣೆಯನ್ನೊತ್ತಿದ್ದರೆ ಕನ್ನಡಿ ಭೂಮಿಗಿಳಿದು ದ್ವಾರ ಕಾಣುತ್ತದೆ. ಹಾಗಾದರೆ ಇದೊಂದು ತಾಂತ್ರಿಕ ಸುರಂಗವೆಂದು ರಾಜನಿಗೆ ಧೈರ್ಯ ಬಂದಿತು; ಭಯ ಹೋಗಿ ಜೀವಕ್ಕೆ ಹಾಯೆನಿಸಿತು.

ಆದರೆ ಸುಹಾಸಿನಿ ರಾಜನ ಶಯನಾಗಾರಕ್ಕೆ ಹೇಗೆ ಬಂದಳೆಂಬುದು ರಾಜನಿಗೆ ಸ್ಪಷ್ಟವಾಗಲಿಲ್ಲ. ಕೆಲವು ಪ್ರಶ್ನೆಗಳನ್ನು ಮಾಡಿ ಆ ವಿವರಗಳನ್ನೂ ತಿಳಿದು ಕೊಂಡನು. ಎಂದಿನಂತೆ ದಾದಿ ಸುಹಾಸಿನಿಯನ್ನು ತನ್ನ ಪಕ್ಕದಲ್ಲಿ ಮಲಗಿಸಿಕೊಂಡು ನಿದ್ದೆ ಮಾಡಿದ್ದಾಳೆ. ಮಧ್ಯ ರಾತ್ರಿಯ ಹೊತ್ತಿನಲ್ಲಿ ಸುಹಾಸಿನಿಗೆ ಎಚ್ಚರ ವಾಗಿದೆ. ಅವಳಿಗೆ ನಿದ್ದೆ ಬಾರದೆ, ಏನುಮಾಡಲೂ ತೋರದೆ ಕೋಣೆಯಲ್ಲಿ ಆಚೆಗೂ ಈಚೆಗೂ ತಿರು ಗಾಡುತ್ತಿದ್ದಾಗ ಅವಳ ಕಾಲು ನೆಲದಮೇಲಿ ಬೆಣೆಯ ಮೇಲೆ ಬಿದ್ದಿದೆ. ಕೂಡಲೇ ಕನ್ನಡಿ ಕೆಳಗಿಳಿ ಹೋಗಿ, ಅಲ್ಲಿ ದ್ವಾರವುಂಟಾಗಿದೆ.

ಈ ಆಶ್ಚರ್ಯವನ್ನು ನೋಡಿ ಸುಹಾಸಿನಿ ಸುರಂ ದಾರಿಯಲ್ಲಿ ಪ್ರವೇಶಿಸಿ ನಡೆಯುತ್ತ, ರಾಜನ ಶಯ ಗಾರದ ಚಿತ್ರಪಟದ ಹಿಂದಿನ ಬದಿಗೆ ತಲಪಿದ್ದಾ ಕತ್ತಲೆಯಾಗಿದ್ದುದರಿಂದ ಸುರಂಗದದಾರಿ ಎಲ್ಲಿಯ ಗಿದೆ ಎಂಬುದು ಅವಳಿಗೆ ಕಾಣಲಿಲ್ಲ. ಅವಳು ವನ್ನು ಮುಟ್ಟಿ ಕದಲಿಸಿದಾಗ ಅದು ಪಕ್ಕಕ್ಕೆ ಸರಿ ಅವಳಿಗೆ ರಾಜನ ಶಯನಾಗಾರವು ಕಾಣಿಸಿತು. ಮಂಚದ ಮೇಲೆ ನಿದ್ದೆ ಮಾಡಿಕೊಂಡಿದ್ದ ರಾಜನ ನೋಡಿದಳು. ತಂದೆಯನ್ನು ನೋಡಿದ ಕೂಡ ಮುಂದೆ ಹೋಗಲು ಪ್ರಯತ್ನಿಸಿದಳು. ಅವಳು ಎಲ್ಲ ಬಲವನ್ನೂ ಪ್ರಯೋಗಿಸಿ ಪಟವನ್ನು ಬ ಸರಿಸಿ, ರಾಜನ ಮಂಚವನ್ನು ತಲಪಿದ್ದಾಳೆ. ಆವ ರಾಜನು ಆ ವಿಚಿತ್ರ ಸುರಂಗದೊಳಗೆ, ಚಕ್ರ ಕೋಟೆಯಲ್ಲಿ ಸಿಕ್ಕಿಕೊಂಡ ಹಾಗೆ ಸಿಕ್ಕಿ ಹಾಕಿಕೊ ದ್ದಾನೆ. ಬಹಳ ಹೊತ್ತು ಕೈಕಾಲು ನೋಯು ತಿರುಗಿದ ಮೇಲೆ ಯಾರ ಪುಣ್ಯದಿಂದಲೋ ಈ



ಸುರಂಗ ಮಾರ್ಗದ ಸಮಸ್ಯೆ ಬಗೆಹರಿದಂತಾಯಿತು. ಆ ವಿಚಿತ್ರ ನೆಲಮನೆಯನ್ನೂ, ಸುರಂಗ ಮಾರ್ಗಗಳನ್ನೂ ತಿಳಿದುಕೊಂಡ ಮೇಲೆ ರಾಜನಿಗೆ ಒಂದು ಬದಿಯಲ್ಲಿ ಬಹಳ ಸಂತೋಷವಾಯಿತು. ಇನ್ನೊಂದು ಬದಿಯಲ್ಲಿ ಬಹಳ ಭಯವೂ ಇದ್ದಿತು. ಇಷ್ಟು ಕಾಲದವರೆಗೆ ಯಾರ ಕಣ್ಣಿಗೂ ಬೀಳದೆ ನೆಲಮನೆಯೊಳಗೆ ಬರುತ್ತಾ ಹೋಗುತ್ತಾ ಭಯದಿಂದಲೇ ದಿನಗಳ ಬಹುಭಾಗವನ್ನು ಕಳೆದುದಾಯಿತು. ಇದುವರೆಗೆ ತೋಟದ ದಾರಿಯಲ್ಲಿ ಬಂದಂತೆ ಇನ್ನು ಬರಬೇಕಾಗಿಲ್ಲ. ಅದಕ್ಕಿಂತ ಗುಟ್ಟಾದ ಈ ಸುರಂಗ ಮಾರ್ಗವು ಈಗ ಗೊತ್ತಾಗಿದೆ. ಇದುವರೆಗೆ ಭಯಪಟ್ಟಂತೆ ಇನ್ನು ಹೆದರಬೇಕಾಗಿಲ್ಲ. ಇಷ್ಟ ಬಂದಾಗಲೆಲ್ಲಾ ಕೋಣೆಯಿಂದ ಬ್ರಹ್ಮ ರುದ್ರರಿಗೆ ಕೂಡಾ ಗೊತ್ತಾಗದ ಹಾಗೆ ನೆಲಮನೆಯೊಳಗೆ ಬಂದು ತನ್ನ ಮಕ್ಕಳನ್ನು ನೋಡಬಹುದು. ಇದೊಂದು ದೊಡ್ಡ ಅದೃಷ್ಟವೆಂದು ರಾಜನು ಉಬ್ಬಿಹೋದ.

ಅಷ್ಟರಲ್ಲಿ "ನಾನಿದ್ದೇನೆ!" ಎಂದು ಹೆದರಿಸುತ್ತಾ ಭಯವು ಅವನ ಮನಸ್ಸಿನ ಮುಂದೆ ತೋರಿತು. ತಾನು ತನ್ನ ಮಕ್ಕಳಿಗೆ ತಕ್ಕ ರೀತಿಯಲ್ಲಿ ಕಟ್ಟುಪಾಡುಗಳನ್ನು ಮಾಡದಿದ್ದರೆ, ಸುಹಾಸಿನಿಯಾಗಲೀ ಬೇರೆ ಮಕ್ಕಳಾಗಲೀ ಸುರಂಗದ ದಾರಿಯಿಂದ ಆಗಾಗ ತನ್ನ ಕೋಣೆಗೆ ಬರುವುದೂ, ಅಲ್ಲಿಂದ ಹೊರಗಿನ ಪ್ರಪಂಚಕ್ಕೆ ಅವರ ವಿಷಯ ತಿಳಿಯುವುದೂ ನಡೆಯಬಹುದು. ಹಾಗಾದರೆ ಇಷ್ಟೆಲ್ಲ ರಹಸ್ಯ ಮಾಡಿ ಏನಾದ ಹಾಗಾಯಿತು? ತನ್ನ ಎಲ್ಲಾ ಪ್ರಯತ್ನವೂ ಬೂದಿಯಲ್ಲಿ ಬಿದ್ದ ತುಪ್ಪದಂತಾಗುತ್ತದೆ. ಮಕ್ಕಳು ತಮಗೆ ದಕ್ಕದೆ ಹೋಗಲೂ ಬಹುದು. ಹಾಗಾಗದಂತೆ ಏನು ಮಾಡಬಹುದು? ರಾಜನು ತೀವ್ರವಾಗಿ ಆಲೋಚನೆಗೆ ತೊಡಗಿದನು.

ಕಟ್ಟಕಡೆಗೆ ರಾಜನಿಗೆ ಒಂದು ಉಪಾಯ ತೋರಿತು. ಅದೇನೆಂದರೆ, ಇದುವರೆಗೆ ತನ್ನ ಮೂವರು ಕುಮಾರಿ



ಯರಿಗೂ ಬೇರೆ ಬೇರೆ ಕೋಣೆಗಳನ್ನು ಏರ್ಪಡಿಸಿ ಕೊಟ್ಟು ಬೇರೆಬೇರೆ ದಾಸಿಯರ ಮೇಲ್ವಿಚಾರಣೆಗೆ ಒಪ್ಪಿಸಲಾಗಿತ್ತು. ಇನ್ನು ಮೇಲೆ ನೆಲದಲ್ಲಿ ಬೆಣೆಯಿರುವ ಈ ಕೋಣೆಯಲ್ಲಿ ಯಾರೂ ಸಂಚರಿಸ ಕೂಡದೆಂದು, ಅದನ್ನು ಖಾಲೀ ಮಾಡಿಸಲು ನಿಶ್ಚಯಿಸಿದನು. ತನ್ನ ಮೂವರು ಕುಮಾರಿಯರನ್ನೂ ಉಳಿದೆರಡು ಕೋಣೆಗಳಲ್ಲೇ ಇರಬೇಕೆಂದು ಹೇಳಿ, ಬೆಣೆಯಿರುವ ಕೋಣೆಗೆ ಯಾರೂ ಹೋಗಬಾರದೆಂದು ಒತ್ತಿ ಹೇಳಿದನು.

"ಆಗಲಿ ಮಹಾಪ್ರಭುಗಳೇ. ತಾವು ಹೇಳದಿದ್ದರೂ ನಾವು ಆ ಕೋಣೆಗೆ ಕಾಲಿಡಲಾರೆವು." ಎಂದರು ದಾಸಿಯರು. ಅವರ ದೃಷ್ಟಿಯಲ್ಲಿ ಅದು ಮಾಯದ ಕೋಣೆಯಾಗಿತ್ತು.

ರಾಜನು ಸ್ವಲ್ಪ ಹೊತ್ತು ಮೂವರು ಕುಮಾರಿಯರೊಂದಿಗೆ ಲಲ್ಲೆಯಾಡಿ, ಇದುವರೆಗೆ ಸುಹಾಸಿನಿಯುದಾಗಿದ್ದ ಬೆಣೆಯ ಕೋಣೆಗೆ ಬಂದನು. ಅಲ್ಲಿಯ





ಒಂದು ಬೆಣೆಯ ಮೇಲೆ ಪಾದ ಊರುತ್ತಲೇ ಕನ್ನಡಿ ಭೂಮಿಯೊಳಗೆ ಇಳಿದು ದ್ವಾರವು ಏರ್ಪಟ್ಟಿತು. ಆ ದ್ವಾರದ ಮೂಲಕವಾಗಿ ಸುರಂಗದ ಮಾರ್ಗದಲ್ಲಿ ಹೊಕ್ಕು, ಮತ್ತೆ ಅಲ್ಲಿದ್ದ ಬೆಣೆಯನ್ನು ಒತ್ತಿದ ಕೂಡಲೇ ಕನ್ನಡಿ ಬಾಗಿಲು ಮೇಲೆದ್ದು ಮುಚ್ಚಿಕೊಂಡಿತು. ಇದೊಂದು ರಹಸ್ಯ ಮಾರ್ಗದ ಸೌಲಭ್ಯವನ್ನು ತನಗೆ ಒದಗಿಸಿ ಕೊಟ್ಟ ದೇವರನ್ನು ಸ್ತುತಿಸುತ್ತಾ ರಾಜನು ಸಂತೋಷದಿಂದ ತನ್ನ ಕೋಣೆಗೆ ಸೇರಿಕೊಂಡನು.

*   *   *

ಆ ದಿನದಿಂದ ರಾಜನು ರಹಸ್ಯ ಮಾರ್ಗದ ಮೂಲಕವಾಗಿ ದಿನಕ್ಕೆ ಎಷ್ಟೋ ಬಾರಿ ನೆಲಮನೆಗೆ ಹೋಗಿ ಬರುತ್ತಿದ್ದ. ಹೀಗೆಯೇ ದಿನಗಳು ಕಳೆಯುತ್ತಿದ್ದುವು. ರಾಜನು ಬಂದಾಗಲೆಲ್ಲಾ ಆ ಕುಮಾರಿಯರು ತಂದೆಯ ಕಾಲುಗಳನ್ನು ಸುತ್ತಿಕೊಂಡು, "ಅಪ್ಪಾ, ನಾವು ಕೂಡಾ ನಿಮ್ಮೊಂದಿಗೆ ಬರುತ್ತೇವೆ. ಕರೆದುಕೊಂಡು ಹೋಗುವುದಿಲ್ಲವೆ?" ಎಂದು ಕೇಳುತ್ತಿದ್ದರು. ಹಾಗೆ ಮಕ್ಕಳನ್ನು ತನ್ನ ಜತೆಯಲ್ಲಿ ಕರೆದೊಯ್ಯಲು ಧೈರ್ಯವಿಲ್ಲದ ರಾಜ, "ಈಗ, ಬೇಡ. ಇನ್ನೊಂದು ಸಾರಿ, ಖಂಡಿತ ಕರೆದೊಯ್ಯುತ್ತೇನೆ" ಎಂದು ಸಮಾಧಾನ ಪಡಿಸುತ್ತಿದ್ದ.

ಕ್ರಮವಾಗಿ ತಿಂಗಳುಗಳುರುಳ ತೊಡಗಿದುವು. ಮೂವರು ಕುಮಾರಿಯರೂ ಸುರಕ್ಷಿತವಾಗಿ ಚೆನ್ನಾಗಿ ಬೆಳೆಯುವ ಚೆಂದವನ್ನು ನೋಡಿ ರಾಜನು ಸಂತೋಷದಿಂದ ಮೈಮರೆಯುತ್ತಿದ್ದನು.

ಆದರೆ ರಾಣಿಯೋ? ಪಾಪ, ಅವಳಿಗೆ ಒಂದೊಂದು ದಿನವೂ ಬಹಳ ಭಾರವಾದುದೇ. ಮಕ್ಕಳನ್ನು ನೆನೆಯುತ್ತಾ ಸೊರಗಿ ಸೊರಗಿ ಹೋಗುತ್ತಿದ್ದಳು. ನಿದ್ದೆಯಲ್ಲಿಯೂ ಮಕ್ಕಳನ್ನು ನೆನೆಯುತ್ತಾ ಕನವರಿಸುತ್ತಿದ್ದಳು. ಮಕ್ಕಳನ್ನು ಹುಡುಕಿಸಲು ಚಾರರನ್ನು ಕಳುಹಿಸುತ್ತಲೇ ಇದ್ದಳು. ಅವರು ಸಿಕ್ಕಲಿಲ್ಲವೆಂದು ಬಾಡಿದ ಮುಖದಿಂದ ಹಿಂದಿರುಗುತ್ತಲೇ ಇದ್ದರು.

ಆಗಾಗ ರಾಣಿ ಜ್ಯೋತಿಷ್ಕನನ್ನು ಕರೆಯಿಸಿ, "ಸ್ವಾಮೀ, ನನ್ನ ಮಕ್ಕಳು ಕ್ಷೇಮವಾಗಿರುವರೆ? ಯಾವಾಗ ನೋಡುವೆನು?" ಎಂದು ಕೇಳುತ್ತಿದ್ದಳು. ಆ ಜ್ಯೋತಿಷ್ಯವೇ ಅವಳನ್ನು ಕಾಪಾಡುವಂತಿತ್ತು.

"ತುಂಬ ಕ್ಷೇಮವಾಗಿದ್ದಾರೆ. ಮಕ್ಕಳು ಮಾತ್ರವಲ್ಲ, ಅವರೊಂದಿಗೆ ಹೋದ ನೂರು ಮಂದಿ ಸೇವಕರೂ ದಾಸಿಯರೂ ಸಹಾ ಕ್ಷೇಮವಾಗಿದ್ದಾರೆ. ನೀವೇನೂ ಹೆದರಬೇಡಿ. ಇನ್ನು ಕೆಲವೇ ದಿನಗಳಲ್ಲಿ ಎಲ್ಲರೂ ಕ್ಷೇಮವಾಗಿ ತಿರುಗಿ ಬರುವ ಸೂಚನೆಗಳು ಜಾತಕದಲ್ಲಿ ಸ್ಪಷ್ಟವಾಗಿವೆಯಮ್ಮಾ" ಎಂದು ಜ್ಯೋತಿಷ್ಕನು ಹೇಳುತ್ತಿದ್ದ. ಆ ಮಾತು ಕೇಳಿದ ಮೇಲೆ ಕೆಲವು ದಿನಗಳವರೆಗೆ ರಾಣಿಯ ಮನಸ್ಸು ಗಟ್ಟಿಯಾಗಿರುತ್ತಿತ್ತು. ಹೀಗೆ ಎಷ್ಟೋ ಬಾರಿ ಜ್ಯೋತಿಷ್ಕನ ಮುಖದಿಂದ ನಂಬುಗೆ ಹೇಳಿಸಿಕೊಂಡದ್ದೂ ಆಯಿತು.


ಈ ವಿಧವಾಗಿ ಮತ್ತೆರಡು ವರ್ಷಗಳು ಕಳೆದುವು. ಪ್ರತಿದಿನವೂ ತಪ್ಪದೆ ನೆಲಮನೆಗೆ ಹೋಗಿ ಕುಮಾರಿಯರನ್ನು ನೋಡಿ ಬರುತ್ತಿದ್ದ ರಾಜನಿಗೆ, ಗಂಡಕಾಲವೆನಿಸಿದ ದಿನಗಳು ಒಂದೊಂದೇ ಕಡಮೆಯಾಗುತ್ತಿರುವುದನ್ನು ಎಣಿಸುತ್ತಾ ದಿನದಿಂದ ದಿನಕ್ಕೆ ಹೆಚ್ಚು ಧೈರ್ಯ ಸಂತೋಷಗಳನ್ನು ಪಡೆಯುತ್ತಿದ್ದನು. ರಾಜನು ನೆಲಮನೆಗೆ ಹೋದಾಗಲೆಲ್ಲಾ ಮಕ್ಕಳು ತಮ್ಮನ್ನು ಹೊರಗೆ ಕರೆದುಕೊಂಡು ಹೋಗುವಂತೆ ಒತ್ತಾಯಪಡಿಸುತ್ತಲೇ ಇದ್ದರು.

"ನಮ್ಮನ್ನು ಇಲ್ಲಿಯೇ ಬಿಟ್ಟು ನೀವೊಬ್ಬರೇ ಏಕೆ ಹೋಗುವಿರಿ ಅಪ್ಪಾ? ಅಮ್ಮನನ್ನು ನಮಗೆ ತೋರಿಸಲಾರಿರಾ? ನಮಗೆ ಅಮ್ಮನನ್ನು ನೋಡಲೇಬೇಕು. ಅಮ್ಮನ ಬಳಿಗೆ ನಮ್ಮನ್ನು ಕರೆದುಕೊಂಡು ಹೋಗಿರಿ ಅಪ್ಪಾ..." ಎಂದು ಅಳುತ್ತಾ ರಾಜನಿಗೆ ಕಾಲನ್ನು ಕದಲಿಸಲು ಬಿಡದೆ ಪೀಡಿಸುತ್ತಿದ್ದರು. ಆಗ ರಾಜನಿಗೆ ಕರುಳು ಕಿವಿಚುವಂತಾಗುತಿತ್ತು; ಮನಸ್ಸು ಚಂಚಲವಾಗುತಿತ್ತು "ದೇವರ ಮೇಲೆಭಾರ ಹಾಕಿ ಒಂದುಸಾರಿ ಇವರನ್ನು ತಾಯಿಗೆ ತೋರಿಸೋಣವೇ ?" ಎಂದು ತನಗೆತಾನೇ ಹೇಳಿಕೊಳ್ಳುತ್ತಿದ್ದನು.

ಆ ಕೂಡಲೇ, "ಕೂಡದು. ಇನ್ನಿರುವುದು ಒಂದೇ ವರ್ಷ. ಅಷ್ಟರವರೆಗೂ ಗಟ್ಟಿ ಮನಸ್ಸಿನಿಂದಿರಲೇಬೇಕು. ಬೆಣ್ಣೆ ಬರುವಾಗ ಗಡಿಗೆ ಒಡೆದರು ಎಂಬ ಮಾತಿಗೆ ಇಂಬಾಗಬಾರದು" ಎಂದು ಮನಸ್ಸನ್ನು ಕಲ್ಲು ಮಾಡಿಕೊಂಡು ಮಕ್ಕಳಿಗೆ ಸಮಾಧಾನ ಹೇಳಿ ಕಾಲ ದೂಡುತ್ತಿದ್ದನು.

ಮತ್ತೆ ಕೆಲವು ದಿನಗಳು ಕಳೆದುವು. ಲೆಕ್ಕ ಹಾಕಿಕೊಂಡಿದ್ದ ರಾಜನಿಗೆ, ಇನ್ನು ನಾಲ್ಕು ದಿನಗಳಲ್ಲಿ ಕುಮಾರಿಯರಿಗೆ ಏಳು ವರ್ಷಗಳು ತುಂಬುತ್ತವೆಂದು ತಿಳಿಯಿತು. ಆ ದಿನಕ್ಕೆ ಗಂಡ ಕಾಲ ಕಳೆದು ಹೋಗಿ, ಕುಮಾರಿಯರಿಗೆ ನೆಲಮನೆಯ ಸೆರೆಯೊಳಗಿನಿಂದ ಬಿಡುಗಡೆಯಾಗುತ್ತದೆ.

"ಅಬ್ಬ, ಈ ಮೂರು ವರ್ಷಗಳವರೆಗೆ ಯಾವ ಗಂಡಾಂತರವೂ ಬಾರದಂತೆ ಮಕ್ಕಳನ್ನು





ಕಾಪಾಡಿಬಿಟ್ಟೆನಲ್ಲ! ಇನ್ನೇನು? ನಾಲ್ಕೇ ದಿನ. ಅದನ್ನೂ ಇಷ್ಟು ಎಚ್ಚರದಲ್ಲಿ ಕಳೆದುಬಿಟ್ಟರೆ ತೀರಿಹೋಯಿತು. ಜಾತಕದಲ್ಲಿ ಹೇಳಿದಂತೆ ಗಂಡಾಂತರದ ಕಾಲ ದಾಟಿ ಹೊರಗೆ ಕಾಲಿಡುತ್ತಾರೆ ಕುಮಾರಿಯರು!" ಎಂದು ರಾಜನು ತನ್ನೊಳಗೆ ಉಬ್ಬಿಕೊಳ್ಳುತ್ತಿದ್ದ. ಈಗ ದಿನಗಳ ಬದಲಿಗೆ ಗಂಟೆಗಳನ್ನು ಎಣಿಸತೊಡಗಿದ.

ಆ ನಾಲ್ಕನೇ ದಿನವೂ ಬಂದಿತು. ಎಂದಿನಂತೆ ರಾಜನು ಮಕ್ಕಳನ್ನು ನೋಡಲು ನೆಲ ಮನೆಗೆ ಬಂದ. ಅದೇ ಅವರು ನೆಲಮನೆಯೊಳಗಿರಬೇಕಾದ ಕಡೆಯ ದಿನ. ಮಕ್ಕಳು ತಂದೆಯನ್ನು ನೋಡಿದ ಕೂಡಲೇ ತಂದೆಯ ಕಾಲಿಗೆ ತಮ್ಮ ಕೈಗಳನ್ನು ಸುತ್ತಿಕೊಂಡು, "ಈ ದಿನ ನಮ್ಮನ್ನು ಹೊರಗೆ ಕರೆದುಕೊಂಡು ಹೋಗಲೇಬೇಕು. ಎಷ್ಟುಮಾತ್ರಕ್ಕೂ ಬಿಡಲಾರೆವು" ಎಂದು ಚಂಡಿ ಹಿಡಿದು ಕಾಡತೊಡಗಿದುವು. ರಾಜನ ಮನಸ್ಸು ಕರಗಿ ನೀರಾಗಿ ಹೋಯಿತು.

"ಈ ಮೂರು ವರ್ಷಗಳವರೆಗೆ ಯಾವ ಆಪದವೂ ಬರಲಿಲ್ಲವಷ್ಟೆ? ಇನ್ನಿರುವ ಇಪ್ಪತ್ನಾಲ್ಕು ಗಂಟೆಗಳಲ್ಲಿ ಏನಾದೀತು ಮಹಾ? ಅದರ ಮೇಲೆ ಇಷ್ಟೊಂದು ಸೇವಕ ಪರಿವಾರದವರೂ ಇದ್ದಾರೆ. ಇನ್ನೂ ಭಯವನ್ನು ಶಂಕಿಸುವುದು ಪುಕ್ಕಲುತನವಾದೀತು. ನಾನೊಬ್ಬ ಹೇಡಿಯಾದೇನು!" ಹೀಗೆಂದುಕೊಂಡು ರಾಜನು ಧೈರ್ಯ ತಂದುಕೊಂಡು "ಬನ್ನಿ ಹೋಗುವ" ಎಂದು ಮಕ್ಕಳನ್ನು ಕರೆದುಕೊಂಡೇ ಹೊರಟನು. ಮಕ್ಕಳು ಅತ್ಯಾನಂದದಿಂದ ನಲಿದರು. ನೂರು ಮಂದಿ ಸೇವಕರನ್ನೂ ದಾಸಿಯರನ್ನೂ ನೋಡಿ ರಾಜನು "ನೀವೂ ಹೊರಡಿರಿ" ಎಂದನು. ಅವರಿಗೂ ಸಹಾ ಆತ್ಯಾಶ್ಚರ್ಯವೂ, ಹೊರಗಿನ ಪ್ರಪಂಚಕ್ಕೆ ಹೋಗುವೆವೆಂಬ ಆನಂದವೂ ಒಮ್ಮೆಗೇ ಉಂಟಾಯಿತು. ವಿಮೋಚನೆಯ ಆನಂದದಲ್ಲಿ ಎಲ್ಲರೂ ತೇಲತೊಡಗಿದರು.

ರಾಜನು ಮಕ್ಕಳೊಂದಿಗೆ ಅವರೆಲ್ಲರನ್ನೂ ಕರೆದುಕೊಂಡು ನೆಲಮನೆಯಿಂದ ಮೇಲೆ ಬಂದು, ತೋಟದಲ್ಲಿ ಒಂದು ಕಡೆ, ಎಲ್ಲರನ್ನೂ ಕೂಡಿಸಿ ತಾನೂ ಕುಳಿತನು. ಮಕ್ಕಳು ದಾಸಿಯರ ವಶದಲ್ಲಿದ್ದರು. ಸುತ್ತಲೂ ನೂರು ಜನ ಸೇವಕರು ಕಾವಲುಗಾರರಾ ನಿಂತಿದ್ದರು. ಎಲ್ಲರಿಗೂ ಅದು ಹೊಸ ಸ್ಥಳದಂ ಕಾಣುತಿತ್ತು. ಅಪರೂಪವಾಗಿ ಸೂರ್ಯ ಪ್ರಪಂ ವನ್ನು ನೋಡಿದ ಹರ್ಷದಲ್ಲಿ ಕುಮಾರಿಯರು ಸಂತೋಷದಿಂದ ಕುಣಿದು ಕುಪ್ಪಳಿಸಿ ಆಡಿಕೊಂ ದ್ದರು. ಅದನ್ನು ನೋಡುತ್ತಾ ರಾಜನೂ ಸಂತೋ ಪಡುತ್ತಿದ್ದನು. ನಿಜವಾದ ಗಂಡಾಂತರವು ಈಗಲ ಕಾದಿರುವ ಸಂಗತಿ ಅವನಿಗೇನು ಗೊತ್ತು?

ಇದ್ದಕ್ಕಿದ್ದ ಹಾಗೆ ಒಮ್ಮೆಗೇ ಬ್ರಹ್ಮಾಂಡದಂತ ಸುಳಿಗಾಳಿ ಎದ್ದಿತು. ಕಣ್ಣುಮುಚ್ಚಿ ತೆರೆಯುವ ರೊಳಗೆ ಆ ಪ್ರದೇಶವೆಲ್ಲಾ ಧೂಳಿನಿಂದ ತುಂ ಹೋಯಿತು. ಎಲ್ಲರೂ ಕಣ್ಣು ಮುಚ್ಚಿಕೊಂಡರು



"ಅಪ್ಪಾ ! ಅಪ್ಪಾ ! ಅಯ್ಯೋ ! ಅಯ್ಯೋ !—" ಎಂದು ರಾಜಕುಮಾರಿಯರ ಕಿರಿಚಾಟ ದೂರದೂರವಾಗಿ ಹೋಗುತ್ತಾ ಇರುವಂತೆ ಕಿವಿಗೆ ಕೇಳಿಸಿತು. ರಾಜನು ತತ್ತರಿಸುತ್ತಾ, "ಇಲ್ಲಿದ್ದೇನೇ, ಇಲ್ಲಿದ್ದೇನೇ" ಎಂದು ಕೂಗುತ್ತಾ ಕಣ್ಣುಜ್ಜಿಕೊಂಡು ನೋಡಿದಾಗ ಮೂರು ರಣ ಹದ್ದುಗಳು, ತನ್ನ ಮೂವರು ಕುಮಾರಿಯರನ್ನೂ ಎತ್ತಿಕೊಂಡು ಹೋಗುತ್ತಿದ್ದುವು.

ರಾಜನು "ಅಯ್ಯೋ" ಎಂದು ಕೂಗಿ ಮೂರ್ಛೆ ಹೋಗಿಬಿದ್ದ. ದಾಸಿಯರು ರಾಜನ ಪರಿಚರ್ಯೆಗೆ ಧಾವಿಸಿದರು. ನೂರು ಮಂದಿ ಸೇವಕರೂ ವಿಧ ವಿಧವಾಗಿ ಕೂಗುತ್ತಾ ಹದ್ದುಗಳು ಹಾರುವ ದಿಕ್ಕಿಗೆ ಓಡತೊಡಗಿದರು.

ರಾಜನು ಮೂರ್ಛೆ ತಿಳಿದೆದ್ದು, "ಸೇವಕರೆಲ್ಲಾ ಎಲ್ಲಿ ?" ಎಂದು ಸುತ್ತುಮುತ್ತು ನೋಡಿದ. ಸೇವಕರು ಒಬ್ಬರಹಿಂದೊಬ್ಬರು ಜೋಲು ಮೋರೆ ಮಾಡಿಕೊಂಡು ಬರುತ್ತಿದ್ದರು. ಇಂದಿಗೆ ಸರಿಯಾಗಿ ಮೂರು ವರ್ಷಗಳ ಹಿಂದೆ ರಾಜನು ಯಾವ ಕಲ್ಪನೆಯನ್ನು ರೂಪಿಸಿ ಹೇಳಿದ್ದನೋ, ಕಪಟ ನಾಟಕವಾಡಿದ್ದನೋ ಅದೆಲ್ಲವೂ ಕಣ್ಣೆದಿರಿಗೆ ಈಗ ಪ್ರತ್ಯಕ್ಷವಾಗಿ ಹೋಗಿತ್ತು. ರಾಜನು ತನ್ನನ್ನೇ ತಾನು ನಿಂದಿಸಿಕೊಂಡ.


"ಈ ದಿನ ಹೀಗಾಗಬೇಕಾಗಿದ್ದುದರಿಂದಲೇ ಆ ದುಷ್ಟ ಗ್ರಹಗಳು ನನ್ನ ನಾಲಗೆಯಲ್ಲಿ ಕುಳಿತು ಅಂಥಾ ಅಶುಭ ವಾಕ್ಯಗಳನ್ನು ಆಡಿಸಿದುವು. ಹಣೆಯ ಬರೆದಂತೆಯೇ ನಾಲಗೆ ಹೇಳುತ್ತದೆ. ಇಂಥಾ ಹಾ ನಾಲಗೆಯನ್ನು ಕತ್ತರಿ ಹಾಕಬೇಕು..." ಎಂದ ಕೊಂಡು ರಾಜನು ಗಳಗಳನೆ ಅಳಲು ತೊಡಗಿದನ ಅವನಿಗೆ ಸಮಾಧಾನ ಹೇಳುವವರು ಯಾರು ?

ವಿಧಿಯ ಚಿತ್ರವು ಹೇಗಿರಬೇಕೋ ಹಾಗೆಯ ನಡೆಯಿತು. ಯಾವುದೋ ಮಾನವಾತೀತ ಶ ಯೊಂದು ರಾಜನ ದೇಹವನ್ನು ಪ್ರವೇಶಿಸಿ ಅವ ಮನಸ್ಸನ್ನು ಹೇಗೆ ಹೇಗೋ ತಿರುಗಿಸಿಬಿಟ್ಟಿತು ಮಕ್ಕಳನ್ನು ತೋಟದಲ್ಲಿದ್ದ ನೆಲಮನೆಯೊಳಗೆ ಅಡ ಸಿಡುವಂತೆ ಮಾಡಿತ್ತು. ಬರತಕ್ಕ ಗಂಡಾಂತರ ಬಂದ ಬಂದಿತು. ಕೈಸುಟ್ಟ ಮೇಲೆ ಬಟ್ಟೆ ಹಿಡಿದು ಏನ ಮಾಡಿದರೆ ಏನು ಪ್ರಯೋಜನ ?

ಇನ್ನು ರಾಣಿಯ ಹತ್ತಿರ ಈ ವಿಷಯವನ ಮುಚ್ಚಿಟ್ಟುಕೊಳ್ಳುವಂತಹುದೇನಿದೆ ? ರಾಜನು ತನ ಪರಿವಾರದೊಂದಿಗೆ ಅರಮನೆಯಲ್ಲಿ ಸೇರಿಕೊಂಡ ನಡೆದ ಎಲ್ಲಾ ವಿವರಗಳನ್ನೂ ಏನೂ ಮರೆಮಾಚ ರಾಣಿಯೊಂದಿಗೆ ಹೇಳಿದನು. ಮೊದಲು ಹೇಳಿದ ದನ್ನು ನಂಬುವುದೋ, ಈಗ ಹೇಳುವುದನ್ನು ನಂ ವುದೋ ತಿಳಿಯದೆ ರಾಣಿಗೆ ಭ್ರಾಂತಿ ತಟ್ಟಿತು. ರಾ ರಾಣಿಯರಿಬ್ಬರೂ ಒಂದೇಬಗೆಯ ಶೋಕ ಸಮು ದಲ್ಲಿ ಮುಳುಗಿದರು.

(ಇನ್ನೂ ಇದ





ಅವಳಿ ಮಕ್ಕಳ ಕಥೆ


Dec 1974

೫

[ದಾನಶೀಲ ಮಹಾರಾಜನು ತನ್ನ ಮೂವರು ಕುಮಾರಿಯರನ್ನು ಮೂರು ವರ್ಷ ನೆಲಮನೆಯೊಳಗೆ ಕಾಪಾಡಿದನು. ಇನ್ನು ಇಪ್ಪತ್ನಾಲ್ಕು ಗಂಟೆಯೊಳಗೆ ಅಪಾಯದ ವೇಳೆ ಹೋಗಲಿಕ್ಕಿರಲು, ಅಷ್ಟರೊಳಗೆ ತಾಳ್ಮೆಗೆಟ್ಟು ಕುಮಾರಿಯರನ್ನು ಹೊರಕ್ಕೆ ತಂದನು. ಕೂಡಲೇ ಮೂರು ಹದ್ದುಗಳು ಬಂದು ಆ ಕುಮಾರಿಯರನ್ನು ಎತ್ತಿಕೊಂಡು ಹೋದುವು.]

ಸೇವಕರೇ ಮೊದಲಾದವರು ಮಾಡಿದ ಶೈತ್ಯೋಪಚಾರಗಳಿಂದ ದುಃಖ ತಾಳದೆ ಮೂರ್ಛೆ ಹೋದ ದಾನಶೀಲ ಮಹಾರಾಜನಿಗೆ ಮೂರ್ಛೆ ತಿಳಿದು ಎಚ್ಚರ ಬಂತು. ಆದರೆ ಬಹಳ ನಿತ್ರಾಣತೆಯಿಂದ ಸುತ್ತಲೂ ನೋಡಿದನು. ಮಂಜಾದ ಅವನ ದೃಷ್ಟಿ ಇನ್ನೂ ಸ್ವಚ್ಛವಾಗಲಿಲ್ಲ. ಸುತ್ತಲೂ ಸೇರಿದ ಪರಿವಾರದವರು ದುಃಖದ ಕಳೆಯಿಂದ ವಿಚಿತ್ರವಾಗಿ ಕಾಣಿಸುತ್ತಿದ್ದರು. ತಾನೆಲ್ಲಿದ್ದೇನೆ, ನಡೆದುದೇನು ಎಂಬುದನ್ನು ಸಾವಕಾಶವಾಗಿ ಯೋಚಿಸ ತೊಡಗುವಾಗ, ನಡೆದ ಸಂಗತಿ ಸ್ಪಷ್ಟವಾಗುತ್ತ ಬಂತು. ದುಃಖದಲ್ಲಿ ಮುಳುಗಿದ ರಾಣಿಯ ಗತಿ ಏನಾಯಿತು? ಗಂಡೆದೆಯ ತಾನೇ ಶೋಕವನ್ನು ತಾಳಲಾರದೆ ಮೂರ್ಛೆ ಬಿದ್ದ ಮೇಲೆ ಹೆತ್ತವಳ ಸ್ಥಿತಿ ಏನಾಗಿದೆಯೋ ಎಂದು ಹೆದರಿದನು.

ತನ್ನ ಪ್ರೀತಿಯ ರಾಣಿ ನಿಶ್ಚೇತನಳಾಗಿ ಒರಗಿರುವುದನ್ನು ನೋಡಿದನು. ಮಕ್ಕಳನ್ನು ಹದ್ದುಗಳು ಹಾರಿಸಿಕೊಂಡು ಹೋದುವೆಂಬ ಕರ್ಣ ಕಠೋರವಾದ ವಾರ್ತೆಯನ್ನು ಕೇಳಿ ಅವಳಿಗೆ ಸಿಡಿಲುಬಡೆದ ಹಾಗಾಗಿತ್ತು. ದಾಸಿಯರು ಗಾಬರಿಯಿಂದ ಅವಳಿಗೆ ಉಪಚರಿಸುವುದನ್ನು ನೋಡಿ, ಮಕ್ಕಳನ್ನು ಕಳೆದುಕೊಂಡ



ತನಗೆ ರಾಣಿಯೂ ದಕ್ಕದೆ ಹೋಗಿರುವಳೇನೋ ಎಂದು ರಾಜನಿಗೆ ಭಯವಾಯಿತು. ಏನೂ ತೋರದಂತೆ ಬುದ್ಧಿ ಮಂಕಾಯಿತು.

"ಮೂರು ವರ್ಷಗಳವರೆಗೆ ಹಟ ಹಿಡಿದು ಕುಳಿತ ಹಾಗೆ, ಈ ಒಂದುದಿನ ಕೂಡಾ ಮಕ್ಕಳನ್ನು ಸಮಾಧಾನ ಪಡಿಸಲಾರದೆ, ಅವುಗಳ ಹಟಕ್ಕೆ ಬಲಿಬಿದ್ದು ಕಳೆದುಕೊಂಡೆನಲ್ಲಾ? ಎಂತಹ ಪಾಪಿ ನಾನು! ಅಷ್ಟೊಂದು ತಾಳ್ಮೆಯಿಲ್ಲದ ಎದೆಯಾಯಿತೇ ನನ್ನದು! ಕಣ್ಣೆದಿರಿನಲ್ಲಿಯೇ ಮುದ್ದು ಮಕ್ಕಳನ್ನು ರಾಕ್ಷಸ ಹದ್ದುಗಳಿಗೆ ಎಸೆದ ಹಾಗಾಯಿತು. ಇನ್ನು ಪ್ರೀತಿಯ ರಾಣಿಯೂ ಹೋದರೆ ನನ್ನ ಗತಿಯೇನು? ಮತ್ತೆ ನಾನೇಕೆ ಬದುಕಬೇಕು? ಯಾರಿಗಾಗಿ ಈ ರಾಜ್ಯವನ್ನು ಆಳಬೇಕು?" ಎಂದು ರಾಜನು ಬಾಯಿ ತೆರೆದೇ ಗೊಣಗಿಕೊಂಡು ದುಃಖಿಸಿದನು. ಅವನಿಗೆ ಸಮಾಧಾನ ಹೇಳಬೇಕೆಂದರೆ ಯಾರ ಮುಖದಲ್ಲಿಯೂ ಚಿವುಟಿದರೆ ರಕ್ತವಿಲ್ಲ.

ಪನ್ನೀರು ಚಿಮುಕಿಸಿ, ಗಾಳಿ ಬೀಸಿ, ಹಣೆ ತಡವುತ್ತ ಎಷ್ಟು ಹೊತ್ತಾದರೂ ರಾಣಿಗೆ ಸ್ಮೃತಿಬಾರದಿರುವುದನ್ನು ನೋಡಿ, ಇದು ದೀರ್ಘ ನಿದ್ರೆಯೇನೋ ಎಂದು ಎಲ್ಲರೂ ಹೆದರಿ ಮುಖ ಮುಖ ನೋಡ ತೊಡಗಿದರು.

ಈ ಸಂಗತಿ ಕೇಳಿದ ಕೂಡಲೇ ಯಾವುದೋ ಔಷಧವನ್ನು ಅವಸರದಿಂದ ಅರೆಯ ತೊಡಗಿದ ಆಸ್ಥಾನ ವೈದ್ಯನು, ಅದನ್ನು ಸಿದ್ಧಪಡಿಸಿಕೊಂಡು ತನ್ನ ಔಷಧದ ಸಂಚಿಯೊಂದಿಗೆ ಅಲ್ಲಿಗೆ ಬಂದನು. ಅವನು ರಾಣಿಯನ್ನು ಪರೀಕ್ಷಿಸಿ ಅವಳ ಕಣ್ಣುಗಳಿಗೊಂದು ಅಂಜನವನ್ನೂ, ಮೂಗಿಗೊಂದು ಮದ್ದಿನ ವಾಸನೆಯನ್ನೂ, ಬಾಯೊಳಗೆ ಒಂದು ಗುಳಿಗೆಯನ್ನೂ ಹಾಕಿ ಅವಳಿಗೆ ಎಚ್ಚರ ಬರುವಂತೆ ಮಾಡಿ ಬಿಟ್ಟನು. ಅದನ್ನು ನೋಡಿ ಎಲ್ಲರ ಮುಖಗಳಲ್ಲಿಯೂ ಆನಂದದ ಕಳೆ ಲಾಸ್ಯವಾಡಿತು.

ಆದರೆ ಆ ಸಂತೋಷ ಬಹಳ ಹೊತ್ತು ನಿಲ್ಲಲಿಲ್ಲ. ಅವಳು ಕಣ್ಣು ತಿರುಗಿಸುತ್ತಾ ಮತಿಗೆಟ್ಟವಳಂತೆ ಏನೇನೋ ಹೇಳ ತೊಡಗಿದಳು. "ಈ ಸುಳ್ಳುಗಳಿಂದ ಎಷ್ಟು ಆಟ ಆಡ್ತೀರಪ್ಪಾ? ಸಾಕು ಬಿಡಿ. ನನ್ನ ಕಣ್ಮಣಿಗಳನ್ನು ಎಲ್ಲಿ ಅಡಗಿಸಿದ್ದೀರೋ ಹೇಳಿಬಿಡಿ..." ಎಂದು ಹುಚ್ಚುಚ್ಚಾಗಿ ಮಾತಾಡತೊಡಗಿದಳು.

"ಇನ್ನೂ ನಿನ್ನ ಹತ್ತಿರ ಆಟ ಆಡುವೆನೆಂದು ಕೊಂಡೆಯಾ? ನನ್ನ ಮುಖ ನೋಡಿ, ನನ್ನ ಮಾತು ನಂಬು. ಮಕ್ಕಳನ್ನು ಎಲ್ಲಿಯೂ ಅಡಗಿಸಿಟ್ಟಿಲ್ಲ. ಹದ್ದುಗಳು ಹಾರಿಸಿಕೊಂಡು ಹೋದುವು. ನನ್ನ ಮಾತಿನ ಮೇಲೆ ನಂಬುಗೆಯಿಲ್ಲದೆ ಹೋದರೆ, ಇಕೋ ಈ ಸೇವಕರನ್ನು ಕೇಳಿ ನೋಡು" ಎಂದು ದೀನನಾಗಿ ಹೇಳಿದ ರಾಜ. ಆಗ ಕೆಲವು ಸೇವಕರು ಅಳುದನಿಯಿಂದ "ಹೌದಮ್ಮಾ! ನಿಜ, ನಿಜ! ನಾವೇ ನೋಡಿದೆವು" ಎಂದು ಕೂಗಿದರು. ಯಾರೇನು ಹೇಳಿದರೂ ರಾಣಿ ಅರ್ಥಮಾಡಿಕೊಳ್ಳು

ಸ್ಥಿತಿಯಲ್ಲಿರಲಿಲ್ಲ. "ನೀವೆಲ್ಲರೂ ಒಂದೇ ರೀತಿಯವರು. ಹೋಗಿ ಹೋಗಿ! ನೀವೆಲ್ಲಾ ಒಟ್ಟಾಗಿ ಸೇರಿಕೊಂಡು ಮಸಲತ್ತು ಮಾಡಿ ಹೇಳುವಿರಿ; ನಿಮ್ಮೊಂದಿಗೆ ನನಗೇನು ಮಾತು? ನನ್ನ ಮಕ್ಕಳನ್ನು ನಾನೇ ಕರೆದುಕೊಂಡು ಬರುತ್ತೇನೆ, ದಾರಿ ಬಿಡಿ!" ಎಂದು ಎದ್ದು ಹೊರಡಲನುವಾದಳು ರಾಣಿ.

ಉಗುರುಸುತ್ತಿನ ಮೇಲೆ ಒನಕೆ ಪೆಟ್ಟು ಬೀಳುವ ಹಾಗೆ ಈ ಹೊಸ ಕಷ್ಟವನ್ನು ನೋಡಿ ರಾಜನಿಗೆ ಏನು ಮಾಡಬೇಕೆಂದು ತೋರಲಿಲ್ಲ. "ಇವಳ ಮನಸ್ಸನ್ನು ಸರಿಮಾಡಲಾರಿರಾ?" ಎಂಬಂತೆ ಆಸ್ಥಾನ ವೈದ್ಯನನ್ನು ನೋಡಿದ ರಾಜ.

ಆಸ್ಥಾನ ವೈದ್ಯನು ಮತ್ತೊಂದು ಔಷಧವನ್ನು ಆಗಿಂದಾಗಲೇ ತಯಾರಿಸಿ ರಾಣಿಗೆ ಕುಡಿಸಿದನು. ಆ ನಿಮಿಷದಿಂದ ರಾಣಿ ಮಾತಾಡುವುದನ್ನು ನಿಲ್ಲಿಸಿ ಶಿಲಾಪ್ರತಿಮೆಯ ಹಾಗೆ ಒರಗಿಬಿಟ್ಟಳು.

ತರುವಾಯ ಆಸ್ಥಾನ ವೈದ್ಯನು ರಾಜನನ್ನು ಬದಿಗೆ ಕರೆದುಕೊಂಡು ಹೋಗಿ, "ಮಹಾರಾಜರೆ, ಈಗ ಮಹಾರಾಣಿಯವರಿಗೆ ಶರೀರ ಬಾಧೆ ಯಾವುದೂ ಇಲ್ಲ. ಈಗ ಅವರಿಗೆ ಹಿಡಿದಿರುವುದು ಮಾನಸಿಕ ರೋಗ. ಇದಕ್ಕಾಗಿ ನಾವು ಮಾಡಬಹುದಾದ ಕಾರ್ಯವೆಂದರೆ, ಹೇಗಾದರೂ ಕುಮಾರಿಯರನ್ನು ಹುಡುಕಿ ತರಿಸಿ ಅವರ ಮುಂದೆ ನಿಲ್ಲಿಸಬೇಕು. ಎಷ್ಟು ಬೇಗ ಈ ಕೆಲಸವಾದರೆ ಅಷ್ಟು ಬೇಗ ಗುಣಮುಖರಾಗುತ್ತಾರೆ. ಆದುದರಿಂದ ಈಗಿಂದೀಗಲೇ ಆ ಕಾರ್ಯಕ್ಕೆ ಪ್ರಾರಂಭಿಸಬೇಕು. ರಾಜಕಾರ್ಯಗಳನ್ನೆಲ್ಲ ಯಾರಿಗಾದರೂ ಒಪ್ಪಿಸಿಬಿಡಿ. ಹುಡುಕಿಸುವ ಕಾರ್ಯದಲ್ಲೇ ದೀಕ್ಷೆ ವಹಿಸಿರಿ. ರಾಣಿಯವರ ಆರೋಗ್ಯ ನೋಡಿಕೊಳ್ಳುವ ಭಾರ ನನಗಿರಲಿ" ಎಂದು ಧೈರ್ಯ ಹೇಳಿದನು.

"ಹಾಗೆಯೇ ಮಾಡುತ್ತೇನೆ. ಈ ವಿಷಯವನ್ನು ಕುರಿತು ಈಗಲೇ ಡಂಗುರ ಹೊಯಿಸುತ್ತೇನೆ. ನೀವು



ಮಾತ್ರ ರಾಣಿಯನ್ನು ಜಾಗರೂಕತೆಯಿಂದ ನೋಡಿಕೊಂಡಿರಿ" ಎಂದು ಕೇಳಿಕೊಂಡ ರಾಜ.

ಆ ಕೂಡಲೇ ರಾಜನು ತನ್ನ ವೀರಧೀರರಾದ ಅನೇಕ ಮಂದಿ ಭಟರನ್ನು ರಾಜಕುಮಾರಿಯರನ್ನು ಹುಡುಕಲು ದೇಶದ ನಾಲ್ಕು ಮೂಲೆಗಳಿಗೂ ಕಳುಹಿಸಿದನು. ಕುಮಾರಿಯರ ಜಾಡು ತಿಳಿದು ಬಂದು ಹೇಳುವವರಿಗೆ, ಅಥವಾ ಕರೆದುಕೊಂಡೇ ಬರುವವರಿಗೆ ತನ್ನ ರಾಜ್ಯದಲ್ಲಿ ಅರ್ಧವನ್ನು ಕೊಡಾ ಕೊಡುವೆನೆಂದು ದೇಶದೊಳಗೆಲ್ಲಾ ತಿಳಿಯುವಂತೆ ಡಂಗುರ ಹೊಡೆಯಿಸಿದನು.

* * *

ವಾರಗಳು ಕಳೆದು ತಿಂಗಳುಗಳು ದಾಟಿದರೂ ಕುಮಾರಿಯರನ್ನು ಹುಡುಕ ಹೋದವರಲ್ಲಿ ಯಾರೂ ಹಿಂದಿರುಗಿ ಬರಲಿಲ್ಲ. ರಾಜನು ಸಾರಿದ ಡಂಗುರವನ್ನು ಕೇಳಿ ಯಾವನೊಬ್ಬ ಸಮರ್ಥನೂ ಮುಂದೆ ಬರುವ ಸೂಚನೆ ಕಾಣಿಸಲಿಲ್ಲ. ಇದನ್ನೆಲ್ಲಾ ನೋಡು



ತ್ತಿರಲು ರಾಜನಿಗೆ ಪ್ರತಿನಿಮಿಷವೂ ಭಾರವಾಗುತ್ತ, ಬುದ್ಧಿ ಕೆಡುವಂತೆ ತೋರಿತು. ತನಗೂ ಬುದ್ಧಿ ಕೆಟ್ಟರೆ ಮುಂದೇನಾಗಬಹುದೆಂದು ನೆನೆಯುವಾಗ ರಾಜನ ಮೈ ನಡುಗುತಿತ್ತು. ರಾಣಿ ವೈದ್ಯನ ಆರೈಕೆಯಲ್ಲಿ ಇದ್ದ ಹಾಗೆಯೇ ಇದ್ದಾಳೆ.

ಒಂದುದಿನ ಬೆಳಗಾಗುವ ಹೊತ್ತಿಗೆ ರಾಜನು ಅರಮನೆಯ ಮೂರನೇ ಅಂತಸ್ತಿನಲ್ಲಿ ನಡೆದಾಡಿಕೊಂಡಿದ್ದನು. ಇನ್ನೂ ಸೂರ್ಯೋದಯವಾಗಲಿಲ್ಲ. ಆ ಮುಂಬೆಳಕಿನ ಹೊತ್ತಿನಲ್ಲಿ ಮೂವರು ವ್ಯಕ್ತಿಗಳು ತನ್ನ ಅರಮನೆಯ ಕಡೆಗೆ ಬರುತ್ತಿರುವುದನ್ನು ರಾಜನು ನೋಡಿದನು. ಆ ಮೂವರೂ ಚಿಕ್ಕ ಪ್ರಾಯದ ಚುರುಕಾದ ನಡಿಗೆಯುಳ್ಳವರು. ಸರಿಸಮಾನವಾದ ಎತ್ತರ ದಪ್ಪಗಳಿಂದ ಒಂದೇ ಅಚ್ಚಿನಲ್ಲಿ ಹೊಯಿದವರಂತೆ ಕಾಣುತ್ತಿದ್ದರು.

ಅವರು ಮೂವರು ತನ್ನ ಪ್ರೀತಿಯ ಮಗಳಂದಿರೇ ಎಂದು ತೋರಿ ರಾಜನು ಬೇಗಬೇಗನೇ ಅಂತಸ್ತುಗಳಿಂದ ಕೆಳಗಿಳಿದು ಅವರ ಕಡೆಗೆ ಓಡಿದನು. ತೀರಾ ಅವರ ಸಮೀಪಕ್ಕೆ ಹೋದಾಗ ಅವರು ಮೂವರೂ ಗಂಡು ಹುಡುಗರೆಂದು ಸ್ಪಷ್ಟವಾಯಿತು. ಆದರೂ ಆ ಮೂವರೂ ಒಂದೇ ವಿಧವಾದ ಹೋಲಿಕೆಯಲ್ಲಿ ರುವುದನ್ನು ನೋಡಿ ರಾಜನ ಮನಸ್ಸಿನಲ್ಲಿ ವಿಚಿತ್ರವಾದೊಂದು ಅನುಮಾನ ಉಂಟಾಯಿತು.

"ಇವರು ನನ್ನ ಕುಮಾರಿಯರಲ್ಲದಿದ್ದರೆ ನಮ್ಮ ಮನೆಯನ್ನೇ ಗುರಿಯಿಟ್ಟುಕೊಂಡು ಏಕೆ ಬರುತ್ತಾರೆ? ಆ ದುಷ್ಟ ಗ್ರಹಗಳ ಮಾಯೆಯಿಂದ ಗಂಡು ಮಕ್ಕಳಾಗಿ ಬದಲಾಯಿಸಿ ಹೋಗಿರಬೇಕು!" ಹೀಗೆಂದುಕೊಂಡು ರಾಜನು ಆಶೆಯಿಂದ ಅವರನ್ನು ಪರೀಕ್ಷಿಸಿ ನೋಡತೊಡಗಿದನು.

ಆಶೆಯಿಂದ, ನಿರಾಶೆಯಿಂದ ಕ್ಷಣಕ್ಷಣಕ್ಕೆ ಬದಲಾಗುತ್ತಿರುವ ರಾಜನ ಮುಖ ಲಕ್ಷಣಗಳನ್ನು ಗಮನಿಸುತ್ತಾ ಆ ಮೂವರು ಹುಡುಗರಲ್ಲಿ ಒಬ್ಬನು ರಾಜನನ್ನು ಪರೀಕ್ಷಿಸಿ ನೋಡುತ್ತ ನಿಂತನು. ಈತನು ತಮ್ಮ ಕಡೆಗೆ ಓಡುತ್ತಾ ಬಂದು, ಹೀಗೆ ನೋಡುತ್ತಾ ನಿಲ್ಲುವುದರ ಅರ್ಥವೇನೆಂದು ಅವನಿಗೂ ಸಂದೇಹವೇ.

ಕಡೆಗೆ ರಾಜನು ತಾಳ್ಮೆಗೆಟ್ಟು, "ನೀವು ಯಾರು? ಒಂದೇ ರೀತಿಯಾಗಿರುವಿರೇಕೆ? ಯಾವ ಊರು? ಎಲ್ಲಿಗೆ ಹೊರಟಿದ್ದೀರಿ? ಏನಾಗಬೇಕು ನಿಮಗೆ? ನನ್ನ ಹತ್ತಿರ ಹೇಳಲು ಸಂದೇಹಿಸಬೇಡಿ." ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆ ಮಾಡಿದನು.

ತಮ್ಮ ಹತ್ತಿರ ಬಂದು ಪ್ರಶ್ನೆ ಮಾಡುವವನು ರಾಜನಾಗಿರಬೇಕೆಂದು ಆ ಹುಡುಗರಿಗೆ ಗೊತ್ತಾಗಲಿಲ್ಲ. ಏಕೆಂದರೆ, ರಾತ್ರಿ ನಿದ್ದೆಗೆಟ್ಟು ಕಾಂತಿಹೀನವಾದ ಮುಖ, ಕೆದರಿದ ತಲೆ, ಸಾದಾ ದುಸ್ತುಗಳಿಂದ ಅವನೊಬ್ಬ ಸಾಮಾನ್ಯ ಮನುಷ್ಯನಂತಿದ್ದ. ಯಾರಾದರೂ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳಲೇಬೇಕಷ್ಟೆ? ಅಂತೆಯೇ ಆ ಹುಡುಗರಲ್ಲೊಬ್ಬ "ಇಲ್ಲಿಗೆ ದಕ್ಷಿಣದಲ್ಲಿರುವ ಭದ್ರಪುರಿ ಎಂಬುದ

ನಮ್ಮ ಊರು. ಮಹಾರಾಜರು ಹೊಡೆಯಿಸಿದ ಡಂಗುರದ ಸಮಾಚಾರ ಕೇಳಿ ಅವರನ್ನು ನೋಡಲು ಬಂದಿದ್ದೇವೆ" ಎಂದರು.

"ಓಹೊ, ಹಾಗೇನು ? ನಡೆಯಿರಿ ಹಾಗಾದರೆ. ನನಗೂ ಅಲ್ಲಿ ಕೆಲಸವಿದೆ. ನಿಮ್ಮನ್ನು ರಾಜನ ಬಳಿಗೆ ನಾನೇ ಕರೆದುಕೊಂಡು ಹೋಗುತ್ತೇನೆ, ಬನ್ನಿ" ಎಂದು ರಾಜನು ಅವರನ್ನು ತನ್ನೊಂದಿಗೆ ಕರೆದು ಕೊಂಡು ಅರಮನೆಯನ್ನು ಸೇರಿದನು.


ಅವನು ಆ ಮೂವರು ಹುಡುಗರನ್ನೂ ಅರಮನೆ ಯೊಳಗೆ ಕುರ್ಚಿಗಳಲ್ಲಿ ಕುಳಿತುಕೊಳ್ಳುವಂತೆ ಹೇಳಿ, ತಾನು ತನ್ನ ಸಿಂಹಾಸನದ ಮೇಲೆ ಕುಳಿತು, "ಹುಡು ಗರೇ, ನೀವು ರಾಜನೊಂದಿಗೆ ಕೆಲಸವಿರುವುದಾಗಿ ಹೇಳಿದಿರಲ್ಲವೆ ?" ಎನ್ನುತ್ತ ಬಳಿಯಲ್ಲಿದ್ದ ಕಿರೀಟ ವನ್ನೆತ್ತಿ ತನ್ನ ತಲೆಯ ಮೇಲಿಟ್ಟುಕೊಂಡನು.


ಇದನ್ನು ನೋಡಿ ಆ ಹುಡುಗರಲ್ಲಿ ಒಬ್ಬನು "ಆ ! ತಾವೇ ಮಹಾರಾಜರೋ ?" ಎಂದು ಆಶ್ಚರ್ಯ ಪಡುತ್ತ ಎದ್ದು ನಿಂತು ನಮಸ್ಕಾರ ಮಾಡಿದನು. ಕೂಡಲೇ ಉಳಿದಿಬ್ಬರು ಕೂಡಾ ಎದ್ದು ನಿಂತು ನಮಸ್ಕಾರ ಮಾಡಿದರು.

"ಹೌದಪ್ಪಾ. ನೀವು ನೋಡಲಿಕ್ಕೆ ಬಂದ ಆ ದುರದೃಷ್ಟವಂತನಾದ ರಾಜನು ನಾನೇ. ನನ್ನ ಗುರುತು ಹಿಡಿಯಲಾರದೆ ಹೋದುದರಲ್ಲಿ ನಿಮ್ಮ ದೇನೂ ತಪ್ಪಿಲ್ಲ. ನನ್ನ ಪರಿಸ್ಥಿತಿಯೇ ಹಾಗಿತ್ತು. ಅದು ಹಾಗಿರಲಿ. ನಿಮ್ಮ ಸಂಗತಿಯನ್ನು ಹೇಳಿರಿ" ಎಂದು ಆತುರದಿಂದ ಕೇಳಿದ ರಾಜ.

ರಾಜನ ಮಾತಿಗೆ ಮೊದಲು ರಾಜನಿಗೆ ನಮಸ್ಕಾರ ಮಾಡಿದವನು, ಹೀಗೆಂದನು: "ಮಹಾರಾಜರೇ, ನಾವು ಭದ್ರಪುರಿಯಲ್ಲಿ ವಾಸವಾಗಿರುವ ಒಬ್ಬಳು ಬಡ ಹೆಂಗುಸಿನ ಅವಳಿಜವಳಿ ಕುಮಾರರು. ನನ್ನ ಹೆಸರು ಬೆಳಗಪ್ಪ. ಇವನ ಹೆಸರು ಇರುಳಪ್ಪ. ಮೂರನೆಯವನ ಹೆಸರು ಸಂಜಪ್ಪ".

ಹೇಳುತ್ತ ಅವನು ತನ್ನೊಂದಿಗಿದ್ದವರನ್ನು ತೋರಿ ಸಲು, ರಾಜನಿಗೆ ಆಶ್ಚರ್ಯದೊಂದಿಗೆ ನಗುವೂ ಬಂದಿತು. "ವಿಚಿತ್ರವಾಗಿದೆಯಲ್ಲಾ ನಿಮ್ಮ ಹೆಸರು





ಗಳು? ಬೆಳಕು, ಇರುಳು, ಸಂಜೆಗಳೇ? ಇಂತಹ ಹೆಸರು ಇಡುವುದಕ್ಕೆ ಏನಾದರೂ ಕಾರಣವಿದೆಯೆ?” ಎಂದು ರಾಜನು ಕೇಳಿದ.

ಬೆಳಕಪ್ಪ ಹೀಗೆ ಹೇಳತೊಡಗಿದ: “ಅಯ್ಯಾ, ನಾವು ಮೂವರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಒಂದೇ ದಿನ ಕೆಲವು ಗಂಟೆಗಳ ವ್ಯತ್ಯಾಸದಲ್ಲಿ ಹುಟ್ಟಿದೆವು. ಇವನು ಸಂಜೆಯ ಹೊತ್ತಿನಲ್ಲಿ ಹುಟ್ಟಿದನು. ಆಮೇಲೆ ಎರಡನೆಯವನು ಅರ್ಧ ರಾತ್ರಿಯಲ್ಲಿ ಹುಟ್ಟಿದನು. ಆ ತರುವಾಯ ನಾನು ಸೂರ್ಯೋದಯದ ವೇಳೆಯಲ್ಲಿ ಹುಟ್ಟಿದೆ. ನಾವು ಮೂವರೂ ಒಂದೇ ಅಚ್ಚಿನಲ್ಲಿ ಹೊಯ್ದವರಂತೆ ಇರುವುದನ್ನು ನೋಡಿ, ನಮ್ಮ ತಾಯಿ ನಮಗೆ ಏನು ಹೆಸರಿಟ್ಟರೆ ಚೆನ್ನಾಗಿರಬಹುದೆಂದು ಆಲೋಚಿಸಿ, ಹುಟ್ಟಿದ ಹೊತ್ತು ನೆನಪಿರುವ ಹಾಗೆ ಹೆಸರಿಟ್ಟು, ಕರೆದು ನಮ್ಮನ್ನು ಬೆಳೆಸಿದ್ದಾಳಂತೆ. ಬಡವಳಾದರೂ ತಾಯಿ ನಮಗೇನೂ ಕೊರತೆ ಮಾಡಲಿಲ್ಲ.”

“ನೀವು ಮೂವರೂ ಅವಳಿಜವಳಿ ಮಕ್ಕಳಾ ರುವುದೆಂದರೆ, ಏನು ವಿಚಿತ್ರವಿದು! ನನಗೆ ಹುಟ್ಟಿ ಮೂವರು ಕುಮಾರಿಯರೂ ಅವಳಿಜವಳಿಗಳೇ. ಅ ಅವಳಿ ಮಕ್ಕಳನ್ನು ಕಂಡುಹಿಡಿಯಲು, ಅವ ಮಕ್ಕಳೇ ನನ್ನ ಮನೆ ಹುಡುಕಿ ಬಂದಿದ್ದೀರಿ. ಇದೇನೋ ದೈವ ನಿರ್ಣಯದ ಹಾಗಿದೆ” ಎಂದು ರಾಜನು ಅ ಮೂವರನ್ನೂ ತನ್ನ ಬಳಿಯಲ್ಲಿ ಕೂಡಿಸಿಕೊಂಡು “ಹಾಗಾದರೆ ನೀವು ಬಹಳ ಸಾಹಸಿಗರೆಂದು ಕಾಣುತ್ತದೆ. ನೀವು ಹೀಗೆ ಕಷ್ಟವಾದ ಕೆಲಸಕ್ಕಾಗಿ ಹೊರಟು ಬಂದಿರುವ ಸಂಗತಿ ನಿಮ್ಮ ತಾಯಿಗೆ ಗೊತ್ತಿದೆಯೋ? ಅವಳ ಅನುಮತಿ ಪಡೆದಿದ್ದೀರಾ?” ಎಂದು ಕೇಳಿದ.

ಬೆಳಕಪ್ಪನೇ ಹೀಗೆ ಉತ್ತರ ಕೊಟ್ಟ: “ಗೊತ್ತಿಲ್ಲದೇನು? ನಮ್ಮ ತಾಯಿಗೆ ಹೇಳದೆ ನಾವು ಯಾವ ಕೆಲಸವನ್ನೂ ಮಾಡುವುದಿಲ್ಲ. ಅವಳ ಒಪ್ಪಿಗೆ ಪಡೆದುಕೊಂಡೇ ನಾವು ಹೀಗೆ ಹೊರಟು ಬಂದಿದ್ದೇವೆ. ಮನೆಯಲ್ಲಿ ತಾಯಿಯೊಬ್ಬಳನ್ನೇ ಬಿಟ್ಟು ನಾವು ಮೂವರೂ ಹೊರಟು ಬರುವ ಕಾರಣವೇನೆಂದು ನೀವು ಕೇಳಬಹುದು. ಅದಕ್ಕೂ ಕಾರಣವಿದೆ. ನಾವು ಹುಟ್ಟಿದ ವೇಳೆಯ ಮಹತ್ವವೋ ಏನೋ, ಸಂಜೆಯ ವೇಳೆಯಲ್ಲಿ ಹುಟ್ಟಿದ ಇವನು ಹೆಚ್ಚು ಬೆಳಕನ್ನಾಗಲೀ, ಹೆಚ್ಚು ಕತ್ತಲೆಯನ್ನಾಗಲೀ ನೋಡಲಾರ. ಸೂರ್ಯ ಮುಳುಗಿ ಪೂರ್ಣ ಕತ್ತಲೆ ಬರುವವರೆಗಷ್ಟೇ ಇವನು ನಿರ್ಭೀತಿಯಿಂದ ಸಂಚರಿಸಬಲ್ಲ. ಆ ಮೇಲೆ ಅವನಿಗೆ ಏನೂ ಕಾಣಿಸದು. ದಟ್ಟವಾದ ಕತ್ತಲೆಯಲ್ಲಿಯೂ ಒಳ್ಳೆಯ ಹಗಲಿನಲ್ಲಿಯೂ ಇವನು ಕುರುಡನಾಗಿಯೇ ಇರುತ್ತಾನೆ.

“ಇನ್ನು ಇರುಳಪ್ಪನ ವಿಷಯ ಕೇಳಿರಿ. ಇವನು ಹಗಲು ಹೊತ್ತಿನ ಬೆಳಕನ್ನು ಒಂದಿಷ್ಟೂ ಸಹಿಸಲಾರ. ಆದುದರಿಂದ ಕತ್ತಲೆಯ ರಾತ್ರಿಗಳೇ ಇವನ ಸಂಚಾರ ಕಾಲ. ರಾತ್ರಿಯಲ್ಲಿ ಇವನಿಗೆ ಎಲ್ಲವೂ ಕಾಣಿಸುತ್ತದ



ಈಗ ನನ್ನ ಸಂಗತಿ, ನನಗೆ ಪೂರ್ಣ ಬೆಳಕು ಬೇಕು. ಚೆನ್ನಾಗಿ ಬೆಳಗಾದ ಹೊರತು ನಾನು ಹೊರಗೆ ಬರಲಾರೆ. ಮತ್ತೆ ಸೂರ್ಯನು ಮುಳುಗುವುದರೊಳಗೆ ಮನೆ ಸೇರಿಕೊಳ್ಳಬೇಕು. ನಮ್ಮ ಈ ವಿಚಿತ್ರ ಸ್ವಭಾವಗಳನ್ನು ಆಧಾರ ಮಾಡಿಕೊಂಡೇ ನಾವು ಮೂವರೂ ಇಲ್ಲಿಗೆ ಬರಲು ಸಾಹಸ ಮಾಡಿದೆವು. ನಿಮ್ಮ ಕುಮಾರಿಯರನ್ನು ಹುಡುಕಿ ಕಂಡುಹಿಡಿದು ಕರೆದುಕೊಂಡು ಬರುವ ಕೆಲಸ ಸುಲಭವೇನಲ್ಲವೆಂದು ನಮಗೆ ಗೊತ್ತು. ನಾವು ಮೂವರಲ್ಲಿ ಒಬ್ಬೊಬ್ಬರಿಂದ ಈ ಕೆಲಸ ಸಾಧಿಸಲಾಗದೆಂದೂ ತೀರ್ಮಾನಿಸಿಕೊಂಡೆವು. ಆದರೆ ಒಂದು ದಿನದ ಇಪ್ಪತ್ನಾಲ್ಕು ಗಂಟೆಗಳಲ್ಲಿಯೂ, ಮೂರು ಹೊತ್ತುಗಳಲ್ಲಿಯೂ, ನಾವು ಮೂವರು ಎಂತಹ ಕಷ್ಟದ ಕೆಲಸವನ್ನಾದರೂ ಸರಿಯಾಗಿ ಸಾಧಿಸಲು ಸಾಧ್ಯವೆಂಬ ಗಟ್ಟಿ ನಂಬುಗೆ ನಮಗಿದ್ದುದರಿಂದ, ಈ ಅನ್ವೇಷಣ ಕಾರ್ಯಕ್ಕೆ ಸಿದ್ಧರಾಗಿ ಬಂದಿದ್ದೇವೆ. ನಾವು ಮೂವರೂ ಕಷ್ಟಪಟ್ಟು, ದಿನಾ ಒಂದೊಂದು ಹೊತ್ತಿನಲ್ಲಿ ಒಬ್ಬೊಬ್ಬನು ಹಿಡಿದ ಕೆಲಸವನ್ನು ಮುಂದುವರಿಸಿಕೊಂಡುಹೋದರೆ, ನಮಗೆ ಅಸಾಧ್ಯವೆಂಬುದು ಇಲ್ಲವೇ ಇಲ್ಲ. ಯಾವ ಕೆಲಸವನ್ನಾದರೂ ಮುಟ್ಟಿದ್ದನ್ನು ಮುಗಿಸಿ ವಿಜಯಶಾಲಿಗಳಾಗಿಯೇ ಬರುತ್ತೇವೆ. ಈ ಕಾರಣದಿಂದ ತಾಯಿಯನ್ನು ಒಂಟಿಯಾಗಿಬಿಟ್ಟು, ಮೂವರೂ ಕೂಡಿ ಹೊರಟು ಬರಬೇಕಾಯಿತು. ತಾಯಿಯೂ ಧೈರ್ಯದಿಂದ ನಮ್ಮನ್ನು ಹರಸಿ ಕಳುಹಿಸಿದ್ದಾಳೆ."

ಈ ಮಾತುಗಳನ್ನು ಕೇಳುತ್ತಿದ್ದಂತೆ ರಾಜನಿಗೆ ಸಂತೋಷವು ಹೆಚ್ಚುತ್ತಾ ಹೋಯಿತು. "ಹುಡುಗರೇ, ನಿಮ್ಮ ಉತ್ಸಾಹಕ್ಕೆ ತುಂಬ ಸಂತೋಷ ನಿಮ್ಮ ತಾಯಿಯನ್ನು ಕುರಿತು ನೀವೇನೂ ಚಿಂತಿಸಬೇಕಾಗಿಲ್ಲ. ಈಗಲೇ ಆಕೆಯನ್ನು ಇಲ್ಲಿಗೆ ಕರೆಯಿಸಿ. ಇಲ್ಲಿಯೇ ಯಾವ ಕೊರತೆಯೂ ಉಂಟಾಗದಂತೆ ಇರಿಸಿಕೊಳ್ಳುತ್ತೇನೆ" ಎಂದನು ರಾಜ.

"ಅಪ್ಪಾದರೆ ನಾವು ನಿಶ್ಚಿಂತೆಯಿಂದ ಕಾರ್ಯನಿರತರಾಗುತ್ತೇವೆ" ಎಂದು ಮೂವರೂ ಒಂದೇ ಕಂಠದಿಂದ ಹೇಳಿದರು.



ಆಗಲೇ ರಾಜನು ತನ್ನ ಸೇವಕರನ್ನು ಭದ್ರಪುರಿಗೆ ಕಳುಹಿಸಿ ಆ ಹುಡುಗರ ತಾಯಿಯನ್ನು ಅರಮನೆಗೆ ಕರೆಯಿಸಿಕೊಂಡನು.


ರಾಜನು ತೋರಿಸಿದ ಈ ಔದಾರ್ಯಕ್ಕೆ ಅವಳು ಕೂಡಾ ಬಹಳ ತೃಪ್ತಿಯನ್ನು ವ್ಯಕ್ತಪಡಿಸಿದಳು. ಆಕೆ ಕೃತಜ್ಞತೆ ಹೇಳಿದಾಗ ರಾಜನು ಅವಳನ್ನು ಕುರಿತು, "ಅಮ್ಮಾ, ನಿನ್ನ ಮಗಂದಿರ ಬಾಯಿಯಿಂದ ನಿನ್ನ ವಂಶ ಚರಿತ್ರೆಯೆಲ್ಲವೂ ಗೊತ್ತಾಯಿತು. ಇಂತಹ ಧೈರ್ಯ ಸಾಹಸಗಳಿರುವ ಅವಳಿ ಜವಳಿ ಮಕ್ಕಳನ್ನು ಹೆತ್ತ ನೀನು ಧನ್ಯಳಾದ ವೀರ ಮಾತೆಯೆನ್ನಲು ಸಂದೇಹವಿಲ್ಲ!" ಎಂದು ತನ್ನ ಗೌರವವನ್ನು ವ್ಯಕ್ತಪಡಿಸಿದನು.


ಆಮೇಲೆ ಆ ತಾಯಿಯ ಅನುಮತಿ ಪಡೆದು ರಾಜನು ಆ ಹುಡುಗರ ಹೆಸರನ್ನು ಅರ್ಥ ಕೆಡದ ಹಾಗೆ ಬದಲಾಯಿಸಿದನು. ಸಂಜಪ್ಪ ಸಂಧ್ಯಾಕುಮಾರ; ಇರುಳಪ್ಪ ನಿಶೀಥ; ಬೆಳಗಪ್ಪ ಉದಯನ. ರಾಜನು ತಮ್ಮನ್ನು ಕರೆದ ಈ ಹೊಸ ಹೆಸರನ್ನು ಕೇಳಿ ಆ ಹುಡುಗರೂ, ಅವರ ತಾಯಿಯೂ ಸಂತೋಷಪಟ್ಟು ತಲೆದೂಗಿದರು.

ಮರುದಿನವೇ ಆ ಅವಳಿಕುಮಾರರಿಗೆ ಉತ್ತಮವಾದ ಕತ್ತಿಗಳನ್ನೂ ಕಠಾರಿಗಳನ್ನೂ ಕೊಟ್ಟು, ಒಬ್ಬೊಬ್ಬರಿಗೆ ಒಂದೊಂದು ಕುದುರೆಯನ್ನು ಆರಿಸಿಕೊಳ್ಳಲು ರಾಜನು ಅವರನ್ನು ತನ್ನ ಅಶ್ವಶಾಲೆಗೆ ಕರೆದೊಯ್ದನು. ಅವರ ಹೆಸರಿಗೆ ತಕ್ಕ ಹಾಗೆಯೇ ರಾಜನು ಉದಯನನಿಗೆ ಸೂರ್ಯಕಾಂತಿಯಂತೆ ಥಗಥಗ ಹೊಳೆಯುವಂತಹ ಬಿಳೀ ಕುದುರೆಯನ್ನೂ, ನಿಶೀಥನಿಗೆ ಫಳಫಳಿಸುವ ಕರ್‍ರಗಿನ ಕುದುರೆಯನ್ನೂ ಸಂಧ್ಯಾಕುಮಾರನಿಗೆ ಕೆಂಬಣ್ಣದ ಕುದುರೆಯನ್ನೂ ಆರಿಸಿಕೊಟ್ಟನು. ಒಳ್ಳೆಯ ಮುಹೂರ್ತದಲ್ಲಿ ಬಿಳಿ ಕುದುರೆಯ ಮೇಲೆ ಉದಯನನೂ, ಕರೀಕುದುರೆಯ ಮೇಲೆ ನಿಶೀಥನೂ, ಕೆಂಪು ಕುದುರೆಯ ಮೇಲೆ ಸಂಧ್ಯಾಕುಮಾರನೂ, ಸುಹಾಸಿನಿ, ಸುಭಾಷಿಣಿ ಸುಕೇಶಿನಿಯರನ್ನು ಹುಡುಕಲು ಹೊರಟರು.

ಅವರನ್ನೇ ನಂಬಿದ್ದ ರಾಜನು ಅವರು ಹೊರಡುವ ಮೊದಲು ಮೂರು ಕಪ್ಪು ಬಣ್ಣದ ಪತಾಕೆಗಳನ್ನು ತಂದು ಮೂರು ಕುದುರೆಗಳ ಮುಂದಿನ ಭಾಗದಲ್ಲಿ ಕಟ್ಟಿ, "ನನ್ನ ಕುಮಾರಿಯರನ್ನು ಕರೆದುಕೊಂಡು ಯಾವ ಕ್ಷಣದಲ್ಲಿ ಹಿಂದಿರುಗುವಿರೋ, ಆ ಕ್ಷಣದಲ್ಲಿ ಈ ಪತಾಕೆಗಳನ್ನು ಕಿತ್ತು ಬಿಸುಟುಬಿಡಿ. ಮರೆಯಬೇಡಿರಿ," ಎಂದು ಹೇಳಿದನು. ಆಮೇಲೆ ಮೂವರು ಕುಮಾರರು ತಾಯಿಯಿಂದಲೂ, ರಾಜನಿಂದಲೂ ಆಶೀರ್ವಾದಗಳನ್ನು ಪಡೆದು ತಮ್ಮ ತಮ್ಮ ಕುದುರೆಗಳ ಮೇಲೆ ವಾಯುವೇಗದಿಂದ ಸಾಗ ತೊಡಗಿದರು.

—(ಇನ್ನೂ ಇದೆ)





ಅಪ್ಪಿ ಮಕ್ಕಳ ಕಥೆ

Jan 1975

೨

[ತನ್ನ ಮಕ್ಕಳನ್ನು ಕಂಡು ಹಿಡಿದು ಕರೆತಂದವರಿಗೆ ರಾಜ್ಯವನ್ನು ಕೊಡುವುದಾಗಿ ರಾಜನು ಊರೆಲ್ಲಾ ಡಂಗುರ ಹೊಡೆಸಿದನು. ಅದನ್ನು ಕೇಳಿ ಭದ್ರಪುರದ ಮೂವರು ಅವಳಿಜವಳಿ ಸೋದರರು, ಉದಯನ, ನಿಶೀಥ, ಸಂಧ್ಯಾಕುಮಾರ ಎಂಬವರು, ರಾಜನ ಬಳಿಗೆ ಬಂದು, ರಾಜಕುಮಾರಿಯರ ಶೋಧನೆಗೆ ಹೊರಟರು.]—

... ಕುದುರೆಯ ಮೇಲೆ ಉದಯನನು ಮುಂದಿ... ಹೋಗುತ್ತಿದ್ದನು. ಹಗಲು ಹೊತ್ತಿನಲ್ಲಿ ಅವ... ಎಲ್ಲವೂ ಚೆನ್ನಾಗಿ ಕಾಣಿಸುತ್ತಿತ್ತು. ಅವನ ...ಹಿಂದಿದ ಸಂಧ್ಯಾಕುಮಾರನೂ, ನಿಶೀಥನೂ ತಮ್ಮ ...ದುರೆಯ ಮೇಲೆ, ಅವನಷ್ಟೇ ವೇಗವಾಗಿ ಸಾಗು...ದ್ದರು. ಅವರಿಗೆ ಕಣ್ಣುಗಳಿದ್ದರೂ ಹಗಲು ಹೊತ್ತಿ... ಕುರುಡರೇ ಆದುದರಿಂದ, ಸ್ವಲ್ಪವೂ ತಡೆಬಡೆ ...ಲ್ಲದೆ ಅವರು ತಮ್ಮ ಕುದುರೆಗಳನ್ನು ಸಾಗಿಸಿ... ಹೋಗುವುದು, ತಮ್ಮ ಕಿವಿಗಳ ಆಧಾರ...ಲೇ. ಅವರ ಕಣ್ಣುಗಳಿಗೆ ದಾರಿ ಕಾಣಿಸದಿದ್ದರೂ ಮುಂದಿನಿಂದ ಹೋಗುತ್ತಿದ್ದ ಉದಯನನ ಕುದುರೆಯ ಗೊರಸಿನ ಸಪ್ಪಳವನ್ನನುಸರಿಸಿ, ಅವನಷ್ಟೇ ವೇಗವಾಗಿ ಅವರಿಬ್ಬರೂ ಸಾಗುತ್ತಿದ್ದರು. ಗೊತ್ತಿಲ್ಲದವರಿಗೆ ಅವರು ಹಗಲು ಕುರುಡರೆಂದು ಸ್ವಲ್ಪವೂ ತಿಳಿಯುತ್ತಿರಲಿಲ್ಲ.

ಹೀಗೆ ಹಗಲೆಲ್ಲಾ ದಾರಿ ಕ್ರಮಿಸಿ ಸೂರ್ಯನು ಮುಳುಗುವ ವೇಳೆ ಸಮೀಪಿಸುವುದನ್ನು ನೋಡಿ ಉದಯನನು, "ನನ್ನ ಕೆಲಸ ಮುಗಿಯಿತು ಸಂಧ್ಯಾ. ಇನ್ನು ನೀನು ದಾರಿ ತೋರಿಸಿ ಮುಂದೆ ಸಾಗಬೇಕು" ಎಂದು ಬದಿಗೆ ಸರಿದನು.



ಆ ಪ್ರಕಾರ ಸಂಧ್ಯಾನು ಮುಂದನಿಂದ ಸಾಗಲು, ಅವನ ಹಿಂದೆ ನಿಶೀಥನೂ, ನಿಶೀಥನ ಹಿಂದೆ ಉದಯನನೂ ತಮ್ಮ ತಮ್ಮ ಕುದುರೆಯನ್ನು ಸಾಗಿಸಿಕೊಂಡು ಹೋದರು. ಮುಂದೆ ಚೆನ್ನಾಗಿ ಕತ್ತಲೆ ಬಿದ್ದ ಕೂಡಲೇ ರಾತ್ರಿಯನ್ನು ಹಗಲಿನಂತೆ ನೋಡಬಲ್ಲ ನಿಶೀಥನು ಮುಂದೆ ಸೇರಿ ಅವನ ಹಿಂದೆ ಸಂಧ್ಯಾಕುಮಾರನಾದ.

ಆದರೂ ರಾತ್ರಿಯಲ್ಲಿ ಪ್ರಯಾಣ ಮಾಡುವುದನ್ನು ನಿಲ್ಲಿಸಿ ಎಲ್ಲಿಯಾದರೂ ವಿಶ್ರಾಂತಿ ತೆಗೆದುಕೊಳ್ಳ ಬೇಕೆಂದು ಅವರಿಗೆ ತೋರಿತು. ಆಗ ಹತ್ತಿರ ಹತ್ತಿರ ಅರ್ಧರಾತ್ರಿಯಾಗಿತ್ತು.

ಆ ಸಮಯದಲ್ಲಿ ಅವರು ಕಾಡಿನ ಮಧ್ಯ ದಲ್ಲಿದ್ದರು. ಅಲ್ಲಿ ವಿಶ್ರಾಂತಿಗೆ ತಕ್ಕ ಸ್ಥಳವಾವುದೂ ಕಾಣಿಸಲಿಲ್ಲ. ಎಲ್ಲಿ ಬೇಕಾದರೂ ವಿಶ್ರಾಂತಿ ಅನುಭವಿಸುವ ಅಭ್ಯಾಸ ಅವರಿಗಿದ್ದುದರಿಂದ ನಿಶೀಥನು, "ಸದ್ಯ ನೀವು ಈ ಮರದ ಮೇಲೆ ಹತ್ತಿ

ಕೊಂಬೆಯ ಮೇಲೆ ಕುಳಿತುಕೊಳ್ಳಿರಿ. ನಾನು ಹೋಗಿ
ಸಮೀಪವೆಲ್ಲಿಯಾದರೂ ಇದಕ್ಕಿಂತ ಒಳ್ಳೆಯ ಸ್ಥ
ವಿರುವುದೋ ನೋಡಿ ಬರುತ್ತೇನೆ" ಎಂದು
ಹೇಳಿದನು. ಅದರಂತೆ ಸಂಧ್ಯಾ, ಉದಯನರು
ಮರದ ಮೇಲೆ ಹತ್ತಿದರು. ನಿಶೀಥನು ಅವ
ಕುದುರೆಗಳನ್ನು ಅದೇ ಮರಕ್ಕೆ ಕಟ್ಟಿ ಹಾಕಿ, ತನ್ನ
ಕಪ್ಪು ಕುದುರೆಯ ಮೇಲೆ ಕುಳಿತುಕೊಂಡು ಸ್ಥ
ಹುಡುಕುತ್ತ ಹೊರಟನು.

ಆ ಕಟ್ಟಿರುಳಿನ ರಾತ್ರಿಯಲ್ಲಿ ಹಗಲಿನಂತೆ ನೋ
ಬಲ್ಲವನಾದ ನಿಶೀಥನು ಅರಣ್ಯದಲ್ಲಿ ಬಹಳ ದೂ
ಹೋದನು. ಆಗ ಒಂದು ಕಡೆಯಲ್ಲಿ ಪಾಳುಬಿ
ಮನೆಯೊಂದು ಕಂಡಿತು. ಅವನು ಅದರ ಬಾಗಿಲ
ಹತ್ತಿರ ಹೋಗಿ ಕಿವಿಗೊಟ್ಟು ಆಲಿಸಿದನು. ಯಾ
ಶಬ್ದವೂ ಕೇಳಿಸದಿರಲು ಬಾಗಿಲು ತಟ್ಟಿದನು. ಒಳ
ನಿಂದ ಯಾವ ಪ್ರತ್ಯುತ್ತರವೂ ಬಾರದಿರಲು, ಕಿಟಕಿ
ಬಳಿಗೆ ಹೋಗಿ ಬಗ್ಗಿ ನೋಡಿದನು. ಒಳಗೆ ಯಾರ
ಇದ್ದಂತೆ ಕಾಣಲಿಲ್ಲ.

ಧೈರ್ಯ ಮಾಡಿ ಬಾಗಿಲು ದೂಡಿದ
ಅದು ತೆರೆದುಕೊಂಡುದನ್ನು ನೋಡಿ ಆಶ್ಚರ
ವಾಯಿತು. ಅವನು ನಿಃಶಂಕೆಯಿಂದ ಒ
ಪ್ರವೇಶಿಸಿ, ಯಾವ ಮೂಲೆಯನ್ನು ನೋಡಿದರ
ಅಲ್ಲೆಲ್ಲಾ ಕೂದಲಿನಂತಹ ನಾರುಗಳು ಸುರುಳಿ ಸುರ
ಯಾಗಿಯೂ ಸಿಕ್ಕು ಸಿಕ್ಕಾಗಿಯೂ ಬಿದ್ದಿದ್ದುವು. ಬ
ಯಾವ ವಸ್ತುಗಳೂ ಅಲ್ಲಿ ಕಾಣಿಸಲಿಲ್ಲ. ಕೇ
ನಾರು ಹಗ್ಗ ಹೊಸೆಯುವ ಕೊಟ್ಟಿಗೆಯಂತೆ ಕಾಲಿ
ನಾರುಗಳೇ. ಬೀಗವಿಲ್ಲದ ಈ ಮನೆಯ ಯ
ಮಾನನು ಯಾರೆಂದು ನೋಡಲು ಬಾಗಿಲಲ್ಲಿ ಕಾ
ನಿಂತನು. ಬಾಗಿಲು ಸುಮ್ಮನೆ ಮುಚ್ಚಿಕೊಂ
ಹೊರಗೆ ಹೋದ ಯಜಮಾನ ಬರಲೇಬೇಕಷ್ಟೆ?

ಬಹಳ ಹೊತ್ತು ದಾರಿ ನೋಡಿದರೂ ಯಾ
ಬರುವ ಸುಳಿವು ಕಾಣಲಿಲ್ಲ. ಬಹುಶಃ ಯಾರೂ ನ


ರಿಲ್ಲದ ಪಾಳುಬಿದ್ದ ಮನೆಯಾಗಿರಬೇಕೆಂದು ತೋರಿತು. ಆದರೇನು, ರಾತ್ರಿ ಮಲಗಿ ನಿದ್ದೆ ಮಾಡಲು ಇದು ಒಳ್ಳೆಯ ಸ್ಥಳವೇ ಎಂದುಕೊಂಡನು. ಜನರಿಲ್ಲದ ಸ್ಥಳವಾದುದರಿಂದ ಎಷ್ಟು ಹೊತ್ತು ಬೇಕಾದರೂ ಇಲ್ಲಿರಬಹುದು. ಅವನು ತನ್ನ ಸೋದರರನ್ನು ಕರೆದು ತರಲು, ತನ್ನ ಕಪ್ಪು ಕುದುರೆಯಮೇಲೇರಿಕೊಂಡು ಬಂದ ದಿಕ್ಕಿಗೇ ಹಿಂದಿರುಗಿದನು.

ಅಷ್ಟರೊಳಗೆ ಉದಯನ ಸಂಧ್ಯಾರಿಗೆ ಬೇರೊಂದು ಅನುಭವವಾಗಿತ್ತು. ನಿಶೀಥನು ಅವರಿಬ್ಬರನ್ನೂ ಮರದ ಮೇಲೆ ಹತ್ತಿಸಿ, ಹೊರಟುಹೋದ ಮರು ನಿಮಿಷದಲ್ಲಿ, ಆ ಮರದ ಬುಡದಲ್ಲಿ ಏನೋ ಶಬ್ದವಾದುದನ್ನು ಅವರು ಕೇಳಿದರು. ಯಾವುದೋ ಹಾವು ಹರಣೆಗಳ ಸದ್ದು ಎಂದುಕೊಂಡು ಅವರಿಬ್ಬರೂ ನಿಶೀಥನು ಹಿಂದಿರುಗುವುದನ್ನು ಕಾದಿದ್ದರು. ಆಗ ಇದ್ದಕ್ಕಿದ್ದ ಹಾಗೆ ಉದಯನನಿಗೆ ತನ್ನ ಸೊಂಟಕ್ಕೆ ಏನೋ ಮುಟ್ಟಿದ ಹಾಗಾಯಿತು. ತನ್ನ ಕೈ ಬೆರಳಿನಿಂದ ಅದನ್ನು ಮುಟ್ಟಿ ನೋಡಿ ಆಶ್ಚರ್ಯಪಡುತ್ತ, "ಸಂಧ್ಯಾ, ಯಾವುದೋ ಉದ್ದುದ್ದವಾದ ನಾರು ನನ್ನ ಸೊಂಟವನ್ನು ಬಳಸುತ್ತಿದೆ," ಎಂದನು.

ಅವನ ಬಾಯಿಯಿಂದ ಹೊರಟ ಆ ಮಾತು ಮುಗಿಯುವುದರೊಳಗೆ ಸಂಧ್ಯನ ಬಾಯಿಯಿಂದಲೂ, "ಹೌದಲ್ಲ, ನನ್ನ ಸೊಂಟಕ್ಕೂ ಅಂತಹುದೇ ತಗಲುತ್ತಾ ಇದೆಯಪ್ಪಾ ! ನೀನು ಹೇಳಿದಂತೆ ಕದಲುತ್ತಿರುವ ನಾರುದಾರ ಸೊಂಟವನ್ನು ಬಳಸುತ್ತಾ ಇದೆ. ಏನಿದು ? ನಾರಿನಂಥ ಹುಳುಗಳೋ ಹಾವುಗಳೋ ಇರುವ ಹಾಗೆ ನಾವೆಲ್ಲಿಯೂ ಕೇಳಿಲ್ಲವಲ್ಲಾ ? ಈ ಮರವೇ ಇಂಥ ಬೀಳಲುಗಳಿಂದ ನಮ್ಮನ್ನು ಸುತ್ತುತ್ತಿದೆಯೋ ? ಇದೆಂಥ ಮರವೋ ಕಾಣೆವಲ್ಲಾ ? ನಿಶೀಥನನ್ನು ಹೋಗಲು ಬಿಡಬಾರದಿತ್ತು" ಎಂದ.

ಹೀಗೆ ಅವರು ಆಲೋಚಿಸಿಕೊಂಡಿದ್ದ ಹಾಗೆಯೇ, ಅವರ ಸೊಂಟಗಳು ಬಲವಾದ ದಾರಗಳಿಂದ ಬಿಗಿಯ





ಲ್ಪಟ್ಟು ಯಾವುದೋ ಶಕ್ತಿ ಕೆಳಕ್ಕೆ ಎಳೆಯುತ್ತಿರುವ ಅನುಭವವಾಯಿತು. ಕೈಗಳಿಂದ ಸುತ್ತಲೂ ತಡವಿ ನೋಡಿದರೆ, ಮರದ ಕಾಂಡಗೆಲ್ಲುಗಳ ಹೊರತು ಯಾವ ಪ್ರಾಣಿಯೂ ತಗಲಲಿಲ್ಲ.

ಹಾಗೆ ಅವರು ಕೆಳಕೆಳಗೆ ಜಾರುತ್ತಿರಲು, "ಸುಮ್ಮನೆ ಜಾರಿಬಿಡಿ. ತಡಕಾಡಿ ನೋಡಿದರೆ ನಾನು ಕಾಣಸುವೆನೆಂದುಕೊಂಡಿರಾ? ಎಂತೆಂಥಾ ಯೋಗಿಗಳ ಕಣ್ಣಿಗೂ ಕಾಣಲಾರದ ನಾನು ನಿಮ್ಮ ಕಣ್ಣಿಗೆ ಕಂಡುಬಿಡುವೆನೇನು? ಹುಚ್ಚಪ್ಪಗಳು!" ಎಂಬ ಮಾತು ಸಮೀಪದಲ್ಲೇ ಕೇಳಿ ಬಂತು.

ಈ ಮಾತು ಕಿವಿಗೆ ಬಿದ್ದ ಕೂಡಲೇ ಯಾವ ದೆವ್ವವೋ ಭೂತವೋ ತಮ್ಮನ್ನು ಈ ದಾರಗಳಿಂದ ಬಿಗಿದು ಎಳೆಯುತ್ತಿದೆ ಎಂದು ಅವರಿಗೆ ತೋರಿತು. ಆದರೆ ಏನು ಮಾಡಲಿಕ್ಕೂ ಅವರಿಗೆ ತೋರಲಿಲ್ಲ. ಎಳೆಯುವ ಆ ಶಕ್ತಿ ಅವರ ಶಕ್ತಿಗಿಂತಲೂ ಹೆಚ್ಚಿನದೇ. ಮರವನ್ನೇ ಎಳೆಯುವುದೇನೋ ಅನಿಸುತಿತ್ತು.

"ದುಷ್ಟನೇ; ಹೇಡಿಯೇ! ಅಡಗಿರುವ ಪಿಶಾಚಿಯೇ! ಈ ಸಮಯದಲ್ಲಿ ನಮ್ಮ ನಿಶೀಥನಿರುತ್ತಿದ್ದರೆ ನಿನ್ನ ಕಾಲು ಕಡಿಯುತ್ತಿದ್ದನು. ಅದೋ ಬರುತ್ತಿದ್ದಾನೆ ನಮ್ಮಣ್ಣ. ಅವನ ಕಣ್ಣಿಗೆ ಬೀಳುವುದರೊಳಗೆ ನಮ್ಮನ್ನು ಬಿಟ್ಟು ಹೋಗಿಬಿಡು. ಇಲ್ಲದಿದ್ದರೆ ನಿನ್ನನ್ನು ಯಮಲೋಕಕ್ಕೇ ಕಳುಹಿಸುತ್ತಾನೆ ನಮ್ಮಣ್ಣ" ಎಂದು ಅವನನ್ನು ಹೆದರಿಸಲು ನೋಡಿದರು.

ಅದಕ್ಕೆಲ್ಲ ಆ ಮಾಯಾವಿ ಹೆದರುವಂತೆ ಕಾಣಲಿಲ್ಲ. "ಓಹ್! ನಿಮ್ಮ ಸುಳ್ಳು ಬೆದರಿಕೆಗಳಿಗೆಲ್ಲ ಹೆದರುವ ಘಟವಲ್ಲ ಇದು. ನಿಮ್ಮ ಅಣ್ಣನಂಥವನು ಒಬ್ಬನೇಕೆ, ನೂರು ಮಂದಿ ಬಂದರೂ ನನ್ನನ್ನೇನೂ ಮಾಡಲಾರರು. ಫೂಃ! ನಿಮ್ಮ ಅಣ್ಣ ಬರುವವರೆಗೆ ನಾನಿಲ್ಲಿ ಕಾದಿರುತ್ತೇನೆಂದುಕೊಂಡಿರಾ ಮೂರ್ಖರೇ? ಸದ್ಯ ನನಗೆ ನೀವಿಬ್ಬರೇ ಸಾಕು" ಎನ್ನುತ್ತಾ ಆ ತಂತ್ರದ ಮನುಷ್ಯ ಆ ಸೋದರರನ್ನು ತನ್ನ ಗಡ್ಡದ ಕೂದಲಿನ ಕೊನೆಯಲ್ಲಿ ಕಟ್ಟಿ ಎಳೆದುಕೊಂಡು ಲೀಲಾಜಾಲವಾಗಿ ನಡೆಯತೊಡಗಿದನು.

ಹೋಗುವ ಮೊದಲು, ಇನ್ನೊಂದು ಮಂತ್ರದ ಕೆಲಸವನ್ನೂ ಮಾಡಿದನು. ಆ ಮರಕ್ಕೆ ಕಟ್ಟಿದ್ದ ಎರಡು ಕುದುರೆಗಳ ಮೇಲೆ ಒಂದು ಭಸ್ಮವನ್ನು ಚೆಲ್ಲಿದನು. ಆ ಕೂಡಲೇ ಆ ಎರಡು ಕುದುರೆಗಳೂ ಮಾಯವಾಗಿ ಹೋದುವು.

ಹೀಗೆ ಆ ಮಾಯಾವಿ ಹೊರಟು ಹೋದ ಸ್ವಲ್ಪ ಹೊತ್ತಿಗೆ ನಿಶೀಥನು ಆ ಮರದ ಬಳಿಗೆ ಬಂದನು. ಅಲ್ಲೇನಿದೆ? ಕುದುರೆಗಳೂ ಇಲ್ಲ, ಮರದ ಮೇಲೆ ತನ್ನ ಸೋದರರೂ ಕಾಣೆ! ಇದೇನಾಶ್ಚರ್ಯ! ರಾತ್ರಿಯಲ್ಲಿ ಕುರುಡರಾದ ಅವರು ಕುದುರೆ ಹತ್ತಿ ಸವಾರಿ ಹೋಗುವುದೆಂದರೇನು? ಹಾಗಿರಲಾರದು. ಹಾಗಾದರೆ ಏನಾಯಿತು ಅವರಿಗೆ? ನಿಶೀಥನಿಗೆ ಏನೂ ತೋರಲಿಲ್ಲ. ಏನೇನೋ ಊಹನೆಗಳು. ಒಂದು ವೇಳೆ ತಾನು ಹಿಂದಿರುಗುವುದು ತಡ

ಹಾಯಿತೆಂದು ಅವರಿಗೆ ತೋರಿರಬಹುದು. ತನ್ನನ್ನು ಹುಡುಕುತ್ತಾ ಕುದುರೆಯ ಮೇಲೇರಿ ಎಲ್ಲಾದರೂ ಹುಡುಕಾಡುತ್ತಿರಬಹುದು. ಹೀಗೆಂದುಕೊಂಡು ಅವನು ಅವರನ್ನು ಹುಡುಕುತ್ತಾ, ಆಗಾಗ ಕರೆಯುತ್ತಾ ತನ್ನ ಕರೀ ಕುದುರೆಯ ಮೇಲೇರಿಕೊಂಡು, ಕಾಡಿನಲ್ಲಿ ತಿರುಗಾಡತೊಡಗಿದ.


ಹುಡುಕುತ್ತಾ ಅವನು ಅರಣ್ಯದಲ್ಲಿ ಎಲ್ಲಿ ತಿರುಗಿದರೂ ತನ್ನ ಸೋದರರ ಜಾಡು ತಿಳಿಯಲಿಲ್ಲ. ಆಗ ರಾತ್ರಿ ನಾಲ್ಕನೇ ಜಾಮಕ್ಕೆ ಕಾಲಿಡುವ ವೇಳೆಯೂ ಬಂದಿತು. ಇನ್ನು ಭೇಗನೇ ಬೆಳಕು ಹರಿಯಿತೆಂದರೆ ತಾನು ಕುರುಡನಾಗಿ ಒಂದಡಿ ಕೂಡಾ ನಡೆಯಲು ಸಾಧ್ಯವಾಗಲಾರದು. ಬೇಗಬೇಗನೇ ಕುದುರೆಯನ್ನು ಹುರಿದುಂಬಿಸಿ ಮತ್ತೊಮ್ಮೆ ಕಾಡೆಲ್ಲಾ ತಿರುಗಿದ.

ಕಡೆಗೆ ಅವನಿಗೊಂದು ಆಲೋಚನೆ ತಟ್ಟಿತು. "ಒಂದುವೇಳೆ ಅವರು ನಾನು ನೋಡಿ ಬಂದ ನಾರು ದಾರ ತುಂಬಿದ ಆ ಫಾಳು ಮನೆಗೇ ಹೋದರೇನೋ? ನಾನು ಹೋದ ದಾರಿ ತಿಳಿದು ಕುದುರೆಗಳು ಅವರನ್ನು ಅಲ್ಲಿಗೇ ಒಯ್ದುವೇನೊ?" ಈ ಆಲೋಚನೆ ಸ್ಫುರಿಸಿದ ಕೂಡಲೇ ಅವನು ಬಹುವೇಗವಾಗಿ ಆ ಪಾಳು ಮನೆಗೇ ಬಂದನು.

ಮೊದಲು ಆ ಮನೆಯ ಹೊರಭಾಗದಲ್ಲಿ ಅವರ ಕುದುರೆಗಳಿವೆಯೋ ಎಂದು ನೋಡಿದನು. ಅವೇನೂ ಅಲ್ಲಿ ಕಾಣದಿರಲು, ನಿರಾಶೆಯಿಂದಲೇ ಬಾಗಿಲು ದೂಡಿ ಒಳಗೆ ಹೋದನು. ಎದುರಿನಲ್ಲಿ ಕಂಡ ನೋಟ ನೋಡಿ, ಒಮ್ಮೆಗೇ ಅದುರಿಬಿದ್ದನು.

ದಪ್ಪವಾಗಿ ಸುರುಳಿಸುತ್ತಿದ್ದ ನಾರು ದಾರಗಳಿಂದ ಕಟ್ಟಲ್ಪಟ್ಟು ಉದಯನನೂ, ಸಂಧ್ಯಾನೂ ಆ ಕೋಣೆಯ ಮೂಲೆಯಲ್ಲಿ ನಿದ್ರೆ ಮಾಡಿಕೊಂಡಿದ್ದಾರೆ. ಅವರ ಸಮೀಪದಲ್ಲಿ ನೆಲದ ಮೇಲೆ ನೆತ್ತರಿನ ಚುಕ್ಕೆಗಳು ಹಸಿಯಾಗಿದ್ದುವು. ಅಯ್ಯೋ, ಇದೇನಾಯಿತು? ಉದಯನನಿಗೆ ಒಂದೇ ಕೈಯಿದೆಯಲ್ಲಾ! ಆದರೆ ಕತ್ತಿಯಿಂದ ಕೈಯನ್ನು ಕಡಿದ ಗುರುತು ಮಾತ್ರ ಆ ತೋಳಿನಲ್ಲಿರಲಿಲ್ಲ. ಇದೇನು ವಿಚಿತ್ರವೋ





ಘೋರವೋ ಮಾಯೆಯೋ ? ಹೀಗಿದ್ದರೂ ಸುಖ ವಾಗಿ ನಿದ್ರೆ ಮಾಡಿಕೊಂಡಿದ್ದಾರೆಂದರೆ ಏನರ್ಥ ?

ನಿಶೀಥನಿಗೆ ಬುದ್ಧಿ ಭ್ರಂಶವಾದಂತೆನಿಸಿ, ಧೈರ್ಯ ದಿಂದ ಸ್ತಿಮಿತಕ್ಕೆ ಬಂದು, ಸೋದರರನ್ನು ಕರೆಯುತ್ತ ತಟ್ಟಿ ಎಬ್ಬಿಸಿದನು. ನಿಶೀಥನ ಧ್ವನಿ ಕೇಳಿದ ಕೂಡಲೇ ಅವರಿಗೆ ಪ್ರಾಣವೇ ಬಂದ ಹಾಗಾಯಿತು. "ಬಂದೆಯಾ ತಮ್ಮಾ ನಿಶೀಥಾ ? ಆ ದುಷ್ಟ ಮಾಯಾವಿಯನ್ನು ತಪ್ಪಿಸಿಕೊಂಡು ಹೇಗೆ ಇಲ್ಲಿಗೆ ಬಂದೆಯಪ್ಪಾ ? ನಿನ್ನನ್ನು ನೋಡುವೆವೆಂಬ ಆಶೆಯೇ ನಮಗಿರಲಿಲ್ಲ. ಹಾಗಾದರೆ ಇನ್ನೂ ನಮ್ಮ ಪುಣ್ಯವಿದೆ" ಎನ್ನುತ್ತಾ ಅವರು ನಿಶೀಥನನ್ನು ಭರದಿಂದ ಅಪ್ಪಿಕೊಂಡು ಕಣ್ಣೀರು ತುಂಬಿಕೊಂಡರು.


"ನಾವು ಯಾವುದಕ್ಕೂ ಹೆದರಬಾರದೆಂಬ ನಿಶ್ಚಯ ದಲ್ಲಿ ಹೊರಟವರು. ಹೆದರಬೇಡಿ. ನೀವು ಇಲ್ಲಿಗೆ ಹೇಗೆ ಬಂದಿರಿ ? ಈ ನಾರು ಹಗ್ಗದ ಕಟ್ಟುಗಳೇನು ? ಯಾರು ಆ ಮಾಯಾವಿ ? ಅಣ್ಣಾ, ನಿನ್ನ ಕೈಯೇನಾ ಯಿತು ? ಇಲ್ಲಿ ಕಾಣುವ ಈ ನೆತ್ತರಿನ ಗುರುತು ಗಳು ಏನಿದು ?" ಎಂದು ಅವಸರವಸರವಾಗಿ ಪ್ರಶ್ನೆ ಗಳನ್ನು ಮಾಡಿದ ನಿಶೀಥ.

"ಇದೆಲ್ಲಾ ನಮ್ಮ ದುರದೃಷ್ಟ, ಕೇಳು ತಮ್ಮಾ, ನೀನು ನಮ್ಮನ್ನು ಬಿಟ್ಟು ಹೋದ ಸ್ವಲ್ಪ ಹೊತ್ತಿ ಗೆಲ್ಲಾ, ನಮ್ಮನ್ನು ಯಾವನೋ ಮಾಯಾವಿ ಈ ಹಗ್ಗದಿಂದ ಸುತ್ತಿ ಕಟ್ಟಿ ಎಳೆದು ತಂದು ಈ ಮನೆ ಯಲ್ಲಿ ಹಾಕಿಬಿಟ್ಟ. ಆ ದುರಾತ್ಮ ಯಾವನೋ ನಮ್ಮನ್ನು ಎಲ್ಲಿಗೆ ಎಳೆದೊಯ್ಯುವನೋ ಒಂದೂ ತಿಳಿಯಲಿಲ್ಲ. ಯಾರಿಗೂ ಕಾಣುವವನಲ್ಲವಂತೆ ಯಾರಿಗೂ ಹೆದರುವವನಲ್ಲವಂತೆ. ಯಾವಾಗ ಬೆ ಗಾಗುತ್ತದೋ ಅಂತ ಎಚ್ಚರಿಕೆಯಲ್ಲೇ ಕಾದಿದ್ದೆವು ನೀನು ಬಂದ ಶಬ್ದ ಕೇಳಿದರೂ ಆ ಮಾಯಾವಿಯೇ ಎಂದುಕೊಂಡು ನಿದ್ದೆ ಬಂದವರ ಹಾಗಿದ್ದೆವು. ಅದೋ ಬೆಳಗಾಗುತ್ತಾ ಬರುತ್ತಿದೆ. ಈಗ ತಾನೇ ನನಗೆ ಸ್ವಲ್ಪ ಸ್ವಲ್ಪ ಕಾಣುತ್ತದೆ" ಎಂದ ಉದಯನ.

ಆಮೇಲೆ ಸುಧ್ಯಾನು ಹೀಗೆಂದ: "ನಾನು ಸ್ವಲ್ಪ ಸ್ವಲ್ಪ ಅವನ ರೂಪಾಕಾರ ಗೊತ್ತು ಮಾಡಿಕೊಂಡೆ ಅವನು ಒಂದು ಗೇಣುವಿನಷ್ಟೇ ಎತ್ತರವಿರುವ ಮನುಷ್ಯ. ವಿಚಿತ್ರವೆಂದರೆ ಅವನಿಗೆ ನೂರು ಗೇಣು ಉದ್ದವಾದ ಗಡ್ಡವಿದೆ. ಆ ಗಡ್ಡದ ಕೂದಲನ್ನು ಅವನು ತನ್ನಿಷ್ಟ ಪ್ರಕಾರ ಆಡಿಸಬಲ್ಲ. ಆ ಗಡ್ಡವನ್ನೆ ಅವನು ಮರದ ಮೇಲೆ ಕಳಿಸಿ ನಮ್ಮ ಸೊಂಟ ಸುತ್ತಿಸಿ ಹೀಗೆ ಎಳೆದು ತಂದಿದ್ದಾನೆ. ಇಷ್ಟು ಹೊತ್ತಿ ವರೆಗೂ ನಮ್ಮ ಬದಿಯಲ್ಲೇ ಮಲಗಿ ಗೊರಕೆ ಹೊ ಯುತ್ತಿದ್ದ. ಆಗ ನಾನು ಅವನನ್ನು ತಡವಿ ಅವ ರೂಪಾಕಾರದ ಗುರ್ತು ಹಿಡಿದೆ. ಈಗ ತಾನೇ ಅವ ಎದ್ದು ಎಲ್ಲಿಗೋ ಓಡಿದ. ಏಕೆಂದರೆ, ಅವನು ಎ ಕೂಡಲೇ ಇಲ್ಲಿಯ ನೆಲದಲ್ಲಿ ಮನುಷ್ಯನ ಪಾದ ಗುರ್ತು ಕಂಡಿರಬೇಕು. ಅವುಗಳನ್ನು ನೋಡಿ ಅವನು ಕೋಪದಿಂದ 'ಓಹೊ! ನಿಮ್ಮ ದೊಡ್ಡಣ್ಣನೋ

ಇಲ್ಲಿಗೆ ಬಂದು ಹೋದ ಹಾಗಿದೆ. ಎಲ್ಲಿಗೆ ಓಡಿ ಹೋದಾನು? ಈಗಲೇ ಅವನನ್ನೂ ಹಿಡಿದು ತಂದು ನಿಮ್ಮ ಜತೆ ಸೇರಿಸಿಬಿಡುತ್ತೇನೆ' ಎಂದು ಅವಸರದಲ್ಲಿ ಓಡಲು ನೋಡಿದ. ಆಗ ಅವನ ಗಡ್ಡಕ್ಕೆ ನಮ್ಮನ್ನು ಕಟ್ಟಿಕೊಂಡಿರುವುದನ್ನೇ ಮರೆತಿದ್ದ. ನನಗೆ ಮಹಾ ಕೋಪ ಬಂದು ಅವನ ಗಡ್ಡದ ಕೂದಲು ಹಿಡಿದು ಎಳೆದೆ. ನಾಲ್ಕಾರು ಕೂದಲು ನನ್ನ ಕೈಗೇ ಬಂದಿತು. ನೆಲದಲ್ಲಿ ರಕ್ತವೂ ತೊಟ್ಟಿಕ್ಕಿತು. 'ಏನು ಗರ್ವವೋ ನಿನಗೆ! ನನ್ನ ಗಡ್ಡ ಪೂರಾ ಎಳೆದು ಹಾಕುವಿಯಾ? ಏನು ಬಲವಪ್ಪ ನಿನ್ನದು!' ಎಂದು ತನಗೆ ತಾನೇ ಹೇಳಿಕೊಳ್ಳುವವನಂತೆ 'ಈ ಗಡ್ಡ ಪೂರಾ ಹೋಗುತ್ತಿದ್ದರೆ ನನ್ನ ಗತಿ ಏನಾಗುತ್ತಿತ್ತೋ? ಇದೇ ನನ್ನ ಜೀವಶಕ್ತಿ! ಛೀಛೀ! ಈ ಸೊಕ್ಕಿನ ಪಿಂಡದವ ನನ್ನ ನಾಲ್ಕು ಗಡ್ಡದ ಕೂದಲು ಕಿತ್ತು ಹಾಕಿದನಲ್ಲ! ಇನ್ನು ಅವು ಈ ಜನ್ಮದಲ್ಲಿ ಬೆಳೆಯಲಾರವು. ಅಷ್ಟರಲ್ಲೇ ಬಿಟ್ಟಿದ್ದು ನನ್ನ ಪುಣ್ಯ! ಈ ಪುಂಡನನ್ನು ಸುಮ್ಮನೆ ಬಿಡಬಾರದು' ಎನ್ನುತ್ತಾ ಜೇಬಿನಿಂದ ಒಂದು ಅಂಜನದ ಡಬ್ಬಿಯನ್ನು ತೆಗೆದ. ಗಡ್ಡ ಕಿತ್ತವನು ನಾನಾದರೂ ಅದರ ಶಿಕ್ಷೆ ಅನುಭವಿಸಿದವನು ಉದಯನ. ನಮ್ಮಿಬ್ಬರ ವ್ಯತ್ಯಾಸ ತಿಳಿಯದ ಅವನು ಆ ಅಂಜನವನ್ನು ಉದಯನನ ಒಂದು ತೋಳಿಗೆ ಪೂಸಿದ. ಮರುಕ್ಷಣದಲ್ಲಿ ಇವನ ಕೈ ಮಾಯವಾಗಿ ಹೋಯಿತು. ಅಷ್ಟಾದ ಮೇಲೆ ಅವನು ತನ್ನ ಗಡ್ಡವನ್ನು ನಮ್ಮನ್ನು ಕಟ್ಟಿದಲ್ಲಿಯವರೆಗೆ ಕತ್ತರಿಸಿಕೊಂಡು ಹೊರಟ. ಆಶ್ಚರ್ಯವೆಂದರೆ ಅವನ ಉದ್ದನ್ನ ಗಡ್ಡವು ಕತ್ತರಿಸಿದಷ್ಟು ಆ ಕೂಡಲೇ ಬೆಳೆದೂಬಿಟ್ಟಿತು."

ಇದೆಲ್ಲಾ ಕೇಳಿ ನಿಶೀಥನಿಗಾದ ಆಶ್ಚರ್ಯಕ್ಕೆ ಅಳತೆ ಇರಲಿಲ್ಲ. "ಸರಿ. ಇನ್ನು ತಡಮಾಡಬಾರದು. ಅವನು ನಿನ್ನನ್ನು ಹುಡುಕುತ್ತ, ತಿರುಗಿ ತಿರುಗಿ ಬೇಸತ್ತು, ಬೇಗನೇ ಹಿಂದಿರುಗಿ ಬಂದುಬಿಡಬಹುದು. ಈಗ ಬೆಳಗಾಗಿ ಬಿಟ್ಟುದರಿಂದ, ನಿಶೀಥಾ, ಇನ್ನು



ನಿನ್ನಿಂದ ಏನುಮಾಡಲೂ ಸಾಧ್ಯವಿಲ್ಲ. ಆದುದರಿಂದ ನನ್ನ ಬದಲಿಗೆ ನಿನ್ನನ್ನು ಕಟ್ಟಿ ಸಂಧ್ಯಾನೊಂದಿಗೆ ಕೂಡಿಸುತ್ತೇನೆ. ಒಂದು ಕೈ ಮಾತ್ರ ಮೇಲಕ್ಕೆ ಕಾಣುವ ಹಾಗೆ ಎಚ್ಚರದಿಂದಿರು. ಆಮೇಲೆ ಏನಾಗುವುದೋ ನೋಡೋಣ. ಇವೆಲ್ಲಾ ಒಂದು ಆಟವೆಂದು ಭಾವಿಸೋಣ" ಎಂದ ಉದಯನ.


ಈ ಉಪಾಯಕ್ಕೆ ಮೂವರೂ ಒಮ್ಮನಸ್ಸಿನವರಾದರು. ಕೂಡಲೇ ನಿಶೀಥನು ಅವರ ಕಟ್ಟುಗಳನ್ನು ಬಿಚ್ಚಿದ. ಉದಯನನು ಎದ್ದು ತಾನು ಒಕ್ಕೈಯವನಾದರೂ, ಸೋದರರ ಸಹಾಯದಿಂದ, ನಿಶೀಥನನ್ನು ಕಟ್ಟಿ ಸಂಧ್ಯಾನೊಂದಿಗೆ ಕೂಡಿಸಿದ. ಮನೆಯ ಹೊರಗಿದ್ದ ನಿಶೀಥನ ಕುದುರೆಯನ್ನು, ಅಲ್ಲಿಗೆ ಸಮೀಪದಲ್ಲಿದ್ದ ಒಂದು ಗುಹೆಯೊಳಗೆ ಕಟ್ಟಿ ಹಾಕಿ, ತಾನು ಮಾತ್ರ ಮತ್ತೆ ಆ ಪಾಳುಮನೆಯ ಬಳಿಗೇ ಬಂದು, ಒಂದು ಪೊದರಿನ ಮರೆಯಲ್ಲಿ ಕುಳಿತನು. ಹೊತ್ತು ಏರುತ್ತಾ ಮಧ್ಯಾಹ್ನದ ವೇಳೆಯಾಯಿತು.


ಆಗ ಮಾರುದ್ದ ಗಡ್ಡದ ಗೇಣುದ್ದದ ಮನುಷ್ಯ, "ಹೋಗಲಿ ಎಲ್ಲಿಗೆ ಹೋದಾನು? ಇಂದಲ್ಲದಿದ್ದರೆ ನಾಳೆ. ನನ್ನ ಕೈಗೆ ಸಿಕ್ಕಿ ಬೀಳಲೇಬೇಕು. ಅಹ್ಹಹ್ಹ..." ಎಂದು ನಗುತ್ತ ಉದಯನನು ಅಡಗಿದ್ದ ಪೊದರಿನ ಬದಿಯಿಂದಲೇ ಹೋದ.

ಅವನು ಮನೆಯೊಳಗೆ ಹೊಕ್ಕ ಕೂಡಲೇ ಉದಯನನು, ಅಡಗಿದ್ದ ಸ್ಥಳದಿಂದ ಎದ್ದು ಬೆಕ್ಕಿನಂತೆ ನಡೆದು ಕಿಟಿಕಿಯ ಹತ್ತಿರ ನಿಂತು ಒಳಕ್ಕೆ ಹಣಿಕಿ ನೋಡಿದ. ಆಗ ಅದ್ಭುತ ನೋಟಗಳು ಕಾಣತೊಡಗಿದುವು. ನೆಲ ಬಳಿಯುವಂತಿದ್ದ ಗಡ್ಡದ ಗೇಣುದ್ದದ ಮನುಷ್ಯ ಜೇಬಿನಿಂದ ಯಾವುದೋ ಒಂದು ಪುಟ್ಟ ಡಬ್ಬಿಯಿಂದ ಏನೋ ತೆಗೆದು ಸಂಧ್ಯಾ ನಿಶೀಥರ ಮೇಲೆ ಚೆಲ್ಲಿದ. ಕೂಡಲೇ ಅವರಿಬ್ಬರೂ ಮಾಯವಾಗಿ ಹೋದರು. ಆಮೇಲೆ ಗಡ್ಡದವನು ತನ್ನ ಕೊರಳಿನಲ್ಲಿದ್ದ ಹಾರವನ್ನು ತೆಗೆದು ಗೋಡೆಯಲ್ಲಿದ್ದ ಕೊಕ್ಕೆಗೆ ಸಿಕ್ಕಿಸಿದ. ತತ್ ಕ್ಷಣವೇ ಗೇಣುದ್ದದ ಮನುಷ್ಯ ಸಾಧಾರಣ ಒಬ್ಬ ಮನುಷ್ಯನ ಪರಿಮಾಣದವನಾಗಿ ನಿಂತ. ಈಗ ಅವನಿಗೆ ನೆಲ ಬಳಿಯುವ ಗಡ್ಡದ ಕೂದಲುಗಳಿರಲಿಲ್ಲ. ಆಮೇಲೆ ಆ ಮನುಷ್ಯ ಒಂದು ಪಾತ್ರೆಯಿಂದ ಏನನ್ನೋ ತಿಂದು ತೇಗಿ ಒಂದು ಬದಿಯಲ್ಲಿ ಮಲಗಿ ಸ್ವಲ್ಪ ಹೊತ್ತಿಗೆ ಗೊರಿಕೆ ಹೊಡೆಯಲಿಕ್ಕೂ ತೊಡಗಿದ. ಇದೆಲ್ಲವನ್ನೂ ಕಿಟಿಕಿಯಿಂದ ನೋಡಿಕೊಂಡಿದ್ದ ಉದಯನ, ಈ ಸಮಯದಲ್ಲಿ ಮೆಲ್ಲಗೆ ಮನೆಯೊಳ ಪ್ರವೇಶಿಸಿ ಕೊಕ್ಕೆಯಲ್ಲಿರುವ ಹಾರವನ್ನು ತೆಗೆದ ತನ್ನ ಕೊರಳಿಗೆ ಹಾಕಿಕೊಂಡನು. ಆ ಕ್ಷಣವೇ ಅವನ ಮಾರುದ್ದ ಗಡ್ಡದ ಗೇಣುದ್ದದ ರೂಪದವನಾದನ ಈ ವಿಚಿತ್ರ ಬದಲಾವಣೆಯನ್ನು ನೋಡಿ ಉದಯ ನಿಗೆ ನಗುಬಂದಿತು. "ಓಹೋ! ಇದರಲ್ಲಿದೆಯೊ ನಿನ್ನ ರಹಸ್ಯ!" ಎಂದನು ಮನಸ್ಸಿನಲ್ಲೇ.

ಉದಯನನು ತನ್ನ ಅಂಗಿಯ ಜೇಬುಗಳನ್ನು ತಡ ನೋಡಿದ. ಒಂದು ಜೇಬಿನೊಳಗಿನ ಕಿರುಡಬ್ಬಿಯ ಬಿಳೀ ಬಣ್ಣದ ಭಸ್ಮವಿದ್ದಿತು. ಮರಕ್ಕೆ ಕಟ್ಟಿ ಕುದುರೆಗಳನ್ನೂ, ಮನೆಯೊಳಗಿನ ಮನುಷ್ಯರನ್ನ ಮೊದಲಿನ ಕುಳ್ಳ ಮಾಯ ಮಾಡಿದುದು ಈ ಭಸ ದಿಂದಲೇ. ಎರಡನೇ ಜೇಬಿನಲ್ಲಿ ಕೆಂಪು ಬಣ್ಣದ ಭಸ್ಮ ಡಬ್ಬಿಯಿದ್ದಿತು. ಉದಯನನ ಕೈಯನ್ನು ಹೋ ಲಾಡಿಸಿದ್ದು ಈ ಡಬ್ಬಿಯ ಅಂಜನವೇ. ಮೂರನೆ ಜೇಬಿನಲ್ಲಿ ಅಂತಹುದೇ ಮತ್ತೊಂದು ಹಸಿರ ಬಣ್ಣದ ಅಂಜನವಿದ್ದಿತು. ಇನ್ನೊಂದು ಕಪ್ಪು ಬಣ್ಣ ಅಂಜನ ಡಬ್ಬಿಯೂ, ಕರವಸ್ತ್ರವೂ ಆ ಜೇಬಿನ ದೊರೆತುವು. ಅವುಗಳು ಯಾವುದಕ್ಕೆ ಉಪಯೋ ವಾಗುತ್ತವೆಂಬುದು ಉದಯನನಿಗೆ ಗೊತ್ತಾಗಲಿಲ್ಲ "ಅಂತೂ ನಿನ್ನ ಬಲ ನನ್ನ ಕೈಯಲ್ಲಿದೆ!" ಎಂ ಅವನನ್ನು ನೋಡುತ್ತ.

(ಇನ್ನೂ ಇದ







ಅವಳಿಮಕ್ಕಳ ಕಥೆ

Feb 1975


೨

[ರಾತ್ರಿಯಲ್ಲಿ ಒಂದು ಮರದ ಮೇಲೆ ಉದಯನನೂ ಸಂಧ್ಯಾನೂ ನಿದ್ರೆ ಮಾಡುತ್ತಿದ್ದಾಗ, ಮಾರುದ್ದ ಗಡ್ಡದ ಗೇಣುದ್ದದ ಮನುಷ್ಯನೊಬ್ಬ ಅವರನ್ನು ಬಂಧಿಸಿ ತನ್ನ ಮನೆಗೆ ಕರೆದೊಯ್ದ. ನಿಶೀಥನು ತನ್ನ ಸೋದರರನ್ನು ಹುಡುಕುತ್ತಾ ಹೋಗಿ ಆ ಗಡ್ಡದ ಮಾಂತ್ರಿಕನ ಹಾರ ಮತ್ತು ಭಸ್ಮಗಳ ರಹಸ್ಯಗಳನ್ನು ತಿಳಿದುಕೊಂಡನು.]

ಹಗಲು ಹೊತ್ತು ಸಂಧ್ಯಾ, ನಿಶೀಥರಿಗೆ ಯಾವ ಪ್ರಯೋಜನಕ್ಕೂ ಬಾರದು. ಹಗಲಿನಲ್ಲಿ ಕುರುಡರಾಗುವಂತಹ ಅವರಿಬ್ಬರನ್ನೂ ಗಡ್ಡದ ಮಾಂತ್ರಿಕ ಏನೋ ಬೂದಿ ಚೆಲ್ಲಿ ಮಾಯವಾಗಿ ಹೋಗುವಂತೆ ಮಾಡಿದ್ದಾನೆ. ಆದುದರಿಂದ ಉದಯನನು ಮಂತ್ರದ ಹಾರವನ್ನು ಧರಿಸಿಕೊಂಡು ಗಡ್ಡದ. ಗಿಡ್ಡನಾದುದೂ, ಮಂಚದಲ್ಲಿ ಮಲಗಿದ ಗಡ್ಡದವನು ಸಾಧಾರಣ ಮನುಷ್ಯನಾಗಿರುವುದೂ, ಸಂಧ್ಯಾ ನಿಶೀಥರಿಗೆ ತಿಳಿದಿರಲಾರದು. ಗಡ್ಡದ ಗಿಡ್ಡ ಮಾಂತ್ರಿಕ ಯಾವ ಕ್ಷಣದಲ್ಲಿ ಏನುಮಾಡುವನೋ ತಮ್ಮ ಸೋದರನ ಗತಿ ಏನಾಗಿದೆಯೋ ಎಂಬ ಚಿಂತೆಯಲ್ಲೇ ಅವರಿಬ್ಬರೂ ಮಾಯವಾಗಿಬಿಟ್ಟಿದ್ದರು.

ಗಡ್ಡದ ಗಿಡ್ಡನ ಅಸಲು ಗುಟ್ಟು ತನಗೆ ತಿಳಿದುದು ಮಾತ್ರವಲ್ಲದೆ, ಅವನನ್ನು ಮೋಸಪಡಿಸಿ ತಾನು ಕೂಡಾ ಅವನಂತೆಯೇ ಆಗಿರುವುದನ್ನು ನೋಡಿ ಉದಯುನನಿಗೆ ಒಂದು ಬಗೆಯ ಹಾಸ್ಯಭಾವದ ಸಂತೋಷವಾಗಿತ್ತು. ಈ ಸಂತೋಷದಲ್ಲಿ ಉದಯನನು ತನ್ನ ಸಹೋದರರ ಸಂಗತಿಯನ್ನೇ ಮರೆತು ಬಿಟ್ಟನು. ಈಗ ಉದಯನನ ದೃಷ್ಟಿ ಪೂರಾ ತನ್ನ ಜೇಬಿನೊಳಗಿರುವ ಭಸ್ಮಗಳ ಮೇಲಿದ್ದಿತು. ಈ ಬೇರೆ

49



ಬೇರೆ ಬಣ್ಣದ ಭಸ್ಮಗಳೂ, ಅಂಜನಗಳೂ ಯಾವುದಕ್ಕೆ ಉಪಯೋಗವಾಗುವುದೋ, ಅದನ್ನು ಹೇಗೆ ತಿಳಿಯುವುದೋ ಎಂದು ಆಲೋಚಿಸತೊಡಗಿದನು. ಹೀಗಿರುವಾಗಲೇ ಅವನಿಗೆ ತನ್ನ ಸಹೋದರರ ಜ್ಞಾಪಕ ಬಂತು.

ಅವರೆಲ್ಲಿದ್ದಾರೆ ? ಏನಿದು ? ಆ ಕೋಣೆಯಲ್ಲಿ ಮಲಗಿದ್ದವರು ಎಲ್ಲಿ ಹೋದರು ? ಹೇಗೆ ಹೋದರು ? ಅವನಿಗೆ ಗಾಬರಿಯಾಯಿತು.

ಉದಯನನಿಗೆ ಏನೂ ತೋರದೆ, ಸುಮ್ಮನೆ ಆ ಕೋಣೆಯೊಳಗೇ ಇತ್ತಿಂದತ್ತ ಅತ್ತಿಂದಿತ್ತ ನಡೆದಾಡತೊಡಗಿದ. ಅಷ್ಟರಲ್ಲಿ ಮಲಗಿಕೊಂಡಿದ್ದ ಮಾಂತ್ರಿಕ ಮನುಷ್ಯ ಎದ್ದುಬಿಟ್ಟ.

ಉದಯನನ್ನು ನೋಡಿದ ಕೂಡಲೇ ಅವನಿಗೆ ಭಗೀರೆಂದಿತು. ತಾನು ಹೊಂದಿದ ಅದೇ ಗಿಡ್ಡ ರೂಪದಲ್ಲಿ ಮಾರುದ್ದ ಗಡ್ಡದಿಂದಿರುವ ಇನ್ನೊಬ್ಬನನ್ನು ನೋಡಿದ ಕೂಡಲೇ ಅವನಿಗೆಲ್ಲವೂ ಅರ್ಥವಾಗಿ ಭಯವಾಯಿತು. ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ಯೋಚಿಸಿದ. ತನ್ನ ಗುಟ್ಟು ಬಹಿರಂಗವಾಗಿ, ತಾನು ಅವನ ಕೈಯೊಳಗೆ ಸಿಕ್ಕಿ ಬೀಳುವಂತಾಯಿತಲ್ಲಾ ಎಂಬ ಚಿಂತೆಯಿಂದ ಅವನು ಒಳಗೊಳಗೆ ಉರಿಕಾರ ತೊಡಗಿದರೂ, ಹೊರಗೆ ಮಾತ್ರ ಏನೂ ತೋರಿಸದೆ ಮುಗುಳು ನಗುತ್ತ, ಉದಯನನ ಬಳಿಗೆ ಬಂದು "ನಮಸ್ಕಾರ ಮಹಾನುಭಾವರೇ. ನೀವು ಯಾರೋ ತುಂಬ ಪ್ರಭಾವಶಾಲಿಗಳಾಗಿರಬೇಕು. ಇಷ್ಟು ದೀರ್ಘ ಕಾಲವಧಿಯಲ್ಲಿ ನನ್ನ ರಹಸ್ಯಗಳನ್ನು ಕಂಡುಹಿಡಿಯಬಲ್ಲ ಸಮರ್ಥರನ್ನು ಈ ದಿನ ನೋಡಿದೆ. ಇದು ನನ್ನ ಅದೃಷ್ಟದ ದಿನವೆಂದೇ ತಿಳಿಯುತ್ತೇನೆ. ಆದರೆ ಇದರಿಂದ ನಿಮಗೆ ಆಗುವಂತಹ ಲಾಭವೇನೂ ಇಲ್ಲ. ನೀವು ಇಲ್ಲಿಗೆ ಬಂದ ಕೆಲಸವೇನೆಂಬುದನ್ನು ಹೇಳಿದರೆ ನಾನು ಕ್ಷಣಮಾತ್ರದಲ್ಲಿ ಆ ಕಾರ್ಯ ನೆರವೇರಿಸಿ ಕೊಡಬಲ್ಲೆ. ನಾನಿರುವಾಗ ನೀವು ವೃಥಾ ಶ್ರಮಪಡಬೇಕಾಗಿಲ್ಲ. ಏನಾಗಬೇಕೋ ಹೇಳಿಬಿಡಿ" ಎಂದು ಕಪಟ ವಿನಯದಿಂದ ಹೇಳುತ್ತ, ಉದಯನನ ಕೊರಳಿನಲ್ಲಿರುವ ಹಾರವನ್ನು ತೆಗೆಯಲು ನೋಡಿದ. ಎಚ್ಚರಿಕೆಯಲ್ಲಿದ್ದ ಉದಯನ ಹಿಂದಕ್ಕೆ ಸರಿದ. ಹಾರವನ್ನು ತನಗೆ ಕೊಟ್ಟರೆ ಅವನು ಹೇಳಿದ ಕೆಲಸ ಕ್ಷಣದಲ್ಲಿ ನೆರವೇರಿಸುವುದಾಗಿ ಬಹಳ ಚಾತುರ್ಯದ ಮಾತುಗಳನ್ನಾಡಿದ ಆ ಮಾಂತ್ರಿಕ.

ಉದಯನನು ಅಂತಹ ಮಾತುಗಳಿಗೆಲ್ಲ ಜಗ್ಗದೆ, "ಮೊದಲು ನನ್ನ ಸಹೋದರರನ್ನು ಎಲ್ಲಿ ಅಡಗಿಸಿರುವೆಯೋ ಹೇಳು. ಆಮೇಲೆ ಉಳಿದ ಮಾತು" ಎಂದ ಖಂಡಿತವಾಗಿ.

"ಅವರನ್ನು ನಾನೆಲ್ಲಿ ಅಡಗಿಸಿದ್ದೇನೆ ? ಇಲ್ಲಿಯೇ ಇದ್ದಾರಲ್ಲ. ಓಹೋ ! ಕಾಣಿಸುವುದಿಲ್ಲವೆನ್ನುವಿಯಾ? ನೀನು ಹಾಕಿಕೊಂಡಿರುವ ಅಂಗಿಯ ಎಡಬದಿಯ ಜೇಬಿನಲ್ಲಿ ಕಪ್ಪು ಭಸ್ಮದ ಕರಡಿಗೆಯಿದೆ. ಅದರಿಂದ ಒಂದು ಚಿಟಿಕೆ ಭಸ್ಮ ತೆಗೆದು ಅಲ್ಲಿ ಚೆಲ್ಲು. ಆ

ಗಾಣುವರು" ಎಂದ ಮಾಂತ್ರಿಕ. ಅದರಂತೆ ಅವನು ತೋರಿಸಿದ ಸ್ಥಳದಲ್ಲಿ ಉದಯನನು ಕಪ್ಪು ಪುಡಿಯನ್ನು ಚೆಲ್ಲುತ್ತಲೆ ಒಮ್ಮೆಗೇ ನಿಶೀಥನೂ ಸಂಧ್ಯಾನೂ ಮಲಗಿದಂತೆ ಪ್ರತ್ಯಕ್ಷರಾಗಿ, ಆಗ ತಾನೇ ಆಕಳಿಸುತ್ತ ಎದ್ದು ಕುಳಿತುಕೊಳ್ಳುತ್ತಿದ್ದರು.


"ಸರಿ, ಪರವಾಗಿಲ್ಲ, ಪುಣ್ಯಾತ್ಮ. ಇನ್ನು ನನ್ನ ಕೈ ಎಂದಿನಂತೆ ಬರುವದಾರಿ ಕೂಡಾ ಹೇಳಿಬಿಡು" ಎಂದ ಉದಯನ.

"ಅದರ ಮದ್ದು ಕೂಡಾ ನಿನ್ನ ಜೇಬಿನಲ್ಲೇ ಇದೆ. ಬಲಬದಿಯ ಜೇಬಿನಲ್ಲಿ ಹಸುರು ಬಣ್ಣದ ಅಂಜನದ ಡಬ್ಬಿಯಿದೆ. ಅದನ್ನು ಬೆರಳಿನಿಂದ ಚೂರು ಮಾತ್ರ ತೆಗೆದು ಆ ಮೊಂಡುಕೈಗೆ ತಿಕ್ಕು" ಎಂದ ಮಾಂತ್ರಿಕ.

ಉದಯನನು ಅವನು ಹೇಳಿದಂತೆ ಮಾಡಲು, ಕೈ ಎಂದಿನಂತೆ ಬಂದು ಸರಿಯಾಯಿತು. ಈಗ ಉದಯನಿಗೆ ತನ್ನ ಅಂಗಿಯ ಜೇಬಿನಲ್ಲಿರುವ ಬಿಳಿಯ ಭಸ್ಮ ಕೆಂಪು ಅಂಜನಗಳು ಯಾವುದಕ್ಕೆ ಉಪಯೋಗವಾಗುವುವೆಂದು ತಿಳಿಯಬೇಕೆನಿಸಿತು. ಅವುಗಳನ್ನು ಅವನಿಗೆ ತೋರಿಸುತ್ತ "ಇವುಗಳಿಂದ ಏನಾಗುತ್ತದೆ?" ಎಂದು ಕೇಳಿದ.

"ಓಹ್! ಇಷ್ಟು ಬುದ್ಧಿವಂತನಾಗಿದ್ದು ಅದನ್ನು ಗ್ರಹಿಸಲಾರದೆ ಹೋದೆಯಾ? ನಿನ್ನ ಸೋದರರನ್ನು ಮಾಯಮಾಡಿದ್ದು ಈ ಬಿಳಿಯ ಭಸ್ಮದಿಂದಲೇ. ನಿನ್ನ ಕೈಯನ್ನು ಇಲ್ಲದಂತೆ ಮಾಡಿದ್ದು ಆ ಕೆಂಪು ಅಂಜನದಿಂದ. ಇನ್ನು ಆ ಕೊರಳ ಹಾರ ತೆಗೆದು ಕೊಡಪ್ಪ" ಎಂದು ಕೈನೀಡುತ್ತ ಎಲ್ಲಾ ಪದಾರ್ಥಗಳನ್ನೂ ತಿಳಿಸಿಬಿಟ್ಟನು.

"ಸರಿಸರಿ. ನಾನು ಬುದ್ಧಿವಂತನೆಂದು ನಾನೇನೂ ಹೇಳಿಕೊಳ್ಳಲಿಲ್ಲವಷ್ಟೆ? ನೀನೇ ಹೆಚ್ಚಿನ ಬುದ್ಧಿವಂತನಾಗಿರು. ಹೇಳು ಮತ್ತೆ. ಈ ಕರವಸ್ತ್ರದಲ್ಲಿಯೂ ಏನೋ ಮಹತ್ವವಿರಲೇ ಬೇಕು. ಅದನ್ನೂ ಹೇಳಿಬಿಡು." ಎಂದ ಉದಯನ.



"ನಿಜ. ಅದರಿಂದ ಎರಡು ಉಪಯೋಗಗಳಿವೆ. ನಿಮಗೆ ಬೇಕಾದ ಆಹಾರ ಪದಾರ್ಥಗಳನ್ನು ನೆನೆಸಿಕೊಂಡು ಈ ಕರವಸ್ತ್ರವನ್ನು ಬಿಡಿಸಿಟ್ಟರೆ ಅವೆಲ್ಲವೂ ತಯಾರಾಗಿಬಿಡುತ್ತವೆ. ಮತ್ತು ಎಲ್ಲಾ ವಿಧದ ರೋಗಗಳನ್ನೂ ಇದು ಗುಣಪಡಿಸುತ್ತದೆ. ಆಯಿತಷ್ಟೆ?" ಎಂದ ಮಾಂತ್ರಿಕ.

"ಹಾಗಾದರೆ ನಮ್ಮ ಕಣ್ಣಿನ ದೃಷ್ಟಿ ಭೇದಗಳನ್ನು ಹೋಗಲಾಡಿಸಿ ಎಲ್ಲರ ಕಣ್ಣುಗಳಂತೆ ಮಾಡಬಲ್ಲುದೇ ಈ ಕರವಸ್ತ್ರ?" ಎಂದು ಕೇಳಿದ ಉದಯನ.

"ಹಾಗಂದರೇನು? ಏನಾಗಿದೆ ನಿಮ್ಮ ಕಣ್ಣುಗಳಿಗೆ?" ಎಂದು ಕೇಳಿದ ಮಾಂತ್ರಿಕ. ಉದಯನನು ತಾನು ಕತ್ತಲೆಯಲ್ಲಿ ಕುರುಡನಾಗಿರುವುದನ್ನೂ, ಅದರಂತೆ ತನ್ನ ಸೋದರರಿಗಿರುವ ದೃಷ್ಟಿಯ ಕೊರತೆಗಳನ್ನೂ ವಿವರವಾಗಿ ಹೇಳಿದನು.

ಅದನ್ನೆಲ್ಲ ಕೇಳಿ ಮಾಂತ್ರಿಕನು, "ಓಹೋ! ಹೀಗೋ ಸಮಾಚಾರ? ನೀವು ಮೂವರ ಕಣ್ಣು





ಗಳಿಗೂ ಸರಿಯಾದ ದೃಷ್ಟಿ ಬರುವ ದಾರಿ ತಿಳಿಸು ತ್ತೇನೆ. ಮೊದಲು ನನ್ನ ಹಾರವನ್ನು ನನಗೆ ಕೊಟ್ಟು ಬಿಡು " ಎಂದನು.

ಉದಯನ ಅದಕ್ಕೆ ಒಪ್ಪಲಿಲ್ಲ. ತಾನು ಸ್ವಲ್ಪ ಮಾತ್ರ ಮೋಸ ಹೋದರೂ ಈ ಸೋತ ಮಾಂತ್ರಿಕ ತಮ್ಮನ್ನು ಸಾಯಿಸದೆ ಬಿಡಲಾರನೆಂದು ಅವನಿಗೆ ಗೊತ್ತು. ಅವನು ಉಪಾಯದಿಂದ, "ಎಲವೋ ಮುದಿ ಮಾಂತ್ರಿಕ ! ಮೊದಲು ನಮಗೆ ಕಣ್ಣು ಸರಿ ಯಾಗುವ ದಾರಿ ಹೇಳು. ಇದೊಂದೇ ನಮಗಿರುವ ಕೋರಿಕೆ. ನಿನ್ನ ಈ ಹಾರವನ್ನು ನಾನಿಟ್ಟುಕೊಳ್ಳುವು ದಿಲ್ಲ. ಈಗಲೇ ನಿನ್ನ ಕೈಗೂ ಕೊಡಲಾರೆ. ಇಲ್ಲಿಂದ ಪಶ್ಚಿಮ ದಿಕ್ಕಿನಲ್ಲಿ ಹತ್ತು ಮೈಲು ದೂರದಲ್ಲಿರುವ ಬಂಡೇಗುಡ್ಡದಲ್ಲಿ ಒಂದು ಗುಹೆ ಯಿದೆ. ನಿನ್ನ ಈ ಹಾರವನ್ನು ಆ ಗುಹೆಯಲ್ಲಿಟ್ಟು ನಾವು ಹೋಗಿಬಿಡುತ್ತೇವೆ. ಇದು ನಿಜ. ನೀನು ಸ್ವಲ್ಪ ಹೊತ್ತಿನ ಮೇಲೆ ಅಲ್ಲಿಗೆ ಬಂದು ಅದನ್ನು ತೆಗೆದುಕೊಂಡು ಹೋಗು" ಎಂದನು. ಹಾರವು ಆ ಮಾಂತ್ರಿಕನಿಗೆ ಬಹು ಮುಖ್ಯವಾದುದ ರಿಂದ, ಉದಯನನು ಹೇಳಿದುದಕ್ಕೆಲ್ಲ ಅವನು ಒಪ್ಪದೆ ಬೇರೆ ವಿಧಿಯಿರಲಿಲ್ಲ. ಆಗ ನಿಶೀಥನೂ ಸಂಧ್ಯಾನೂ ಅವರ ಬಳಿಗೆ ಬಂದು. "ಅಣ್ಣಯ್ಯಾ, ಈ ಕಪಟಿಯೊಡನೆ ಆಮೇಲೆ ಮಾತುಕತೆಯಾಡೋಣ. ಹೊಟ್ಟೆಯಲ್ಲಿ ಹಸಿವೆಯೆದ್ದು ಕತ್ತಿಯ ಹಾಗೆ ಹೊರ ಳಾಡುತ್ತಿದೆ. ಆ ಕರವಸ್ತ್ರದ ಮಹತ್ವವನ್ನು ನೋಡಿ ಬಿಡುವಾ ಮೊದಲು" ಎಂದರು.

ಈ ಸಂಗತಿ ಉದಯನನಿಗೆ ತಟ್ಟಲೇ ಇಲ್ಲ. ಆಗ ತಾನೇ ಅವನಿಗೂ ತನ್ನ ಹೊಟ್ಟೆ ಚುರ್ರೆನ್ನುತ್ತಿರು ವುದು ತಿಳಿಯಿತು. ಕೂಡಲೇ ಅವನು ಕರವಸ್ತ್ರವನ್ನು ಹರಡಿ, ಏನೇನೋ ಭಕ್ಷ್ಯಭೋಜ್ಯ ಫಲಗಳ ಹೆಸರು ಗಳನ್ನು ನೆನೆದನು. ನೆನೆದಂತೆ ಅವೆಲ್ಲವೂ ಕರವಸ್ತ್ರದ ಮೇಲೆ ಪ್ರತ್ಯಕ್ಷವಾದುವು.

ಮೂವರು ಸಹೋದರರೂ ತೃಪ್ತಿಯಾಗಿ ತಿಂದು ತೇಗಿದರು. ದುಷ್ಟನಾದರೂ ಆ ಮಾಂತ್ರಿ ಕನೂ ಮನುಷ್ಯನಲ್ಲವೇ? ಅವನಿಗೂ ಒಂದಷ್ಟು ಕೊಟ್ಟು ತಿನ್ನಿಸಿದರು.

ಹೊಟ್ಟೆ ತುಂಬಿದ ಮೇಲೆ ಉದಯನನು ಕರವಸ್ತ್ರ ವನ್ನು ಮಡಚಿ ಜೇಬಿನೊಳಗಿಟ್ಟುಕೊಂಡು. "ಇನ್ನು ನಮ್ಮ ಕಣ್ಣುಗಳು ಸರಿಯಾಗುವ ಕ್ರಮ ಹೇಳು. ಆಮೇಲೆ ನಮ್ಮ ದಾರಿ ಹಿಡಿದು ನಾವು ಹೋಗು ತ್ತೇವೆ" ಎಂದನು.

"ನಿನ್ನ ಹತ್ತಿರವಿರುವ ಕೆಂಪು ಅಂಜನವನ್ನು ಉಂಡೆ ಮಾಡು. ಆ ಉಂಡೆಯನ್ನು ಈ ನಾರುದಾರದ ಚೂರುಗಳಿಂದ ಬೆಂಕಿ ಹೊತ್ತಿಸು. ಆಗ ಬ್ರಹ್ಮಾಂಡ ದಂತಹ ಹೊಗೆ ಬರುತ್ತದೆ. ನೀವು ಮೂವರೂ ಈ ಕರವಸ್ತ್ರವನ್ನು ತಲೆಯ ಮೇಲೆ ಹಾಕಿಕೊಂಡು ಆ ಹೊಗೆ ನಿಮ್ಮ ಕಣ್ಣಿಗೆ ತಾಗುವಂತೆ ನೋಡಿಕೊಳ್ಳ ಬೇಕು. ಕಣ್ಣುಗಳನ್ನು ಮುಚ್ಚಿಕೊಳ್ಳಬಾರದು.

ಹಾಗೆ ಒಂದು ಐದು ನಿಮಿಷಗಳಾದ ಮೇಲೆ ಬಟ್ಟೆ ಮುಸುಕು ತೆಗೆಯಿರಿ. ನಿಮ್ಮ ಕಣ್ಣುಗಳು ಸರಿಯಾಗುತ್ತವೆ'' ಎಂದ ಮಾಂತ್ರಿಕ.

ಕೂಡಲೇ ಉದಯನನು ಕೆಂಪು ಅಂಜನವನ್ನು ಉಂಡೆ ಮಾಡಿ, ನಾರುದಾರದ ಚೂರುಗಳ ನಡುವೆ ಇಟ್ಟು, ಬೆಂಕಿಗಾಗಿ ಅತ್ತ ಇತ್ತ ನೋಡಿದನು. ಆಗ ಮಾಂತ್ರಿಕನು ಚಕಮುಕಿ ಕಲ್ಲುಗಳನ್ನು ಹೊಡೆದು ಬೆಂಕಿ ಹೊತ್ತಿಸಿ ಕೊಟ್ಟನು. ಉಂಡೆಯ ಸುತ್ತಲಿನ ನಾರುದಾರಗಳಿಗೆ ಬೆಂಕಿ ಹಿಡಿದ ಕೂಡಲೇ ಭಾರಿ ಹೊಗೆ ಎದ್ದಿತು.


ಉದಯನನು ತನ್ನ ಸೋದರರೊಂದಿಗೆ ಆ ಹೊಗೆಯ ನಡುವೆ ಕುಳಿತು, ತಮ್ಮೆಲ್ಲರ ತಲೆಗಳ ಮೇಲೆ ಕರವಸ್ತ್ರ ಹರಡಿಕೊಂಡನು.

ಐದು ನಿಮಿಷಗಳಾದ ಮೇಲೆ ಮೂವರೂ ಅಲ್ಲಿಂದೆದ್ದು ಈಚೆಗೆ ಬಂದರು. ಒಬ್ಬೊಬ್ಬರ ಕಣ್ಣುಗಳಿಂದಲೂ ಧಾರೆಧಾರೆಯಾಗಿ ನೀರಿಳಿಯತೊಡಗಿತು. ಸ್ವಲ್ಪ ಹೊತ್ತಿಗೆ ನೀರಿಳಿಯುವುದು ನಿಂತು, ಕಣ್ಣುಗಳ ಒಳ್ಳೆಯೂ ಆರಿಹೋಯಿತು.

ಕಡೆಗೆ ಇದೇನಾಗಿ ಹೋಯಿತು? ಸಾಧಾರಣ ದೃಷ್ಟಿ ಶಕ್ತಿ ಬರುವುದರ ಬದಲಾಗಿ, ಮೊದಲಿದ್ದ ದೃಷ್ಟಿ ಪಾಟವ ಕೂಡಾ ಹೊರಟುಹೋಗಿ ಮೂವರೂ ಶುದ್ಧ ಕುರುಡರಾದರು. ಅವರ ಕಣ್ಣು ಗುಡ್ಡೆಗಳೇ ಮಾಯವಾಗಿದ್ದುವು.

ಉದಯನನು ಕೋಪದಿಂದ ಹಲ್ಲು ಕಡಿಯುತ್ತ, "ಏನೋ ಇದು ಮಾಂತ್ರಿಕ ಪಿಶಾಚಿ! ಇದೇನು ಮಾಡಿದೆ! ನಮ್ಮನ್ನು ತಪ್ಪಿಸಿಕೊಂಡು ಬದುಕಬಲ್ಲೆ ಎಂದು ಭಾವಿಸಿದಿಯಾ? ಒಂದೇ ಗುದ್ದಿಗೆ ನೆಲ ಹಿಡಿಯುವಿ!'' ಎಂದು ಗರ್ಜಿಸುತ್ತ ಮುಂದೆ ಹಾರಿ ಮಾಂತ್ರಿಕನ ಗಡ್ಡವನ್ನು ಹಿಡಿದನು

ಆಗ ಆ ಗಡ್ಡದ ಮಾಂತ್ರಿಕ, "ಅವಸರಪಡಬೇಡ ಅಯ್ಯಾ, ನಾನೇನೂ ದ್ರೋಹ ಮಾಡಲಿಲ್ಲ. ಅಂಥಾ



ಬುದ್ಧಿ ನನಗಿದ್ದರೆ ಈ ರಹಸ್ಯಗಳನ್ನೆಲ್ಲ ಹೇಳುತ್ತಿದ್ದೆನೋ? ನೀವು ಮಾಡಬೇಕಾದುದನ್ನು ಒಮ್ಮೆಲೇ ಹೇಳಲಿಲ್ಲ. ಈಗ ನಿಮ್ಮ ಕಣ್ಣಿನ ಗುಡ್ಡೆಗಳೇ ಹೋಗಿವೆಯಲ್ಲವೆ? ನಿನ್ನ ಹತ್ತಿರವಿರುವ ಹಸರು ಅಂಜನವನ್ನು ರೆಪ್ಪೆಗಳ ಮೇಲೆ ಹಚ್ಚಿಕೊಂಡು ನೋಡು'' ಎಂದನು.

ಅದರಂತೆ ಉದಯನನು ಮೊದಲೇ ಗುರುತಿಟ್ಟುಕೊಂಡಿದ್ದ ಹಸುರು ಅಂಜನವನ್ನು ತನ್ನ ರೆಪ್ಪೆಗಳ ಮೇಲೆ ಹಚ್ಚಿಕೊಂಡನು. ಕೂಡಲೇ ಅವನಿಗೆ ಎಂದಿನಂತೆ ದೃಷ್ಟಿ ಬಂದಿತು.

ಆಮೇಲೆ ಆವನು ಅದೇ ಅಂಜನವನ್ನು ತನ್ನ ಸೋದರರ ರೆಪ್ಪೆಗಳಿಗೂ ಹಚ್ಚಿದನು. ಅವರಿಗೂ ಶುದ್ಧವಾದ ದೃಷ್ಟಿ ಶಕ್ತಿ ಬಂದಿತು. ಇಷ್ಟೊಂದು ಮಹೋಪಕಾರ ಮಾಡುವವನ ಮೇಲೆ ತಾನು ದುಡುಕಿ ಕೋಪಿಸಿದೆನೆಂದು ಉದಯನನಿಗೆ ನಾಚಿಕೆಯಾಯಿತು. ರಾತ್ರಿಯ ಹೊತ್ತಿನಲ್ಲಿ ಹೊರತು



ಕಣ್ಣು ಕಾಣಿಸದ ನಿಶೀಥನೂ, ಸಂಧ್ಯಾ ಸಮಯದಲ್ಲಿ ಮಾತ್ರ ನೋಡಬಲ್ಲವನಾದ ಸಂಧ್ಯಾಕುಮಾರನೂ ಈಗ ಎಲ್ಲಾ ವೇಳೆಗಳಲ್ಲಿಯೂ ಚೆನ್ನಾಗಿ ನೋಡ ಬಲ್ಲವರಾದರು. ಅವರಿಗಾದ ಸಂತೋಷಕ್ಕೆ ಮಿತಿ ಮೀರೆ ಇರಲಿಲ್ಲ. ಮಾಂತ್ರಿಕನ ಮೇಲೆ ಅವರ ನಂಬುಗೆಯೂ ಆದರವೂ ಗಟ್ಟಿಯಾಯಿತು.

ಮೂವರು ಸಹೋದರರೂ ಮಾಂತ್ರಿಕನಾದ ಗಡ್ಡದ ಮನುಷ್ಯನಿಗೆ ಕೃತಜ್ಞತೆ ಹೇಳಿ, ತಮ್ಮ ಕುದುರೆಗಳನ್ನು ತರಲು ಹೊರಟರು. ಮೊದಲು ಅವರು ಯಾವ ಮರದ ಬುಡದಲ್ಲಿ ಎರಡು ಕುದುರೆ ಗಳನ್ನು ಕಟ್ಟಿದ್ದರೋ ಅಲ್ಲಿಗೆ ಹೋಗಿ ನೋಡಿದರು. ಉದಯನನು ತನ್ನ ಹತ್ತಿರವಿದ್ದ ಕಪ್ಪು ಭಸ್ಮವನ್ನು ಚೆಲ್ಲಿದ ಕೂಡಲೇ, ಯಥಾಪ್ರಕಾರ ಕುದುರೆಗಳೆರಡೂ ಪ್ರತ್ಯಕ್ಷವಾದುವು. ಅವುಗಳನ್ನು ತೆಗೆದುಕೊಂಡು ಅವರು ಕಪ್ಪು ಕುದುರೆಯನ್ನು ಅಡಗಿಸಿಟ್ಟ ಸ್ಥಳದಿಂದ ಅದನ್ನು ಕೂಡಾ ತೆಗೆದುಕೊಂಡು, ಮಾಂತ್ರಿಕನ ನಾರು ದಾರಗಳಿರುವ ಆ ಮನೆಗೇ ಬಂದರು. ಆಗ ಗಡ್ಡದ ಮಾಂತ್ರಿಕ, "ನಿಮ್ಮ ಎಲ್ಲಾ ಕೋರಿಕೆ ಗಳೂ ನೆರವೇರಿದುವಷ್ಟೆ? ಇನ್ನು ನಿಮ್ಮ ದಾರಿ ಹಿಡಿದು ನೀವು ಹೋಗಬಹುದು. ನನಗೆ ಮಾತು ಕೊಟ್ಟ ಪ್ರಕಾರ ನನ್ನ ಹಾರವನ್ನು ಮಾತ್ರ ಆ ಗುಹೆ ಯಲ್ಲಿಟ್ಟು ಹೋಗಿರಿ. ಮಾತು ತಪ್ಪಲಾರಿರಷ್ಟೆ? ಒಂದುವೇಳೆ ಮಾತು ತಪ್ಪಿದರೆ—" ಎನ್ನುವಷ್ಟರಲ್ಲಿ ನಿಶೀಥನು ಅವನನ್ನು ಮುಂದೆ ಮಾತಾಡಲು ಬಿಡದೆ, "ಅದೆಲ್ಲಾ ಕನಸಿನಲ್ಲಿಯೂ ನೆನೆಸಬೇಡ. ಮಾತೆಂದರೆ ಮಾತೇ. ಒಂದು ವಿಷಯ. ಇಷ್ಟೆಲ್ಲಾ ಪರಿಚಿತನಾದ ನೀನು ಯಾರು? ನಿಜವಾಗಿಯೂ ಮಂತ್ರವೇತ್ತನೆ? ಕಾಡಿನಲ್ಲಿ ಸಿಕ್ಕಿಬೀಳುವ ಪ್ರಯಾಣಿಕರನ್ನು ಏತಕ್ಕೆ ಈ ರೀತಿಯಾಗಿ ನಿರ್ಬಂಧಿ ಸುವೆ? ನಿನ್ನ ಗುರಿಯೇನು?" ಎಂದು ಕೇಳಿದ.

ಅದಕ್ಕೆ ಗಡ್ಡದ ಮಾಂತ್ರಿಕ, "ಕ್ಷಮಿಸಿರಿ. ಆ ಸಂಗತಿ ನಾನು ಹೇಳಕೂಡದು. ಅದೊಂದು ದೊಡ್ಡ ರಹಸ್ಯ. ಅದನ್ನು ಹೇಳಿಬಿಟ್ಟೆನೆಂದರೆ ತಲೆಯೊಡೆದು ಸಾಯುತ್ತೇನೆ. ಕೇಳಲೇಬೇಡಿ. ಒಂದು ಮಾತ್ರ ನಿಶ್ಚಯ, ನನ್ನಿಂದ ನಿಮಗೆ ಎಂದಿಗೂ ಯಾವ ಕೆಡುಕೂ ಆಗುವುದಿಲ್ಲ" ಎಂದನು.

ಮೂವರು ಸೋದರರಿಗೂ ಆತನ ಮೇಲೆ ಸಹಾನುಭೂತಿಯುಂಟಾಯಿತು. ಅವನ ರಹಸ್ಯವನ್ನು ಕೆದಕುವ ಗೊಡವೆಯನ್ನು ಬಿಟ್ಟರು. ಮೂವರೂ ಅವನಿಗೆ ಧನ್ಯವಾದ ಹೇಳಿ ತಮ್ಮ ತಮ್ಮ ಕುದುರೆಗಳ ಮೇಲೆ ಏರಿಕೊಂಡು ಹೊರಟರು.

ಹೋಗುತ್ತಾ ಉದಯನನು ಹಿಂದಿರುಗಿ ಆ ಗಡ್ಡದ ಮಾಂತ್ರಿಕನನ್ನು ನೋಡಿ, "ಏನಯ್ಯಾ ಇನ್ನೊಂದು ಕೋರಿಕೆ ಸ್ಪಷ್ಟಪಡಿಸಿಬಿಡುತ್ತೇವೆ. ಆಮೇಲೆ ದೂರಬೇಡ. ನಿನ್ನ ಹಾರ ಮಾತ್ರ ನಿನಗೆ ಬಿಟ್ಟು ಹೋಗುತ್ತೇವೆಯೇ ಹೊರತು, ಆ ಅಂಜನ, ಭಸ್ಮ, ಕರವಸ್ತ್ರಗಳನ್ನು ನಾವು

ಇಟ್ಟುಕೊಳ್ಳುತ್ತೇವೆ. ಅದಕ್ಕೆ ನಿನ್ನದೇನೂ ಕೋಪವೂ ಆಕ್ಷೇಪಣೆಯಿಲ್ಲವಷ್ಟೆ ?'' ಎಂದನು.


''ಆಕ್ಷೇಪಣೆ ಮಾಡಿದರೂ ನೀವು ಕೊಡಲಾರಿರಿ ! ರವಾಗಿಲ್ಲ; ತೆಗೆದುಕೊಳ್ಳಿರಿ'' ಎಂದ ಆ ಮಾಂತ್ರಿಕ. ಬಹಳ ಸಂತೋಷದಿಂದ ಮೂವರು ಸೋದರರೂ ಪ್ರಯಾಣ ಮುಂದುವರಿಸಿದರು. ಬಿಳೀ ಕುದುರೆಯ ಮೇಲೆ ಉದಯನ ಕಪ್ಪು ಕುದುರೆಯ ಮೇಲೆ ನಿಶೀಥ, ಕೆಂಪು ಕುದುರೆಯ ಮೇಲೆ ಸಂಧ್ಯಾಕುಮಾರ, ಈಗ ಹೆಚ್ಚಿನ ಉತ್ಸಾಹದಿಂದ ಶೋಭಿಸುತ್ತಿದ್ದರು.

ಹೇಳಿದಂತೆ ಪಶ್ಚಿಮದಿಕ್ಕನ್ನು ಹಿಡಿದೇ ಸಾಗಿದರು. ಬಂಡೆಯ ಗುಹೆಯೂ ಬಂದಿತು. ಮಾತು ಕೊಟ್ಟ ಪ್ರಕಾರ ಉದಯನನು ತನ್ನ ಕೊರಳಿನಲ್ಲಿದ್ದ ಹಾರವನ್ನು ತೆಗೆದು ಆ ಗುಹೆಯಲ್ಲಿಟ್ಟನು.

ಹಾರವನ್ನು ಕೊರಳಿನಿಂದ ಎತ್ತಿದ ಕೂಡಲೇ, ಅವನ ಗಿಡ್ಡ ರೂಪವೂ ಅಪ್ಪುದ್ದದ ಗಡ್ಡವೂ ಮಾಯವಾಗಿ ಹೋಗಿ, ಮಾಮೂಲು ರೂಪಾಕಾರದವನಾದನು. ಆಮೇಲೆ ಅವರು ಮೂವರೂ ತಮ್ಮ ತಮ್ಮ ಕುದುರೆಗಳನ್ನು ಉತ್ಸಾಹದಿಂದ ತಟ್ಟಿ, ಮುಂದು ಸಾಗಿಸಿಕೊಂಡು ವೇಗವಾಗಿ ಹೊರಟು ಹೋದರು.

ಸ್ವಲ್ಪ ದೂರ ಸಾಗಿದ ಮೇಲೆ, ದಟ್ಟವಾದೊಂದು ಕಾಡಿನೊಳಗೆ ನುಗ್ಗಿ ಮುಂದೆ ಹೋಗಬೇಕಾಯಿತು. ಆಗತಾನೇ ಸೂರ್ಯಾಸ್ತವಾಗಿ, ಕತ್ತಲೆ ಬೇರೆ ಕವಿಯ ತೊಡಗಿತ್ತು. ರಾತ್ರಿಯ ವೇಳೆಯಲ್ಲಿ ಆ ಕಾಡಿನೊಳಗೆ ಎಲ್ಲಿ ವಿಶ್ರಾಂತಿ ಪಡೆಯಲು ಸಾಧ್ಯ? ಏನು ಮಾಡುವು ದೆಂದು ಅವರು ಆಲೋಚಿಸುತ್ತಿರುವಾಗ, ಮೂರು ಸಿಂಹಗಳು ಅವರ ಕಡೆಗೆ ಗರ್ಜಿಸಿಕೊಂಡು ಬರತೊಡಗಿದುವು. ಅವುಗಳನ್ನು ನೋಡಿ ನಿಶೀಥನೂ, ಸಂಧ್ಯಾಕುಮಾರನೂ ಏನಾದರೂ ಮಾಡಬೇಕೆಂದು ತಮ್ಮ ತಮ್ಮ ಕತ್ತಿಗಳಿಗೆ ಕೈಹಾಕಿದರು.

ಅಷ್ಟರಲ್ಲಿ ಯುಕ್ತಿಶಾಲಿಯಾದ ಉದಯನನು, ತನ್ನ ಹತ್ತಿರವಿರುವ ಬಿಳಿಯ ಭಸ್ಮದ ಕರಡಿಗೆಯನ್ನು ತೆಗೆದು, ಅದರಲ್ಲಿದ್ದ ಪುಡಿಯನ್ನು ನಿಶೀಥ, ಸಂಧ್ಯಾ, ಮತ್ತು ಕುದುರೆಗಳ ಮೇಲೆ, ಕಡೆಗೆ ತನ್ನ ಮೇಲೆ ಕೂಡಾ ಚೆಲ್ಲಿದನು. ಮರುಕ್ಷಣದಲ್ಲಿ ಅವರಿದ್ದ ಜಾಗ



ದಲ್ಲಿ ಏನೂ ಇರಲಿಲ್ಲ. ಯಾವ ಸದ್ದೂ ಕೇಳಿಸಲಿಲ್ಲ. ಅವರು ಕುದುರೆಗಳೊಂದಿಗೆ ಮಾಯವಾಗುವುದಕ್ಕೂ, ಮೂರು ಸಿಂಹಗಳೂ ಅಲ್ಲಿಗೆ ಬರುವುದಕ್ಕೂ ಸರಿಹೋಯಿತು. ಭಾರಿ ಔತಣ ದೊರೆಯಿತೆಂಬ ಆನಂದದಿಂದ ಓಡಿಬಂದ ಆ ಸಿಂಹಗಳಿಗೆ ದೊಡ್ಡ ನಿರಾಶೆಯಾಗಿ ಹೋಯಿತು. ಚಕ್ರದ ಸುಳಿಯಲ್ಲಿ ಸಿಕ್ಕಿದ ಪ್ರಾಣಿಗಳ ಹಾಗೆ ಸ್ವಲ್ಪ ಹೊತ್ತು ಅಲ್ಲಿಯೇ ಸುತ್ತಾಡಿ ಮತ್ತೆತ್ತಲೋ ಹೋದುವು ಪಾಪ.

ಸಿಂಹಗಳು ಹೊರಟು ಹೋದ ಸಂಗತಿ ತಿಳಿದರೂ, ನಿಜ ರೂಪಧಾರಿಗಳಾಗಲು ಮೂವರು ಸಹೋದರರಿಗೂ ಸ್ವಲ್ಪ ವೇಳೆ ಹಿಡಿಯಿತು. ತಾವು ಆ ಗಾಢಾರಣ್ಯದೊಳಗೆ ನಿಜ ರೂಪದಿಂದ ಹೊಕ್ಕು ಪ್ರಯಾಣ ಮಾಡುವುದಕ್ಕೆ ರಾತ್ರಿಯ ವೇಳೆ ಒಳಿತಲ್ಲವೆಂದುಕೊಂಡು ಮೂವರೂ ಮಾಯಾ ರೂಪದಿಂದ ಅಲ್ಲೇ ಅಂತರದಲ್ಲಿ ವಿಹರಿಸಿಕೊಂಡಿದ್ದರು.


ಬೆಳಗಾಯಿತು. ಉದಯನನು ತನ್ನ ಹತ್ತಿರವಿದ್ದ ಕಪ್ಪು ಭಸ್ಮವನ್ನು ತನ್ನ ಮೇಲೂ, ಸೋದರರ ಮೇಲೂ, ಕುದುರೆಗಳ ಮೇಲೂ ಚೆಲ್ಲಿದನು. ಕೂಡಲೇ ಮೂವರೂ ನಿಜ ರೂಪದಿಂದ ತಮ್ಮ ತಮ್ಮ ಕುದುರೆಗಳ ಮೇಲೆ ಪ್ರತ್ಯಕ್ಷರಾದರು.

ಅಲ್ಲಿಂದ ಅವರ ಪ್ರಯಾಣ ವಾಯುವೇಗದಿಂದಲೇ ಸಾಗಿತೆನ್ನಬೇಕು. ಗಡ್ಡದ ಮಾಂತ್ರಿಕನ ಮೂಲದಿಂದ ಮೂವರಿಗೂ ಸರಿಯಾದ ದೃಷ್ಟಿ ಶಕ್ತಿ ಬಂದಿತ್ತು ಆದುದರಿಂದ ಯಾರು ಮುಂದು ಯಾರು ಹಿಂ
ಎಂಬ ಪ್ರಶ್ನೆಗೆ ಅವಕಾಶವಿರಲಿಲ್ಲ.

ಹೀಗೆ ಅವರು ಆ ಕಾಡನ್ನು ದಾಟಿ ಮುಂದ
ವರಿಯುತ್ತಿರಲು, ಸ್ವಲ್ಪ ದೂರದಲ್ಲಿ ನಿರ್ಮಾನುಷ
ದಂತೆ ಕಾಣುವ ಪ್ರದೇಶದಲ್ಲಿ ದೊಡ್ಡದೊಂದ
ಭವನವಿರುವುದನ್ನು ನೋಡಿದರು.

"ಭವನವಿದೆಯೆಂದ ಮೇಲೆ ನಿರ್ಮಾನುಷ್ಯವೇನ
ವಂತಿಲ್ಲ. ಈಗ ನಾವು ಮೂವರಲ್ಲಿ ಯಾರು ಮೊದಲ
ಆ ಭವನವನ್ನು ಮುಟ್ಟುವೆವೋ ನೋಡೋಣ"
ಎಂದು ಪಂಥ ಕಟ್ಟಿಕೊಂಡು. ಮೂವರೂ ತಮ
ಕುದುರೆಗಳನ್ನು ಜೋರಾಗಿ ಹುರುಡಿಸಿದರು. ನೋ
ನೋಡುತ್ತಿರಲು ಇಬ್ಬರನ್ನು ಮೀರಿಸಿ ಉದಯನ
ಕುದುರೆ ಮುಂದೆ ಓಡತೊಡಗಿತು. ಅವನ ಓ
ಸಂಧ್ಯಾಕುಮಾರ ಮತ್ತು ಸಿಲೀಥರು ಸಮಾನ ವೇ
ದಲ್ಲಿದ್ದರು. ಅಷ್ಟರಲ್ಲಿ ಅದೇನಾಯಿತು ? ಮುಂ
ಹೋಗುತ್ತಿದ್ದ ಉದಯನನು ರೆಪ್ಪೆ ಮುಚ್ಚಿ ತೆರೆಯ
ವುದರೊಳಗೆ ಮಾಯವಾಗಿದ್ದ. ಏನಿದು ? ಹೇಗಾದ
ಗೋಡೆಯೋ ಗುಡ್ಡೆಯೋ ಬಾಗಿಲೋ ಗುಹೆಯ
ಏನೂ ಇಲ್ಲದ ಪ್ರದೇಶದಲ್ಲಿ, ಕಾಣುತ್ತಿದ್ದವ
ಕಾಣದೇ ಹೋಗುವುದೆಂದರೇನು ?

(ಇನ್ನೂ ಇ





ಅವಳಿ ಮಕ್ಕಳ ಕಥೆ

March 1975

೮

[ಅವಳಿಜವಳಿ ರಾಜಕುಮಾರಿಯರನ್ನು ಹುಡುಕಲು ಹೊರಟ ಅವಳಿಜವಳಿ ಸೋದರರು ಅಡವಿಯಲ್ಲಿ ಒಬ್ಬ ಗಡ್ಡದವನ ಕೈಗೆ ಸಿಕ್ಕಿ, ಅವನನ್ನು ಸೋಲಿಸಿ, ಅವನಿಂದ ಅದ್ಭುತ ಶಕ್ತಿಯ ಮಂತ್ರ ಭಸ್ಮಗಳನ್ನೂ ಅಂಜನಗಳನ್ನೂ ವಶಪಡಿಸಿಕೊಂಡರು. ಅಲ್ಲಿಂದ ಮೂವರೂ ಮತ್ತೆಲ್ಲಿಗೋ ಹೋಗುತ್ತಿರಲು, ಮುಂದೆ ಹೋಗುತ್ತಿದ್ದ ಉದಯನ ಹಠಾತ್ತನೆ ಮಾಯವಾಗಿ ಹೋದ.]

ಉದಯನನು ಮಾಯವಾಗಿ ಹೋದುದರಿಂ ಉಂಟಾದ ಆಘಾತದಿಂದ ತಮ್ಮನ್ನು ಸಮಾಳಿಸಿಕೊಂಡು ಸಂಧ್ಯಾ ನಿಶೀಥರು, ತಮ್ಮ ಕುದುರೆಗಳ ವೇಗವನ್ನು ಬಹಳ ಮಟ್ಟಿಗೆ ತಗ್ಗಿಸಿಕೊಂಡು ನಾಲ್ಕು ಸುತ್ತಲೂ ನೋಡುತ್ತ ಮುಂದೆ ಮುಂದೆ ಸಾಗಿದರು. '[illegible] ನಾನಿಲ್ಲಿದ್ದೇನೆ' ಎಂದು ಉದಯನನ ಕಂಠ ಧ್ವನಿ ಕೇಳಿಸಲಾರದೆ ಎಂದು ಅವರ ಕಿವಿಗಳು ಹಾರೈಸಿಕೊಂಡಿದ್ದುವು. ಅವರು ಮುಂದೆ ಕಾಣುವ ಮಹಾ [illegible] ಸಮೀಪಕ್ಕೆ ಹೋಗಿ ಏನೋ ಹೆದರಿ ಗಕ್ಕನೆ ನಿಂತುಬಿಟ್ಟರು.

ಏಕೆಂದರೆ ಅವರ ಮುಂದೆ ಬಾಯಿಬಿಟ್ಟ ನೆಲದಂತೆ ಭಾರಿ ಕಂದಕವು ಕಾಣಿಸಿತು. ಆ ಪಾತಾಳ ಕಂದಕವು ಭವನದ ಸುತ್ತಲೂ ಬಳಸಿಕೊಂಡಿದ್ದಿತು. ತಮ್ಮ ಸಹೋದರ ಉದಯನನು ಕುದುರೆಯೊಂದಿಗೆ ಅದರೊಳಗೆ ಬಿದ್ದಿರಬೇಕೆಂದು ಅವರಿಗೆ ತೋರಿತು. ಅವರು ಕಂದಕದ ಬದಿಯಲ್ಲಿ ಬಾಗಿ ಕಿವಿಗೊಟ್ಟು, ಕಣ್ಣಿಟ್ಟು, ಪರೀಕ್ಷಿಸಿದರೂ ಉದಯನನು ಕಂದಕದೊಳಗೆಬಿದ್ದ ಜಾಡು ತಿಳಿಯಲಿಲ್ಲ: ನೆಲದಲ್ಲಿ ಕೂಡಾ ಜಾರಿ ಬಿದ್ದುದರ ಯಾವ ಗುರುತೂ ಕಾಣಿಸಲಿಲ್ಲ. ಯೋಚನೆ ಹರಿದಾಗ ಆಗ ಅವರಿಗೆ ಉದಯನನ ಕೈಯಲ್ಲಿರುವ



ಮಾಯಾಭಸ್ಮದ ನೆನಪಾಯಿತು. ಆದರಿಂದ ಅವನು ಕಂದಕದಲ್ಲಿ ಬೀಳದೆ ಮಾಯಾ ರೂಪದಲ್ಲಿ ಆ ಭವನದೊಳಗೇ ಹೋಗಿರಬೇಕೆಂದು ತೋರಿತು. ಇದರಿಂದ ಅವರಿಗೆ ಧೈರ್ಯ ಬಂದಿತು.

ಇನ್ನು ಹೇಗಾದರೂ ಮಾಡಿ ಆ ಕಂದಕವನ್ನು ದಾಟಿ ಭವನದೊಳಗೆ ಪ್ರವೇಶಿಸ ಬೇಕಾಗಿತ್ತು. ಬಹಳ ಅಗಲವಾದ ಕಂದಕವದು. ಎಲ್ಲಿಯಾದರೂ ಅಗಲ ಕಡಮೆಯಾಗಿರುವುದೇನೋ ಎಂದು ನೋಡಲು ಅವರಿಬ್ಬರೂ ಕಂದಕದ ಬದಿಯಲ್ಲಿಯೇ ನೋಡುತ್ತಾ ಸುತ್ತ ತೊಡಗಿದರು.

ಬ್ರಹ್ಮಾಂಡವನ್ನು ಪ್ರದಕ್ಷಿಣೆ ಮಾಡಿದಂತೆ ಸುತ್ತುತ್ತಾ ಹೊರಟಿದ್ದ ಸ್ಥಳಕ್ಕೇ ಬಂದು ಮುಟ್ಟಿದರು. ಆಗ ಅವರಿಗೆ ತಮ್ಮ ಮೂಢತನದ ಅರಿವಾಯಿತು. ಭವನದೊಳಗೆ ಯಾರೂ ಪ್ರವೇಶಿಸದಿರಲಿಕ್ಕಾಗಿಯೇ ಆ ಕಂದಕವನ್ನು ತೋಡಲಾಗಿದೆಯೆಂಬುದನ್ನು ಮೊದಲೇ ತಿಳಿದುಕೊಳ್ಳಲಾರದೆ ಹೋದುದಕ್ಕೆ ನಾಚಿಕೊಂಡರು. ಹೀಗಾದರೆ ಇನ್ನು ಆ ಭವ ದೊಳಗೆ ಪ್ರವೇಶಿಸುವುದು ಹೇಗೆ? ಅದರ ರಹ ತಿಳಿಯದೆ ಸುಮ್ಮನಿರುವುದಾದರೂ ಹೇಗೆ?

ಸ್ವಲ್ಪ ಹೊತ್ತು ತೀವ್ರವಾಗಿ ಆಲೋಚಿಸಿ ಮೇಲೆ ಸಂಧ್ಯಾನು ನಿಶೀಥನನ್ನು ನೋಡಿ, "ಹೀ ಹೊತ್ತು ಕಳೆದರಾಗಲಿಲ್ಲ. ಹೇಗಾದರೂ ಕಂದಕವನ ದಾಟಿಯೇ ತೀರಬೇಕು. ಸಾಹಸಮಾಡೋಣ. ನಮ ಕುದುರೆಗಳಿಗೆ ಇದೊಂದು ಪರೀಕ್ಷೆಯಾಗಲಿ. ಕುದು ಗಳನ್ನು ವೇಗವಾಗಿ ಓಡಿಸಿಕೊಂಡು ಬಂದು ಒಮ್ಮೆ ಹಾರಿಸಿಬಿಡೋಣ. ಆಚೆಯ ದಡ ಸೇರಿದರೆ ನಮ ಅದೃಷ್ಟ. ಕಂದಕದಲ್ಲೇ ಬಿದ್ದರೆ ಕುದುರೆಗಳೇ ಸತ್ತಾ ನಾವು ಸಾಯಲಾರೆವು. ನಮ್ಮ ಆಯುರ್ದಾಯ ಗಟ್ಟಿಯಾಗಿದೆಯೆಂದು ಜ್ಯೋತಿಷ್ಕರು ಹೇಳಿದ್ದ ರಷ್ಟೆ?" ಎಂದು ಉತ್ಸಾಹ ಪಡಿಸಿದ.

ಈ ಯೋಚನೆಗೆ ನಿಶೀಥನೂ ಸಂತೋಷದಿ ಒಪ್ಪಿದ. ಇಬ್ಬರೂ ತಮ್ಮ ತಮ್ಮ ಕುದುರೆಗಳ ಬೆ ತಟ್ಟಿ ಅದರ ಮೇಲೇರಿ ಸ್ವಲ್ಪ ದೂರ ಹಿಂದ ಹೋಗಿ, ಶರವೇಗದಿಂದ ಓಡಿಸಿಕೊಂಡು ಬಂ ಒಮ್ಮೆಗೇ ಕುದುರೆಗಳನ್ನು ಹಾರಿಸಿ ಕಂದಕವನ ದಾಟಿಬಿಟ್ಟರು.

ಅವರಿಬ್ಬರ ಕುದುರೆಗಳಿಗೆ ಕೂಡಾ ಯಾ ಅಪಾಯವೂ ಆಗದೆ ಇಬ್ಬರೂ, ಆಚೆಯ ಬದಿಯ ಸೇರಿದರು. "ಅಬ್ಬ! ದೇವರ ದಯೆ! ಇಂತ ಕಂದಕವನ್ನು ನಾವು ದಾಟಿದುದೊಂದು ಶ ಸೂಚನೆಯೇ ಸರಿ. ಇನ್ನು ಮೇಲೆ ನಮಗೆ ಜಯವೇ ಎಂದು ನಂಬಬಹುದು" ಎಂ ಸಂತೋಷದಿಂದ ಹೇಳಿಕೊಂಡರು. ಇಬ್ಬರೂ ಭವ ಭವ್ಯಾಕಾರವನ್ನು ನೋಡುತ್ತ ಸಾವಧಾನದಿ ಒಳಗೆ ಪ್ರವೇಶ ಮಾಡಿದರು.

ಅವರನ್ನು ಮಾತಾಡಿಸುವವರಾರೂ ಅಲ್ಲಿ ಕಾಣಲಿಲ್ಲ. ಆ ಭವನದೊಳಗೆ ಮನುಷ್ಯ ಸಂಚ

ಇರುವಂತೆ ತೋರಲೇ ಇಲ್ಲ. ಲೆಕ್ಕವಿಲ್ಲದಷ್ಟು ದ್ವಾರಗಳಿದ್ದುವಾದರೂ ಒಂದಕ್ಕೂ ಬಾಗಿಲುಗಳಿರಲಿಲ್ಲ. ಒಂದೊಂದೇ ದ್ವಾರವನ್ನು ದಾಟುತ್ತ ಹೋಗುತ್ತಿದ್ದಾಗ, ಪ್ರತಿದ್ವಾರದ ಎರಡು ಬದಿಗಳಲ್ಲಿಯೂ ಮಾನವರ ಶಿಲಾ ಪ್ರತಿಮೆಗಳಿರುವುದನ್ನು ನೋಡಿದರು. ಕಟ್ಟಕಡೆಗೆ ಅವರು ಬ್ರಹ್ಮಾಂಡದಂತಹ ಒಂದು ದ್ವಾರವನ್ನು ನೋಡಿದರು.

ಅದು ನಿಜಕ್ಕೂ ದ್ವಾರವೇ ಅಲ್ಲ. ತಾಳೇ ಮರದಷ್ಟು ಎತ್ತರವಾದ ಒಬ್ಬ ರಾಕ್ಷಸನ ಕಾಲುಗಳು ಹಾಗೆ ನಿಂತಿದ್ದುವು. ನಿಂತಲ್ಲೇ ನಿದ್ದೆ ಮಾಡುತ್ತಿದ್ದ ಆ ರಾಕ್ಷಸ. ಕಾಲುಗಳ ನಡುವಿನ ಖಾಲೀ ಸ್ಥಳವು ದ್ವಾರದಂತೆ ಕಾಣಿಸುತ್ತಿತ್ತು. ಈ ರಾಕ್ಷಸನ ಎರಡು ಬದಿಗಳಲ್ಲಿ ಎರಡು ದೊಡ್ಡ ದೊಡ್ಡ ಸಿಂಹ ವಿಗ್ರಹಗಳಿದ್ದುವು. ಅವು ಮೇಲೆ ಹಾರಲು ಸಿದ್ಧವಾಗಿರುವಂತೆ, ಜೀವಕಳೆಯಿಂದ ಭಯಪಡಿಸುತ್ತಿದ್ದುವು. ಅಂತೆಯೇ ಅವುಗಳನ್ನು ನೋಡಿದ ಕೂಡಲೇ "ಓ !! ಸಿಂಹಗಳು !" ಎಂದು ಗಟ್ಟಿಯಾಗಿ ಇಬ್ಬರೂ ಚೀರಿ ಒಬ್ಬರನ್ನೊಬ್ಬರು ಹಿಡಿದುಕೊಂಡರು. ಅವರ ಕೂಗು ಕೇಳಿ ನಿಂತಲ್ಲೇ ತೂಕಡಿಸುತ್ತಿದ್ದ ರಾಕ್ಷಸನಿಗೆ ಎಚ್ಚರವಾಯಿತು. ಅವನು ಒಮ್ಮೆಗೇ ಕುಳಿತು ಸಂಧ್ಯಾ ನಿಶೀಥರನ್ನು ತನ್ನೆರಡು ಕೈಗಳಿಂದೆತ್ತಿ ಮುಷ್ಟಿಯೊಳಗೆ ಹಿಡಿದು, ಹರವಾದ ತನ್ನ ಮುಖದಬಳಿಗೆ ತಂದು, ಒಣಗಿದ ತಾಳೇ ಗರಿಗಳು ಹೊಡೆದುಕೊಳ್ಳುವಂತಹ ಅಬ್ಬರಿಸುವ ಕಂಠದಿಂದ, "ಭೇಷ್ ! ಭೇಷ್! ಇನ್ನೆರಡು ನರವಿಗ್ರಹಗಳು !" ಎಂದ. ಈ ಮಾತು ಕೇಳಿದ ಕೂಡಲೇ ಭವನದಲ್ಲಿ ತಾವು ನೋಡುತ್ತಾ ಬಂದ ಮನುಷ್ಯ ವಿಗ್ರಹಗಳೆಲ್ಲ ಏನೋ ಮಾಯೆಯಿಂದ ತಯಾರಾದ ನಿಜಮಾನವರೇ ಎಂದು ಅವರು ಊಹಿಸಿಕೊಂಡರು.

ಆಕಸ್ಮಿಕವಾಗಿ ಬಲಿಷ್ಠನಾದ ರಾಕ್ಷಸನ ಕೈಯೊಳಗೆ ಸಿಕ್ಕಿಬಿದ್ದುದನ್ನು ನೋಡಿ ಇಬ್ಬರೂ ತುಂಬ ಚಡಪಡಿಸಿದರು. ಇನ್ನು ತಪ್ಪಿಸಿಕೊಳ್ಳುವ ಬಗೆ ಹೇಗೆ?

ಇಂತಹ ಗಂಡಾಂತರಗಳು ಬರಬಹುದೆಂದು ಅವರಿಗೆ ಗೊತ್ತೇ ಇತ್ತು. ಬಂದ ಆಪತ್ತುಗಳನ್ನು





ಬುದ್ಧಿಬಲದಿಂದ ತಪ್ಪಿಸಿಕೊಳ್ಳುವುದರಲ್ಲೇ ಇದು ಜೀವಿತದ ಸಾರ್ಥಕತೆ. ಹೆದರಿದರೆ ಯಾವ ಉಪಾಯವೂ ತೋರದು.

ಅಂತೆಯೇ ನಿಶೀಥನು ತನ್ನ ಸಹೋದರನಿಗೆ ಧೈರ್ಯವನ್ನು ಸೂಚಿಸಿ, ತಾನು ರಾಕ್ಷಸನೊಂದಿಗೆ ಮಾತಾಡಲು ಸಿದ್ಧನಾದನು. ಅವನಿಗೆ ಒಮ್ಮೆಲೇ ಗಡ್ಡದ ಮಾಂತ್ರಿಕನ ನೆನಪಾಯಿತು. ನಿರಾಶೆಯಲ್ಲಿ ಆಶೆಯಂತೆ, ಆ ಮಾಂತ್ರಿಕ ಗಡ್ಡದವನ ಸಮಾಚಾರ ಹೇಳಿದರೆ ಈ ರಾಕ್ಷಸ ಏನು ಮಾಡುವನೋ ನೋಡೋಣವೆಂದು ಅವನಿಗೆ ತೋರಿತು.

ನಿಶೀಥನು ರಾಕ್ಷಸನ ಅಂಗೈಯ ಮೇಲೆ ನಿಂತುಕೊಂಡು, "ಓಹೋಯ್ ಭೂತಾಕಾರದ ಮಹಾಮಹಿಮ ! ನಮ್ಮನ್ನು ಯಾರೆಂದು ಆಲೋಚನೆ ಮಾಡಿದೆಯೋ ? ನಾವು ಇಲ್ಲಿಗೆ ಕಳ್ಳತನ ಮಾಡಲಿಕ್ಕಾಗಿಬಂದವರಲ್ಲ. ಮಾರುದ್ದ ಗಡ್ಡದ ಗೇಣುದ್ದದ ಮಹಾನುಭಾವ ನಮ್ಮನ್ನು ಒಂದು ಕೆಲಸಕ್ಕೆ ಕಳುಹಿಸಿದ್ದಾನೆ. ಅದಕ್ಕೇ ಎಲ್ಲೆಲ್ಲೋ ಹುಡುಕುತ್ತಾ ಇಲ್ಲಿಗೆ ಬಂದೆವು..." ಎಂದು ಇನ್ನೇನೋ ಹೇಳಲಿಕ್ಕಿದ್ದನು.

ಅಷ್ಟರಲ್ಲಿ ರಾಕ್ಷಸನು ಆತುರದಿಂದ ಬಾಯಿ ತೆರೆದು "ಆಂ ? ಆ ನರಮನುಷ್ಯ ಇನ್ನೂ ಬದುಕಿಯೇ ಇದ್ದಾನೆಯೋ ? ಆತ ಇಷ್ಟುದಿನ ಹಿಂದಿರುಗದೆ ಇದ್ದುದರಿಂದ ಎಲ್ಲಿ ಸತ್ತನೋ ಎಂದು ಕೊಂಡಿದ್ದೆ. ಯಾವ ಅಪಾಯಕ್ಕೂ ಬೀಳದೆ ಬದುಕಿಯೇ ಇದ್ದಾನೆಯೋ ? ಏನು ಕೆಲಸಕ್ಕಾಗಿ ನಿಮ್ಮನ್ನು ಕಳುಹಿಸಿದ್ದಾನೆ ? ಬೇಗ ಹೇಳಿ" ಎಂದು ಅವಸರ ಪಡಿಸಿದ.

ನಿಶೀಥನು ರಾಕ್ಷಸನೊಂದಿಗೆ, "ಕೇಳು ಮತ್ತೆ, ಅವನ ಪ್ರಾಣಕ್ಕೆ ಯಾವ ಹಾನಿಯೂ ಉಂಟಾಗಲಿಲ್ಲ. ಆದರೆ ಅವನ ರಹಸ್ಯವನ್ನೆಲ್ಲ ಯಾರೋ ಕಂಡುಹಿಡಿದು ಬಿಟ್ಟರಂತೆ. ಅಷ್ಟಕ್ಕೆ ಬಿಡದೆ ಅವನ ಹತ್ತಿರ ಇದ್ದ ಮಹತ್ವದ ಭಸ್ಮ ಅಂಜನ ಕರವಸ್ತ್ರಗಳನ್ನೆಲ್ಲ ಕದ್ದುಕೊಂಡು ಹೋಗಿಬಿಟ್ಟರಂತೆ. ಅವುಗಳು ಇಲ್ಲದುದರಿಂದ ಒಂದಡಿ ತೆಗೆದಿಡಲೂ ಅವನಿಗೆ ಸಾಧ್ಯವಾಗುವುದಿಲ್ಲವಂತೆ. ಈ ಸಮಾಚಾರವನ್ನು ನಿಮಗೆ ಹೇಳಿ ಮತ್ತೆ ಕೆಲವು ಅಂಜನ ಕರಡಿಗೆಗಳನ್ನೂ ಭಸ್ಮದ ಡಬ್ಬಿಗಳನ್ನೂ ಹೊಟ್ಟೆ ತುಂಬಿಸುವ ಕರವಸ್ತ್ರವನ್ನೂ ಕಳುಹಿಸಲು ಹೇಳುವಂತೆ ಹೇಳಿದ್ದಾನೆ. ಅವುಗಳು ನಿಮ್ಮ ಹತ್ತಿರ ಇದೆಯೋ ಇಲ್ಲವೋ, ಕೊಡುವರೋ ಬಿಡುವರೋ ಎಂದು ಅನುಮಾನದಿಂದ ಹೆದರಿಕೊಂಡಿದ್ದಾನೆ ಪಾಪ" ಎಂದು ನಂಬುವ ಹಾಗೆ ಬುರುಡೆಬಿಟ್ಟು ಹೇಳಿದ.

ರಾಕ್ಷಸನು ಸಮಾಧಾನದ ಸ್ವರದಿಂದ "ಹಾಗೇನು! ಅದಕ್ಕಾಗಿ ಹೆದರಿಕೊಂಡಿದ್ದಾನೆಯೆ ? ಪಾಪ, ಆ ಕಳ್ಳರು ಯಾರೋ ? ಅವನ ದಂಡವನ್ನು ಕದ್ದುಕೊಳ್ಳದೆ ಬಿಟ್ಟಿದ್ದಾರಷ್ಟೆ ? ಅವನ ಪುಣ್ಯ ! ಆ ದಂಡ ಕೂಡಾ ಕೈ ತಪ್ಪಿರುತ್ತಿದ್ದರೆ ಅವನನ್ನು ಉಳಿಸಲು ಯಾರಿಗೂ ಸಾಧ್ಯವಿಲ್ಲ. ಹುಂ, ಇನ್ನು ನಾನೇ ಹೋಗಿ ಬರಬೇಕಾಗಿದೆ. ಅವನು ಕೇಳಿದುದನ್ನು



ಹಾಗೆಲ್ಲ ನಿಮ್ಮ ಹತ್ತಿರಕೊಟ್ಟು ಕಳುಹಿಸಿಬಿಡಲು ಸಾಧ್ಯವಿಲ್ಲ. ನಾನು ಬರುವವರೆಗೆ ಇಲ್ಲೇಕಾದಿರಿ. ಒಂದು ಹುಳವನ್ನು ಕೂಡಾ ಒಳಕ್ಕೆ ಬಿಡಬೇಡಿ. ಜಾಗ್ರತೆ!" ಎಂದು ಹೇಳಿ ಇಬ್ಬರನ್ನೂ ಕೆಳಗಿಳಿಸಿ ರಾಕ್ಷಸನು ದೊಡ್ಡ ದೊಡ್ಡ ಹಜ್ಜೆಯಿಡುತ್ತಾ ದೂರ ದೂರ ಹೊರಟುಹೋದನು.

ನಾಲ್ಕು ಹಜ್ಜೆಗಳಲ್ಲೇ ಅಷ್ಟು ದೂರ ಹೋದ ರಾಕ್ಷಸನು ಕಣ್ಮರೆಯಾಗಿಬಿಟ್ಟ. ಸಂಧ್ಯಾ ನಿಶೀಥರು ಸಂತೋಷದಿಂದ ಹಾರಿ ಕುಣಿದರು. ಅಷ್ಟು ದೊಡ್ಡ ತಲೆಯ ರಾಕ್ಷಸನನ್ನು ಮೋಸ ಪಡಿಸಿದೆವೆಂದು ಅವರಿಗೆ ಹೆಮ್ಮೆಯೂ ಬಂದಿತು. "ನಾವೀಗ ತಡ ಮಾಡಬಾರದು. ಅವನು ಬೇಗನೆ ಹಿಂದಿರುಗಿಬರಲೂ ಬಹುದು. ಅವನು ಬರುವುದರೊಳಗೆ ಈ ಮಹಾ ಭವನದ ರಹಸ್ಯಗಳನ್ನೆಲ್ಲ ತಿಳಿದುಬಿಡಬೇಕು, ನಡೆ" ಎಂದು ನಿಶೀಥ ಕೂಡಲೇ ಹೊರಡಲು, ಸಂಧ್ಯಾನೂ ಅವನನ್ನನುಸರಿಸಿದ.


ಅಣ್ಣ ತಮ್ಮಂದಿರು ಮುಂದೆ ಸಾಗುತ್ತ ಮತ್ತೆ ಕೆಲವು ದ್ವಾರಗಳನ್ನು ದಾಟಿದರು. ಕೊನೆಯ ದ್ವಾರವನ್ನು ದಾಟಿದ ಕೂಡಲೇ ಅವರಿಗೊಂದು ದೊಡ್ಡ ಕೊಳವು ಕಾಣಿಸಿತು.

ಅದರಲ್ಲಿ ಸುಂದರವಾದ ಹಂಸಗಳು ತೇಲಾಡಿಕೊಂಡಿದ್ದುವು. ಅದರ ನಿರ್ಮಲವಾದ ನೀರನ್ನು ನೋಡಿದ ಕೂಡಲೇ ಸಹೋದರರಿಗೆ ತಮ್ಮ ದಾಹದ ನೆನಪಾಯಿತು. ಮೊದಲು ಸಂಧ್ಯಾನು ಆತುರದಿಂದ ಕೊಳಕ್ಕಿಳಿದು ಒಂದು ಬೊಗಸೆ ನೀರು ತೆಗೆದು ಕುಡಿದ. ಆ ಕೂಡಲೇ ತನಗೇನೋ ಆಗುವಂತೆ ತೋರಿ ಹೆದರುತ್ತ ತಟಕ್ಕನೆ ಮೇಲಕ್ಕೆ ಹಾರಿ ಒಂದು ಶಿಲೆಯಾಗಿ ನಿಂತುಬಿಟ್ಟ.

"ಅಯ್ಯೋ" ಎಂದು ಚೀರಿದ ನಿಶೀಥ. ತನ್ನ ಕಣ್ಣೆದುರಿನಲ್ಲಿಯೇ ಸಹೋದರನು ಶಿಲೆಯಾದುದನ್ನು ನೋಡಿ ವಿಗ್ರಹದಂತೆ ನಿಂತುಬಿಟ್ಟ ನಿಶೀಥ. "ಅವನೊಂದಿಗೇ ನಾನು ಕೂಡಾ ನೀರು ಕುಡಿದಿದ್ದರೆ ಶಿಲೆಯಾಗಿ ಬಿಡುತ್ತಿದ್ದೆ. ನಾನೊಬ್ಬ ಉಳಿದದ್ದು ದೇವರ ದಯೆ! ನಿವೃತ್ತಿ ಮಾರ್ಗ ಹುಡುಕಲು ಒಬ್ಬ ನಿದ್ದೇನೆಂದಾಯಿತು. ಉದಯನನ ಗತಿ ಹಾಗಾಯಿತು. ಅದನ್ನು ತಿಳಿಯುವುದರೊಳಗೆ ಇವನ ಗತಿ ಹೀಗಾಯಿತು. ನನಗೂ ಹೀಗೇನಾದರೂ ಆಗಿಬಿಟ್ಟಿದ್ದರೆ ಲೋಕಕ್ಕೆ ಯಾವುದೂ ತಿಳಿಯದಂತಾಗಿ ಬಿಡುತ್ತಿತ್ತು. ಅಬ್ಬಾ! ಎಷ್ಟು ಎಚ್ಚರಿಕೆಯಿಂದಿದ್ದರೂ ಸಾಲದೆಂಬುದಕ್ಕೆ ಇದೆಲ್ಲ ಪಾಠವಾಯಿತು. ಇನ್ನೇನು ಬರುವುದೋ, ದೇವರೆ!" ಎಂದು ಅನೇಕ ವಿಧವಾಗಿ ಚಿಂತಿಸಿದನು ನಶೀಥ.



ಯೋಚಿಸುತ್ತಾ ನಿಶೀಥನು ಮುಂದಕ್ಕೆ ನಡೆದ. ಮರಗಿಡಗಳಿಂದ ತುಂಬಿದ ತೋಟವೊಂದು ಅವನ ಕಣ್ಣು ಸೆಳೆಯಿತು. ಅಲ್ಲಿ ಬಗೆಬಗೆಯ ಫಲವೃಕ್ಷಗಳು ತುಂಬಿದ್ದುವು. ಎಲ್ಲಕ್ಕೂ ಹೆಚ್ಚಿನ ಆಕರ್ಷಣೆಯಿಂದಿದ್ದ ಮಾವಿನ ಮರದಬಳಿಗೆ ನಿಶೀಥನು ಹೋಗಿ ನೋಡಿದ.



ಎಷ್ಟೊಂದು ಮಾವಿನ ಹಣ್ಣುಗಳು! ಎಲೆಗಳಿಗಿಂತಲೂ ಹೆಚ್ಚಾಗಿ ಹಣ್ಣುಗಳು ತುಂಬಿವೆ. ಅವುಗಳ ಬಂಗಾರದ ರಂಗಿಗೂ ಸುವಾಸನೆಗೂ ಅವನ ನಾಲಿಗೆಯಲ್ಲಿ ನೀರಿಳಿಯಿತು. ಹಸಿವೆಯೂ ಆಗಿತ್ತು. ಕೆಲವು ಹಣ್ಣುಗಳನ್ನು ಕೊಯ್ದು ತನ್ನ ಮುಂದೆ ಹಾಕಿಕೊಂಡನು. ಬಳಿಕ ಒಂದು ಹಣ್ಣನ್ನು ತೆಗೆದು ಕಚ್ಚಿದ್ದೇ ತಡ, ಒಂದು ಕೋತಿಯಾಗಿ ಹಾರಿಬಿದ್ದ. "ಅಯ್ಯೋ! ಇದೇನು ರಾಕ್ಷಸ ಮಾಯೆಯೋ ಮಾರೀಚ ಮಾಯೆಯೋ! ಇನ್ನೇನೇನು ಅನುಭವಿಸ ಬೇಕಾಗುವುದೋ" ಎಂದು ತನ್ನೊಳಗೇ ಕೊರಗುತ್ತ, ಆ ಹಣ್ಣುಗಳನ್ನೆಲ್ಲಾ ಆಚೆಗೆ ದೂಡಿಬಿಟ್ಟ.

ಆ ಮೇಲೆ ಏನು ಮಾಡಬೇಕೆಂದು ತೋರದೆ ಅಲ್ಲಿ ಇಲ್ಲಿ ತಿರುಗುತ್ತಾ, ಕೊಳದಬಳಿಗೇ ಬಂದು, ಶಿಲಾ ರೂಪ ತಳೆದ ತನ್ನ ಸೋದರನ ಸುತ್ತಲೂ ಮಿಳಿಮಿಳಿ ನೋಡುತ್ತ, ತಿರುಗ ತೊಡಗಿದ. ಆಗ ಕೊಳದೊಳಗಿನಿಂದ ಏನೋ ಗುಳುಗುಳು ಶಬ್ದ ಕೇಳಿತು.

ಅದೇನೆಂದು ಕೋತಿ ರೂಪದ ನಿಶೀಥನು ದಿಗಿಲಿನಿಂದ ನೋಡುತ್ತಿರಲು, ಒಂದು ಹಂಸ ಕೊಳದ ಬದಿಗೆ ತೇಲುತ್ತಾ ಬಂದು, ತೀರಕ್ಕೆ ಹತ್ತಿ ಬರುತ್ತ ಮನುಷ್ಯನಾಗಿ ನಿಂತಿತು.

ಆ ಮನುಷ್ಯನನ್ನು ನೋಡಿದ ಕೂಡಲೇ ಕೋತಿ ನಿಶೀಥ ಹಾರಿಬಿದ್ದ. ಏಕೆಂದರೆ ಹಾಗೆ ನಿಂತಿರುವವನು ಮಾಯವಾಗಿ ಹೋದ ತನ್ನ ಪ್ರಿಯ ಸಹೋದರನಾದ ಉದಯನನೇ! ಈಗ ಕೋತಿಯಾಗಿರುವವನು ನಿನ್ನ ಸಹೋದರನೇ ಎಂದು ಅವನಿಗೆ ಹೇಗೆ ತಿಳಿಸುವುದು?

ಉದಯನನು ಮನುಷ್ಯ ರೂಪವನ್ನು ತಾಳಿ, ಪಕ್ಕದಲ್ಲಿರುವ ಸಂಧ್ಯಾನ ಶಿಲಾಪ್ರತಿಮೆಯನ್ನು ನೋಡಿ ಸ್ತಂಭೀ ಭೂತನಾಗಿ ನಿಂತಿದ್ದಾನೆ. ಆಗ ಕೋತಿ ರೂಪದ ನಿಶೀಥನು ಉದಯನನಬಳಿಗೆ ಬಂದು ಎಗರುತ್ತ ಅವನ ಕಾಲುಗಳನು ಸುತ್ತುತ್ತ ಚೇಷ್ಟೆ ಮಾಡ ತೊಡಗಿದನು.

ಇದು ಯಾವುದೋ ಕಾಡು ಕೋತಿ ಎಂದುಕೊಂಡು ಉದಯನ ಅದನ್ನು ದೂರ ಓಡಿಸಲು ಹೆದರಿಸಿ ಕೈಕಾಲು ಜಾಡಿಸಿದ. ಆದರೂ ಅದು ಬಿಡದೆ ಮತ್ತೆ ಮತ್ತೆ ತನ್ನಬಳಿಗೇ ಬರುವುದನ್ನು ನೋಡಿ, ಅವನಿಗೆ ಸಂದೇಹವಾಯಿತು. ತನ್ನ ಇನ್ನೊಬ್ಬ ಸೋದರನಾದ ನಿಶೀಥನೇ ಈ ಕೋತಿಯೇನೋ ಎಂದು ಅವನಿಗೆ ತೋರತೊಡಗಿತು. ಅದರ ತಲೆಯನ್ನೂ, ಬೆನ್ನನ್ನೂ ನೇವರಿಸುತ್ತ ಸುಮ್ಮನೆ ನೋಡುತಿದ್ದನೇ ಹೊರತು ಏನು ಮಾಡಬೇಕೆಂದು ಅವನಿಗೆ ತೋರಲಿಲ್ಲ. ಸಂಧ್ಯಾನು ಈ ಶಿಲಾ ರೂಪದಲ್ಲಿರವನೋ, ಈ ಕೋತಿ ರೂಪದವನು ತನ್ನ ಸಹೋದರನು ಹೌದೋ ಅಲ್ಲವೋ ಎಂಬುದನ್ನೆಲ್ಲ ಹೇಗೆ ಕಂಡು ಹಿಡಿಯುವುದು?

ಸ್ವಲ್ಪ ಹೊತ್ತು ಆಲೋಚನೆ ಮಾಡಿದ ಮೇಲೆ ಅವನಿಗೆ ಒಂದು ಉಪಾಯವು ಮಿಂಚಿತು. ತನ್ನ


This is From,
NEWS CORNER,
130 4th CROSS,

ಜೇಬುಗಳಲ್ಲಿರುವ ಭಸ್ಮ ಅಂಜನಗಳ ನೆನಪಾಯಿತು. ಕೂಡಲೇ ಅವನು ಜೇಬಿನಿಂದ ಕಪ್ಪು ಭಸ್ಮವನ್ನು ತೆಗೆದು ಸಂಧ್ಯಾನ ಶಿಲಾ ವಿಗ್ರಹದ ಮೇಲೆ ಚೆಲ್ಲಿದನು. ಏನೂ ಆಗದಿರಲು, ಅಂಜನವನ್ನು ಹಚ್ಚಿ ನೋಡಿದನು. ಆ ಮೇಲೆ ಹಸಿರು ಅಂಜನವನ್ನೂ, ಕೆಂಪು ಅಂಜನವನ್ನೂ ಹಚ್ಚಿದನು.

ಯಾವುದರಿಂದಲೂ ಏನೂ ಆಗದೆ, ಶಿಲಾ ಪ್ರತಿಮೆ ಇದ್ದ ಹಾಗೆಯೇ ಇದ್ದಿತು. ಶಿಲಾ ವಿಗ್ರದ ಮೇಲೆ ಮಾಡಿದ ಪ್ರಯೋಗಗಳು ನಿಷ್ಫಲವಾದ ಮೇಲೆ, ಅವನು ಆ ಅಂಜನಗಳನ್ನೂ ಭಸ್ಮಗಳನ್ನೂ ಕೋತಿಯ ಮೇಲೆ ಪ್ರಯೋಗಿಸಿ ನೋಡಿದನು. ಅದಕ್ಕೂ ಏನೂ ಆಗಲಿಲ್ಲ. ಕೋತಿ ಕೋತಿಯಾಗಿಯೇ ಇದ್ದಿತು. ಮಹತ್ವವೆನಿಸಿದ ಭಸ್ಮ ಅಂಜನಗಳುಮಾತ್ರ ವ್ಯಥಾ ನಷ್ಟವಾಗಿ ಹೋದುವು.

ಇನ್ನೇನು ಮಾಡಲಿಕ್ಕೂ ತೋರದೆ ಉದಯನನು ಕೊಳದ ಬದಿಯಲ್ಲಿ ಕುಳಿತುಕೊಂಡು ಆಲೋಚನೆಗೆ ಬಿದ್ದನು. ಆಲೋಚನೆಯಿಂದ ತನ್ನ ಬುದ್ಧಿ ಮಂಕಾಗುವ ಹಾಗೆ ತೋರಿತು.


ಆಗ ಕೊಳದೊಳಗಿನ ಹಂಸಗಳ್ಲೊಂದು ನೀರಿನಲ್ಲಿಳಿಬಿದ್ದ ಅವನ ಕಾಲುಗಳ ಬಳಿಯಲ್ಲಿಯೇ ಮುಂದೆ ಹೋಯಿತು. ಅದರಿಂದ ಎಚ್ಚೆತ್ತು ಉದಯನನು ತಟಕ್ಕನೆ ಬಾಗಿ ಅದನ್ನು ಮೇಲಕ್ಕೆ ಎತ್ತಿದನು. ಮೇಲಕ್ಕೆ ಬಂದ ಕೂಡಲೇ ಆ ಹಂಸವು ಹಂಸವಾಗಿ ಲ್ಲಿಲ್ಲ, ಸುಂದರ ಮಾನವ ತರುಣಿಯಾಗಿ ನಿಂತಿದ್ದಳು

ಅವಳು ಉದಯನನ ಮುಂದೆ ಮಾತಾಡ ನಾಚಿಗೆಯಿಂದ ತಲೆತಗ್ಗಿಸಿ ನಿಂತಿದ್ದಳು. ಅವಳನ್ನು ನೋಡಿ ಉದಯನನು ತನಗಾದ ಆಶ್ಚರ್ಯವನ್ನು ಹತ್ತೊತ್ತಿಕೊಂಡು, "ನೀನು ಯಾರು? ಹೀ ಹಂಸದ ರೂಪದಲ್ಲಿ ಈ ಕೊಳದಲ್ಲಿರುವ ಕಾರ ವೇನು? ಇದನ್ನೆಲ್ಲಾ..." ಎನ್ನುವಷ್ಟರಲ್ಲಿ "ಎ ಹೋದಿರೋ ಹುಡುಗರೇ!" ಎಂದು ಸಿಡಿಲಿನಂತ ಶಬ್ದ ಕೇಳಿಸಿತು.

ಅದು ಕಿವಿಗೆ ಬಿದ್ದ ಕೂಡಲೇ ಆ ಕನ್ಯೆ ಭೀತಿಯಿಂ "ಅಯ್ಯೋ! ಬಂದನಲ್ಲಾ ಕಾವಲುಗಾರ ರಕ್ಕಸ!" ಎಂದು ತನ್ನ ಬಾಯಿಗೆ ಕೈಯಿಟ್ಟು, ಮಾತಾ ಬೇಡವೆಂದು ಉದಯನನಿಗೆ ಸೂಚಿಸಿ, ಪಿಸುದ ಯಿಂದ "ಅದನ್ನೆಲ್ಲ ಆಮೇಲೆ ಹೇಳುತ್ತೇನೆ. ಈ ಪ್ರಾಣರಕ್ಷಣೆ ಮುಖ್ಯ!" ಎಂದು ಹೇಳುತ್ತ, ಸಂಧ್ಯಾ ಶಿಲಾ ವಿಗ್ರಹವನ್ನೂ, ಅದರ ಹತ್ತಿರವಿದ್ದ ಕೋ ಯನ್ನೂ ಕೊಳದೊಳಗೆ ದೂಡಿಬಿಟ್ಟಳು. ಆ ಕ್ಷಣ ಅವೆರಡೂ ಹಂಸಗಳಾಗಿ ಬದಲಾಯಿಸಿದುವ ಆಮೇಲೆ ಅವಳು ಉದಯನನ ಕೈಯನ್ನು ಹಿಡಿದ ಎಳೆದುಕೊಂಡೇ ಕೊಳಕ್ಕೆ ಹಾರಿದಳು. ಅವರಿಬ್ಬರ ಹಂಸಗಳಾಗಿದರು.

(ಇನ್ನೂ ಇದೆ





ಅವಳಿಮಕ್ಕಳ ಕಥೆ


April 1975

೯

[ಹೊಸಬರ ಮಾತುಗಳನ್ನು ನಂಬಿ ರಾಕ್ಷಸನು ಗಡ್ಡದ ಮಾಂತ್ರಿಕನನ್ನು ನೋಡಲು ಹೋದನು. ಆ ಸಂಧಿಯಲ್ಲಿ ಸಹೋದರರಿಬ್ಬರೂ ಕೊಳದ ಬಳಿಗೆ ಹೋಗಿ ಶಿಲಾಪ್ರತಿಮೆಯಾಗಿಯೂ, ಕೋತಿಯಾಗಿಯೂ ಬದಲಾವಣೆಗೊಂಡರು. ಉದಯನನೊಂದಿಗೆ ಬಂದ ಕನ್ಯೆ ರಾಕ್ಷಸನ ಶಬ್ದ ಕೇಳಿ ಉದಯನನನ್ನು ಕೊಳಕ್ಕೆ ದೂಡಿ, ತಾನೂ ಕೊಳಕ್ಕೆ ಧುಮುಕಿದಳು. ಇಬ್ಬರೂ ಹಂಸಗಳಾದರು.]

“ಎಲ್ಲಿ ಹೋದಿರೋ ಪೋರರೇ ?” ಎಂದು ದಿಕ್ಕುಗಳು ಗಡಚಿಕ್ಕುವಂತೆ ಕೂಗುತ್ತಾ, ರಾಕ್ಷಸನು ಅಲ್ಲಿಗೆ ಬಂದನು. ಅಲ್ಲಿ ಯಾರೂ ಇಲ್ಲದಿರುವುದನ್ನು ನೋಡಿ ಕೈಗಳನ್ನು ಅಪ್ಪಳಿಸಿ ಹಲ್ಲು ಕಡಿಯುತ್ತ ನಾಲ್ಕು ಸುತ್ತಲೂ ತಿರುಗಿದನು. ಅವನು ಗಡ್ಡದ ಮಾಂತ್ರಿಕನನ್ನು ನೋಡಿ ಮಾತಾಡಿ ಬಂದುದರಿಂದ ಆ ಯುವಕರಿಬ್ಬರೂ ಮೋಸಗಾರರೆಂದು ಅವನಿಗೆ ಗೊತ್ತಾಗಿತ್ತು. ಅಂತೆಯೇ ಅವನು ಗಡಿಬಿಡಿಯಿಂದ ಓಡಿಬಂದಿದ್ದನು. ಅಷ್ಟರೊಳಗೆ ಅವರು ಮಾಯವಾಗಿದ್ದರು. ಅವರು ಮೋಸಗಾರರೆಂಬುದು ರಾಕ್ಷಸನಿಗೆ ಖಂಡಿತವಾಯಿತು.

ಸಹೋದರರ ಊಹನೆ ಸುಳ್ಳಾಗಿರಲಿಲ್ಲ. ಗಡ್ಡದ ಮಾಂತ್ರಿಕನಿಗೂ ಈ ರಾಕ್ಷಸನಿಗೂ ಸಂಬಂಧವಿದ್ದಿತು. ರಾಕ್ಷಸನು ಅಕಸ್ಮಾತ್ತಾಗಿ ತನ್ನ ಮನೆಗೆ ಬಂದುದನ್ನು ನೋಡಿ ಗಡ್ಡದ ಮಾಂತ್ರಿಕನಿಗೆ ಆಶ್ಚರ್ಯವಾಗಿತ್ತು. ಆ ರಾಕ್ಷಸನ ಬಾಯಿಯಿಂದ ಯುವಕರ ಸಮಾಚಾರಗಳನ್ನು ಕೇಳುತ್ತಲೇ ಅವನು ತಲೆ ಚಚ್ಚಿಕೊಳ್ಳುತ್ತ, “ಅಯ್ಯಯ್ಯೋ! ಮೋಸವಾಯಿತಲ್ಲೋ ರಾಕ್ಷಸೋತ್ತಮಾ! ಆ ಕಳ್ಳ ಮಕ್ಕಳನ್ನು ಕೋಟೆಯೊಳಗೆ ಬಿಟ್ಟು ಬಂದೆಯಲ್ಲಾ? ಅವರು ನನಗೆ ಮೋಸ ಮಾಡಿ, ನನ್ನ ಹತ್ತಿರವಿದ್ದ ಮಹಿಮೆಯ ಭಸ್ಮಗಳನ್ನೆಲ್ಲ



ಕೈವಶಪಡಿಸಿಕೊಂಡು ಹೋಗಿ, ಈಗ ನಿನಗೂ ಟೋಪಿ ಹಾಕಿಬಿಟ್ಟಿದ್ದಾರೆ. ಅವರು ಸಾಮಾನ್ಯ ಪಿಂಡಗಳಂತೆ ಕಾಣುವುದಿಲ್ಲ. ಅವರ ತಂಟೆ ತೀರಿಹೋಯಿತೆಂದು ಕೊಂಡರೆ, ಅಸಲನ್ನೇ ಕೆಡಿಸಲು ಬಂದ ಹಾಗಿದೆ. ಅಯ್ಯಾ, ತ್ವರೆಮಾಡು, ಇನ್ನಾದರೂ ಕೈಮೀರಿ ಹೋಗಲಿಲ್ಲ. ನೀನು ಈಗಿಂದೀಗಲೇ ಕೋಟೆಗೆ ಹೋಗಿ ಅವರನ್ನು ಹಿಡಿದುಕೋ. ಅದು ಸಾಧ್ಯ ವಾಗದೆ ಹೋದರೆ ನಮ್ಮ ರಹಸ್ಯಗಳೆಲ್ಲ ಅವರಿಗೆ ಗೊತ್ತಾಗುತ್ತವೆ. ಮುಖ್ಯವಾಗಿ ನಮ್ಮ ಭವನದ ರಹಸ್ಯಗಳು ಅವರಿಗೆ ತಿಳಿದುಹೋದರೆ ನಿನಗೂ ನನಗೂ ಸಹ ಆಯುಷ್ಯ ಮುಗಿದಂತೆಯೇ. ಬೇಗ ಓಡು !" ಎಂದು ರಾಕ್ಷಸನನ್ನು ಅವಸರಪಡಿಸಿ ಹಿಂದಿರುಗಿಸಿದ್ದನು.

ಹಾಗೆ ತೇಕಿತೇಕಿ ಓಡಿಬಂದ ರಾಕ್ಷಸನು, ಅವರನ್ನು ತಾನು ನಿಲ್ಲಿಸಿದ ಸ್ಥಳದಲ್ಲಿ ಕಾಣದಿರಲು ಅವನ ಎದೆ ಬಂಡೆಕಲ್ಲು ಉರುಳುವ ಹಾಗೆ ಹೊಡೆದುಕೊಳ್ಳ ತೊಡಗಿತು. "ಎಲ್ಲಿ ಹೋದಿರೋ ಪುಂಡು ಮಕ್ಕಳೆ ಎಂದು ಕೂಗುತ್ತ, ಕೊಳದ ಹತ್ತಿರಕ್ಕೆ ಬಂದ ಅಲ್ಲಿಯೂ ಅವರ ಜಾಡುತಿಳಿಯಲಿಲ್ಲ. ಅ ಯಾದರೂ ಅಡಗಿರಬಹುದೆಂದುಕೊಂಡು ಇರುವ ತಲೆಯಷ್ಟು ಜಾಗು ಕೂಡಾ ಬಿಡದೆ ಹುಡುಕತೊ ದನು. ಸಾಯಂಕಾಲದವರೆಗೂ ಹುಡುಕಿ ನಿ ನಾದನು. ಏನೋ ಭಯ ಹತ್ತಿಕೊಂಡಿತು. ಎ ಹುದೋ ಬರುವ ಗಂಡಾಂತರವನ್ನು ಇದಿ ನೋಡುವವನಂತೆ ನಿರಾಶೆಯಿಂದ ಮಹಾಭವ ಬಾಗಿಲನ್ನು ಸೇರಿಕೊಂಡು ತೀರಜಡನಂತೆ ತ ಕೈಯಿಟ್ಟು ಕುಕ್ಕರಿಸಿದನು.

ರಾಕ್ಷಸನು ಉಬ್ಬಸ ಬಿಡುತ್ತ ಹುಡುಕುವ ಪರಿಪಾ ಲನ್ನೆಲ್ಲಾ ಹಂಸರೂಪದಲ್ಲಿ ಕೊಳದಲ್ಲಿರುವ ಉದ ನನು ನೋಡಿಕೊಂಡೇ ಇದ್ದನು. ರಾಕ್ಷಸನು ಹು ಹುಡುಕಿ ಬೇಸತ್ತು ಭವನದ ಕಡೆಗೆ ಹೋದ ಕೂಡ ಉದಯನನು ನೀರಿನಿಂದ ಮೇಲೆ ಬಂದು ನಿಜರು ವನ್ನು ತಾಳಿದನು.

ಅವನ ಹಿಂದೆಯೇ ಸರೋವರ ಕನ್ಯೆ ಕೂಡಾ ಹ ರೂಪದಿಂದ ಮೇಲೆ ಬಂದು ನಿಜರೂಪದಲ್ಲಿ ನಿಂತ ಅವಳು ಉದಯನನ್ನು ನೋಡಿ, ಒಂದು ನಿಟ್ಟು ಬಿಟ್ಟು, "ಅಬ್ಬ ! ಈಗತಾನೇ ನಮಗೆ ಮಾ ಡುವ ಅವಕಾಶ ಸ್ವಲ್ಪ ಸಿಕ್ಕಿದೆ. ಪಾಪ, ನಿ ಯಾರೋ ? ಹೇಗೆ ಇಲ್ಲಿ ಬಂದು ಸಿಕ್ಕಿಬಿದ್ದಿರಿ ಗೊತ್ತಾಗಲಿಲ್ಲ. ನಿಮ್ಮ ದುರದೃಷ್ಟದಿಂದ ಎಲ್ಲಿಗೆ ಹೊರಟ ನೀವು ದಾರಿತಪ್ಪಿ ಇಲ್ಲಿಗೆ ಬಂದು ಬಿದ್ದಿರಬೇಕು !" ಎಂದಳು.

ಉದಯನನು ಆಶ್ಚರ್ಯದಿಂದ, "ಅದೇಕೆ ಹ ಹೇಳುವೆ ? ನೀನು ಮಾತ್ರ ಇಲ್ಲಿ ಸಿಕ್ಕಿಬಿದ್ದವ ವೇನು ?" ಎಂದು ಕೇಳಿದ. ಅವಳೆಂದಳು: "ನ ವಿಷಯ ಹೇಳಿ ಪ್ರಯೋಜನವಿಲ್ಲ, ತಪ್ಪಿಸಿಕೊಳ್ಳ ಮಾರ್ಗವಿಲ್ಲದ ಮೇಲೆ ಎಲ್ಲಾ ಆಶೆಗಳೂ ಇ

ಹೋಗಿದೆ. ತಪ್ಪಿಸಿಕೊಳ್ಳುವ ಆಶೆ ಇಲ್ಲವೆಂದು ಏಕೆ ಹೇಳುವೆನೆಂದರೆ, ಈ ಭವನಕ್ಕೆ ಸುತ್ತಲೂ ನಾಲ್ಕು ಕ್ರೋಶಗಳ ದೂರದವರೆಗೆ ಯಾವ ಹುಳವು ಚಲಿಸಿದರೂ ಆ ಸುಳಿವನ್ನು ಕಂಡುಹಿಡಿದು ಬಂಧಿಸಿ ತರಬಲ್ಲ ಉಗ್ರನ್ನ ಗಡ್ಡದವನೊಬ್ಬನಿದ್ದಾನೆ. ಅವನನ್ನು ತಪ್ಪಿಸಿಕೊಂಡು ಬರಲು ಬ್ರಹ್ಮನಿಗೆ ಕೂಡಾ ಸಾಧ್ಯವಾಗಲ್ಲ. ನೀವು ಮಾತ್ರ ಅವನ ಕಣ್ಣುತಪ್ಪಿಸಿ ಹೇಗೆ ಬಂದಿರೋ ಆಶ್ಚರ್ಯವಾಗಿದೆ. ಹೇಗೋ ಬಂದುಬಿಟ್ಟಿರಿ. ಇನ್ನು ಬೇಗನೇ ತಪ್ಪಿಸಿಕೊಂಡು ಹೋಗುವುದು ಒಳ್ಳೆಯದು. ಇಲ್ಲದಿದ್ದರೆ ನಿಮ್ಮ ಪ್ರಾಣಕ್ಕೆ ಅಪಾಯ ಬರುತ್ತೆ. ಈ ಭವನದ ಯಜಮಾನನಾದ ರಾಕ್ಷಸನು ಮಹಾ ದುಷ್ಟ. ಅವನನ್ನು ನೀವು ಇನ್ನೂ ನೋಡಲಿಲ್ಲವೆಂಬುದೇ ನಿಮ್ಮ ಪುಣ್ಯ. ಈಗ ಅವನು ಇಲ್ಲಿ ಇಲ್ಲವೆಂಬುದು ನಿಜವಾದರೂ, ಎಲ್ಲಿಗೆ ಹೋಗಿದ್ದಾನೆ, ಯಾವಾಗ ಬರುತ್ತಾನೆ ಎಂದು ಹೇಳಲಾಗದು. ಅಷ್ಟರೊಳಗೆ ನಿಮ್ಮ ಸಹೋದರರಿಗೆ ಜೀವ ಬರುವಂಥ ಉಪಾಯ ನಾನು ಹೇಳುತ್ತೇನೆ. ಅದರಂತೆ ಮಾಡಿ ಬೇಗನೇ ತಪ್ಪಿಸಿಕೊಂಡು ನಿಮ್ಮ ದಾರಿ ನೋಡಿಕೊಂಡು ಹೋಗಿಬಿಡಿ."

ಅವಳ ಮಾತನ್ನು ಸುಮ್ಮನೆ ಕೇಳಿ ಉದಯನನು ಮುಗುಳು ನಗುತ್ತ, "ನಾವು ದಾರಿ ತಪ್ಪಿ ಇಲ್ಲಿಗೆ ಬಂದವರೇನೂ ಅಲ್ಲ. ಕಳೆದು ಹೋದುದನ್ನು ಹುಡುಕಲು ಎಲ್ಲಾ ಕಡೆಗೂ ಹೋಗುವಂತೆ ಇಲ್ಲಿಗೂ ಬಂದಿದ್ದೇವೆ. ಈ ಭವನದ ರಹಸ್ಯವನ್ನು ತಿಳಿಯುವವರೆಗೂ ಇಲ್ಲೇ ಇರಬೇಕೆಂತಲೂ ಇದ್ದೇವೆ. ಪ್ರಾಣದ ಭಯದಿಂದ ಮುಂದಿಟ್ಟ ಹೆಜ್ಜೆಯನ್ನು ಹಿಂದಿಡುವವರಲ್ಲ. ಆದುದರಿಂದ ನಮ್ಮನ್ನು ಕುರಿತು ನೀನು ಚಿಂತೆ ಮಾಡುವುದು ಬೇಡ. ಇಲ್ಲಿಯ ಯಜಮಾನನಾದ ರಾಕ್ಷಸನನ್ನು ಕುರಿತು ನಿನಗೆ ಗೊತ್ತಿರುವ ವಿಷಯವನ್ನು ನಮಗೆ ಹೇಳಿದರೆ ಸಾಕು. ಅದಿರಲಿ, ಎಲ್ಲಿಂದಲೋ ಇಲ್ಲಿಬಂದು ಸಿಕ್ಕಿ ನಿರಾಶಳಾಗಿರುವ



ನೀನು, ಯಾರು ಎಲ್ಲಿಯವಳೆಂಬ ಸಂಗತಿ ಹೇಳಲೇ ಇಲ್ಲವಲ್ಲ ? ಅದನ್ನು ಹೇಳಲಿಕ್ಕೆ ಅಭ್ಯಂತರವಿಲ್ಲದಿದ್ದರೆ, ಕೇಳಿ ತೃಪ್ತನಾಗುತ್ತೇನೆ" ಎಂದನು.

ಅವನ ಮಾತಿಗೆ ಆ ಕನ್ಯೆ, "ಹೇಳಲು ಅಭ್ಯಂತರವೇನಿಲ್ಲ. ಅದನ್ನು ತಿಳಿದುಕೊಂಡು ನಿಮಗಾಗುವ ಪ್ರಯೋಜನವೂ ಇಲ್ಲ. ನಿಮ್ಮ ತೃಪ್ತಿಗಾಗಿ ಹೇಳುತ್ತೇನೆ." ಎಂದು ಹೇಳಿ, ಕೊಳದೊಳಗೆ ಹೋಗಿ, ಸ್ವಲ್ಪಹೊತ್ತಿಗೆ ಇನ್ನೆರಡು ಹಂಸೆಗಳೊಂದಿಗೆ ಮೇಲೆ ಬಂದಳು. ಮೇಲೆ ಬಂದಕೂಡಲೇ ಆ ಎರಡು ಹಂಸಗಳೂ ಸುಂದರ ಕನ್ಯೆಯರಾಗಿ ನಿಂತರು.

ಉದಯನನು ಮೂವರು ಕನ್ಯೆಯರನ್ನೂ ನೋಡಿದ. ಮೂವರೂ ಒಂದೇ ಅಚ್ಚಿನಲ್ಲಿ ಹೊಯಿದ ಹಾಗಿರುವುದನ್ನು ನೋಡಿ ಆಶ್ಚರ್ಯದಿಂದ, "ನೀವು ಅವಳಿಜವಳಿ ಕನ್ಯೆಯರಾಗಿರುವಿರಲ್ಲ ?" ಎಂದನು.

"ಹೌದು" ಎಂದು ಮೂವರೂ ಒಂದೇಸಾರಿ ಉತ್ತರ ಕೊಟ್ಟರು. ಆದರಿಂದ ಉದಯನನ



ಹೃದಯವು ಉತ್ಸಾಹದಿಂದ ಉಬ್ಬಿತು. "ಹಾಗಾದರೆ ನಾವು ಇಷ್ಟುದಿನ ಯಾವ ಕನ್ಯೆಯರನ್ನು ಹುಡುಕುತ್ತ ಹೊರಟಿದ್ದೇವೋ ಆ ಕನ್ಯೆಯರೇ ನೀವೇನು? ಹೇಳಿ ಹೇಳಿ. ನೀವು ದಾನಶೀಲ ಮಹಾರಾಜನ ಕುಮಾರಿಯರುತಾನೆ?" ಎಂದು ಕೇಳಿದ.

ಅವನ ಪ್ರಶ್ನೆಗೆ ಆ ಕನ್ಯೆಯರು ಹೊಂದಿದ ಆಶ್ಚರ್ಯವು ಅಷ್ಟಿಷ್ಟಲ್ಲ. "ಹೌದು. ಅದೆಲ್ಲ ನಿಮಗೆ ಹೇಗೆ ಗೊತ್ತಾಯಿತು? ನಾವು ನಿಮ್ಮನ್ನು ನೋಡೇ ಇಲ್ಲವಲ್ಲ?" ಎಂದರು ಕನ್ಯೆಯರು.

"ಹೇಗೆ ತಿಳಿಯುವುದೆಂದರೇನು? ಇಡಿಯ ದೇಶವೇ ದುಃಖದಲ್ಲಿರುವಾಗ? ನಿಮ್ಮ ಎಲ್ಲಾ ಸಮಾಚಾರವೂ ನಮಗೆ ಗೊತ್ತು. ನಿಮ್ಮನ್ನು ಹುಡುಕಿ ಹಿಡಿಯಲಿಕ್ಕೇ ನಾವು ನಿಮ್ಮ ತಂದೆಯ ಆಶೀರ್ವಾದ ಪಡೆದು ಹೊರಟಿದ್ದೇವೆ. ಅಂದ ಹಾಗೆ ನಿಮ್ಮ ಹೆಸರು?" ಎಂದ ಉದಯನ.

"ಸುಹಾಸಿನಿ. ನಮ್ಮ ಎಲ್ಲಾ ಸಮಾಚಾರ ನಿಮಗೆ ಗೊತ್ತಿದ್ದರೆ, ಉಳಿದಿಬ್ಬರ ಹೆಸರು ಕೂಡಾ ನಿಮ ಗೊತ್ತಿರಲೇ ಬೇಕಲ್ಲ?" ಎಂದಳು.

"ಗೊತ್ತಿಲ್ಲದೇನು? ಇಷ್ಟು ಬೇಗದಲ್ಲಿ ಇ ಸುಲಭವಾಗಿ ನಿಮ್ಮನ್ನು ನೋಡಬಲ್ಲೆವೆಂದು ನಾ ಕನಸಿನಲ್ಲಿಯೂ ಎಣಿಸಿದವರಲ್ಲ. ಈ ಒಳ್ಳೆಯ ಸು ನನ್ನ ಸೋದರರಿಗೂ ತಿಳಿದರೆ ಎಷ್ಟು ಒಳ್ಳೆ ದಿತ್ತು! ಅವರ ಗತಿ ಏನೋ?" ಎಂದು ಉ ಯನನು ತನ್ನ ಸೋದರರು ಮಾನವ ರೂಪದಲ್ಲಿ ದುದಕ್ಕೆ ಚಿಂತೆಯನ್ನು ವ್ಯಕ್ತಪಡಿಸಿದನು.

ಅವನ ಚಿಂತೆಯನ್ನು ನೋಡಿ ಸುಹಾಸಿ "ಚಿಂತಿಸಬೇಡಿ" ಎಂದು ಹೇಳಿ ಕೊಳಕ್ಕಿಳಿದು, ಸ್ವ ಹೊತ್ತಿಗೆ ಕೋತಿ ರೂಪದಲ್ಲಿರುವ ನಿಶೀ ನೊಂದಿಗೂ, ಶಿಲಾಪ್ರತಿಮೆಯ ರೂಪದಲ್ಲಿರು ಸಂಧ್ಯೆಯೊಂದಿಗೂ ಮೇಲೆ ಬಂದಳು. ಆಮೇ ಉದಯನನನ್ನು ಕರೆದುಕೊಂಡು, ಆ ತೋಟ ಮಾವಿನ ಮರದಬಳಿಗೆ ಹೋದಳು.

ಆ ಮಾವಿನ ಮರದ ಬುಡದಲ್ಲಿ ಕೆಲವು ನಾಯಿ ಕೊಡೆಗಳು ಬೆಳೆದಿದ್ದುವು. ಅವುಗಳಲ್ಲಿ ಕೆಲವ ಹರಿದುಕೊಳ್ಳಲು ಉದಯನನಿಗೆ ಹೇಳಿದಳು. ಅವ ಕೊಯಿದುಕೊಂಡ ಮೇಲೆ ಮತ್ತೆ ಸ್ವಲ್ಪ ದೂ ಕರೆದೊಯ್ದಳು.

ಅಲ್ಲಿ ಒಂದು ರಾಕ್ಷಸನ ವಿಗ್ರಹವಿದ್ದಿತು. ವಿಗ್ರಹದ ಬಾಯಿಯೊಳಗಿನಿಂದ ನೀರು ಸು ಯುತ್ತಿದ್ದಿತು. ಅವಳು ಒಂದು ಎಲೆಯಿಂದ ದೊ ಮಾಡಿ ಉದಯನನಿಗೆ ಕೊಟ್ಟು, ರಾಕ್ಷಸನ ಬಾಯಿ ನೀರನ್ನು ಸ್ವಲ್ಪ ಅದರಲ್ಲಿ ಹಿಡಿಯಲು ಹೇಳಿದಳ ಉದಯನನು ದೊನ್ನೆ ತುಂಬಾ ಆ ನೀರನ್ನು ಹಿಡಿ ಕೊಂಡನು. ಆಮೇಲೆ ಅವರಿಬ್ಬರೂ ಮ ಕೊಳದಬಳಿಗೆ ತಿರುಗಿ ಬಂದರು.

ಸುಹಾಸಿನಿ ಉದಯನನಿಗೆ ಆ ನಾಯಿ ಕೊ ಗಳನ್ನು ಕೋತಿಗೆ ತಿನ್ನಿಸಲು ಹೇಳಿದಳು. ಉದ

ಅದು ಹಾಗೆ ಮಾಡಿದ ಕೂಡಲೇ ನಿಶೀಥನು ಕೋತಿ ರೂಪ ಕಳೆದು, ನಿಜರೂಪದಲ್ಲಿ ಪ್ರತ್ಯಕ್ಷನಾದನು. ಉವಾಯ ದೊನ್ನೆಯಲ್ಲಿದ್ದ ನೀರನ್ನು ಶಿಲಾ ಪ್ರತಿಮೆಗೆ ಚಿಮುಕಿಸಲು ಹೇಳಿದಳು. ಹಾಗೆ ಮಾಡಿದ ಕೂಡಲೇ ಸಂಧ್ಯಾನು ನಿಜರೂಪದಲ್ಲಿ ಕಾಣಿಸಿದನು.


ಉದಯನನು ಆ ಕನ್ಯೆಯರನ್ನು ತನ್ನ ಸಹೋದರರಿಗೆ ತೋರಿಸುತ್ತ, "ವಿಚಿತ್ರವನ್ನು ನೋಡಿದಿರಾ ? ನಾವು ಯಾರನ್ನು ಹುಡುಕಿಕೊಂಡು ಹೊರಟಿದ್ದೇವೋ ಆ ತ್ರಿವಳಿ ರಾಜಕುಮಾರಿಯರೇ ಇವರು. ಆದುದರಿಂದ ನಾವು ಬಂದ ಕಾರ್ಯ ತೀರಿ ಹೋದಂತೆಯೇ ಸರಿ. ಇನ್ನು ಇವರನ್ನು ಕರೆದುಕೊಂಡು ಈ ಭವನದಿಂದ ಹೊರಗೆ ಹೋಗುವ ಉಪಾಯ ಹುಡುಕಬೇಕು." ಎಂದ ಸಂತೋಷದಿಂದ.

ಅವನ ಸಂತೋಷಕ್ಕೆ ನೀರು ಚಿಮುಕಿಸುವವಳಂತೆ ಸುಹಾಸಿನಿಯೆಂದಳು. "ಅದು ಅಷ್ಟೇನೂ ಸುಲಭವಾದ ಕೆಲಸವಲ್ಲ. ನಮ್ಮನ್ನು ಕಾಪಾಡುವ ಮಾತು ಹಾಗಿರಲಿ, ಮೊದಲು ನಿಮ್ಮ ಪ್ರಾಣ ಕಾಪಾಡಿಕೊಂಡು ನೀವಿಲ್ಲಿಂದ ಹೊರಬೀಳಲು ಸಾಧ್ಯವಾದರೆ ದೊಡ್ಡ..." ಅವಳ ಮಾತು ಪೂರ್ತಿಯಾಗುವುದರೊಳಗೇ ರೊಂಯ್ಯನೆ ಸುಳಿಗಾಳಿಯೊಂದು ಬಂದಿತು.

ಅದನ್ನು ನೋಡಿ ಸುಹಾಸಿನಿ ಗಾಬರಿಯಿಂದ ತನ್ನ ಮಾತನ್ನು ಅಲ್ಲಿಗೇ ನಿಲ್ಲಿಸಿ, "ಅದೊದೋ ! ಅವನು ಬರುತ್ತಿದ್ದಾನೆ. ಅದಕ್ಕೇ ಈ ಸುಳಿಗಾಳಿಯ ಸೂಚನೆ. ಈಗ ನಾವು ಈ ಕೊಳದೊಳಗೆ ಹೋಗುತ್ತೇವೆ. ನಿಮ್ಮ ಗತಿ ? ಅಯ್ಯೊ ! ದೇವರೆ ! ನೀವು ಕೊಳದಲ್ಲಿ ಹಂಸಗಳಾದರೂ ಸಿಕ್ಕಿಬೀಳುವಿರಿ. ಅದು ಸಾಧ್ಯವಿಲ್ಲ. ನಿಮ್ಮನ್ನು ನೀವೇ ಕಾಪಾಡಿಕೊಳ್ಳಿರಪ್ಪಾ ! ಜಾಗ್ರತೆ !" ಎಂದು ಹೇಳುತ್ತಾ, ತನ್ನ ತಂಗಿಯರೊಂದಿಗೆ ಕೊಳದಲ್ಲಿ ಧುಮುಕಿಬಿಟ್ಟಳು.

ಆದೇ ಸಮಯದಲ್ಲಿ ಉದಯನನು ತನ್ನ ಬಳಿಯಲ್ಲಿರುವ ಬಿಳಿಯ ಭಸ್ಮವನ್ನು ತನ್ನ ಮೇಲೆಯೂ ಸಹೋದರರ ಮೇಲೆಯೂ ಚೆಲ್ಲಿದನು. ಕೂಡಲೇ ಮೂವರೂ ಮಾಯವಾಗಿ ಹೋದರು. ಮತ್ತೆ





ಸ್ವಲ್ಪ ಹೊತ್ತಿನಲ್ಲಿ ಸುಳಿಗಾಳಿ ತಗ್ಗಿ ಆಕಾಶವನ್ನೇ ಮರೆಯಿಸುವಂತಹ ದೊಡ್ಡದೊಂದು ರಣಹದ್ದು ಕೊಳದ ಬದಿಗೆ ಎರಗುತ್ತಾ, ಬ್ರಹ್ಮಾಂಡದಂತಹ ಭಯಂಕರವಾದ ರಾಕ್ಷಸನಾಗಿ ನೆಲದಲ್ಲಿ ನಿಂತಿತು.

ಆ ರಾಕ್ಷಸನನ್ನು ನೋಡಿದ ಕೂಡಲೇ ಕೊಳದಲ್ಲಿರುವ ಹಂಸಗಳೆಲ್ಲವೂ ರಪರಪನೆ ರೆಕ್ಕೆಗಳನ್ನು ಬಡಿಯುತ್ತಾ ಅವನಿಂದ ಎಳೆಯಲ್ಪಡುವ ಹಾಗೆ ಕೊಳದ ತೀರಕ್ಕೆ ಬಂದು ನೀರಿನಲ್ಲಿ ಸಾಲಾಗಿ ಹತ್ತಿರ ಹತ್ತಿರ ನಿಂತುವು. ರಾಕ್ಷಸನು ಕೆಲವು ಕ್ಷಣಗಳವರೆಗೆ ಅವುಗಳನ್ನು ಪರೀಕ್ಷಿಸಿ ನೋಡಿ, ಎಣಿಕೆ ಹಾಕಿ ಮುಗಿಸಿ, ಕೂಡಲೇ ಹದ್ದಿನ ರೂಪತಾಳಿ ಆಕಾಶ ಮಾರ್ಗದಲ್ಲಿ ಹಾರಿಹೋದನು.

ಇಷ್ಟಾಗುವಾಗ ಚೆನ್ನಾಗಿ ಕತ್ತಲೆ ಕವಿದುಬಿಟ್ಟಿತ್ತು. ಉದಯನನು ತನ್ನ ಹತ್ತಿರವಿದ್ದ ಭಸ್ಮದ ಸಹಾಯದಿಂದ ತನಗೂ ಸೋದರರಿಗೂ ನಿಜರೂಪ ಬರುವಂತೆ ಮಾಡಿಕೊಂಡನು. ಆ ಹೊತ್ತಿಗೆ ಅವರು ಹೊಟ್ಟೆಗೆ ಆಹಾರ ತಿಂದು ಮೂರುದಿನಗಳಾಗಿದ್ದುವು. ಹಸಿ ಯಿಂದ ಮೂವರಿಗೂ ಹೊಟ್ಟೆಗಳು ಜೋರಾ ಚುರುಗುಟ್ಟುತ್ತಿರಲು, ಮಹಿಮೆಯ ಕರವಸ್ತ್ರ ಸಹಾಯದಿಂದ ಬೇಕಾದ ಹಣ್ಣುಗಳನ್ನು ಬ ಕೊಂಡು ಮೂವರೂ ತಿಂದು ತಮ್ಮ ಹೊಟ್ಟೆಯನ್ನು ಶಾಂತಪಡಿಸಿಕೊಂಡರು. ಆಮೇಲೆ ಸೋದ ಕನ್ಯೆಯರು ಮೇಲೆ ಬರುವರೇನೋ ಎಂದು ಸ್ವಲ್ಪ ಹೊತ್ತು ನೋಡಿದರು. ಎಷ್ಟು ಹೊತ್ತಾದರೂ ಅವರು ಬರುವ ಸೂಚನೆ ಕಾಣಲಿಲ್ಲ. ಇನ್ನು ಆ ಸ್ಥ ದಲ್ಲಿಯೇ ರಾತ್ರಿಯನ್ನು ಕಳೆಯಬೇಕೆಂದು ನಿಶ್ಚಯಿಸಿ ಈ ರೂಪವು ತಮ್ಮನ್ನು ಸಿಕ್ಕಿಸಿ ಹಾಕಬಹುದೆಂ ಸಂದೇಹದಿಂದ, ಅದೃಶ್ಯ ರೂಪವನ್ನು ಪಡೆದ ನಿರ್ಭಯದಿಂದ ಅಲ್ಲೇ ಉಳಿದರು.

ಬೆಳಗಾಯಿತು, ನೋಡ ನೋಡುತ್ತಿರಲು ಕೊ ದಿಂದ ಮೂರು ಹಂಸಗಳು ಮೇಲೆ ಬಂದು ಮೂವರು ಕನ್ಯಾಮಣಿಗಳಾಗಿ ಪ್ರತ್ಯಕ್ಷರಾದರು ಕೂಡಲೇ ಮೂವರು ಸಹೋದರರೂ ಪ್ರತ್ಯ ರೂಪ ತಾಳಿದರು. ಉದಯನನು ಸುಹಾಸಿನಿಯನ್ನು ಕುರಿತು, "ನಿನ್ನೆ ಬಂದ ಆ ಹದ್ದು ರೂಪದ ರಾಕ್ಷಸನ ದೊಡ್ಡ ಯಜಮಾನನಾಗಿರಬೇಕು. ಅವನು ಎಲ್ಲಿ ಹೋದ? ಇನ್ನು ಯಾವಾಗ ಬರುತ್ತಾನೆ?" ಎಂದು ಪ್ರಶ್ನೆ ಮಾಡಿದ.

"ಮತ್ತೆಲ್ಲಿಗೆ ಹೋದಾನು? ಬೇಟೆಯನ್ನು ಹುಡುಕಲಿಕ್ಕೆ ಹೋಗಿರುತ್ತಾನೆ. ತನ್ನ ಹೊಟ್ಟೆಯ ಬೇಟೆಗೆ ಅಲ್ಲ; ಅವಳಿಜವಳಿ ಮನುಷ್ಯರ ಬೇಟೆಗೆ" ಎಂದಳು ಸುಹಾಸಿನಿ.


"ಅದೇಕೆ ಅವಳಿಜವಳಿಗಳ ಬೇಟೆ?" ಎಂದು ಆಶ್ಚರ್ಯದಿಂದ ಉದಯನನು ಕೇಳಲು, ಸುಹಾಸಿ ರಾಕ್ಷಸನ ರಹಸ್ಯ ವಿಷಯವನ್ನು ಹೇಳತೊಡಗಿದಳು

"ಅದೊಂದು ವಿಚಿತ್ರವೂ ಭಯಂಕರವೂ ಆ ರಹಸ್ಯ. ಈ ರಾಕ್ಷಸನು ಒಂದು ದೇವಿಯನ್ನು

ಧನೆ ಮಾಡುತ್ತಾನೆ. ಆ ದೇವಿ ಇವನಿಗೆ ಅರ್ಧ ...ದಿದ್ದಾಳಂತೆ. ಆ ಮಹಿಮೆಯಿಂದಲೇ ಈ ...ಯಾ ಭವನವನ್ನು ನಿರ್ಮಿಸಿ ತಾನೂ ಮಾಯಾ ... ಧರಿಸುತ್ತಾನೆ. ಇನ್ನು ಅವಳ ಪೂರ್ಣ ಅನು ...ವನ್ನು ಪಡೆಯಲು ಆ ದೇವಿಗೆ ಐವತ್ತು ಮಂದಿ ...ಳಿಜವಳಿಗಳನ್ನು ಬಲಿಕೊಡಬೇಕಂತೆ. ಆ ಬಲಿ ...ಂದು ಪೂರ್ತಿಯಾಗಿಬಿಟ್ಟರೆ ದೇವಿ ಅವನಿಗೆ ...ರ್ಣವಶಳಾಗಿ, ಎಲ್ಲಾ ಮಹಿಮೆಗಳನ್ನೂ ...ದಿಸಿ, ಅವನಿಗೆ ಮರಣವೇ ಇಲ್ಲದಂತೆ ಮಾಡಿ ...ತಾಳೆ. ಈಗ ನಲುವತ್ತೇಳು ಮಂದಿ ಅವಳಿ ...ಳಿಗಳು ಸಿಕ್ಕಿದ್ದಾರೆ. ಉಳಿದವರಿಗಾಗಿ ಹುಡುಕಿ ...ಡಿದ್ದಾನೆ. ಯಾವಾಗ ಸಿಗುವರು, ಎಲ್ಲಿ ಸಿಗುವರು, ...ವಾಗ ಬಲಿ ಪೂರ್ತಿಯಾಗಿ ತಾನು ದೇವಿಯ ...ರ್ಣಾನುಗ್ರಹಕ್ಕೆ ಪಾತ್ರನಾಗುವೆನೋ ಎಂದು ... ಕ್ಷಣವೂ ಸ್ತಿಮಿತವಿಲ್ಲದೆ ಯಾವಾಗಲೂ ... ರೂಪದಲ್ಲಿ ಪ್ರಪಂಚ ಪ್ರದಕ್ಷಿಣೆ ಮಾಡುತ್ತಾ ...ತ್ತಾನೆ. ನಾವು ಕೂಡಾ ನಮ್ಮ ಅಂತ್ಯಕ್ಷಣಗಳನ್ನು ...ಕೊಂಡಿದ್ದೇವೆ."

...ಮೂವರು ಸಹೋದರರೂ ಅವಳು ಹೇಳುವ ...ತುಗಳನ್ನು ಆಸ್ಥೆಯಿಂದ ಕೇಳಿ, ಒಬ್ಬರನ್ನೊಬ್ಬರು ... ತಲೆಯಾಡಿಸಿಕೊಂಡರು. "ಆಹಾ! ...ಯ ದಯೆ! ನಮ್ಮ ಅದೃಷ್ಟದ ಮೇಲಿದೆ! ... ಮೂವರೂ ಆ ಮಾಯಾವಿಯ ಹದ್ದಿನ ...ಗೆ ಬಿದ್ದಿರುತ್ತಿದ್ದರೆ ಈ ದಿನಕ್ಕೆ ಅವನ ಬೇಟೆ ...ಯಾಗುತ್ತಿತ್ತು. ಬಲಿಯೂ ನೆರವೇರಿ ...ತ್ತು!" ಎಂದ ಉದಯನ.

"ಅದು ಹೇಗೆ? ನೀವು ಮೂವರೂ ಅವಳಿ ...ಳೇನಾ? ಅರೆ! ಹೌದಲ್ಲ! ಮೂವರೂ ... ರೂಪದವರಾಗಿರುವಿರಿ!" ಎಂದರು ...ರೂ ಕನ್ಯೆಯರು ಒಂದೇ ಬಾಯಿಗೆ. ... ಅವನಿಗೆ ಬೇಕಾದ ಮೂವರೂ,



ನಿಮ್ಮನ್ನು ರಕ್ಷಿಸಲು ಬಂದವರೂ ನಾನೇ ಆದೆವಲ್ಲ! ಇದೇ ವಿಚಿತ್ರ! ಆಶ್ಚರ್ಯ! ದೇವಿಯ ದಯೆ! ಅದೃಷ್ಟ!" ಎಂದ ಉದಯನ.

"ಹಾಗಾದರೆ ನೀವು ಇನ್ನಷ್ಟು ಜಾಗ್ರತೆಯಾಗಿರ ಬೇಕಾಯಿತು. ಏನು ಮಾಡುವಿರೋ?" ಎಂದು ಎಚ್ಚರಿಕೆ ಕೊಟ್ಟಳು ಸುಹಾಸಿನಿ.

"ನಿಜವೇ. ಈ ಭಯಂಕರ ರಹಸ್ಯ ಈಗತಾನೇ ನಮಗೆ ಗೊತ್ತಾಯಿತು. ಆಗಲಿ. ಇನ್ನುಮುಂದೆ ಇರ ಬೇಕಾದಷ್ಟು ಎಚ್ಚರಿಕೆಯಲ್ಲೇ ಇರುತ್ತೇವೆ. ಏನಾದರೂ ಈಗ ಇಲ್ಲಿಂದ ಪಾರಾಗುವ ಮಾರ್ಗ ಹುಡುಕ ಬೇಕಾದುದು ಮುಖ್ಯ. ಈ ಪ್ರದೇಶವೆಲ್ಲವೂ ಭಯಂಕರವಾದ ಮಾಯಾಜಾಲದಿಂದ ತುಂಬಿ ಹೋಗಿದೆ. ಆದುದರಿಂದ ಇಲ್ಲಿಂದ ಪಾರಾಗಲಿಕ್ಕೆ ಅಡ್ಡಿ ಯಾಗುವಂತಹ ಕಷ್ಟಗಳು ಏನೇನಿರಬಹುದೆಂಬುದು ಗೊತ್ತಾದರೆ ಒಳ್ಳೆಯದಿತ್ತು. ನಿಮಗೆ ಗೊತ್ತಿದ್ದರೆ ಹೇಳಿರಿ. ಅದಕ್ಕೆ ತಕ್ಕ ಉಪಾಯವನ್ನು ಆಲೋಚನೆ

ಮಾಡುತ್ತೇವೆ" ಎಂದ ಉದಯನ. "ಮುಖ್ಯವಾದ ಕಷ್ಟವೇನೆಂದರೆ, ನಾವು ಕಷ್ಟಪಟ್ಟು ತಪ್ಪಿಸಿಕೊಂಡೆವೆಂದರೆ, ಮತ್ತೆ ಆ ರಾಕ್ಷಸನ ಕಣ್ಣಿಗೆ ಸಿಕ್ಕಿ ಬೀಳುವುದಂತೂ ಖಂಡಿತ. ಆದುದರಿಂದ ಎಲ್ಲಕ್ಕೂ ಮುಖ್ಯವಾದ ಕಷ್ಟ ಒಂದೇ ಇದೆ. ನೀವು ಆ ರಾಕ್ಷಸನ ಕಣ್ಣಿಗೆ ಕಾಣದಂತೆ ಅವನು ವಾಸಮಾಡುವ ಭೂಗೃಹದೊಳಗೆ ಪ್ರವೇಶಿಸಲೇ ಬೇಕಾಗುತ್ತೆ. ಅದು ಹೇಗೆ ಸಾಧ್ಯವೋ ?" ಎಂದಳು ಸುಹಾಸಿನಿ,

ಅದಕ್ಕೆ ಉದಯನ ಬಹಳ ಸುಲಭವಾಗಿ, "ಅದಕ್ಕೇಕೆ ಅಷ್ಟು ಆಲೋಚನೆ ? ನಮ್ಮ ಹತ್ತಿರವಿರುವ ಮಾಯದ ಭಸ್ಮಗಳಿಂದ ನಾವು ಹೇಗೆ ಅದೃಶ್ಯ ರೂಪಿಗಳಾಗುವೆವೆಂದು ನೀವು ನೋಡಿರುವಿರಷ್ಟೆ ? ಆ ಚಿಂತೆ ಬಿಡಿ" ಎಂದ ಉತ್ಸಾಹದಿಂದ.


ಸುಹಾಸಿನಿ ಅವನ ಉತ್ಸಾಹಕ್ಕೆ ತಣ್ಣೀರೆರಚುವವಳಂತೆ, "ಅಯ್ಯೋ ಪಾಪ ! ಅದು ನಮಗೂ ಗೊತ್ತಿದೆ. ಮಹಾ ದೊಡ್ಡ ಉಪಾಯ ಅಂತ ಮಾಡಿದ್ದೀರಿ. ಆ ಭಸ್ಮಗಳ ವಿಷಯ ಒಂದು ನೆನಪಿಟ್ಟುಕೊಳ್ಳಿ, ನಿಮ್ಮ ಭಸ್ಮಗಳೂ ಅಂಜನಗಳೂ ಆ ರಾಕ್ಷಸನ ಭೂಗೃಹದಲ್ಲಿ ಏನೂ ಪ್ರಭಾವ ಬೀರಲಾರವು, ಅವುಗಳ ಮಹಿಮೆಗಳೆಲ್ಲಾ ಇಂತಹ ಹೊರಗಿನ ಪ್ರದೇಶದಲ್ಲಿಯೇ ಸರಿ. ಆದುದರಿಂದ ಅವುಗಳನ್ನು ನಂಬಬೇಡಿ" ಎಂದಳು.


ಈ ಮಾತು ಕೇಳಿದ ಕೂಡಲೇ ಮೂವ
ಸಹೋದರರ ಮುಖಗಳೂ ಬಾಡಿಹೋದುವು. ಅ
ಧೈರ್ಯವು ಜಾರಿಹೋಯಿತು. ಚಿಂತೆಯಿಂದ ಬ
ರನ್ನೊಬ್ಬರು ನೋಡಿದರು. ಅವರ ಕಂದಿದ ಮು
ವನ್ನು ನೋಡಿ ಸುಹಾಸಿನಿ, "ಹಾಗಂತ ಹೆದರು
ರೇನು ? ಧೈರ್ಯ ಬಿಡಬೇಡಿ. ಬುದ್ಧಿ ಬಲವ
ಉಪಯೋಗಿಸಿದರೆ ಏನಾದರೂ ಆಲೋಚ
ಹೊಳೆಯದೇ ಹೋಗದು. ಆಪತ್ತಿನಲ್ಲಿ ಧೈರ್ಯ
ವನ್ನು ಬಿಡಬಾರದೆಂದು ಪಾಠದಲ್ಲಿ ನಾವು ಓದಿದ್ದೇ
ಅಂತಹ ಧೈರ್ಯದಿಂದಲೇ ನಾವೆಲ್ಲಾ ಬದು
ಕೊಂಡಿದ್ದೇವೆ ಗೊತ್ತಾ ?" ಎಂದಳು.

ಅವಳ ಧೈರ್ಯದ ಮಾತಿಗೆ ಆಶ್ಚರ್ಯಪಡುತ್ತ
ಉದಯನನು, "ನಿಜವೇ. ಆಲೋಚನೆ ಮಾಡ
ಕ್ಕಾದರೂ ವ್ಯವಧಿ ಬೇಕಲ್ಲವೆ ? ಯಾವ ಕ್ಷ
ದಲ್ಲಿಯೂ ರಾಕ್ಷಸನ ಸುಳಿಗಾಳಿ ಸುಳಿಯಬಹುದಾ
ಸ್ಥಳವಿದು" ಎಂದ ಉದಯನ.

"ಅದಕ್ಕಾಗಿ ಹೆದರಬೇಡಿ. ದುಷ್ಟದಮನಕ್ಕಾ
ಬಂದ ನಿಮಗೆ ದೇವರ ಸಹಾಯವಿರುತ್ತದೆ. ದೇವ
ದಯದ ಬೆಂಬಲವನ್ನು ನಂಬಿ, ನಿಧಾನವಾ
ಆಲೋಚನೆ ಮಾಡಿರಿ. ಖಂಡಿತಾ ಉಪಾಯ ಹೊ
ಯುತ್ತದೆ" ಎಂದಳು ಸುಹಾಸಿನಿ.

—(ಇನ್ನೂ ಇದೆ





ಅವಳಿ ಮಕ್ಕಳ ಕಥೆ

May 1975

೧೦

[ಗದ್ದದ ಮಾಂತ್ರಿಕನ ಬಳಿಗೆ ಹೋದ ರಾಕ್ಷಸನು, ಯಾರೋ ಹೊಸ ಯುವಕರಿಬ್ಬರು ತನ್ನನ್ನು [illegible]ಸಿದರೆಂದು ತಿಳಿದು ಅವಸರದಿಂದ ಹಿಂದಿರುಗಿದ. ಅಷ್ಟರೊಳಗೆ ಸುಹಾಸಿನಿಯ [illegible]ಯದಿಂದ ಸಂಧ್ಯಾ ನಿಶೀಥರು ತಮ್ಮ ನಿಜರೂಪವನ್ನು ಪಡೆದಿದ್ದರು. ಮೂವರು ಸಹೋದರರೂ [illegible]ಕ್ಷಸನ ರಹಸ್ಯ ಸ್ಥಾನಕ್ಕೆ ಹೋಗುವ ಉಪಾಯವನ್ನು ಹುಡುಕತೊಡಗಿದರು.]

[illegible] ಬಳಿಯಲ್ಲಿರುವ ಮಾಯಾ ಭಸ್ಮಗಳೂ [illegible]ಗಳೂ ದೊಡ್ಡ ರಾಕ್ಷಸನ ನಿವಾಸಸ್ಥಾನದಲ್ಲಿ [illegible] ಪ್ರಭಾವವನ್ನೂ ಬೀರಲಾರವೆಂದು ತಿಳಿ[illegible] ತ್ರಿವಳಿ ಸಹೋದರರಿಗೆ ಏನೂ ತೋರದೆ [illegible]ಯಿತು. ಮೂಕರಂತಾಗಿ ಸ್ವಲ್ಪ ಹೊತ್ತು [illegible] ಮುಖ ಮುಖ ನೋಡುತ್ತ ನಿಂತು [illegible]. ತಾವು ಈ ಹುಡುಗಿಯರ ಮುಂದೆ [illegible]ರಾದೆವಲ್ಲಾ ಎಂಬ ಭಾವನೆಯಿಂದ [illegible] ತುಸು ನಾಚಿಕೆಯೂ ಆಯಿತು. ನಿಶೀಥನಿಗೆ [illegible] ಸಂದೇಹವೂ ಬಂತು: "ಹೌದು. ಈ ರಾಕ್ಷಸನಿಗೆ ಪ್ರಪಂಚದೊಳಗೆ ಎಲ್ಲೆಲ್ಲಿ ಅವಳಿ ಜವಳಿಗಳು ಹುಟ್ಟಿದ್ದಾರೆಂಬುದನ್ನು ಹುಡುಕು ವುದೇ ಕೆಲಸವಾಗಿದ್ದರೆ, ನಾವು ಹುಟ್ಟಿ ಬೆಳೆದು ಇಷ್ಟು ದೊಡ್ಡವರಾಗುವವರೆಗೂ ಅವನು ನಮ್ಮ ತಂಟೆಗೆ ಬಾರದೆ ಸುಮ್ಮನಿರಲು ಕಾರಣವೇನು?" ಮೂವರೂ ಪಿಸುದನಿಯಿಂದ ತಮ್ಮ ಈ ಸಂದೇಹ ವನ್ನು ತಮ್ಮೊಳಗೆ ಕೇಳಿಕೊಂಡರು.

ಮರುದಿನ ಉದಯನನು ತಮ್ಮ ಈ ಸಂದೇಹ ವನ್ನು ಕುರಿತು, ಅವಳಿ ರಾಜಕುಮಾರಿಯರೊಂದಿಗೆ ಹೇಳಿದನು. ಅವರಿಗೂ ಆ ವಿಷಯದಲ್ಲಿ ಆಶ್ಚರ್ಯ



ವಾಯಿತು. "ಹೌದಲ್ಲ. ನಿಮ್ಮ ಸಂದೇಹವು ಯಥಾರ್ಥವಾಗಿದೆ. ಅವನಿಗೆ ನಿಮ್ಮ ಹುಟ್ಟು ಗೊತ್ತಾಗದಿರಲು ಸಾಧ್ಯವಿಲ್ಲ. ಬಹುಶಃ ಒಂದು ಕಾರಣದಿಂದ ಅವನು ನಿಮ್ಮ ತಂಟೆಗೆ ಬರಲಿಲ್ಲವೋ ಏನೋ? ಆ ಕಾರಣ..." ಎಂದು ಸುಭಾಷಿಣಿ ತನ್ನ ಮಾತನ್ನು ನಿಲ್ಲಿಸಿ ಮೂವರು ಸಹೋದರರನ್ನು ಪರೀಕ್ಷಿಸಿ ನೋಡತೊಡಗಿದಳು. ಅದನ್ನು ನೋಡಿ ಮೂವರಿಗೂ ಇನ್ನಷ್ಟು ಕೌತುಕವೆನಿಸಿತು.

"ಹೇಳು, ಶಂಕಿಸಬೇಡ. ನೀನು ಊಹಿಸುವ ಕಾರಣವು ನಿಜವಾಗಿದ್ದರೆ ನಾವು ತಕ್ಕ ಜಾಗ್ರತೆ ತೆಗೆದುಕೊಳ್ಳಬಹುದಷ್ಟೆ?" ಎಂದ ನಿಶೀಥ.

ಆಗ ಸುಭಾಷಿಣಿ, "ಮತ್ತೇನಿಲ್ಲ, ನಿಮಗೇನಾದರೂ ಅಂಗ ಲೋಪವಿದೆಯೋ ಎಂದು ನೋಡುತ್ತಿದ್ದೇನೆ. ಯಾವುದೊಂದು ಪುಟ್ಟ ಅಂಗ ಲೋಪವಿದ್ದರೂ ಅಂತಹ ಅವಳಿಜವಳಿಗಳು ಈ ರಾಕ್ಷಸನ ಬಲಿಗೆ ಉಪಯೋಗವಿಲ್ಲವಂತೆ. ಬಲಿಗಾಗಿ ಹುಡುಕುವಾಗ ಈ ವಿಷಯವನ್ನು ಅವನು ಚೆನ್ನಾಗಿ ಪರಿಶೀಲಿ ತ್ತಾನೆ. ಆದರೆ ನಿಮ್ಮಲ್ಲಿ ಅಂತಹ ಯಾವ ಅ ಲೋಪವೂ ಇರುವಂತೆ ನನಗೆ ಕಾಣುವುದಿಲ್ಲ. ಅ ನಮಗೂ ಆಶ್ಚರ್ಯವಾಗಿದೆ" ಎಂದಳು.

ಈ ಮಾತು ಕೇಳಿದ ಕೂಡಲೇ, ಮೂವ ಸಹೋದರರೂ ಒಂದೇ ಬಾಯಿಗೆ "ಹಾಗಾ ಸರಿ! ನಾವು ಮೂವರೂ ಒಂದೊಂದು ಲೋಪದ ಇದ್ದೇವು" ಎಂದರು.

ಆಮೇಲೆ ಉದಯನನು ಹುಟ್ಟಿದಂದಿನಿಂದ ತವ ದೃಷ್ಟಿಗಳಲ್ಲಿ ಎಂತಹ ಲೋಪವಿತ್ತೆಂಬುದನ್ನೂ, ಕ ಆ ಗಡ್ಡದ ಮಾಂತ್ರಿಕನ ಪುಣ್ಯದಿಂದ ಆ ಲೋ ಈಗ ಪೂರ್ತಿ ತೊಲಗಿದುದನ್ನೂ ರಾಜಕುಮಾ ಯರಿಗೆ ವಿವರಿಸಿ ಹೇಳಿದನು.

ಹೀಗೆ ಅವರು ಮಾತಾಡಿಕೊಳ್ಳುತ್ತಿದ್ದಾಗ ದೊಡ್ಡ ರಾಕ್ಷಸನು ಬರುವ ಸೂಚನೆಯಾ ರೊಂಯ್ಯನೆ ಬಿರುಗಾಳಿ ಎದ್ದು ಅವರನ್ನು ನಡುಗಿಸಿ ರಾಜಕುಮಾರಿಯರು ಮೂವರೂ ಕೈ ಕೈ ಹಿಡಿ ಕೊಂಡು ಕೊಳದೊಳಗೆ ಹಾರಿ ಮರುಕ್ಷಣ ಹಂಸಗಳಾಗಿ ತೇಲಿದರು.

ಆದರೆ ತ್ರಿವಳಿ ಸಹೋದರರು ಮಾತ್ರ ಈಸ ತಪ್ಪಿಸಿಕೊಳ್ಳಲಾರದೆ ಹೋದರು. ಉದಯನ ಬೇಗಬೇಗನೆ ತನ್ನ ಜೇಬಿನಿಂದ ಭಸ್ಮಗಳ ಡಬ್ಬಿಗಳ ತೆಗೆದು ಯಾವ ಭಸ್ಮವೆಂದು ನೋಡುವುದರೊ ರಾಕ್ಷಸನು ಬಂದು ಹದ್ದಿನ ದೃಷ್ಟಿಯಿಂದ ಅವರ ನೋಡಿ ಗಬಕ್ಕನೆ ಮುಷ್ಟಿ ಚಾಚಿ ಕೋಳಿಮರಿಯ ಹದ್ದು ಹಿಡಿಯುವಂತೆ ಮೂವರನ್ನೂ ಹಿಡಿದುಬಿ ಮೂವರೂ ಕಿಟಾರನೆ ಕಿರುಚಿಕೊಂಡರು.

ರಾಕ್ಷಸನು ಹಿಡಿದು ಒತ್ತುತ್ತಿದ್ದರೆ ಅವರ ಮುಗಿದೇ ಹೋಗಬೇಕಿತ್ತು. ಆದರೆ ಅವನು ಒತ್ತಲಿ ತಮ್ಮ ದೇಹಕ್ಕೆ ಯಾವ ಗಾಯವೂ ಆಗದ ಮೆತ್ತಗೆಯೇ ಹಿಡಿದಿದ್ದಾನೆಂಬುದನ್ನು ನೆನೆಯುವಾ


ಅವರಿಗೂ ಧೈರ್ಯ ಬಂದಿತು. ಅಷ್ಟರಲ್ಲಿ ರಾಕ್ಷಸನು ಅವರನ್ನು ಕುರಿತು, "ಎಲೇ ಪೋರರು! ಯಾರು ನೀವು? ಈ ನನ್ನ ರಹಸ್ಯ ಪ್ರದೇಶಕ್ಕೆ ನೀವು ಹೇಗೆ ಬಂದಿರಿ? ಎಲ್ಲಿಂದ ಬಂದಿರಿ? ಏತಕ್ಕಾಗಿ ಬಂದಿರಿ? ಸತ್ಯವಾದುದನ್ನೆ ಹೇಳಬೇಕು. ಸುಳ್ಳು ಪೊಳ್ಳು ಹೇಳಿದರೆ ಇದಕ್ಕೆ ಮೊದಲು ಇಲ್ಲಿಗೆ ಬಂದವರ ಗತಿ ಏನಾಯಿತೋ ಅದೇ ನಿಮಗೂ ಆಗುತ್ತದೆ. ಹೂಂ. ಧೈರ್ಯದಿಂದ ಬಾಯಿ ಬಿಡಿರಿ" ಎಂದ ಸಿಡಿಲಿನಂತಹ ಗರ್ಜನೆಯ ದನಿಯಿಂದ.

ಅದಕ್ಕೆ ಉದಯನನು "ಹೌದು ಹೌದು. ನಾವು ಇಲ್ಲಿಗೆ ಬರುವುದೇ ಬೇಡಿತ್ತು. ಈ ಸ್ಥಳವು ಬಹಳ ಅಪಾಯವೆಂದು ನಮಗೇನು ಗೊತ್ತು? ನಾವೇನು ಬಲ್ಲೆವು? ಯಾರು ಹೇಳಿದರು? ನೋಡಲಿಕ್ಕೆ ಬಹಳ ರಮ್ಯವಾದ ಸ್ಥಳ. ಹೇಗೂ ನಿನ್ನ ಕೈಗೆ ಸಿಕ್ಕಿಬಿದ್ದಮೇಲೆ ನಿನ್ನ ಇಷ್ಟವೇ ಗೆಲ್ಲುತ್ತೆ ನಿಜ. ಆದರೂ ಏನೂ ಅರಿಯದವರೆಂಬ ನಮ್ಮ ಯಥಾರ್ಥವನ್ನು ಅರಿತು, ನಿನ್ನ ಇಷ್ಟ ಬಂದಹಾಗೆ ಮಾಡಯ್ಯ. ಮಹಾಶಕ್ತನಾದ ನಿನ್ನ ಕೈಯಲ್ಲಿ ನಾವೇನು ಮಾಡಬಲ್ಲೆವು?" ಎಂದನು.

"ಓಹೋ! ಮೊನ್ನೆ ಹುಟ್ಟಿದ ನಿನಗೆ ಎಷ್ಟೆಲ್ಲ ಕಾನೂನು! ನೀವುಗಳು ಸಾಧಾರಣದ ಕಿಡಿಗಳಲ್ಲ. ನಿಜ ಹೇಳಿ. ನನ್ನ ತಮ್ಮನಿಗೆ ಟೋಪಿ ಹಾಕಿ ಈಗ ಇಲ್ಲಿಗೆ ಬಂದಿದ್ದೀರಾ? ಯಾಕೆ ಬಂದಿರಿ? ಬೇಗ ಬಾಯಿಬಿಡಿ" ಎಂದು ಗದರಿಸಿದ ರಾಕ್ಷಸ.

"ಅಲ್ಲಯ್ಯಾ, ನಮ್ಮನ್ನು ಹೀಗೆ ಗದರಿಸಲಿಕ್ಕೆ ನಾವೇನು ಮಾಡಿಬಿಟ್ಟೆವು? ಇಷ್ಟು ಸಣ್ಣ ನಮ್ಮಿಂದ ಏನುತಾನೇ ಸಾಧ್ಯವಾದೀತು? ನಾವೇನೂ ತಪ್ಪು ಮಾಡಲಿಲ್ಲ. ಕಳ್ಳರಲ್ಲ. ಸುಳ್ಳರಲ್ಲ. ನಾವು ಇಲ್ಲಿಗೆ ಬಂದ ಕೆಲಸವೇನಂದರೆ..." ಎಂದು ಉದಯನನು ಹೇಳುವಾಗ, "ಮತ್ತೇನು, ನನಗೆ ಟೋಪಿ ಹಾಕಬೇಕೆಂತಲೇ!" ಎಂಬ ಶಬ್ದ ಸಮೀಪದಲ್ಲೇ ಹೊರಟು ಬಂತು.

ಸಹೋದರ ಕುಮಾರರು ಆ ಶಬ್ದ ಬಂದ ದಿಕ್ಕಿಗೆ ತಿರುಗಿ ನೋಡಿದರು. ಮೊತ್ತಮೊದಲು ಅವರು ಯಾರನ್ನು ನೋಡಿ, ಮೋಸದ ಮಾತುಗಳನ್ನು ಹೇಳಿ





ಗಡ್ಡದ ಮಾಂತ್ರಿಕನ ಬಳಿಗೆ ಓಡಿಸಿದ್ದರೋ ಅದೇ ಕಾವಲುಗಾರನಾದ ರಾಕ್ಷಸನು ಅಲ್ಲಿಗೆ ಬಂದಿದ್ದ.

ಆ ರಾಕ್ಷಸನು ದೊಡ್ಡ ರಾಕ್ಷಸನನ್ನು ನೋಡಿ, "ಅಣ್ಣಾ, ಇವರ ಸಮಾಚಾರ ಇನ್ನು ನನಗೆ ಬಿಟ್ಟು ಬಿಡು. ನಿನ್ನ ಕಾಲವು ಅಮೂಲ್ಯವಾದುದು. ನಿನ್ನ ಬೇಟೆಗೆ ನೀನು ಹೋಗಣ್ಣಾ. ನಾನು ಹುಡುಕುತ್ತಾ ಇದ್ದ ಪಿಳ್ಳೆಗಳು ಸಿಕ್ಕಿದರು. ಇನ್ನು ಬಿಡು." ಎಂದನು.

ತಮ್ಮ ರಾಕ್ಷಸನ ಮಾತಿಗೆ ಅಣ್ಣ ರಾಕ್ಷಸನು ತಲೆ ದೂಗುತ್ತ, "ಹೂಂ. ಈ ಪಿಳ್ಳೆಗಳ ಗೊಡವೆ ನಿನಗೇ ಇರಲಿ. ನಿನಗೆ ಮೋಸ ಮಾಡಿದವರನ್ನು ನೀನೇ ನೋಡಿಕೊಳ್ಳುವುದು ನ್ಯಾಯ. ನೋಡಿಕೋ ತಮ್ಮಾ" ಎಂದು ಹೇಳಿ ಮೂವರನ್ನೂ ಕೆಳಗೆ ಬಿಟ್ಟು ಹದ್ದಿನ ರೂಪದಲ್ಲಿ ಹಾರಿಹೋದನು.

ಆ ಕೂಡಲೇ ತಮ್ಮ ರಾಕ್ಷಸನು ಮೂವರು ಸಹೋದರರನ್ನೂ ಎಳೆದುಕೊಂಡು ತಾನು ಕಾವಲು ಕಾಯುವ ಭವನದೊಳಗೆ ಹೋದನು. ಅಲ್ಲಿಯ ಒಂದು ಹಜಾರದಲ್ಲಿ ಅವರನ್ನು ತನ್ನಿದಿರು ಕುಳ್ಳಿರಿಸಿಕೊಂಡು ಸ್ವಲ್ಪ ಹೊತ್ತು ಅವರ ಮುಖವನ್ನ ನೋಡಿದನು. ಇವರನ್ನು ಹೆದರಿಸಿ ಬೆದರಿಸಿಬಿಟ್ಟ ಪ್ರಾಣ ಬಿಟ್ಟಾರು. ಅದಕ್ಕಿಂತ ಒಳ್ಳೆಯದರಲ್ಲಿ ಮಾತಾಡಿಸಿ, ಇವರ ಕೆಲಸಗಳ ಗುಟ್ಟು ತಿಳಿಯ ಬೇಕೆಂದು ಬಗೆದು, "ಕಡಲೇಕಾಯಿಗಳಂತಹ ಪುಟಾಣಿಗಳೇ, ನೀವು ನಮ್ಮ ಗಡ್ಡದ ಕುಳ್ಳನಿಗೂ ನನಗೂ ಮೋಸಮಾಡಿದ್ದೀರಿ. ಕಡೆಗೆ ನನ್ನ ಕೈಗೇ ಸಿಕ್ಕಿ ಬಿದ್ದಿದ್ದೀರಿ. ನಿಮ್ಮ ಮಾಯೆ ಮೋಸಗಳೆಲ್ಲ ಇನ್ನು ನಡೆಯುವುದಿಲ್ಲವೆಂದು ಇದರಿಂದ ತಿಳಿಯಿತಷ್ಟೆ? ಈಗ ಮೊದಲು ನೀವು ವಶಪಡಿಸಿಕೊಂಡ, ಭಸ್ಮ ಅಂಜನ ಕರವಸ್ತ್ರಗಳನ್ನೆಲ್ಲ ತೆಗೆದು ನನ್ನ ಮುಂದೆ ಇಟ್ಟುಬಿಡಿ. ಆಮೇಲೆ ಉಳಿದ ಸಂಗತಿ ಮಾತಾಡೋಣ. ನಾನು ಹೇಳಿದ ಹಾಗೆ ಕೇಳಿದರೆ ನಿಮಗೇನೂ ಭಯವಿಲ್ಲ. ಇಲ್ಲದಿದ್ದರೆ ನನ್ನ ಅಂಗೈಯನ್ನು ನಿಮ್ಮ ತಲೆಗಳ ಮೇಲೆ ಒತ್ತಿಬಿಡುತ್ತೇನೆ. ನೀವು ಭೂಮಿ ಯೊಳಗೆ ಹುದುಗಿ ಹೋಗುವಿರಿ. ಜೋಕೆ! ಬುದ್ಧಿ ವಂತರ ಹಾಗೆ ಮಾಡಿಬಿಡಿ." ಎಂದನು.

ಆ ಮಹಾರಾಕ್ಷಸನು ಹೇಳಿದಂತೆ ಕೇಳದೆ ಆ ಸಹೋದರರಿಗೆ ಬೇರೆ ಉಪಾಯವೇನಿದೆ? ಕೂಡಲೇ ಅವರು ತಮ್ಮ ಹತ್ತಿರವಿರುವ ಮಂತ್ರದ ವಸ್ತುಗಳನ್ನೆಲ್ಲಾ ಅವನ ಮುಂದೆ ಇಟ್ಟುಬಿಟ್ಟರು. ರಾಕ್ಷಸನು ಕೋರೆಗಳನ್ನು ತೋರಿಸಿ ನಗುತ್ತ, "ಹಾಗೆ ದಾರಿಗೆ ಬನ್ನಿ. ಈಗ ನೀವು ಬುದ್ಧಿವಂತರು. ನಾನು ಬಹಳ ಕಾಲದಿಂದ ಇಲ್ಲಿ ಕಾವಲು ಕುಳಿತಿದ್ದೇನಾಗಲಿ, ಈವರೆಗೂ ನನ್ನ ಕಣ್ಣು ತಪ್ಪಿಸಿ ಒಳಗೆ ನುಗ್ಗಿದವರಿಲ್ಲ. ಯಾರು ಬಂದರೂ ನನ್ನ ಕೈಗೆ ಸಿಕ್ಕಿ ಶಿಲಾಪ್ರತಿಮೆ ಗಳಾಗಿ ಹೋಗಿಬಿಡುವರು. ಅಲ್ಲಿ ನೋಡಿದಿರಾ? ಆ ಪ್ರತಿಮೆಗಳೆಲ್ಲಾ ಇಲ್ಲಿಗೆ ಬಂದು ನನ್ನ ಕೈಗೆ ಸಿಕ್ಕಿಬಿದ್ದ ಕಡಲೇಕಾಳುಗಳೇ. ನಿಜ ಹೇಳಬೇಕೆಂದರೆ, ನೀವು ನನಗೆ ಮೋಸ ಮಾಡಿದ ಕ್ಷಣದಿಂದ ನಾನೇನೂ ಹೊಟ್ಟೆಗೆ ಹಾಕಿಕೊಳ್ಳಲಿಲ್ಲ. ಪ್ರಪಂಚವನ್ನೇ ನುಂಗುವಷ್ಟು


ಹಸಿವೆಯಾಗಿದೆ. ಈಗ ನಿಮ್ಮ ಪುಣ್ಯದಿಂದ ಹೊಟ್ಟೆ ತುಂಬ ತಿಂದುಬಿಡುತ್ತೇನೆ. ಉಳಿದ ವಿಷಯ ಆಮೇಲೆ" ಎಂದು ಹೇಳಿ ಮಾಯಾ ಕರವಸ್ತ್ರವನ್ನು ಹಾಸಿ ಸರಿಯಾಗಿ ಕುಳಿತು ಬೇಕಾದ ಆಹಾರಪದಾರ್ಥಗಳನ್ನು ಬಯಸಿದನು.

ಒಂದೊಂದೇ ಭಕ್ಷ್ಯಗಳು ಬರುತ್ತಿದ್ದ ಹಾಗೆ ತಿಂದು ತಿಂದು ತನ್ನ ಹೊಟ್ಟೆಯನ್ನು ತುಂಬಿಸಿಕೊಂಡ ಆ ರಾಕ್ಷಸ. ಆಮೇಲೆ ಮೂವರು ಸಹೋದರರಿಗೂ ತಿನ್ನಲು ಹೇಳಿದ. ಅವರೂ ಸಂತೋಷದಿಂದ ಹೊಟ್ಟೆ ತುಂಬಿಸಿಕೊಂಡರು. ಈ ರಾಕ್ಷಸನು ಎಷ್ಟಾದರೂ ದಯಾವಂತನೇ ಎಂದು ಅವರು ಮನಸ್ಸಿನಲ್ಲೇ ಹೊಗಳಿಕೊಂಡರು.

ಆದರೆ ಹೊಟ್ಟೆಗಳ ಕಾರ್ಯ ಪೂರ್ತಿಯಾದ ಕೂಡಲೇ ಆ ರಾಕ್ಷಸನು, ಮೂವರನ್ನೂ ಒಂದು ಹಗ್ಗದಿಂದ ಕಟ್ಟಿಹಾಕಿ, ನೀರು ಕುಡಿದು ಬರುತ್ತೇನೆಂದು ಹೇಳಿ ಕೊಳದ ಕಡೆಗೆ ಹೋದನು. ಸ್ವಲ್ಪ ಹೊತ್ತಿನ ಮೇಲೆ ಆ ರಾಕ್ಷಸ ಮೂರು ದೊನ್ನೆಗಳಲ್ಲಿ ನೀರು ತೆಗೆದುಕೊಂಡು ಬಂದು ಸಹೋದರರಿಗೂ ಕುಡಿಯಲು ಕೊಟ್ಟನು. ಪುಣ್ಯಾತ್ಮ ರಾಕ್ಷಸ ನೀರು ತಂದು ಕೊಡುವಾಗ ಒಳ್ಳೆಯವನೆಂಬ ಭಾವನೆ ಪುನಃ ಮೂಡಿತು. ಅಷ್ಟರಲ್ಲಿ, ಅಂದರೆ ನೀರು ಅವರ ಹೊಟ್ಟೆಗಿಳಿದ ಕೂಡಲೇ ಕಟ್ಟಿದ ಹಗ್ಗ ಕಡಿದು ಹೋಗಿ ಮೂವರೂ ಮೂರು ಶಿಲಾಪ್ರತಿಮೆಗಳಾದರು ಪಾಪ !

ಆಗ ಆ ರಾಕ್ಷಸನು ಅವರನ್ನು ನೋಡುತ್ತ, ದಿಕ್ಕುಗಳು ಗಡಚಿಕ್ಕುವ ಹಾಗೆ ಹಹ್ಹಾಕಾರದಿಂದ ನಕ್ಕನು. ಹಾಗೆಯೇ ಬಿದ್ದುಬಿದ್ದು ನಗುತ್ತ ಆ ಶಿಲಾಪ್ರತಿಮೆಗಳನ್ನು ಹೊತ್ತುಕೊಂಡು ಹೋಗಿ ತಾನು ಕಾವಲು ಕಾಯುವ ಬಾಗಿಲ ಬದಿಯಲ್ಲಿ ನಿಲ್ಲಿಸಿದನು.

ಅತ್ತ ರಾಜಧಾನಿಯಲ್ಲಿ ದಾನಶೀಲ ಮಹಾರಾಜನು, ತನ್ನ ಪ್ರಿಯ ಕುಮಾರಿಯರನ್ನು ಹುಡುಕಲು ತ್ರಿವಳಿ ಸಹೋದರರನ್ನು ಕಳುಹಿಸಿದ ದಿನವೇ ಒಂದು ಕೆಲಸ ಮಾಡಿದ್ದ. ಕೋಟೆಯ ಮೇಲಿನ ಅಂತಸ್ತಿನಲ್ಲಿ ಚಿತ್ರಮಯವಾದ ಒಂದು ಕೋಣೆಯನ್ನು ಕಟ್ಟಿಸಿ





ಅಲ್ಲೇ ಕುಳಿತುಬಿಟ್ಟಿದ್ದ. ಎತ್ತರವಾದ ಆ ಕೋಣೆಯಲ್ಲಿ ಕುಳಿತು ಸುತ್ತಲೂ ನೋಡಿದರೆ, ಬಹು ದೂರದಲ್ಲಿ ಯಾರು ಬರುತ್ತಿದ್ದರೂ ಕಾಣಿಸುತ್ತದೆ. ದಿನದ ಇಪ್ಪತ್ನಾಲ್ಕು ಗಂಟೆಗಳನ್ನೂ, ಕಣ್ಣು ಕಾಯಿಗಟ್ಟುವಂತೆ ನೋಡುತ್ತಾ ಕಳೆಯುತ್ತಿದ್ದ ಆ ರಾಜ.

ತ್ರಿವಳಿ ಸಹೋದರರು ಹೊರಟುಹೋಗಿ ಐದು ವರ್ಷಗಳು ಕಳೆದುಹೋದುವು. ಇಷ್ಟರವರೆಗೂ ಅವರು ಏನಾದರೆಂಬ ಜಾಡು ಕೂಡ ತಿಳಿಯಲಿಲ್ಲ. ರಾಜನ ಅವಸ್ಥೆ ಹೇಗಿರಬೇಡ ? ಕೇವಲ ಆಶಾವಾದದ ತಂತು ಮಾತ್ರದಿಂದ ಅವನು ಅಷ್ಟರವಟ್ಟಿಗೆ ಇದ್ದಾನೆಂಬುದೂ ಆಶ್ಚರ್ಯವೇ. ಆಗಾಗ ಆಸ್ಥಾನದ ಜ್ಯೋತಿಷ್ಕನನ್ನು ಕರೆಸಿ ಜೋಸ್ಯ ಕೇಳುತ್ತಿದ್ದ. ಜ್ಯೋತಿಷ್ಕನು ಹೇಳುವ ಧೈರ್ಯವೇ ಅವನನ್ನು ಉಳಿಸಿಕೊಂಡಿತ್ತು. "ಕುಮಾರಿಯರು ಎಲ್ಲಿಯೋ ಬದುಕಿರುವುದು ನಿಜ. ಸುಖವಾಗಿಯೇ ಇದ್ದಾರೆ. ಕ್ಷೇಮವಾಗಿ ವಾಪಾಸು ಬರುವುದೂ ಖಂಡಿತ. ನಿರಾಶೆಗೆ ಕಾರಣವಿಲ್ಲ. ಕಾಲವು ಅವಸರವಾಗಿ ಓಡಿ ಬರಲಾರದು. ಅದು ಬರುವವರೆಗೆ ತಾಳ್ಮೆ ಮಾತ್ರ ಗಟ್ಟಿಯಾಗಿರಬೇಕು. ಅಷ್ಟೇ" ಎಂದು ಜ್ಯೋತಿಷ್ಯನು ಹೇಳುತ್ತಿದ್ದ. ರಾಜನೂ ನಂಬಿ ಕಾಯುತ್ತಿದ್ದ.

ಹೀಗಿರುವಾಗ ಒಂದುದಿನ ಬೆಳಗ್ಗಿನ ಬಿಳಿ ಮಸುಕು ಹೊತ್ತಿನಲ್ಲಿ ದೂರದಲ್ಲಿ ಎರಡು ಕುದುರೆಗಳು ಶರ ವೇಗದಲ್ಲಿ ಅರಮನೆಯ ಕಡೆಗೆ ಬರುತ್ತಿರುವುದನ್ನು ನೋಡಿ, ರಾಜನ ಹೃದಯವೇ ಕಣ್ಣಿಗೆ ಬಂದಿತು. ಆ ಕುದುರೆಗಳ ಬಣ್ಣ, ಅವುಗಳ ಮೇಲೆ ಕುಳಿತ ಮನುಷ್ಯರ ಆಕಾರಗಳು, ಕುದುರೆಗಳ ತಲೆಗೆ ಕಟ್ಟಿರುವ ಕಪ್ಪು ಜಂಡಾಗಳು, ಇಷ್ಟು ಕಂಡ ಕೂಡಲೇ ರಾಜನು "ಹಾ !" ಎಂದು ಕೂಗಿ ನಡುಗುವ ಕೈಯಿಂದ ಕತ್ತಿಯನ್ನೆತ್ತಿ ತನ್ನ ಎದೆಗೆ ಚುಚ್ಚಿಕೊಳ್ಳಲು ನೋಡಿದನು. ಅಷ್ಟರೊಳಗೆ ರಾಜನ ಕೂಗು ಕೇಳಿ ಗಾಬರಿಯಾಗಿ ಸೇವಕರು ಬಂದು ಸೇರಿದುದರಿಂದ ರಾಜನು ಉಳಿದನು. ಆದರೆ ಸ್ಮೃಹೆತಪ್ಪಿ ನೆಲದಮೇಲೆ ಬಿದ್ದುಬಿಟ್ಟನು. ಅವನ ಶರೀರವೆಲ್ಲ ಬೆವರಿಹೋಗಿತ್ತು. ಇದ್ದಕ್ಕಿದ್ದಹಾಗೆ ರಾಜನಿಗೆ ಏನಾಯಿತು ?

ಸೇವಕರ ಶೈತ್ಯೋಪಚಾರಗಳಿಂದ, ರಾಜನಿಗೆ ಎಚ್ಚರ ಬರುವುದಕ್ಕೂ, ಆ ಕುದುರೆಗಳೆರಡೂ ಅಲ್ಲಿಗೆ ಬಂದು ಸೇರುವುದಕ್ಕೂ ಸರಿಹೋಯಿತು. ರಾಜನು ಸೇವಕರ ಸಹಾಯದಿಂದ ಕೆಳಗೆ ಬಂದು, ಆ ಕುದುರೆಗಳನ್ನು ನೋಡಿದ.

ತಾನು ತ್ರಿವಳಿ ಸಹೋದರರಿಗೆ ಕೊಟ್ಟ ಕುದುರೆಗಳೇ ಅವುಗಳು. ಆದರೆ ಅವುಗಳ ಮೇಲೆ ಬಂದವರು ಆ ಸಹೋದರರಲ್ಲ; ತನ್ನ ಸೇವಕರಿಬ್ಬರು. ಹಾಗಾದರೆ ಆ ಸೋದರರ ಗತಿ ಏನು ? ಇನ್ನೊಂದು ಕುದುರೆ ಎಲ್ಲಿ? ಇವರೇನು ಭಯಂಕರ ವಾರ್ತೆ ತಂದರೋ ? ರಾಜನು ಅವರಿಬ್ಬರನ್ನೂ ಪಿಳಿಪಿಳಿ ನೋಡುತ್ತ, "ಕುಮಾರಿಯರೆಲ್ಲಿ ? ಆ ಸಹೋದರ ಹುಡುಗರೆಲ್ಲಿ ? ಈ ಎರಡು ಕುದುರೆಗಳು ನಿಮಗೆಲ್ಲಿ




ಸಿಕ್ಕಿದುವು? ಒಳ್ಳೆಯ ಸಮಾಚಾರವೇನಾದರೂ ತಂದಿದ್ದೀರಾ?" ಎಂದು ಆತುರದಿಂದ ಪ್ರಶ್ನೆಗಳ ಮೇಲೆ ಪ್ರಶ್ನೆ ಮಾಡಿದನು.


ಸೇವಕರಿಬ್ಬರೂ ರಾಜನಿಗೆ ಕೈಮುಗಿದು, "ಮಹಾ ಪ್ರಭುಗಳೇ, ನಮ್ಮನ್ನು ಕ್ಷಮಿಸಬೇಕು. ಕುಮಾರಿಯರ ಸಮಾಚಾರವಾಗಲಿ, ಅವರನ್ನು ಹುಡುಕಲು ಹೋದ ಕುಮಾರರ ಸಂಗತಿಯಾಗಲಿ ನಮಗೆ ತಿಳಿಯದು. ನಾವು ಎಲ್ಲಾ ಕಡೆಗಳಲ್ಲಿಯೂ ಬಹಳ ಎಚ್ಚರಿಕೆಯಿಂದ ಹುಡುಕಿಕೊಂಡು ಹೋಗುತ್ತಿರುವಾಗ, ಒಂದಾನೊಂದು ಮೈದಾನ ಪ್ರದೇಶದಲ್ಲಿ ಈ ಕುದುರೆಗಳನ್ನು ನೋಡಿದೆವು. ಇವುಗಳ ಗುರುತು ಹಿಡಿದೆವು. ಅವರಾರಾದರೂ ಸಮೀಪದಲ್ಲಿರುವರೇನೋ ಎಂದು ನಮ್ಮಿಂದ ಸಾಧ್ಯವಾದಷ್ಟೂ ಹುಡುಕಿ ನೋಡಿದೆವು. ಒಂದುವೇಳೆ ಮನೆಗೆ ಬಂದಿರುವರೇನೋ ಅನಿಸಿತು. ಇಷ್ಟಾದರೂ ಒಂದು ಸಮಾಚಾರ ತಮಗೆ ತಿಳಿಸೋಣವೆಂದು ಈ ಕುದುರೆಗಳನ್ನು ತೆಗೆದುಕೊಂಡು ಬಂದೆವು. ಬೇರೇನೂ ಅರಿಯೆವು." ಎಂದು ದುಃಖದಿಂದಲೇ ಬಿನ್ನವಿಸಿಕೊಂಡರು.

"ಅಯ್ಯೋ! ಇಷ್ಟೇನಾ ನನ್ನ ಅದೃಷ್ಟ? ಎಂದು ರಾಜನು ಆರ್ತನಾದ ಮಾಡಿ ಹಣೆ ಬಡೆದುಕೊಂಡು ಮತ್ತೆ ದುಃಖದಲ್ಲಿ ಮುಳುಗಿದನು. ಮಂತ್ರಿ ಜ್ಯೋತಿಷ್ಕ ಮುಂತಾದವರು ಸಾಧ್ಯವಾದಷ್ಟು
ರಾಜನಿಗೆ ಸಮಾಧಾನ ಹೇಳಿದರು. ರಾಜನು ಸಮ
ಧಾನಕ್ಕೆ ಬಂದು, ಆ ಸೇವಕರನ್ನು ನೋಡಿ, "ಎಂತ
ಕೈಲಾಗದವರಪ್ಪ ನೀವು? ನಮ್ಮ ಕುಮಾರಿಯರನ
ಹುಡುಕಿ ಕಂಡುಹಿಡಿದು ಕರೆದುಕೊಂಡು ಬರುವುದನ
ಬಿಟ್ಟು, ಹೀಗೆ ಸುಮ್ಮನೆ ಬಂದುದರ ಅರ್ಥವೇನು
ಅವರನ್ನು ಹುಡುಕಲು ಹೋದ ಸಹೋದರರ ಗ
ಏನಾಯಿತೋ ಪಾಪ? ಆ ಎಳೆ ಮಕ್ಕಳು ಎಂತ
ಆಪತ್ತಿನಲ್ಲಿ ಸಿಕ್ಕಿಬಿದ್ದಿದ್ದಾರೋ? ಇಲ್ಲದಿದ್ದ
ಈ ಕುದುರೆಗಳು ಅನಾಥವಾಗುತ್ತಿದ್ದುವೆ? ಇಷ್ಟಾ
ಮೇಲೆ ಇನ್ನೆಲ್ಲಿಯ ಆಸೆ? ನನಗೂ ಜೀವನದಮೇ
ಆಶೆಯಿಲ್ಲ. ಆದರೂ ನೀವು ನನ್ನ ನಂಬಿಕೆಯ
ಸೇವಕರು. ಪುನಃ ಹೋಗಿರಿ. ಒಳ್ಳೆಯ ಸಮಾಚಾ
ದೊಂದಿಗೆ ತಿರುಗಿ ಬನ್ನಿರಿ. ಅಷ್ಟರವರೆಗೆ ನಾನ
ಬದುಕಿರುತ್ತೇನೋ ಇಲ್ಲವೋ, ಅದೃಷ್ಟದ ಕೈಯಲ್ಲಿದ
ಹೋಗಿಬನ್ನಿ. ಸುಮ್ಮನೆ ನಿಲ್ಲಬೇಡಿ." ಎಂದ
ಬಡಬಡಿಸಿದನು. ಆ ಸೇವಕರು ಏನೂ ಹೇಳದೆ ಬ
ವಂದಿಸಿ ಹೊರಟುಹೋದರು.

ಈ ಸೇವಕರು ಬರೀ ಕುದುರೆಗಳನ್ನು ತಂ
ವಾರ್ತೆ ಆ ಕಿವಿಗೆ ಈ ಕಿವಿಗೆ ಬಿದ್ದು ಅಂತಃಪುರದ
ಮೈಮರೆತಿದ್ದ ರಾಣಿಯ ಕಿವಿಗೂ ಮುಟ್ಟಿ, ಅವಳನ
ಇನ್ನಷ್ಟು ಹದಗೆಡಿಸಿತು.

(ಇನ್ನೂ ಇದೆ





ಅವಳಿಮಕ್ಕಳ ಕಥೆ

June 1975


೧೧

[ರಾಕ್ಷಸನ ಭೂಗೃಹದಲ್ಲಿ ಭಸ್ಮ ಅಂಜನ ಮೊದಲಾದುವು ಪ್ರಭಾವ ಕಳೆದುಕೊಳ್ಳುವುವೆಂದು ತಿಳಿದು ತ್ರಿವಳಿ ಸೋದರರು ನಿರಾಶರಾದರೂ ಧೈರ್ಯ ಬಿಡಲಿಲ್ಲ. ರಾಕ್ಷಸನು ಅವರ ಕೈಯಲ್ಲಿದ್ದ ಮಹಿಮೆಯ ವಸ್ತುಗಳೆಲ್ಲವನ್ನೂ ತೆಗೆದುಕೊಂಡುಬಿಟ್ಟ. ಆಮೇಲೆ ಅವರನ್ನೆಲ್ಲ ಶಿಲಾಪ್ರತಿಮೆಗಳನ್ನಾಗಿಯೂ ಮಾಡಿದ. ಅತ್ತ ದಾನಶೀಲ ಮಹಾರಾಜನೂ ರಾಣಿಯೂ ದುಃಖದಲ್ಲಿ ಮುಳುಗಿಹೋಗಿದ್ದರು.]

ರಾಕ್ಷಸನ ಕೈಯಲ್ಲಿ ಸಿಕ್ಕಿಕೊಂಡು ತ್ರಿವಳಿ ಸಹೋದರರು ನಿರುಪಾಯರಾಗಿ, ಹೇಗೆ ಶಿಲಾಪ್ರತಿಮೆಗಳಾದರೆಂಬುದನ್ನೆಲ್ಲಾ ಸರೋವರದಲ್ಲಿ ಹಂಸರೂಪಿಗಳಾಗಿ ತೇಲುತ್ತಿರುವ ತ್ರಿವಳಿ ರಾಜಕುಮಾರಿಯರು ನೋಡಿಕೊಂಡು ಚಡಪಡಿಸುತ್ತಿದ್ದರು. ರಾಕ್ಷಸರಿಬ್ಬರೂ ಗಮನಿಸದೆ ಬಿಟ್ಟ ವಿಷಯವನ್ನು ಕೂಡಾ ಅವರು ಗಮನಿಸಿದ್ದರು.

ಅದೇನು ವಿಷಯವೆಂದರೆ, ಉದಯನನು ಬಿಳೀ ಭಸ್ಮದ ಡಬ್ಬಿಯನ್ನು ತೆಗೆದು, ಅದರೊಳಗಿನ ಭಸ್ಮವನ್ನು ಕಣ್ಣಮೇಲೆ ಚೆಲ್ಲಿಕೊಳ್ಳಬೇಕೆಂದು ಪ್ರಯತ್ನಪಡುವಾಗ ರಾಕ್ಷಸನು ಅಲ್ಲಿಗೆ ಬಂದುಬಿಟ್ಟಿದ್ದನಷ್ಟೆ? ಆ ಸಮಯದಲ್ಲಾದ ಗಡಿಬಿಡಿಯ ಗಾಬರಿ ನಡುಕದಲ್ಲಿ ಡಬ್ಬಿ ಕೈತಪ್ಪಿ ಕೆಳಗೆ ಬಿದ್ದುಹೋಗಿತ್ತು. ಬಗ್ಗಿ ಅದನ್ನು ತೆಗೆದುಕೊಳ್ಳಲಿಕ್ಕೆ ಆ ಸಹೋದರರಿಗೆ ವ್ಯವಧಿಯಿಲ್ಲದೆ, ರಾಕ್ಷಸನ ಕಣ್ಣಿಗೆ ಸಿಕ್ಕಿಬಿದ್ದಿದ್ದರು. ಆ ಡಬ್ಬಿ ನೆಲದಲ್ಲೇ ಹೊರಳಾಡಿಕೊಂಡಿರುವುದನ್ನು ಆ ಕುಮಾರಿಯರು ನೋಡಿದ್ದರು.

ರಾಕ್ಷಸರಿಬ್ಬರೂ ಅವರವರ ದಾರಿ ಹಿಡಿದು ಹೊರಟುಹೋದ ಮೇಲೆ, ಸದ್ಯ ಅವರಾರೂ ಬರುವ ಸೂಚನೆಯೂ ಇಲ್ಲದುದರಿಂದ ಮೂವರು ರಾಜ



ಕುಮಾರಿಯರೂ ಸರೋವರದಿಂದ ಮೇಲೆ ಬಂದು, ನಿಜರೂಪಧಾರಿಗಳಾಗಿ, ಆ ಡಬ್ಬಿಯನ್ನು ಹುಡುಕ ತೊಡಗಿದರು. ಅದು ಸುಲಭದಲ್ಲಿ ಕಾಣಸಿಗಲಿಲ್ಲ. ಇಲ್ಲೇ ಇದ್ದುದು ಎಲ್ಲಿ ಹೋಯಿತೋ ?

ಮೂವರು ಕುಮಾರಿಯರೂ ಆಶ್ಚರ್ಯದಿಂದ, "ಇದೆಂತಹ ವಿಚಿತ್ರವೋ ! ಆ ಡಬ್ಬಿ ಇಲ್ಲಿ ಬಿದ್ದುದನ್ನು ನಾವು ನೋಡಿದ್ದೇವೆ. ಬಿದ್ದಲ್ಲೇ ಇದ್ದುದನ್ನೂ ಕಂಡಿದ್ದೇವೆ. ಹೇಗೆ ಮಾಯವಾಗಿಹೋಯಿತೋ ? ಈ ಮಂತ್ರದ ನೆಲವೇ ನುಂಗಿತೇನೋ? ಅಲ್ಲ, ನಾವು ನೋಡಿದ್ದೇ ಬರೀ ಮಾಯೆಯೋ ?" ಎಂದು ಒಬ್ಬಳು ಹೇಳಲು, "ನಮ್ಮ ಕಣ್ಣು ತಪ್ಪಿ ರಾಕ್ಷಸನ ಕಾಲು ಗೀಲು ತಾಗಿ ದೂರ ಹೋಗಿರಬಹುದು. ಇಷ್ಟರಲ್ಲೇ ತಾಳ್ಮೆಗೆಟ್ಟರೆ ಹೇಗೆ? ಇನ್ನೂ ಹುಡುಕೋಣ ಬನ್ನಿ" ಎಂದಳು ಇನ್ನೊಬ್ಬಳು.

ಹಾಗೆಯೇ ಅವರು ಮೂವರೂ ಸುತ್ತು ಮುತ್ತಲೂ ಹುಡುಕಿಕೊಂಡು ಹೋಗುವಾಗ, ಸರೋವರಕ್ಕೆ ಬಹಳ ದೂರದಲ್ಲಿ ಆ ಡಬ್ಬಿ ಕಂಡಿ… ಅದನ್ನು ಎತ್ತಿಕೊಂಡು ಸಂತೋಷಪಡುವುದರೊ… ಅದನ್ನು ಎಲ್ಲಿ ಅಡಗಿಸಿಡುವುದೆಂಬ ಪ್ರಶ್ನೆ ಎ… ಬಹಳ ಆಲೋಚನೆ ಮಾಡಿ, ನೆಸಪಿನ ಗುರುತುಗ… ನೋಡಿ, ಸರೋವರದ ಬದಿಯಲ್ಲೇ ಒಂದು ಹೊ… ತೆಗೆದು ಆ ಸಣ್ಣ ಡಬ್ಬಿಯನ್ನು ಅದರಲ್ಲಿ… ಮೇಲೆ ಮಣ್ಣು ಮುಚ್ಚಿದರು.

ಆಮೇಲೆ ಅವರ ಆಲೋಚನೆಗೆ ಇನ್ನೊ… ಪ್ರಶ್ನೆ ಬಂದಿತು. ತಮ್ಮನ್ನು ಹುಡುಕಲು ಬ… ಸಿಕ್ಕಿಕೊಂಡ ಸಹೋದರರನ್ನು ಕಾಪಾಡುವ ಮಾ… ವೇನು ? "ನನಗೊಂದು ಉಪಾಯ ಹೊಳೆ… ತ್ತದೆ. ಹೇಳಲೆ ?" ಎಂದಳು ಸುಕೇಶಿನಿ. ಉಳಿದಿಬ್ಬ… ಉತ್ಸಾಹದಿಂದ "ಏನದು ? ಹೇಳು, ಬೇ… ಎಂದರು ಒಂದೇ ಬಾಯಿಂಗೆ.

ಸುಕೇಶಿನಿಯೆಂದಳು : "ಹೇಗಾದರೂ ಮ… ರಾಕ್ಷಸನನ್ನು ಅಲ್ಲಿಂದ ಕದಲಿಸಿ, ಈ ಕಡೆಗೆ ಬರುವ… ಮಾಡಬೇಕು. ಅದಕ್ಕಾಗಿ ನಾವು ಹೀಗೆ ಮಾಡಬಹು… ನಾವೆಲ್ಲರೂ ಕೂಡಿ ಅವನ ಬಳಿಗೆ ಹೋಗಿ, ಚೆಂ… ನೃತ್ಯ ಮಾಡಿ ತೋರಿಸುವೆವೆಂದು ಅವನು ನಂಬ… ಹಾಗೆ ಹೇಳೋಣ. ಹೀಗೆ ಹೋಗುವ ನಮ್ಮೊ… ನವಳೊಬ್ಬಳು ಸ್ವಲ್ಪ ಮಂತ್ರ ಜಲವನ್ನೂ ಇ… ಕೊಂಡಿರಬೇಕು. ಅದನ್ನು ಆ ಯುವಕರ ಶಿ… ಪ್ರತಿಮೆಯ ಮೇಲೆ ಚೆಲ್ಲಿಬಿಡಬೇಕು. ಅವ… ಮಾಮೂಲು ರೂಪ ಬಂದುಬಿಡುತ್ತದೆ. ರಾಕ್ಷಸ… ಗೊತ್ತಾಗದ ಹಾಗೆ ಒಬ್ಬಳು ಅವರ ಬಳಿಯ… ಇರಬೇಕು. ಆಮೇಲೆ ಏನು ಮಾಡಬೇಕೆಂ… ಆ ಯುವಕರೊಂದಿಗೆ ಮಾತಾಡಬಹುದು. ಅವ… ಪಾರಾಗಲು ಸಾಧ್ಯವಾಗುವಂತಹ ಒಳ್ಳೊಳ್ಳೆ… ಉಪಾಯಗಳು ಹೊಳೆಯಬಹುದು."


ಸುಕೇಶಿನಿಯ ಮಾತು ಕೇಳಿ ಸುಹಾಸಿನಿ, "ಹೌ… ಆ ರಾಕ್ಷಸ ನಮ್ಮ ಮೋಸದ ಜಾಲದಲ್ಲಿ ಬೀಳುವ…

...ಮಾನ್ಯದವನೇ? ಒಂದುವೇಳೆ ನಾವು ಅವನಿಗೆ ...ಮೋಸಮಾಡಿದರೂ, ಅವನನ್ನು ಅಲ್ಲಿಂದ ಇನ್ನೊಂದು ...ಗೆ ಎಳೆದುಕೊಂಡು ಹೋದರೂ ಅವನ ಭವನ ...ಯೋ ಇದ್ದು, ಅವನ ಕಣ್ಣು ತಪ್ಪಿಸುವ ಕೆಲಸ ...ಯಾದೀತೆಂದು ನನಗೆ ಕಾಣುವುದಿಲ್ಲ. ನಾವು ... ಸಿಕ್ಕಿಬಿದ್ದೆವೆಂದರೆ, ನಮ್ಮ ಸಮಾಚಾರವೂ, ... ಯುವಕರ ಸಮಾಚಾರವೂ ಅಸ್ತಮಿಸಿ ಹೋಗುತ್ತದೆ. ಈ ಉಪಾಯ ಚೆನ್ನಾಗಿದ್ದರೂ, ...ಗಾದು ಕೆಟ್ಟುಹೋದೀತು. ಕೆಟ್ಟರೆ ಮತ್ತೇನೂ ...ಮಾಡಲೂ ಸಾಧ್ಯವಿಲ್ಲ" ಎಂದಳು.

ಆ ಮಾತು ಕೇಳಿ ಸುಕೇಶಿನಿ, "ಹಾಗಂತ ಧೈರ್ಯ ...ಕೊಂಡುಬಿಟ್ಟರೆ ಯಾವ ಕೆಲಸವನ್ನೂ ಮಾಡಲು ...ಧ್ಯವಿಲ್ಲ. ಅಪಾಯದಲ್ಲಿ ಸಿಕ್ಕಿಕೊಳ್ಳುವ ಕಷ್ಟಕ್ಕೆ ...ದರೆ, ನಮಗಾಗಿ ಇಲ್ಲಿ ಬಂದವರಿಗೆ ನಾವೇನೂ ...ಲಾರೆವು. ದೇವರನ್ನು ನಂಬಿ, ನಮಗೆ ತೋರಿ ... ಮಾಡುವುದು ಒಳ್ಳೆಯದಲ್ಲವೆ? ಅವರನ್ನು ...ಲು ನಮ್ಮಿಂದಾದಷ್ಟು ಪ್ರಯತ್ನ ಮಾಡುವುದೇ ...ವೆನ್ನುವಿರಾ?" ಎಂದಳು.

"ಸರಿ, ಆದುದಾಗಲಿ, ಪ್ರಯತ್ನ ಮಾಡೋಣ" ...ರು ಮೂವರೂ ನಿರ್ಧರಿಸಿಕೊಂಡರು. ಮರುದಿನ ...ರ ಕಾರ್ಯದ ಮೊದಲನೇ ಭಾಗವಾಗಿ ಸರೋ...ದಲ್ಲಿರುವ ಎಲ್ಲಾ ಹಂಸಗಳು ಮೇಲೆ ಬಂದುವು. ಮೇಲೆ ಬಂದಾಗ ಎಲ್ಲ ಹಂಸಗಳೂ ಮಾನವಾಕಾರ ...ಳಿ ನಿಂತಿದ್ದರು. ಎಲ್ಲರೂ ತ್ರಿವಳಿ ರಾಜಕುಮಾರಿಯ ...ಯೋ ರಾಕ್ಷಸನ ಕೈಗೆ ಸೆರೆಸಿಕ್ಕಿದ ತರುಣ...ಣಿಯರೇ.


ಸುಹಾಸಿನಿ ಎಲ್ಲ ತರುಣರನ್ನೂ ಮತ್ತೆ ಸರೋವರ ...ಳಗೆ ಹೋಗುವಂತೆ ಹೇಳಿದಳು. ಈಗ ಅಲ್ಲಿ ...ಳಿದವರು ತರುಣಿಯರು ಮಾತ್ರವೇ. ಅವರೆಲ್ಲರೂ ...ರಿ ಅಲ್ಲಿಯ ತೋಟದ ಹುವ್ವುಗಳನ್ನು ...ಯ್ಯುತ್ತಾ, ಹಾಡುತ್ತಾ, ರಾಕ್ಷಸನ ಅರಮನೆಯ



ಕಡೆಗೆ ನಡೆಯತೊಡಗಿದರು. ಹಾಗೆ ಅವರು ನಡೆದು ಬರುವ ಧ್ವನಿಗಳನ್ನು ಕೇಳಿ ಕಾವಲಿನ ರಾಕ್ಷಸ ಮೆಟ್ಟಿಬಿದ್ದ. ಮರುಕ್ಷಣದಲ್ಲಿ ಎದ್ದು ಕುತೂಹಲದಿಂದ ಅವರ ಎದುರಾಗಿ ಬಂದು, "ಇದೇನಿದೇನು? ಎತ್ತ ದಾಳಿ ಹೊರಟಿರಿ? ನನ್ನ ಮೇಲೇನಾ? ಯುದ್ಧ ಮಾಡಲು ಬರುತ್ತಿರುವಿರಾ?" ಎಂದು ನೆಗಾಡಿದ.

ಎಲ್ಲರಿಗಿಂತ ಮುಂದೆ ನಿಂತಿದ್ದ ಸುಕೇಶಿನಿ, "ಅಯ್ಯೋ, ಹಾಗೇನಿಲ್ಲಯ್ಯ. ನಿನ್ನಂಥಾ ಮಹಾ ಕಾಯನಮೇಲೆ ದಾಳಿ ಮಾಡಲು ಯಾರಿಂದಾದೀತು? ಹೊಸತಾಗಿ ಬಂದ ಮೂವರು ಗಂಡುಗಳು ಏನಾದರೋ ಅಂತ ನೋಡಲು ಬಂದೆವು. ಅಷ್ಟೇ ಮತ್ತೇನಿಲ್ಲ." ಎಂದಳು.

ಆಗ ರಾಕ್ಷಸನು ಇನ್ನಿಷ್ಟು ಜೋರಾಗಿ ನಗುತ್ತ, "ಅವರ ಗತಿ ಏನಾಗುವುದೆಂದು ನಿಮಗೆ ಗೊತ್ತಿಲ್ಲವೆ? ಇದಕ್ಕೆ ಮೊದಲು ಬಂದ ಪಿಳ್ಳೆಗಳೆಲ್ಲ ಏನಾದರೋ ಅದೇ ಗತಿ ಇವರಿಗೂ ಆಯಿತು. ನೋಡಬೇಕೇನು?



ಬನ್ನಿ" ಎಂದು ಕೆಲವರನ್ನು ಒಳಗೆ ಕರೆದುಕೊಂಡು ಹೋಗಿ, ಮೂವರು ಅವಳ ಸಹೋದರರು ಶಿಲಾ ಪ್ರತಿಮೆಗಳಾಗಿ, ನಿಂತಿರುವುದನ್ನು ತೋರಿಸಿದನು. "ಅಯ್ಯೋ ಪಾಪ! ಯಾವ ಊರಿನವರೋ? ಹೇಗಾದರು!" ಎಂದು ಮೂವರೂ ಒಂದೇ ಕಂಠದಿಂದ ಅನುತಾಪಪಟ್ಟರು.

ಆ ಶಿಲೆಗಳನ್ನು ನೋಡಿ ಸುಕೇಶಿನಿ, ರಾಕ್ಷಸನನ್ನು ಕುರಿತು, "ನಿನ್ನ ಉದ್ಯೋಗ ಚೆನ್ನಾಗಿದೆಯಯ್ಯ. ನನಗೊಂದು ಸಂದೇಹ. ಅದನ್ನು ತೀರಿಸುವೆಯಾ? ನಾವಿಷ್ಟುಮಂದಿ ಒಟ್ಟಿಗೆ ಕೂಡಿಕೊಂಡಿದ್ದೇವಷ್ಟೆ? ಸುಮ್ಮನೆ ನೀರಿನಲ್ಲಿದ್ದೂ ಇದ್ದು ಬೇಸರವಾಗಿಹೋಗಿದೆ. ನಿನ್ನ ಅಣ್ಣ ಕೊಡುವ ಬಲಿ ಕಾರ್ಯ ಬೇಗನೇ ಮುಗಿದರೆ ಒಳ್ಳೆಯದಿತ್ತು. ಗುಂಪಾಗಿರುವ ನಮಗೇ ಹೀಗಿರುವಾಗ, ನೀನೊಬ್ಬನೇ ಹೇಗಿರುವೆಯೋ? ಪಾಪ! ಈ ಶಿಲಾಪ್ರತಿಮೆಗಳ ನಡುವೆ ವರುಷಗಟ್ಟಲೆ ಏಕಾಂಗಿಯಾಗಿರುವ ನಿನಗೆ ಎಷ್ಟು ಬೇಸರವಾಗಿರಬೇಡ? ಸುಮ್ಮನೆ ಆಕಾಶ ನೋಡುತ್ತ ಅದು… ಹೊತ್ತು ಕಳೆಯುವಿಯೋ ಏನೊ!" ಎಂದಳು.

ಅದಕ್ಕೆ ರಾಕ್ಷಸನು ತಲೆದೂಗುತ್ತ, "ಹ… ಹೌದು. ನನಗೆ ಮಾತ್ರ ಬೇಸರವಿಲ್ಲ ಅಂತ ಮ… ರೇನು? ಆದರೆ ನಾನೇನು ಮಾಡಲಿ? ನ… ಈ ಸ್ಥಳವನ್ನು ಬಿಟ್ಟು ಹೋದ ಮರುಕ್ಷಣ… ನನ್ನನ್ನೇ ಬಲಿ ಹಾಕಿಬಿಡುತ್ತಾನೆ ನನ್ನ ಅಣ್ಣ. … ಪ್ರಭಾವ ಅಂಥಾದ್ದು. ಏನೂ ತೋರದೆ ನ… ಸಿಕ್ಕಿಕೊಂಡು ಬಿಟ್ಟಿದ್ದೇನೆ. ನನ್ನ ಸ್ಥಿತಿ ಈಗ… ನಿಮಗೆ ಗೊತ್ತಾಯಿತೆ?" ಎಂದು ರಾಕ್ಷಸನು … ಮನಸ್ಸಿನೊಳಗಿನ ಬಾಧೆಯನ್ನು ಹೊರಗೆ ಹಾಕಿ…

ಸುಕೇಶಿನಿ ಅವನಿಗೇನೋ ಸಹಾಯ ಮಾಡು… ಳಂತೆ, "ಹೌದು ಹೌದು. ಅದೇ ಅಂದುಕೊ… ನಿನ್ನ ಮುಖ ನೋಡಿದರೇ ತಿಳಿಯುತ್ತೆ. ಎಷ್ಟು… ಹೀಗಿರಬೇಕೋ? ಒಂದು ಮಾಡು ವಿ… ಸ್ವಲ್ಪಹೊತ್ತು ನಮ್ಮ ಜತೆ ಬಾರೇನು? ಸಂತೋ… ದಿಂದ ಮನಸು ಅರಳೀತು! ನಿನಗೆ ಸಂತೋ… ವಾಗುವ ಹಾಗೆ ನಾವೆಲ್ಲಾ ಆಡಿಹಾಡಿ ತಿರು… ತ್ತೇವೆ. ನಮಗೂ ಬೇಸರ ಹೋಗುತ್ತದೆ. … ಪುಣ್ಯವೂ ಬರುತ್ತೆ. ನಿನಗೂ ಒಳ್ಳೆಯದೆನಿಸುತ್ತ… ಏಳು ಬಾ" ಎಂದು ರಾಕ್ಷಸನಿಗೆ ಉತ್ಸಾಹ ಬರಿಸಿದ…

"ಅಯ್ಯಯ್ಯೊ! ಈ ಭವನ ಪ್ರದೇಶವನ್ನು ಬಿ… ಕದಲುವುದೆ? ನನ್ನಂಥಾ ಆನೆ ಹಾಗಿರುವವ… ಕಾವಲು ಕಾಯುತ್ತಿದ್ದಾಗಲೇ, ನನ್ನ ಕಣ್ಣಿಗೆ ಧೂ… ಹಾಕಿ ಈ ಪಿಳ್ಳೆಗಳು ಹೇಗೋ ಒಳಗೆ ಬಂದುಬಿಟ್ಟ… ನಾನೇ ಇಲ್ಲಿಂದ ಅತ್ತ ಹೋಗಿಬಿಟ್ಟರೆ ಮತ್ತೆ ಕೇ… ವವರಾರು? ಎಷ್ಟು ಮಂದಿ ಹಗೆಗಳನ್ನು … ಕೊಂಡಿದ್ದಾನೋ ಅಣ್ಣ!" ಎಂದ ರಾಕ್ಷಸ.

"ನಿನ್ನದು ಬರಿಯ ಭ್ರಾಂತಿ! ಇಂಥಾ ಸ್ಥ… ಯಾರಯ್ಯಾ ಹಾಗೆ ಧೈರ್ಯ ಮಾಡಿ ಬರುವವರು… ಒಂದುವೇಳೆ ಬಂದರೂ ನಿನ್ನ ಕಣ್ಣಿಗೆ ಬೀಳದೆ ತ…

ಕೊಳ್ಳುವರೇನು? ಹೋಗಲಿ. ಅಷ್ಟೂ ನಿನಗೆ ಸಂಶಯವಿದ್ದರೆ ನಮ್ಮಲ್ಲೊಬ್ಬಳು ನಿನಗೆ ಬದಲಾಗಿ ಕಾವಲಿರುತ್ತಾಳೆ. ಸ್ವಲ್ಪ ಹೊತ್ತು ಸಂತೋಷವಾಗಿ ಕಾಲಕ್ಷೇಪ ಮಾಡಿ, ಮತ್ತೆ ನಿನ್ನ ಕೆಲಸ ನೋಡಿಕೋ" ಎಂದಳು ಸುಕೇಶಿನಿ. ಈ ಮಾತು ರಾಕ್ಷಸನಿಗೆ ಹಿಡಿಸಿತು.


"ಹಾಗಾದರೆ ನನಗೆ ಬದಲಾಗಿ ಕಾವಲಿರುವುದು ಯಾರು?" ಎಂದು ಕೇಳಿದ ರಾಕ್ಷಸ. ಸುಕೇಶಿನಿ ಸುಹಾಸಿನಿಯ ಮುಖವನ್ನು ನೋಡಿ, "ಬೇರೆ ಯಾರು ಯಾಕೆ? ನನ್ನ ಅಕ್ಕನೇ ಆ ಕೆಲಸ ಮಾಡುತ್ತಾಳೆ" ಎಂದಳು. ಆ ಪ್ರಕಾರವೇ ಸುಹಾಸಿನಿಯನ್ನು ಆ ಭವನದಲ್ಲಿ ಬಿಟ್ಟು ಅವರೆಲ್ಲ ಸರೋವರದ ಕಡೆಗೆ ಹೊರಟರು. ರಾಕ್ಷಸನು ಅವರ ಬೆಡಗಿನ ನಡಿಗೆ ನೋಡುತ್ತಾ ಹಿಂದೆಯೇ ಹೋದ.

ಸರೋವರದ ಬದಿಯ ವಿಸ್ತಾರ ಪ್ರದೇಶದಲ್ಲಿ ರಾಕ್ಷಸನನ್ನು ನಡುವೆ ಕುಳ್ಳಿರಿಸಿ, ಎಲ್ಲರೂ ಅವನ ಸುತ್ತಲೂ ಸೇರಿ ನೃತ್ಯ ಮಾಡತೊಡಗಿದರು. ಅವರ ಆಟ ಹಾಡು ನಾಟ್ಯ ವಿನ್ಯಾಸಗಳನ್ನು ನೋಡಿ ರಾಕ್ಷಸನು ತನ್ಮಯನಾಗುತ್ತ, "ಆಹಾ! ದಿನಾ ಹೀಗೆ ಕಾಲಕ್ಷೇಪ ಮಾಡಿದರೆ ಎಷ್ಟು ಚೆನ್ನಾಗಿರುತ್ತೆ!" ಎಂದ ತನಗೆ ತಾನೇ.

ಈರೀತಿಯಾಗಿ ದಿನಾ ಒಬ್ಬಳು ರಾಕ್ಷಸನಿಗೆ ಬದಲಾಗಿ ಕಾವಲು ಕಾಯುವುದೂ, ಅವನು ಉಳಿದವರ ನಡುವೆ, ಅವರು ಹೋದಲ್ಲಿಗೆ ಹೋಗಿ ಅವರು ತೋರಿಸುವ ಆಟ ಹಾಡುಗಳನ್ನು ನೋಡುತ್ತ ಆನಂದಿಸುವುದೂ ಅಭ್ಯಾಸವಾಯಿತು.

ಹೀಗೆ ನಾಲ್ಕು ದಿನಗಳು ಕಳೆಯಲು, ರಾಕ್ಷಸನಿಗೆ ತನ್ನ ಕಾವಲು ಕೆಲಸದ ಮೇಲಿರುವ ಭಯ ಸಂಶಯಗಳು ಮಾಯವಾದುವು. ಈಗ ರಾಕ್ಷಸನು ತಾನಾಗಿ ಬಂದು ಕುಮಾರಿಯರನ್ನು ಕರೆಯಲಾರಂಭಿಸಿದನು. ಇದನ್ನು ನೋಡಿ ಸುಕೇಶಿನಿ ತನ್ನ ತಂತ್ರ ಇಷ್ಟರ ಮಟ್ಟಿಗೆ ಫಲಿಸಿದುದಕ್ಕೆ ಸಂತೋಷಪಟ್ಟಳು.

ಇನ್ನು ಶಿಲಾಪ್ರತಿಮೆಗಳಾಗಿರುವ ಅವಳಿ ಸಹೋದರರನ್ನು ಮಂತ್ರ ಜಲದಿಂದ ನಿಜರೂಪಕ್ಕೆ ತರಬೇಕಾಗಿದೆ. ಮಂತ್ರಜಲ ತರಬೇಕಾದರೆ, ಏನಾದರೂ ಪಾತ್ರ





ಬೇಕಲ್ಲ? ಹೇಗಾದರೂ ಪಾತ್ರವನ್ನು ಸಂಪಾದಿಸಿದರೂ, ಅದು ರಾಕ್ಷಸನ ತೀಕ್ಷ್ಣ ದೃಷ್ಟಿಗೆ ಕಾಣದಂತೆ ಇಟ್ಟುಕೊಳ್ಳುವುದು ಹೇಗೆ? ಇದಕ್ಕೇನು ಮಾಡುವುದೆಂದು ಬಹಳ ಆಲೋಚನೆ ಮಾಡಿದರು. ಇದಕ್ಕೂ ಬುದ್ಧಿವಂತೆಯಾದ ಸುಕೇಶಿನಿಯೇ ಒಂದು ಉಪಾಯ ಕಂಡುಹಿಡಿದಳು.

ಮರುದಿನ ರಾಕ್ಷಸನನ್ನು ಕರೆದುಕೊಂಡು ಬರುವುದಕ್ಕೆ ಮೊದಲು ಸುಕೇಶಿನಿ ತೋಟದೊಳಗೆ ಹೋಗಿ, ಮಂತ್ರಜಲದಿಂದ ತನ್ನ ಸೀರೆಯ ಒಂದು ಕೊನೆಯನ್ನು ಚೆನ್ನಾಗಿ ನೆನೆಯಿಸಿಕೊಂಡಳು. ಆ ಸೀರೆಯ ಇನ್ನೊಂದು ಕೊನೆಯನ್ನು ಸರೋವರದ ನೀರಿನಿಂದ ನೆನೆಯಿಸಿದಳು.

ಹೀಗೆ ಸಿದ್ಧಳಾದ ಸುಕೇಶಿನಿ ರಾಕ್ಷಸನ ಬಳಿಗೆ ಹೋಗಿ, "ಈದಿನ ಇಲ್ಲಿ ಕಾವಲಾಗಿ ನಾನು ಇರುತ್ತೇನೆ. ನೀನು ಹೋಗಿ ಆಟಪಾಟ ನೋಡಿ ಬಂದು, ಏನೇನು ಆಟಗಳು ಚೆನ್ನಾಗಿದ್ದುವೆಂದು ನನಗೆ ಹೇಳಬೇಕು. ನನಗೆ ಕಾಲು ಸ್ವಲ್ಪ ನೋವು. ಆದುದರಿಂದ ಈದಿನ ನಾನಿಲ್ಲೇ ಕಾವಲಿರುತ್ತೇನೆ" ಎಂದಳು.

"ಹಾಗೇ ಆಗಲಿ." ಎಂದು ಹೇಳಿ ರಾಕ್ಷಸನು ಸ್ವಲ್ಪವೂ ತಡಮಾಡದೆ ಸರೋವರದ ಕಡೆಗೆ ಬೇಗ ಬೇಗನೆ ಹೊರಟ. ಅವನನ್ನು ಕಂಡಕೂಡಲೇ ಸರೋವರದಲ್ಲಿದ್ದ ಹಂಸರೂಪಿಗಳಾದ ಕುಮಾರಿಯರೆಲ್ಲಾ ಮೇಲೆ ಬಂದು ಹಾಡುತ್ತ ನಲಿದಾಡತೊಡಗಿದರು. ರಾಕ್ಷಸನೂ ತಲ್ಲೀನನಾಗಿ ನೋಡತೊಡಗಿದ.

ರಾಕ್ಷಸನು ಕಣ್ಮರೆಯಾಗಿ ಹೋದ ಮರುಕ್ಷಣವೇ ಸುಕೇಶಿನಿ, ತ್ರಿವಳಿ ಸಹೋದರರ ಶಿಲಾಪ್ರತಿಮೆಗಳ ಮೇಲೆ, ತಾನು ನೆನೆಯಿಸಿ ತಂದ ಮಂತ್ರಜಲವನ್ನು ಹಿಂಡಿದಳು. ಕೂಡಲೇ ಆ ಮೂವರಿಗೂ ನಿಜರೂಪಗಳು ಬಂದುವು. ಅವರು ಸುಕೇಶಿನಿಯನ್ನು ನೋಡಿ ಅತ್ಯಾಶ್ಚರ್ಯದಿಂದ, "ಇದೇನು? ನಾವೆಲ್ಲಿದ್ದೇವೆ? ನೀನು ಇಲ್ಲಿಗೆ ಹೇಗೆ ಬಂದೆ? ಆ ರಾಕ್ಷಸನೇನಾದ? ನಾವು ಮೂವರೂ ಇಲ್ಲಿರುವೆವಲ್ಲಾ? ಏನಿದೆಲ್ಲಾ?" ಎಂದು ಕೇಳಿದರು.

ಸುಕೇಶಿನಿ ತಾನು ಮಾಡಿದ ತಂತ್ರಗಳನ್ನೆಲ್ಲಾ ಬೇಗ ಬೇಗನೆ ವಿವರಿಸಿ ಹೇಳಿ, "ಅವನು ಆಟಪಾಟಗಳಲ್ಲಿ ಪರವಶನಾಗಿರುವ ಸಮಯವನ್ನು ನೋಡಿ, ಹೊಂಚು ಹಾಕಿ ಹತಮಾಡಿಬಿಡಬೇಕು. ಅದಕ್ಕೆ ಏನು ಮಾಡಬೇಕೆಂಬುದನ್ನು ನೀವು ಆಲೋಚಿಸಬೇಕು. ನಮಗೊಂದೂ ತೋರುವುದಿಲ್ಲ." ಎಂದಳು.

"ಏನು ಉಪಾಯವೋ? ನಮಗೆ ಕೂಡಾ ಏನೂ ತೋರದಂತಾಗಿದೆ. ಮಾಯದ ಭಸ್ಮವಿತ್ತು, ಅದೂ ಹೋಯಿತು." ಎಂದ ಉದಯನ. ಭಸ್ಮದ ಸಂಗತಿಯನ್ನು ಮರೆತಿದ್ದ ಸುಕೇಶಿನಿಗೆ, ಉದಯನನ ಮಾತಿನಿಂದ ನೆನಪಿಗೆ ಬಂದು, "ಅಂದಹಾಗೆ ಒಂದು ಮಾಡೋಣ. ಈದಿನ ನಿಮ್ಮನ್ನು ಮೊದಲಿನ ಹಾಗೇ ಶಿಲಾಪ್ರತಿಮೆ ಮಾಡಿಬಿಡುತ್ತೇನೆ. ಇಲ್ಲದಿದ್ದರೆ ಕೆಲಸ ಕೆಡುತ್ತದೆ. ನಾಳೆ ಬರುವಾಗ ನಾನು ಆ ಮಾಯದ

ಭಸ್ಮದ ಡಬ್ಬಿ ಕೂಡಾ ತರುತ್ತೇನೆ." ಎಂದಳು. "ಅದು ಹೇಗೆ? ಎಲ್ಲಿಂದ ತರುತ್ತಿ?" ಎಂದು ಅವರು ಕೇಳಲು, "ನಾವು ಅಡಗಿಸಿಟ್ಟಿದ್ದೇವೆ" ಎಂದು ಉತ್ತರ ಕೊಟ್ಟು, ಸರೋವರದ ಜಲದಿಂದ ಒದ್ದೆಯಾದ ಸೀರೆಯ ಕೊನೆಯನ್ನು ಮೂವರು ಕುಮಾರರ ಬಾಯಿಗೂ ಹಿಂಡಿಬಿಟ್ಟಳು. ಆಕೂಡಲೇ ಅವರು ಮೊದಲಿನಂತೆ ಶಿಲಾಪ್ರತಿಮೆಗಳಾದರು.

ಅಷ್ಟರಲ್ಲಿ ರಾಕ್ಷಸನು ಅಲ್ಲಿಗೆ ಬಂದು, "ಎಷ್ಟಾದರೂ ನೀನು ಇದ್ದರೇನೇ ಆಟಕ್ಕೆ ರುಚಿ. ನೀನಿಲ್ಲದ್ದರಿಂದ ಆಟವೆಲ್ಲಾ ಬರೀ ಸಪ್ಪೆ. ನಾಳೆ ಚೆಂದಾಗಿ ಆಡಲು ಕಾಲು ನೋವು ಸರಿಯಾದೀತಷ್ಟೆ?" ಎಂದ ಸುಕೇಶಿನಿಯೊಂದಿಗೆ.

"ಹೌದೇನಯ್ಯ! ಸುಮ್ಮನೆ ನನ್ನನ್ನು ಮುಖಸ್ತುತಿ ಮಾಡುವಿಯೋ ಏನೋ? ನನಗೂ ಇಲ್ಲಿ ಒಬ್ಬಳೇ ಇರುವುದು ಬೇಸರವೇ ಬಂತು ಬಿಡು. ನಾಳೆ ನನ್ನಕ್ಕನನ್ನು ಕಾವಲಿಗಿಟ್ಟು ನಾನೇ ಆಟದ ಸಭೆಯಲ್ಲಿರುತ್ತೇನೆ, ಕೂಡಿದಷ್ಟು ಕುಣಿಯುತ್ತೇನೆ, ಹಾಡುತ್ತೇನೆ ಆಯಿತಷ್ಟೆ?" ಎಂದಳು ಸುಕೇಶಿನಿ.

ರಾಕ್ಷಸನನ್ನು ಅಲ್ಲಿ ಬಿಟ್ಟು ಸುಕೇಶಿನಿ ಸರೋವರದ ಬಳಿಗೆ ಹೋಗಿ ತನ್ನವರನ್ನು ಸೇರಿಕೊಂಡಳು. ಮೂವರು ರಾಜಕುಮಾರಿಯರೂ ಭಸ್ಮದ ಡಬ್ಬಿಯನ್ನು ತರಲು ಅದನ್ನು ಹುಗಿದ ಸ್ಥಳಕ್ಕೆ ಹೋದರು. ನೆಲದಲ್ಲಿ ತೋಡಿ ನೋಡಿದರೆ, ಆ ಡಬ್ಬಿ ಅಲ್ಲಿ ಕಾಣಿಸಲಿಲ್ಲ! ಅದು ಹೇಗೆ ಮಾಯವಾಯಿತು? ಮೂವರೂ ಮುಖಮುಖ ನೋಡಿಕೊಂಡರು. ಆಗ ಸುಕೇಶಿನಿ, "ಯೋಚನೆ ಮಾಡುತ್ತ ಕುಳಿತರೆ ಪ್ರಯೋಜನವಿಲ್ಲ. ನಾಳೆ ಭವನದ ಕಾವಲಿಗೆ ನೀನು ಹೋಗು. ನಾನು ಮಾಡಿದ ಹಾಗೇ ಮಾಡಿ, ಅವರ ಹತ್ತಿರ ಇಲ್ಲಿ ನಡೆದ ಸಂಗತಿಯನ್ನೆಲ್ಲ ಹೇಳು. ಭಸ್ಮದ ಡಬ್ಬಿಯ ಆಶೆಯಿಲ್ಲವೆಂದೂ ಹೇಳು. ಆಮೇಲೆ ಅವರು ಹೇಳಿದಂತೆ ಮಾಡೋಣ" ಎಂದು ಸುಭಾಷಿಣಿ



ಯೊಡನೆ ಹೇಳಿದಳು. ಅದೇ ಸರಿಯೆನಿಸಿತು ಎಲ್ಲರಿಗೂ. ಅದರಂತೆ ಮರುದಿನ ಸುಭಾಷಿಣಿ ಸರೋವರ ಜಲದಿಂದಲೂ, ಮಂತ್ರಜಲದಿಂದಲೂ ಸೀರೆಯ ಕೊನೆಗಳನ್ನು ನೆನೆಯಿಸಿಕೊಂಡು, ಭವನದ ಕಡೆಗೆ ಹೋಗಿ ರಾಕ್ಷಸನನ್ನು ಆಟಪಾಟ ನೋಡಲು ಕಳುಹಿಸಿ ಕೊಟ್ಟಳು. ಅವನು ಹೋದಮೇಲೆ ಸುಭಾಷಿಣಿ ಮಂತ್ರಜಲದಿಂದ ನೆನೆದ ಸೀರೆಯ ಭಾಗವನ್ನು ಶಿಲಾಪ್ರತಿಮೆಗಳ ಮೇಲೆ ಹಿಂಡಿದಳು. ಅದರಿಂದ ಶಿಲಾಪ್ರತಿಮೆಗಳಿಗೆ ನಿಜರೂಪ ಬಾರದಿರಲು, ತಾನು ಹಿಂಡಿದ್ದು ಸರೋವರದ ನೀರೆಂದು, ತನ್ನ ತಪ್ಪನ್ನು ಅರಿತು, ಇನ್ನೊಂದು ಕೊನೆಯ ಜಲವನ್ನು ಮತ್ತೊಮ್ಮೆ ಹಿಂಡಿದಳು. ಕೂಡಲೇ ಸೋದರರು ಮೂವರೂ ನಿಜರೂಪದಿಂದ ಪ್ರತ್ಯಕ್ಷರಾದರು.

ಅವರೊಂದಿಗೆ ಸುಭಾಷಿಣಿ ಚಡಪಡಿಸುವವಳಂತೆ ಭಸ್ಮದ ಡಬ್ಬಿ ಕಾಣೆಯಾದುದನ್ನೂ, ಪುನಃ ಶಿಲೆಗಳಾಗಿಸುವಂತಹ ಸರೋವರದ ನೀರು ತನ್ನ ತಪ್ಪಿನಿಂದ

ವ್ಯರ್ಥವಾದುದನ್ನೂ ತಿಳಿಸಿದಳು. ಅದನ್ನು ಕೇಳಿ ಉದಯನನು, "ಹೀಗಾಯಿತೇ? ಇದನ್ನೆಲ್ಲಾ ನೋಡುವಾಗ ನಾವು ತಲೆಹಾಕಿದ ಕೆಲಸವಾವುದೂ ಜಯಪ್ರದವಾಗುವಂತೆ ಕಾಣುವುದಿಲ್ಲ. ಇಲ್ಲದಿದ್ದರೆ ಅಡಿಗಡಿಗೆ ಹೀಗಾಗುತ್ತಿತ್ತೇ?" ಎಂದ ವೈರಾಗ್ಯದಿಂದ.

ಅದನ್ನು ಕೇಳಿ ನಿಶೀಥನು, "ಜಯಪ್ರದವಾಗಿಲ್ಲವೆಂದರೆ ನಾನು ಒಪ್ಪಲಾರೆ. ದೇವರು ನಮ್ಮನ್ನು ಪರೀಕ್ಷಿಸುತ್ತಾನೆ. ಇಷ್ಟೊಂದಕ್ಕೆ ಹೆದರಿಬಿಟ್ಟರೆ ಹೇಗೆ?" ಎಂದ.

"ಸರಿ, ಈಗ ರಾಕ್ಷಸನು ಹಿಂದಿರುಗಿ ಬರುವುದರೊಳಗೆ ನಾವು ತಪ್ಪಿಸಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ.." ಎಂದು ಏನೋ ಹೇಳುವುದರೊಳಗೆ ಸುಭಾಷಿಣಿ ಅವನನ್ನು ತಡೆದು, "ನನಗೊಂದು ಉಪಾಯ ತೋರುತ್ತದೆ. ಇಲ್ಲಿರುವ ಆ ಮೂರು ಪ್ರತಿಮೆಗಳನ್ನು ತಂದು ನೀವಿದ್ದ ಸ್ಥಳದಲ್ಲೇ ಇಟ್ಟುಬಿಡುವಾ. ಆ ರಾಕ್ಷಸ ದೊಡ್ಡಾನೆಯಂತಹ ಶರೀರದವನೇ ಹೊರತು ತಲೆ ಮಾತ್ರ ಶುದ್ಧ ಕೆಸರುಮುದ್ದೆ. ಆದುದರಿಂದ ಪ್ರತಿಮೆಗಳು ಬದಲಾದುದನ್ನು ಎಷ್ಟುಮಾತ್ರಕ್ಕೂ ಕಂಡುಹಿಡಿಯಲಾರ. ನೀವು ಹೊರಗೆ ಆ ಪೊದರಿನ ಮರೆಯಲ್ಲಿ ಅಡಗಿಕೊಳ್ಳಿರಿ. ಅವನು ಭವನದೊಳಗೆ ಹೋದಮೇಲೆ ನೀವು ಹೊರಗೆ ಬಂದುಬಿಡಿ. ಆಮೇಲೆ ಉಳಿದ ಸಂಗತಿ ನೋಡೋಣ" ಎಂದಳು.

ಸುಭಾಷಿಣಿ ಹೇಳಿದ ಈ ಉಪಾಯ ಬಹು ಚೆನ್ನಾಗಿದೆಯೆನಿಸಿತು. ಮೂವರು ಸಹೋದರರೂ ಸುಭಾಷಿಣಿ ಕೂಡಾ ಸೇರಿ, ಮೂರು ಶಿಲಾಪ್ರತಿಮೆಗಳನ್ನು ತಂದು ಇಡಬೇಕಾದಲ್ಲಿ ಇಟ್ಟರು. ಸುಭಾಷಿಣಿ ಕಾವಲಿಗೆ ನಿಂತಮೇಲೆ ಮೂವರು ಸೋದರರೂ ಹೊರಗೆ ಜಾರಿಕೊಂಡು ಪೊದರಿನ ಮರೆಯಲ್ಲಿ ಸದ್ದಿಲ್ಲದೆ ಅಡಗಿ ಕುಳಿತರು.

ಸ್ವಲ್ಪಹೊತ್ತಿಗೆ ರಾಕ್ಷಸನು ತಿರುಗಿ ಬಂದು, ಸುಭಾಷಿಣಿಯನ್ನು ಕಳುಹಿಸಿಕೊಟ್ಟನು. ಕೂಡಲೇ ಸುಭಾಷಿಣಿ ಪೊದೆಯ ಹಿಂದೆ ಅಡಗಿರುವ ಮೂವರು ಸಹೋದರರೊಂದಿಗೆ ಕೂಡಿಕೊಂಡಳು.

ಈಗ ಮೂವರು ಸಹೋದರರೂ ಶಿಲಾಪ್ರತಿಮೆಗಳಿಂದ ಮುಕ್ತರಾದರೂ, ಮುಂದಿನ ಸಂಗತಿ ಹೇಗೆಂಬುದನ್ನು ನೆನೆಯುವಾಗ, ಪ್ರತಿ ಕ್ಷಣವೂ ಗಂಡಾಂತರಕಾರಿಯಾಗಿರುವಂತೆ ಕಾಣಿಸಿ, ಅವರ ತಲೆ ಚಿಟ್ಟು ಹಿಡಿಯಿತು. ತಪ್ಪಿಸಿಕೊಂಡು ಇದ್ದಷ್ಟು ದಿನವೂ ಪಾರಾದಂತೆ. ಮರುದಿನ ಹೇಗೋ? ದಿನದಿನ ಗಂಡವೂ ದೀರ್ಘಾಯುಸ್ಸೂ ಇದ್ದಹೊರತು ಉಳಿಯುವಂತಿಲ್ಲವೆಂಬ ಏನೋ ಒಂದು ಮೊಂಡಿ ಧೈರ್ಯದಿಂದ ಇರತೊಡಗಿದ್ದಾರೆ. ಸುಭಾಷಿಣಿಯೂ ಧೈರ್ಯದಲ್ಲೇನೂ ಕಡಿಮೆಯವಳಲ್ಲ.

— (ಇನ್ನೂ ಇದೆ)





The three princesses and the three brothers were happy at outwitting the giant. But they could not rest in peace. It was not safe for the three brothers to change into swans and dwell in the lake. The giant knew too well the number of swans. In fact, he counted them every day.

What was to be done? They discussed many possibilities, but nothing seemed to be foolproof.

"Listen to me, brave young men, you have done enough for us. We feel immensely grateful to you. However, we should be very sorry if misfortune befalls you on our account. Please leave us to our destiny and forget us. Go back to your home and live happily," said Subhasini.

Udayan smiled and said, "Thank you for your suggestion, O kind-hearted princess, but we cannot accept it. Now our destiny is not different from yours. If die we must, let us die together. But we are not going to resign ourselves to such a fate very easily."

There was a silence for a while. Then one of the brothers said, "Can't we put an end to the giant?"

"We can, provided we have some help from the other young men who are in the lake as swans," said another brother.

"Very well, we can request the giant to permit all his prisoners to participate in the dance programme!" said Subhasini.

It was decided to try this possibility.

When the giant was accordingly requested by the three sisters, he said, "If that would mean a better performance, why not!"

The time for the dance came. At Subhasini's asking, all the

swans came ashore and turned into the youths that they really were. The youths who for a long time had had no chance to take their human forms, danced most enthusiastically. Stealthily the three brothers mingled with them. The giant who was engrossed in enjoying the dance could not see through their plan.


Suddenly, when the giant had closed his eyes, Udayan unsheathed his sword and with one stroke cut down his head. The head rolled on and was lost in the lake giving a portion of the water a reddish hue.

To everybody's amazement, along with the death of the giant his castle disappeared. But the statues remained as they were.

"No time to waste," said Subhasini. "We must bring those statues to life."

They sprinkled the magic water on the statues and changed them into human beings. They wept with joy and shed tears of gratitude while thanking the three princesses and the three daring brothers.

Udayan suggested that the captive princes depart for their respective kingdoms forthwith. But the princes were reluctant to accept his advice. "How can we go away leaving you in this



dangerous place? Besides, the dwarf wizard is there to check us. We might fall into yet another predicament if he finds us out. Better we wait here, changing into statues again, until all has become well."

As the princes insisted on this, the three brothers were obliged to turn them into statues once more.

Before they had the time to think of their next course of action, they heard a hissing sound. Next moment the second giant was seen descending as a vulture, rapidly assuming his real shape. Instantly all the captives jumped into the lake and became swans.

That day the giant had brought with him a new prisoner, another princess whom he hurled into the lake. Then standing on the bank, he began counting the swans. With the new prisoner he expected the number to rise to 48. But he was amazed to see that the number reached 51. He counted twice and exclaimed, "What a fool I am! I did not know that I had already got more prisoners than I needed!"

But next moment he had some doubt. In a stern voice he ordered the swans to come ashore. They obeyed him and



became human beings.

"Who among you were added last? Answer me or I shall put all of you to death here and now."

Sensing the giant's mood and realising that he meant business, the three brothers stepped forward.

"We have voluntarily joined the group of your prisoners. Now, we demand to know, what right have you to harass these innocent young men and women? Allow us to lead them away peacefully or you too would meet your brother's fate!"



"My brother's fate? Why, what happened to my brother?" The giant roared out his demand. The three brothers laughed.

"What a fool you are not to notice that your castle had disappeared!" observed one of the brothers.

The second giant looked at the ground where the castle used to stand. He was perplexed. His red round eyes betrayed awe and anger. He ran around statues and then returned to the bank of the lake. By then the three brothers had climbed the strange mango tree. Before the giant's eye, they took bites of the mangoes and became monkeys. The giant jumped and ran madly in his bid to capture them, but the three naughty monkeys kept on evading him successfully. Once or twice they even scratched him.

"Wait and see how I punish you!" yelled the giant. Then he changed into a vulture and took off for some unknown destination.

Soon thereafter the dwarf wizard reached there. In the monkeys he could recognise the three brothers.

"Don't think that you can escape the giant's wrath easily!" he said.

Next moment one of the



monkeys jumped onto his shoulders. Another took hold of his beard and began pulling it from a high branch. The dwarf wizard soon found himself hanging from the branch while two of the monkeys hung from his legs.

"Oh! oh! I die of pain. Obviously you know all the magic and miracles of this enchanted place. It was foolish of me to come here. Please release me. I promise never to harm you," cried out the dwarf wizard.

We won't let you go so easily. Promise that you would serve us instead of the giant and would surrender your magic properties to us. Otherwise you remain suspended like this till you meet a painful end," chattered out the monkeys.

"I agree to serve you!" said the dwarf wizard.

The three brothers revived their human forms. Udayan relieved the wizard of his magic string of beads and put it on himself. Instantly the wizard became a man of normal stature while Udayan grew into a dwarf. Udayan also took charge of the magic powders and the magic towel which were with the wizard.

The three brothers then asked the swans to come up. As they reached the shore they became human beings.

By virtue of the magic towel the three brothers produced plenty of fruits—and a large variety of them. They enjoyed a happy feast.

While they were in a relaxed mood there were signs of the second giant's return. The captives jumped into the lake. Udayan sprinkled the magic powder on Kumar, Nishith and the wizard, making them invisible. Himself looking like the dwarf wizard, he stood ready to welcome the giant.



The giant was happy to see Udayan whom he mistook to be his wizard-servant.

"Where are those three monkeys?"


"I have done away with them," said the disguised Udayan.

"Really? let me have a glimpse of their dead-bodies," said the giant gleefully.

Udayan led him towards a well and directed him to look into it. As soon as the giant leaned forward, his head drooping, Udayan drew his sword and beheaded him.

But, to his utter disgust he saw another head popping up on the giant's neck.

"What! you had the audacity to do this?" shrieked out the giant. Then he picked up Udayan and tossed him into the deep well.



ಅವ್ವಳಿಮಕ್ಕಳ ಕಥೆ

Aug 1975

೧೩

[ಉದಯನನೂ ಅವನ ಸಹೋದರರಿಬ್ಬರೂ ಕಾವಲಿನ ರಾಕ್ಷಸನನ್ನು ಕೊಂದ ಮೇಲೆ ಅಣ್ಣ ರಾಕ್ಷಸ ಬಂದು ತ್ರಿವಳಿ ಸಹೋದರರನ್ನು ಹಿಡಿಯಲು ನೋಡಿದ. ಅವರು ಕೋತಿಗಳ ರೂಪದಿಂದ ತಪ್ಪಿಸಿಕೊಂಡರು. ಆಗ ಅಲ್ಲಿಗೆ ಬಂದ ಗಡ್ಡದ ಗಿಡ್ಡನನ್ನು ಮೂವರು ಸಹೋದರರೂ ತಮ್ಮ ಚಾತುರ್ಯದಿಂದ ವಶಪಡಿಸಿಕೊಂಡರು. ಅಣ್ಣ ರಾಕ್ಷಸನ ಕೈಗೆ ಸಿಕ್ಕಿಬಿದ್ದು ಉದಯನ ಬಾವಿಗೆ ಎಸೆಯಲ್ಪಟ್ಟ.]

ರಾಕ್ಷಸನು ಗಡ್ಡದ ಗಿಡ್ಡನ ವೇಷದಲ್ಲಿದ್ದ ಉದಯನನ್ನು ಬಾವಿಯೊಳಗೆ ಬಿಸುಟು, ಮತ್ತೆ ಅಲ್ಲೆ ಗಳಿಗೆಯೂ ನಿಲ್ಲದೆ ಹದ್ದಿನ ರೂಪದಲ್ಲಿ ಹಾರಿಹೋದನು. ಆಳವಾದ ಆ ಕತ್ತಲೆಯ ಬಾವಿಯೊಳಗೆ ಬಿದ್ದ ಉದಯನನು ಮೇಲೆ ಬರಲು ಏನೇನೋ ಮಾಡಿ ನೋಡಿದನು. ಸಾಧ್ಯವಾಗಲಿಲ್ಲ.

ಒಂದರ ಮೇಲೊಂದಾಗಿ ಏಳು ದಿನಗಳು ಕಳೆದುವು. ಉದಯನ ಬಾವಿಯೊಳಗೇ ಕೊಳೆಯುತ್ತಿದ್ದ. ಆದರೆ ಗಡ್ಡದ ಮಹಿಮೆಯೋ ಮತ್ತೇನೋ, ಅವನು ಆ ಕೂಪದೊಳಗೆ ಶಕ್ತಿಗುಂದಿ ಉತ್ಸಾಹ ಕಳೆದುಕೊಳ್ಳಲಿಲ್ಲ. ಇದನ್ನು ನೋಡಿ ಅವನಿಗೇ ಆಶ್ಚರ್ಯವಾಯಿತು. ತನ್ನ ಮೇಲೆ ಯಾವದೋ ಒಳ್ಳೇ ದೈವದ ದೃಷ್ಟಿಯೂ ಇದೆಯೆನಿಸಿತು. ಆದರಂತೆ ಅವನ ಭಸ್ಮದ ಪ್ರಭಾವದಿಂದ ಅದೃಶ್ಯರನ್ನಾಗಿ ಮಾಡಲ್ಪಟ್ಟ ಸಂಧ್ಯಾನಿಶೀಥರೂ, ನಿಜವಾದ ಗಡ್ಡದ ಮಾಂತ್ರಿಕನೂ ಅದೃಶ್ಯರೂಪದಲ್ಲೇ ಇದ್ದರು. ಪಾಪ, ಅವರಿಗೆಲ್ಲ ಮತ್ತೆ ನಿಜರೂಪ ಬರುವಂತೆ ಮಾಡುವ ಮಂತ್ರದ ಭಸ್ಮವೆಲ್ಲ ಉದಯನ ನೊಂದಿಗೇ ಸಿಕ್ಕಿಕೊಂಡಿವೆಯಷ್ಟೆ? ಇನ್ನು ಅವರ ಗತಿ ಕೂಡಾ ಹೇಗೋ? ಇದನ್ನೆಲ್ಲಾ ಆಲೋಚಿಸುತ್ತ ತಳಮಳ



ಗೊಂಡು ಮೂವರು ರಾಜಕುಮಾರಿಯರೂ ಸ್ಥಿಮಿತ ಗೆಟ್ಟು ಹೋಗಿದ್ದರು. ಒಂದು ದಿನ ಕೂಡಾ ಅವರು ಸುಮ್ಮನಿರಲಿಲ್ಲ. ಒಂದು ಕ್ಷಣವೂ ತಮ್ಮನ್ನು ಬಿಡದೆ ಗಮನಿಸಿಕೊಂಡೇ ಇದ್ದ ಅವಳಿ ಸಹೋದರರು ಈಗೆಲ್ಲಿಹೋದರೋ ಮತ್ತೇನಾದರೂ ದೊಡ್ಡ ಆಪತ್ತಿನಲ್ಲಿ ಸಿಕ್ಕಿಕೊಂಡರೇನೋ? ಅದು ಯಾವ ಬಗೆಯ ಆಪತ್ತೋ? ಅಯ್ಯೋ, ದೇವರೇ! ಅವರು ಸುರಕ್ಷಿತರಾಗಿರುವರೆಂದು ತಿಳಿದರೇ ಸಾಕಿತ್ತು. ಅಂತೆಯೇ ಮೂವರು ಸೋದರಿಯರೂ ಅವರನ್ನು ಹುಡುಕುತ್ತಲೇ ಇದ್ದರು. ರಾಕ್ಷಸನ ಭಯಕ್ಕಿಂತಲೂ ಉಪಕಾರಕ್ಕಾಗಿ ಬಂದವರ ಕ್ಷೇಮಚಿಂತನೆಯೇ ಅವರಿಗೆ ದೊಡ್ಡದಾಗಿ ಹೋಯಿತು.

ಹೀಗೆ ಹುಡುಕುತ್ತ ಅವರು ಉದಯನನು ಸಿಕ್ಕಿಕೊಂಡ ಬಾವಿಯ ಬದಿಗೂ ಬಂದರು. ಆದರೆ ಉದಯನನು ಗಡ್ಡದವನ ಗಿಡ್ಡ ರೂಪದಲ್ಲಿದ್ದುದರಿಂದ, ಅವನು ಬಾವಿಯೊಳಗಿರುವ ಸಂಗತಿ ಅವರಿಗೆ ಗೊತ್ತಾಗಲಿಲ್ಲ. ಸುಮ್ಮನೆ ಬಗ್ಗಿ ನೋಡಿದರು, ಅಷ್ಟೇ. ಆದರೆ ತನ್ನನ್ನು ಹುಡುಕುತ್ತ ರಾಜಕುಮಾರಿಯರು ಬಾವಿಯ ಹತ್ತಿರ ಬಂದ ಸಂಗತಿ ಉದಯನನಿಗೆ ತಿಳಿಯಿತು. ಗಟ್ಟಿಯಾಗಿ ಕೂಗಿ ಕೂಗಿ ನೋಡಿದ. ಗಿಡ್ಡ ರೂಪದವನ ಕೂಗು ಕೂಡಾ ಗಿಡ್ಡಗಾಗಿ ಬಾವಿಯ ಅರ್ಧ ಭಾಗಕ್ಕಿಂತ ಮೇಲೆ ಕೇಳಿಸಲೇ ಇಲ್ಲ. ಗಂಟಲು ಹರಿಯುವಂತೆ ಕೂಗಿದರೂ, ರಾಜಕುಮಾರಿಯರಿಗೆ ಗೊತ್ತಾಗದೆ ದೂರ ದೂರ ಹೋಗಿಬಿಟ್ಟುದನ್ನು ತಿಳಿದು ಉದಯನನು ಹತಾಶನಾದ. ಅವನಿಗೆ ದಿಗಿಲಾಯಿತು.

ಇನ್ನೇನು ಮಾಡಲೆಂದು ತಲೆ ತುರಿಸಿಕೊಳ್ಳುತ್ತಿದ್ದಾಗ, ತನ್ನೊಂದಿಗಿರುವ ತನ್ನ ಕತ್ತಿಯ ನೆನಪು ಬಂತು. ತನ್ನನ್ನು ಬಾವಿಗೆ ಬಿಸುಟ ರಾಕ್ಷಸನು, ತನ್ನ ಕತ್ತಿಯನ್ನು ಕೂಡಾ ಕಿತ್ತು ಬಾವಿಗೆ ಬಿಸುಟಿದ್ದಾನೆ. ಈಗ ಉದಯನನು ಆ ಕತ್ತಿಯನ್ನು ಹುಡುಕಿ ತೆಗೆದು, ಎತ್ತಿ ಮೇಲಕ್ಕೆ ಬೀಸಿ ಒಗೆದ. ಅದು ಬಾವಿಯ ಮೇಲು ಭಾಗದಲ್ಲಿ ನೆಲಕ್ಕೆ ಚುಚ್ಚಿ ಹಾಗೆಯೇ ನಿಂತಿತು. ಆ ಕತ್ತಿಯನ್ನು ನೋಡಿಯಾದರೂ ತಾನು ಬಾವಿಯಲ್ಲಿರುವ ಸಂಗತಿ ಆ ರಾಜಕುಮಾರಿಯರಿಗೆ ತಿಳಿಯಬಹುದೆಂದು ಆಶ. ಆದರೆ ಅವನು ಅಂದುಕೊಂಡಂತೆ ಅವರು ಒಮ್ಮೆ ನೋಡಿ ಹೋದ ಆ ಸ್ಥಳಕ್ಕೆ ಮತ್ತೆ ಬೇಗನೆ ಬರಲಿಲ್ಲ.

ಒಂದು ವಾರ ದಿನಗಳು ಕಳೆದ ಮೇಲೆ ರಾಜಕುಮಾರಿಯರು ಮತ್ತೊಮ್ಮೆ ಹುಡುಕುತ್ತ ಅಲ್ಲಿಗೆ ಬಂದರು. ಬಾವಿಯ ಬದಿಯ ನೆಲದ ಮೇಲೆ ಚುಚ್ಚಿನಿಂತಿರುವ ಕತ್ತಿಯನ್ನು ಕಂಡು, ಅವರಿಗಾದ ಆಶ್ಚರ್ಯಕ್ಕೆ ಮೇರೆಯಿರಲಿಲ್ಲ. "ಇದೇನು? ಎಲ್ಲಿಂದ ಬಂತು? ಕಳೆದ ಬಾರಿ ನಾವು ಬಂದು ನೋಡಿದಾಗ ಈ ಕತ್ತಿ ಇರಲಿಲ್ಲ. ಒಂದುವೇಳೆ ರಾಕ್ಷಸನು ಉದಯನನನ್ನು ಈ ಕತ್ತಿಯಿಂದ ಕಡಿದು ಬಾವಿಗೆ ಹಾಕಿದನೇನೋ?" ಹೀಗೆಂದುಕೊಳ್ಳುತ್ತ ಅವರು ಬಾವಿ

ಯೊಳಗೆ ಬಗ್ಗಿ ನೋಡಿದರು. ಏನಿದು ? ಯಾರದು ? ಆಶ್ಚರ್ಯದ ಮೇಲೆ ಮತ್ತೊಂದು ಆಶ್ಚರ್ಯ, ಅದ್ಭುತ ! ಸ್ತಂಭೀಭೂತರಾಗಿ ಹಾಗೇ ನೋಡುತ್ತ ನಿಂತುಬಿಟ್ಟರು. ಬಾವಿಯ ತುಂಬ ಬಾಳೇಹಣ್ಣು, ಮಾವಿನಹಣ್ಣು, ಪೇರಳೆ, ಸೇಬು ಮೊದಲಾದ ಬಗೆ ಬಗೆಯ ಹಣ್ಣುಗಳು ತುಂಬಿವೆ. ಅವುಗಳ ಮೇಲೆ ಗಡ್ಡದ ಮಾಂತ್ರಿಕನ ವೇಷದಲ್ಲಿ ಉದಯನನು ಕಾಲು ಗಳನ್ನು ಕುಣಿಯುವವನ ಹಾಗೆ ಎತ್ತೆತ್ತಿ ಹಾಕುತ್ತ ನಿಂತಿದ್ದಾನೆ. ಅವನ ಕೈಯಲ್ಲಿ ಮಾಯದ ಕರವಸ್ತ್ರ ವಿದ್ದಿತು. ಬಾಯಿಯಿಂದ ಇನ್ನೂ ಏನೇನೋ ಹಣ್ಣು ಗಳ ಹೆಸರನ್ನು ಹೇಳುತ್ತಾ ಇದ್ದಾನೆ. ಕರವಸ್ತ್ರದಿಂದ ಹಣ್ಣುಗಳು ಉದುರುತ್ತಾ ಬಾವಿಯಲ್ಲಿ ತುಂಬಿ ಕೊಂಡು ಮೇಲೆ ಮೇಲೆ ಬರುತ್ತಾ ಇವೆ. ಓಹೋ ! ನೀರು ಉಕ್ಕಿ ಮೇಲೆ ಬರುವ ಹಾಗೆಯೇ ಹಣ್ಣು ಗಳು ಉಕ್ಕಿ ಮೇಲೆ ಬರುತ್ತ ಉದಯನನೂ ಮೇಲೆ ಬರುತ್ತಿದ್ದಾನೆ.


ಅವನು ಬಾವಿಯ ಅಂಚಿನವರೆಗೂ ಬಂದ ಕೂಡಲೇ, ರಾಜಕುಮಾರಿಯರಲ್ಲಿ ಚಲನೆ ಬಂತು. ಅವರು ಕೈಚಾಚಿ ಉದಯನನನ್ನು ಹಿಡಿದು ನೆಲದ ಮೇಲೆ ಎಳೆದರು.

ಆಗ ಉದಯನನು ತನ್ನ ಸಮಾಚಾರವನ್ನೆಲ್ಲ ಅವ ರೊಂದಿಗೆ ಹೇಳಿದ. ಅವನು ರಾಕ್ಷಸನ ತಲೆ ಕಡಿದು ದನ್ನೂ, ರಾಕ್ಷಸನಿಂದ ಬಾವಿಗೆ ಎಸೆಯಲ್ಪಟ್ಟು ದನ್ನೂ, ಮೇಲೆ ಬರಲು ತಾನು ಮಾಡಿದ ಉಪಾಯ ವನ್ನೂ, ಈ ಉಪಾಯ ಬಹಳ ನಿಧಾನವಾಗಿ ತನಗೆ ಸ್ಫುರಿಸಿತೆಂದೂ ಹೇಳಿದುದನ್ನು ಕೇಳಿ, ರಾಜಕುಮಾರಿ ಯರು, "ಅಬ್ಬ ! ದೇವರ ದಯೆ ! ಕಡೆಗೂ ನಿನ್ನ ಹತ್ತಿರ ಇದ್ದ ಈ ಮಾಯಾಕರವಸ್ತ್ರವೇ ನಿನ್ನನ್ನು ಕಾಪಾಡಿತು. ನಾವಾದರೂ ಏನು ಮಾಡುತ್ತಿದ್ದೆವು ? ಎಷ್ಟುಕಾಲ ನಿನ್ನ ಹಣೆಯಲ್ಲಿ ಕೂಪವಾಸ ಬರೆದಿರ ಬೇಕು. ಅಂತೂ ನಿಧಾನವಾಗಿಯಾದರೂ ಇಂಥ



ಉಪಾಯ ತೋರಿದ್ದೊಂದು ಆಶ್ಚರ್ಯವೇ ! ಇನ್ನು ಒಳ್ಳೆಯ ಕಾಲ ಬೇಗನೇ ಬಂದೀತು" ಎಂದರು.

ಆ ಮೇಲೆ ಅವರೆಲ್ಲ ಅಲ್ಲಿಂದ ಹೊರಟು, ಸಂಧ್ಯಾ ನಿಶೀಥರೂ, ಗಡ್ಡದ ಮಾಂತ್ರಿಕನೂ ಅದೃಶ್ಯ ರೂಪ ದಲ್ಲಿರುವ ಸ್ಥಳಕ್ಕೆ ನಡೆದರು. ಉದಯನನು ತನ್ನ ಹತ್ತಿರವಿದ್ದ ಭಸ್ಮವನ್ನು ಆ ಸ್ಥಳದಲ್ಲಿ ಚಿಮುಕಿಸಿದ. ಅದೃಶ್ಯರಾಗಿದ್ದ ಮೂವರೂ ನಿಜರೂಪದಲ್ಲಿ ಪ್ರತ್ಯಕ್ಷ ರಾದರು. "ಏನು ಬಹಳ ತಡವಾಯಿತಲ್ಲಾ ? ಏನಾಯಿತು ?" ಎಂದು ಸಂಧ್ಯಾನಿಶೀಥರು ಪ್ರಶ್ನೆ ಮಾಡಲು, ಉದಯನನು ನಡೆದ ಸಂಗತಿಯನ್ನು ಅವರಿಗೆ ಹೇಳಿದನು. ಅದನ್ನು ಕೇಳಿ ಗಡ್ಡದ ಮಾಂತ್ರಿಕ, "ಹಾಗಾದರೆ ರಾಕ್ಷಸನು ನನ್ನನ್ನೇ ಬಾವಿಗೆ ಎಸೆದೆನೆಂದು ತಿಳಿದಿದ್ದಾನೆ. ಇದು ಒಂದು ಲೆಕ್ಕದಲ್ಲಿ ಒಳ್ಳೆಯದೇ ಆಯಿತು. ಸರಿ, ಇನ್ನೀಗ ಅವನು ಪುನಃ ಬರುವುದರೊಳಗೆ ಮುಂದೆ ಮಾಡಬೇಕಾದುದನ್ನು ಕುರಿತು ಆಲೋಚನೆ ಮಾಡಬೇಕು." ಎಂದನು.



ಅದಕ್ಕೆ ಉದಯನನು, "ಹೌದು. ಈಸಾರಿ ರಾಕ್ಷಸನು ಬಂದ ಕೂಡಲೇ ನಾನು ಬಾವಿಯೊಳಗಿರುವೆನೋ ಇಲ್ಲವೋ ಎಂದು ನೋಡದೆ ಬಿಡಲಾರ. ನಾನು ಬಾವಿಯಲ್ಲಿಲ್ಲದ್ದನ್ನೂ, ಬಾವಿ ತುಂಬಾ ಹಣ್ಣುಗಳಿರುವುದನ್ನೂ ನೋಡಿ ಅವನು ಅನುಮಾನಪಡುತ್ತಾನೆ. ಆದಕ್ಕೇನು ಮಾಡೋಣ ?" ಎಂದನು.

"ಅವನು ಬರುವಾಗ ಆ ಬಾವಿ ಅಲ್ಲಿ ಇದ್ದರೆ ತಾನೆ ? ಈಗಲೇ ತೋರಿಸುತ್ತೇನೆ, ಬಾವಿಯ ಕತೆ" ಎಂದು ಗಡ್ಡದಗಿಡ್ಡ ಮಾಂತ್ರಿಕ, ಆ ಬಾವಿಯ ಬಳಿಗೆ ಹೋಗಿ ಒಂದಿಷ್ಟು ಮಂತ್ರದ ಭಸ್ಮವನ್ನು ಹಾರಿಸಿದನು. ಬಾವಿ ಮಟ ಮಾಯವಾಗಿ ಹೋಯಿತು. ಆ ಸ್ಥಳದಲ್ಲಿ ಖಾಲೀ ಮೈದಾನ.

ಆದನ್ನು ನೋಡಿ ಉದಯನನು, "ಭೇಷ್ ! ಅವನು ಈ ಮೈದಾನ ಪ್ರದೇಶದಲ್ಲಿ ಆ ಬಾವಿಯನ್ನು ಹುಡುಕಿಕೊಂಡಾಗ ನೋಡಿಕೊಳ್ಳುವ. ಈಗ ನೀನು ಮಾಡಬೇಕಾದ ಒಂದು ಕೆಲಸವನ್ನು ಹೇಳುತ್ತೇನೆ. ನಾವು ರಾಜಕುಮಾರಿಯರನ್ನು ಹುಡುಕಲು ಹೊರಟು ಈಗ ಏಳು ವರ್ಷಗಳಾಗಿವೆ. ಅಲ್ಲಿ ರಾಜನೂ ರಾಣಿಯೂ ನಮ್ಮ ಗತಿ ಏನಾಯಿತೋ ಎಂದು ತುಂಬಾ ಚಡಪಡಿಸಿಕೊಂಡಿದ್ದಾರು. ಆದುದರಿಂದ ನೀನು ಈ ಕೂಡಲೇ ಶ್ರಾವಸ್ತಿ ನಗರಕ್ಕೆ ಹೋಗಿ, ನಾವೂ ರಾಜಕುಮಾರಿಯರೂ ಕ್ಷೇಮವಾಗಿರುವೆವೆಂದೂ, ಬೇಗದಲ್ಲೇ ಮನೆಗೆ ಬಂದು ಸೇರುವೆವೆಂದೂ ಹೇಳಿ ಬರಬೇಕು." ಎಂದನು.

ಗಡ್ಡದ ಮಾಂತ್ರಿಕ ಉದಯನನ ಮಾತಿನಂತೆ ನಡೆಯುವೆನೆಂದು ಹೇಳಿ, ಶ್ರಾವಸ್ತಿ ನಗರಕ್ಕೆ ಹೊರಟು ನಿಂತನು. ಆಗ ಉದಯನನು, ತಾನು ಮೊತ್ತಮೊದಲು, ಈ ಮಾಯಾ ಭವನದೊಳಗೆ ಪ್ರವೇಶಿಸುವುದಕ್ಕೆ ಮುಂಚೆ ಕಂಥಕದಲ್ಲಿ ಬಿದ್ದಾಗ, ತನ್ನ ಕುದುರೆಯನ್ನು ಅಲ್ಲೇ ಬಿಟ್ಟು ತಾನು ಮಾತ್ರ ಹೇಗೋ ಮೇಲೆ ಬಂದ ಸಮಾಚಾರವನ್ನು ಹೇಳಿ, "ನೀನು ಕಾಲು ನಡಿಗೆಯಿಂದ ಹೋದರೆ ಶ್ರಾವಸ್ತಿ ನಗರಕ್ಕೆ ತಲಪುವುದು ಯಾವಾಗಲೋ ? ನನ್ನ ಕುದುರೆಯ ಮೇಲೆ ಏರಿಕೊಂಡು ಹೋಗಿ ಬಾ. ಮೊದಲು ಅವರು ನಿನ್ನನ್ನು ನಂಬದೇ ಹೋಗಬಹುದು. ಕುದುರೆಯನ್ನು ನೋಡಿದ ಕೂಡಲೇ ನೀನು ಹೇಳಿದುದನ್ನು ನಂಬುತ್ತಾರೆ" ಎಂದನು.

ಅದರಂತೆ ಉದಯನನ ಬಿಳೀ ಬಣ್ಣದ ಕುದುರೆಯ ಮೇಲೆ ಗಡ್ಡದ ಮಾಂತ್ರಿಕನು ಹೊರಟನು. ಅವನು ಹಾಗೆ ಹೋಗುತ್ತಿದ್ದಾಗ, ಒಂದು ಮೈದಾನದ ದಾರಿಯಲ್ಲಿ ದಾನಶೀಲ ಮಹಾರಾಜನ ಭಟರು ಸಂಧ್ಯಾ ನಿಶೀಥರ ಕುದುರೆಗಳ ಮೇಲೆ ಬರುತ್ತ, ಗಡ್ಡದ ಮಾಂತ್ರಿಕನನ್ನೂ, ಬಿಳೀ ಕುದುರೆಯನ್ನೂ ನೋಡಿ ನಿಂತರು. ತಮ್ಮ ರಾಜನ ಬಿಳೀ ಕುದುರೆಯ ಮೇಲೆ ಮಾರುದ್ದ ಗಡ್ಡದ ಈ ಗಿಡ್ಡನು ಯಾವನು ?

ಅವರು ಗಡ್ಡದ ಮಾಂತ್ರಿಕನನ್ನು ಅಡ್ಡಗಟ್ಟಿ, "ಯಾರು ನೀನು ? ಈ ಕುದುರೆ ನಿನಗೆಲ್ಲಿ ಸಿಕ್ಕಿತು ?

ಎಲ್ಲಿಗೆ ಹೋಗುತ್ತಿರುವಿ? ಇದನ್ನೆಲ್ಲ ಹೇಳಿದ ಹೊರತು ಕದಲಲು ಬಿಡಲಾರೆವು. ಸುಳ್ಳಾಡಿದರೆ ಕತ್ತರಿಸಿ ಹಾಕುತ್ತೇವೆ" ಎಂದರು.


"ನಾನು ದಾನಶೀಲ ಮಹಾರಾಜರಿಗೆ ಒಂದು ಶುಭ ಸಮಾಚಾರ ತಿಳಿಸಲು ಹೋಗುತ್ತಿದ್ದೇನೆ. ಅಂದ ಹಾಗೆ ನೀವು ಏರಿಕೊಂಡಿರುವ ಈ ಕುದುರೆಗಳನ್ನು ಕೂಡ ನಾನು ಈ ಮೊದಲೊಮ್ಮೆ ನೋಡಿದ್ದೇನಲ್ಲ? ನೀವು ದಾನಶೀಲ ಮಹಾರಾಜರ ಸೇವಕರೇನು?" ಎಂದು ಕೇಳಿದ.


"ಹೌದು. ದಾನಶೀಲ ಮಹಾರಾಜರೇ ನಮ್ಮ ಪ್ರಭುಗಳು. ನೀನು ತಂದ ಶುಭವಾರ್ತೆಯನ್ನು ಮೊದಲು ನಮ್ಮ ಮುಂದೆ ಹೇಳು" ಎಂದು ರಾಜಭಟರು ಅವಸರ ಪಡಿಸಿದರು.

"ಮೂವರು ರಾಜಕುಮಾರಿಯರೂ, ಅವರನ್ನು ಹುಡುಕಲು ಹೊರಟ ಮೂವರು ಯುವಕರೂ ಸುಖವಾಗಿದ್ದಾರೆ. ಈ ಮಾತನ್ನೇ ಮಹಾರಾಜರಿಗೆ ಹೇಳಬೇಕು." ಎಂದ ಗಡ್ಡದ ಮಾಂತ್ರಿಕ.

"ಹಾಗೇನು? ಭೇಷ್ ಭೇಷ್! ನಾವೂ ನಿನ್ನೊಂದಿಗೆ ಬರುತ್ತೇವೆ, ನಡೆ" ಎಂದರು ಭಟರು ಬಹಳ ಸಂತೋಷದಿಂದ. ಆಗ ಗಡ್ಡದ ಮಾಂತ್ರಿಕ ಅವರನ್ನು ನೋಡಿ, "ಹಾಗೆ ಬೇಡ. ಒಂದು ಕೆಲಸ ಮಾಡೋಣ. ಈಗ ನಾವೆಲ್ಲಾ ಕೂಡಿ ರಾಜಕುಮಾರಿಯರಿರುವ ಸ್ಥಳಕ್ಕೆ ಹೋಗೋಣ. ನೀವು ಅಲ್ಲಿ ಅವರಿಗೆ ರಕ್ಷಕರಾಗಿಯೂ ಸಹಾಯಕರಾಗಿಯೂ ಇರಿ. ಆಮೇಲೆ ನಾನು ಹೋಗಿ ದಾನಶೀಲ ಮಹಾರಾಜರಿಗೆ ಈ ಸುದ್ದಿ ತಿಳಿಸಿಬಿಡುತ್ತೇನೆ. ಆಗ ಬಹು ಚಚ್ಚ?" ಎಂದನು.

ಇದಕ್ಕೆ ಆ ಭಟರು ಒಪ್ಪಿಕೊಂಡರು. ಅಲ್ಲಿಂದ ಅವರೆಲ್ಲ ರಾಕ್ಷಸನ ಮಾಯಾ ಪ್ರದೇಶವನ್ನು ಸೇರಿದರು. ರಾಜಭಟರನ್ನು ಅಲ್ಲಿ ಬಿಟ್ಟು ಗಡ್ಡದ ಮಾಂತ್ರಿಕ ಮತ್ತೆ ಶ್ರಾವಸ್ತಿ ನಗರಕ್ಕೆ ಹೊರಟನು.





ಅವನು ಸ್ವಲ್ಪ ದೂರ ಹೋಗುವಷ್ಟರಲ್ಲಿ ಸುಳಿಗಾಳಿಯೊಂದು ಪ್ರಾರಂಭವಾಯಿತು. ರಾಕ್ಷಸನ ಬರುವಿಕೆಗೆ ಇದು ಪೂರ್ವ ಸೂಚನೆ ಎಂದು ಗ್ರಹಿಸಿ ಗಡ್ಡದ ಮಾಂತ್ರಿಕ ಕುದುರೆಯನ್ನು ಶರವೇಗದಿಂದ ಓಡಿಸ ತೊಡಗಿದನು. ಆದರೂ ಹದ್ದಿನ ರೂಪದ ರಾಕ್ಷಸನು ರಿವ್ವನೆ ಹಾರಿಬಂದು, ಕುದುರೆಯ ಮೇಲೆ ಕುಳಿತಿದ್ದ ಗಡ್ಡದ ಮಾಂತ್ರಿಕನನ್ನು ಎತ್ತಿಕೊಂಡು ಆಕಾಶ ಮಾರ್ಗದಲ್ಲಿ ಹೋಗಿಬಿಟ್ಟನು.

ಆ ಬಿಳೀ ಕುದುರೆ ಮಾತ್ರ ಸವಾರನಿಲ್ಲದೆ ತಿರುಗುತ್ತಾ, ಏಳು ದಿನಗಳ ಮೇಲೆ ಶ್ರಾವಸ್ತಿನಗರಕ್ಕೆ ಹೋಗಿ ರಾಜಭವನವನ್ನು ತಲುಪಿತು. ಅದನ್ನು ನೋಡಿದ ಕೂಡಲೇ ರಾಜನು ಓಡೋಡಿ ಬಂದು, ಅದನ್ನು ಅರಮನೆಯೊಳಗೆ ಕರೆದೊಯ್ಯಲು ನೋಡಿದನು. ಆದರೆ ಆ ಕುದುರೆ ರಾಜನೊಂದಿಗೆ ಬರಲು ನಿರಾಕರಿಸಿ ಸುಮಿಯುತ್ತ, ಬಂದ ದಾರಿಯಲ್ಲೇ ಹಿಂದೆ ಹೋಗಿ ಅವರನ್ನೂ ತನ್ನೊಂದಿಗೆ ಬರುವಂತೆ ತಲೆಯಾಡಿಸುತ್ತಿದೆ; ಕಾಲುಗಳನ್ನು ಹಿಂದಕ್ಕೂ ಮುಂದಕ್ಕೂ ಎತ್ತಿ ಎತ್ತಿ ಹಾಕುತ್ತಿದೆ.

ಸುತ್ತಲೂ ಗುಂಪುಗೂಡಿದ ಸೇವಕರನ್ನು ನೋಡಿ ರಾಜನು, "ಉದಯನನು ಏನಾದನೋ? ಈ ಕುದುರೆ ಮಾತ್ರ ಇಲ್ಲಿಗೆ ಏಕೆ ಬಂದಿತೋ? ಇದೇಕೆ ಹೀಗೆ ಮಾಡುತ್ತಿದೆಯೋ? ಬಾಯಿಬಾರದ ಇದರ ಭಾವಗಳನ್ನು ನೋಡಿದರೆ, ಆ ಹುಡುಗರು ಏನೋ ಅಪಾಯದಲ್ಲಿ ಸಿಕ್ಕಿಕೊಂಡಿರುವ ಹಾಗೆ ಕಾಣುತ್ತದೆ. ಇಲ್ಲಿಯವರೆಗೆ ಬಂದ ಈ ಕುದುರೆ ನಾವು ಕರೆಯುವಂತೆ ಬಾರದೆ, ಬಂದದಾರಿಯಲ್ಲೇ ಹಿಂದೆ ಹೋಗಲು ನೋಡುತ್ತಿದೆ. ಇದರಲ್ಲೇನೋ ರಹಸ್ಯವಿರಬೇಕು. ಇದು ಎಲ್ಲಿಗೆ ಹೋಗುವುದೋ ಅಲ್ಲಿಗೇ ನೀವೂ ಹೋಗಿ, ಅಲ್ಲೇನಾಗಿದೆಯೋ ನೋಡಿ ಬನ್ನಿ. ಬೇಗ ಸಮಾಚಾರ ತಿಳಿಸಿರಿ" ಎಂದನು.

ಆದರಂತೆ ಆ ಕುದುರೆಯ ಹಿಂದೆಯೇ ಅನೇಕ ಸೇವಕರು ಹೊರಟರು. ಆದರೆ ಅಷ್ಟರಲ್ಲಿ ಮುಂದೆ ಹೋಗುತ್ತಿದ್ದ ಆ ಕುದುರೆ ತಟ್ಟನೆ ತಿರುಗಿ ನಿಂತು, ಎಲ್ಲರನ್ನೂ ಹಿಂದಿರುಗಿ ಹೋಗುವಂತೆ ದೂಡ ತೊಡಗಿತು. ಇದನ್ನು ನೋಡಿ ರಾಜನಿಗೆ ಅದರ ಭಾವವು ಅರ್ಥವಾಗ ತೊಡಗಿತು. ಅವನು ಮಂತ್ರಿಯನ್ನು ಬಳಿಗೆ ಕರೆದು, "ಇವರೆಲ್ಲರೂ ತನ್ನೊಂದಿಗೆ ಬರುವುದು ಈ ಕುದುರೆಗೆ ಇಷ್ಟವಿಲ್ಲ. ಅವರೆಲ್ಲಬೇಡ. ನೀವು ಮಾತ್ರ ಕುದುರೆಯೊಂದಿಗೆ ಹೋಗಿರಿ." ಎಂದು ಹೇಳಿ ಮಂತ್ರಿಯನ್ನು ಕಳುಹಿಸಿದನು.

ಸೇವಕರೆಲ್ಲ ಹಿಂದಿರುಗಿ ಮಂತ್ರಿಯೊಬ್ಬನೇ ತನ್ನ ಹಿಂದೆ ಬರಲು ಕುದುರೆ ವೇಗವಾಗಿ ಮುಂದೆ ಮುಂದೆ ಹೋಯಿತು.

* * *

ಅಲ್ಲಿ ಅವಳಿ ಸಹೋದರರೂ, ರಾಜಕುಮಾರಿಯರೂ ಆಯೋಮಯದಲ್ಲಿ ಸಿಕ್ಕಿಬಿದ್ದವರಂತೆ ಬಹಳ ಆಂದೋಳನೆಗೊಳಗಾಗಿದ್ದರು. ರಾಜನಿಗೆ ಸಮಾಚಾರ

ಹೇಳಿ ಹಿಂದಿರುಗಿ ಬರುತ್ತೇನೆಂದು ಹೋದ ಗಡ್ಡದ ಮಾಂತ್ರಿಕ ಹತ್ತು ದಿನಗಳಾದರೂ ಹಿಂದಿರುಗಿ ಬರಲಿಲ್ಲ. ಕುದುರೆಯ ಮೇಲೆ ಏರಿ ಹೋದವನು ಶ್ರಾವಸ್ತಿನಗರಕ್ಕೆ ಹೋಗಿ ಬರಲು ಒಂದುವಾರ ದಿನಗಳೇ ಸಾಕಿತ್ತು. ಅವನ ದಾರಿ ನೋಡಿ ನೋಡಿ ಸಾಕಾಯಿತು. ಅವಳಿ ಸಹೋದರರಿಗೆ ಏನೇನೋ ಆಲೋಚನೆಗಳು ಬರುತ್ತಿದ್ದುವು.

ಕಡೆಗೊಂದುದಿನ ಉದಯನನು ತನ್ನ ಸಹೋದರ ರೊಂದಿಗೆ, "ಪಾಪ, ಆ ಗಡ್ಡದ ಮಾಂತ್ರಿಕ ಎಂತಹ ಆಪತ್ತಿನಲ್ಲಿ ಸಿಕ್ಕಿಬಿದ್ದನೋ ಏನೋ? ರಾಕ್ಷಸನನ್ನು ಕೊಲ್ಲದೆ ಇಲ್ಲಿಯ ಮಾಯೆ ಹರಿಯಲು ಸಾಧ್ಯವಿಲ್ಲ. ಅಲ್ಲಿ ರಾಜನು ಎಷ್ಟು ಚಿಂತೆಯಲ್ಲಿದ್ದಾನೋ? ನಾನೇ ಶ್ರಾವಸ್ತಿನಗರಕ್ಕೆ ಹೋಗಿ ನೋಡಿಕೊಂಡು ಬರುತ್ತೇನೆ. ಅದುವರೆಗೆ ನೀವು ಜಾಗರೂಕತೆ ಯಿಂದಿರಿ. ಅಗತ್ಯವೆನಿಸಿದಲ್ಲಿ ಈ ಭಸ್ಮಗಳನ್ನು ಉಪ ಯೋಗಿಸಿ ಕೊಳ್ಳಿ" ಎಂದು ಹೇಳಿ, ಅವರಿಗೆ ಸ್ವಲ್ಪ ಬಿಳೀ ಭಸ್ಮವನ್ನೂ, ಸ್ವಲ್ಪ ಕಪ್ಪು ಭಸ್ಮವನ್ನೂ ಕೊಟ್ಟು, ನಿಶೀಥನ ಕಪ್ಪು ಕುದುರೆಯ ಮೇಲೇರಿ ಕೊಂಡು ಶ್ರಾವಸ್ತಿನಗರಕ್ಕೆ ಹೊರಟನು.

ಉದಯನನು ಯಾವುದೋ ಒಂದು ರಾಜ್ಯದ ಮುಖಾಂತರವಾಗಿ ಸಾಗಿಕೊಂಡಿದ್ದ. ದಾರಿಯಲ್ಲಿ ಒಂದು ಕಡೆ ಒಬ್ಬ ಕುರುಡ ಮುದುಕ, ದಂಟೆಯನ್ನು ಹಿಡಿದುಕೊಂಡು ತಡವುತ್ತಾ ನಡೆದು ಬರುತ್ತಿದ್ದನು. ಆಗ ದಾರಿಯ ಬದಿಯಲ್ಲಿದ್ದೊಂದು ನೆಲಬಾವಿಯೊಳಗೆ ಬಿದ್ದು ಬಿಟ್ಟ ಆ ಕುರುಡ.

ಇದನ್ನು ನೋಡಿದ ಕೂಡಲೇ ಉದಯನನು ಕುದುರೆಯಿಂದ ಕೆಳಗೆ ಹಾರಿ ಹೋಗಿ ಆ ಕುರುಡ ನನ್ನು ಬಾವಿಯಂತಹ ಆ ಹೊಂಡದೊಳಗಿನಿಂದ ಮೇಲೆತ್ತಿ ಕಾಪಾಡಿದನು. ಆ ಮೇಲೆ ಕುರುಡನ ಕಣ್ಣಿಗೆ ತನ್ನ ಬಳಿಯಲ್ಲಿದ್ದ ಅಂಜನವನ್ನು ಪೂಸಿದನು, ತತ್ಕ್ಷಣವೇ ಕುರುಡನಿಗೆ ದೃಷ್ಟಿ ಬಂದಿತು. ಅವನು



ಆತ್ಮಾನಂದದಿಂದ ಉದಯನನಿಗೆ ಕೃತಜ್ಞತೆ ಹೇಳುತ್ತ, ತನ್ನ ಮನೆಗೆ ಬರಬೇಕೆಂದು ಬೇಡಿಕೊಂಡ. ಉದಯ ನನು ಒಪ್ಪಿ ಅವನೊಂದಿಗೆ ಹೋದ.

ಅವನ ಮನೆಗೆ ಹೋಗಿ ಮಾತುಕತೆಯಾಡುವಾಗ, ಆ ಮುದುಕ ಆ ದೇಶದ ರಾಜನ ಸೇವಕನ ತಂದೆ ಯೆಂದು ಗೊತ್ತಾಯಿತು. ತನ್ನ ತಂದೆಗೆ ಉದಯನ ನಿಂದ ಕಣ್ಣು ಬಂದ ವಿಷಯ ತಿಳಿದು ಆ ರಾಜ ಸೇವಕನು ಬಹಳ ಸಂತೋಷ ಪಟ್ಟ. ಅನಂತರ ಬಹು ಬೇಗನೇ ಈ ಸುದ್ದಿ ಊರಿಗೆಲ್ಲ ತಿಳಿದು ರಾಜನ ಕಿವಿಗೂ ಬಿದ್ದಿತು.

ರಾಜನು ತನ್ನ ಭಟರನ್ನು ಕಳುಹಿಸಿ ಉದಯನ ನನ್ನು ತನ್ನಬಳಿಗೆ ಕರೆದುಕೊಂಡು ಬರುವಂತೆ ಅಪ್ಪಣೆ ಮಾಡಿದನು. ಹಾಗೆ ರಾಜನಬಳಿಗೆ ಹೋದ. ಉದಯನನಿಗೆ ಅಲ್ಲಿ ತುಂಬಾ ಉಪಚಾರ ನಡೆಯಿತು. ರಾಜನು ಅವನನ್ನು ಬಹುವಿಧವಾಗಿ ಸತ್ಕರಿಸಿ, "ನಿನ್ನಂತಹ ಪ್ರಜ್ಞಾಶಾಲಿಯನ್ನು ನಾನೆಲ್ಲಿಯೂ

ನೋಡಿಲ್ಲ. ನಿನ್ನಂಥವನು ನಮ್ಮ ಆಸ್ಥಾನದಲ್ಲಿರಲೇಬೇಕು. ನಿನಗೆ ಯಾವ ಕೊರತೆಯೂ ಆಗದಂತೆ ನೋಡುತ್ತೇನೆ. ನಿರಾಕರಿಸಬೇಡ" ಎಂದು ತನ್ನ ಕೋರಿಕೆಯನ್ನು ಹೇಳಿದನು.

ಅದಕ್ಕೆ ಉದಯನನು, "ಮಹಾರಾಜರೆ, ನೀವು ತೋರಿದ ಆದರಣೆಯನ್ನೂ ಅಭಿಮಾನವನ್ನೂ ಮರೆಯಲಾರೆ. ಆದರೆ ಈಗ ನಾನೊಂದು ಮುಖ್ಯವಾದ ಕೆಲಸದ ಮೇಲೆ ಹೋಗುತ್ತಿದ್ದೇನೆ. ಆ ಕೆಲಸ ಪೂರ್ತಿಯಾದ ಮೇಲೆ ಬಂದು ತಮ್ಮ ದರ್ಶನ ಮಾಡುತ್ತೇನೆ" ಎಂದನು.

ರಾಜನು ಸಂತೋಷಗೊಂಡು, ಅತಿ ವೈಭವದಿಂದ ಉದಯನನನ್ನು ಕಳುಹಿಸಿಕೊಟ್ಟನು. ಆ ಮೇಲೆ ಯಾವ ವಿಘ್ನಗಳೂ ಇಲ್ಲದೆ ಉದಯನನು ಶ್ರಾವಸ್ತಿ ನಗರವನ್ನು ತಲಪಿದನು.

ಅವನನ್ನು ನೋಡಿದ ಕೂಡಲೇ ರಾಜನು ಇದಿರಾಗಿ ಬಂದು ಅವನನ್ನು ಆಲಿಂಗಿಸಿಕೊಂಡನು. ಮೊದಲು ಉದಯನನು ರಾಜಕುಮಾರಿಯರು ಮೂವರೂ ಕ್ಷೇಮವಾಗಿರುವರೆಂದನು. ರಾಜನಿಗೆ ತುಂಬ ಸಮಾಧಾನವೆನಿಸಿತು. ಆ ಮೇಲೆ ಉದಯನನು ಅದುವರೆಗೆ ನಡೆದ ಎಲ್ಲಾ ಸಂಗತಿಗಳನ್ನೂ ಒಂದೊಂದಾಗಿ ಹೇಳಿ, "ಇನ್ನು ನೀವೇನೂ ಚಿಂತಿಸಬೇಡಿ. ಸಾಧ್ಯವಾದಷ್ಟು ಬೇಗದಲ್ಲಿ ಅಲ್ಲಿಯ ಮಾಯೆಯನ್ನು ಭೇದಿಸಿ ನಿಮ್ಮ ಕುಮಾರಿಯರೊಂದಿಗೆ ಬರುತ್ತೇವೆ." ಎಂದನು.


ಈ ಎಲ್ಲಾ ಸಮಾಚಾರವನ್ನು ಕೇಳುತ್ತಿದ್ದಂತೆ ರಾಜನ ಹೃದಯವು ಸಂತೋಷದಿಂದ ಉಕ್ಕಿತು. ರಾಣಿಯೂ ನಂಬುಗೆಯಿಂದ ಕಳೆಗೊಂಡು ಕಾಣಿಸಿದಳು. ಈ ಸಮಾಚಾರ ಕಿವಿಯಿಂದ ಕಿವಿಗೆ, ಬಾಯಿಯಿಂದ ಬಾಯಿಗೆ ಹರಿದು ರಾಜ್ಯದಲ್ಲೆಲ್ಲಾ ತಿಳಿದು, ಎಲ್ಲರೂ ಆನಂದ ಸಾಗರದಲ್ಲಿ ತೇಲ ತೊಡಗಿದರು.

ಮರುದಿನವೇ ಉದಯನನು ರಾಜನಿಂದ ಅಪ್ಪಣೆ ಪಡೆದು, ತಾಯಿಯ ಆಶೀರ್ವಾದವನ್ನು ತಲೆಯಲ್ಲಾಂತು ಮಾಯಾ ಭವನದ ಕಡೆಗೆ ಹೊರಟನು.

ಅವನು ಮಾಯಾಭವನ ಪ್ರದೇಶವನ್ನು ತಲಪಿ ನೋಡಿದಾಗ, ಅವನು ಅಂದುಕೊಂಡಂತೆ ಯಾವುದೂ ಇರಲಿಲ್ಲ. ಅವನು ನೋಡಿದ ದೃಶ್ಯದಿಂದ ಇಡೀ ದೇಹವೇ ಕಂಪಿಸಿತು. ಎಂತಹ ವಿಪರೀತ ದೃಶ್ಯವದು?

ತೋಟದಲ್ಲಿಯ ಒಂದು ಮರಕ್ಕೆ ಐದು ಹಗ್ಗದ ಉರುಳುಗಳು ನೇತಾಡುತ್ತಿದ್ದುವು. ಸಂಧ್ಯಾ ನಿಶೀಥರೂ, ಗಡ್ಡದ ಮಾಂತ್ರಿಕನೂ, ಶ್ರಾವಸ್ತಿಯಿಂದ ಬಂದಿದ್ದ ರಾಜಭಟರೂ, ಕೈಕಾಲು ಕಟ್ಟಲ್ಪಟ್ಟು ಸಾಲಾಗಿ ಕುಳಿತಿದ್ದರು. ಅವರ ಎದುರಿನಲ್ಲಿ ಪ್ರಚಂಡವಾದ ಹೆಬ್ಬುಲಿಯ ಹಾಗೆ ರಾಕ್ಷಸನು ನಿಂತಿದ್ದಾನೆ.

(ಇನ್ನೂ ಇದೆ)






ಅಮ್ಮಮಕ್ಕಳ ಕಥೆ

೧೪

[[illegible]ವಿಯಲ್ಲಿ ಬಿದ್ದ ಉದಯನನು ತನ್ನ ಹತ್ತಿರವಿದ್ದ ಮಂತ್ರದ ಕೈವಸ್ತ್ರದ ಸಹಾಯದಿಂದ ಮೇಲೆ ಬಂದ. [illegible]ಮೇಲೆ ಅವನು ಶ್ರಾವಸ್ತೀ ನಗರಕ್ಕೆ ಹೋಗಿ, ರಾಜನಿಗೆ ಅವನ ಕುಮಾರಿಯರ ಕ್ಷೇಮಸಮಾಚಾರ ಹೇಳಿ, [illegible] ಮಾಯಾಭವನಕ್ಕೆ ಬಂದ. ಅಲ್ಲಿ ಮರದ ಕೊಂಬೆಗೆ ನೇತುಹಾಕಿದ ಐದು ಉರುಳು ಹಗ್ಗಗಳೂ, [illegible]ಕ್ಷಸನೂ, ಅವನ ಮುಂದೆ ಬಲಿಪಶುಗಳಂತಿರುವ ತನ್ನ ಕಡೆಯವರೂ ಕಾಣಿಸಿದರು.]

[illegible]ಪಾಶಗಳಂತೆ ಕಾಣುವ ಆ ಉರುಳು ಹಗ್ಗ [illegible] ಭಯಂಕರ ದೃಶ್ಯವನ್ನು ನೋಡಿ ಉದಯನನು [illegible] ನಡುಗಿ ಬೆವತುಹೋದ. ಏನಾದರೂ [illegible]ವುದಾದರೆ ಕೆಲವೇ ಕ್ಷಣಗಳಲ್ಲಿ ಮಾಡಬೇಕು; [illegible] ಮಾಡಲಿಕ್ಕೂ ಉದಯನನಿಗೆ ತೋರಲಿಲ್ಲ. [illegible] ಕಣ್ಣಿಗೆಬಿದ್ದರೆ ಆ ರಾಕ್ಷಸನ ಹಿಡಿಯೊಳಗೇ [illegible] ಆಮೇಲೆ ಯಾರ ಕತೆಗೂ ಅವಕಾಶವಿಲ್ಲ. [illegible] ಸಹಾಯದಿಂದ ಅದೃಶ್ಯರೂಪವನ್ನು [illegible], ಏನಾದರೂ ಮಾಡೋಣವೆಂದರೆ, ಭಸ್ಮದ [illegible] ಕಾಣೆಯಾಗಿದೆ. ಶ್ರಾವಸ್ತಿನಗರದಿಂದ ಹಿಂದಿರುಗಿ ಬರುವಾಗ ಅವನ ದುರದೃಷ್ಟದಿಂದಾಗಿ ಆ ಬಿಳೀಭಸ್ಮದ ಡಬ್ಬಿ ಎಲ್ಲೋ ಬಿದ್ದುಹೋಗಿದೆ. ಆದುದರಿಂದ ಈಗ ತನ್ನ ಕಣ್ಣೆದಿರಿಗೇ ತನ್ನ ಸಹೋದರರೇ ಮೊದಲಾದವರು, ಹಗ್ಗದುರುಳಿನಲ್ಲಿ ಕುತ್ತಿಗೆ ಬಿಗಿಸಿಕೊಂಡು ಸಾಯುವುದನ್ನು ಕಾಣಬೇಕಾಯಿತಲ್ಲಾ! ಈ ಘೋರವು ನಡೆದ ಮೇಲೆ ತಾನು ಬದುಕಿದ್ದು ಪ್ರಯೋಜನವೇನು? ಅವನಿಗೆ ಕ್ಷಣವು ಯುಗದಂತೆ ಕಳೆಯುತ್ತಿದ್ದಿತು.

ಅಷ್ಟರಲ್ಲಿ ರಾಕ್ಷಸನು ತಾನು ಬಂಧಿಸಿದವರನ್ನೆಲ್ಲಾ ಉರುಳು ಹಗ್ಗಗಳಿರುವ ಮರಗಳ ಬಳಿಗೆ ಸಾಗಿಸಿದ.



ಅವರ ಕೊರಳಿಗೆ ಹಗ್ಗದ ಉರುಳನ್ನು ಸಿಕ್ಕಿಸಿದ್ದೂ ಆಯಿತು. ತಾನು ಸತ್ತರೂ ಚಿಂತಿಲ್ಲ, ಅದನ್ನು ನಡೆಯ ಗೊಡಬಾರದು ಎಂದುಕೊಂಡು ಉದಯನನು ಕತ್ತಿಯನ್ನೆತ್ತಿಕೊಂಡು ಮುಂದೆ ಹಾರಲು ಸಿದ್ಧನಾದ. "ನಿಲ್ಲು!" ಎಂಬೊಂದು ಕೂಗು ಅವನ ಕಿವಿಗೆ ಕೇಳಿಸಿತು.

ಉದಯನ ಹಾಗೆಯೇ ನಿಂತುಬಿಟ್ಟ. ಹಾಗೆ ಕೂಗಿದವರು ಯಾರು ? ಗಡ್ಡದ ಗಿಡ್ಡನೇ! ಅವನು ಒಂದು ಹೆಜ್ಜೆ ಮುಂದಿಟ್ಟು ಎದೆಸೆಟೆದು ರಾಕ್ಷಸನೊಂದಿಗೆ ಹೇಳತೊಡಗಿದ: "ಒಂದು ಗುಟ್ಟು ರಾಕ್ಷಸೇಶ್ವರಾ! ಇಷ್ಟು ದಿವಸ ಇವರನ್ನು ರಕ್ಷಿಸಬೇಕೆಂಬ ಉದ್ದೇಶದಿಂದ ಒಂದು ಗುಟ್ಟನ್ನು ನಿನ್ನ ಹತ್ತಿರ ಹೇಳದೆ ಮುಚ್ಚಿಟ್ಟುಕೊಂಡಿದ್ದೆ. ಆದರೆ ಇನ್ನು ಗುಟ್ಟು ಮುಚ್ಚಿಟ್ಟರೂ ಇವರನ್ನು ರಕ್ಷಿಸಲು ಸಾಧ್ಯವಿಲ್ಲವಷ್ಟೆ? ಈಗ ನಾನು ಕೂಡಾ ಪ್ರಾಣ ಬಿಡಬೇಕಾದ ಕಾಲ ಬಂದಿತು. ಆದುದರಿಂದ ಇನ್ನೂ ಅಡಗಿಸಿಟ್ಟು ಪ್ರಯೋಜನವಿಲ್ಲ. ಇಷ್ಟುಕಾಲದವರೆ
ನಿನ್ನನ್ನೂ ನನ್ನನ್ನೂ ಮೋಸಪಡಿಸಿಕೊಂಡು ಬಂ
ಈ ಮೂವರು ಹುಡಗರೂ ಅವಳಿಜವಳಿಗಳ
ಹುಟ್ಟಿದ ತ್ರಿವಳಿಗಳು..." ಹೀಗೆ ಅವನು ಇನ
ಏನೋ ಹೇಳಲಿಕ್ಕಿದ್ದ.

ರಾಕ್ಷಸನು ಅವನ ಮಾತಿಗೆ ಅಡ್ಡ ಬಂದ
"ಏನೇನು ? ಇವರು ಅವಳಿಜವಳಿಗಳೋ ? ಮ
ನನಗೆ ಮೋಸಮಾಡಲು ನೋಡುವಿಯಾ ? ಇವ
ಅವಳಿಜವಳಿಗಳಾಗಿದ್ದರೆ ನನ್ನ ಕಣ್ಣಿಗೆ ಸಿಕ್ಕಿಬೀಳ
ಹೋಗುತ್ತಿದ್ದರೇ ?" ಎಂದನು.

ಅದಕ್ಕೆ ಗಡ್ಡದ ಗಿಡ್ಡ, "ನಿಜವೇ. ನೀ
ಬೇಕೆಂದೇ ಅವರನ್ನು ಬಿಟ್ಟುಬಿಟ್ಟಿದ್ದೀಯೇ. ಅದಕ
ಕಾರಣವಿತ್ತು" ಎಂದು ಆ ತ್ರಿವಳಿಸಹೋದರರ
ದೃಷ್ಟಿದೋಷಗಳನ್ನು ಕುರಿತು, ಅದನ್ನು ತಾನು
ಪಡಿಸಿದ ರೀತಿಯನ್ನು ಕುರಿತು ಅವನಿಗೆ ವಿವ
ಹೇಳಿಬಿಟ್ಟನು. ಇದನ್ನು ಹೇಳಿದರೆ ರಾಕ್ಷಸನಿಗೆ
ಮೇಲೆ ಕೋಪವು ಹೆಚ್ಚುವುದೆಂದು ಗೊತ್ತಿದ್ದರ
ಬೇರೆ ಉಪಾಯವಿಲ್ಲದುದರಿಂದ ಗಟ್ಟಿಗುಂ
ಮಾಡಿ ಹೇಳಿಬಿಟ್ಟ.

ಆದನ್ನೆಲ್ಲ ಕೇಳಿದ ರಾಕ್ಷಸನು ಗಡ್ಡದ ಗಿ
ಮೇಲೆ ಸಿಟ್ಟು ಬೆಂಕಿ ಕಾರುವುದಕ್ಕೆ ಬದಲ
ತೃಪ್ತಿಯ ಸಂತೋಷದಿಂದ, "ಹಾಗಾದರೆ ಬ
ಬೇಕಾದ ಐವತ್ತು ಅವಳಿಜವಳಿ ಜೋಡಿಗಳೂ
ಯಾಗಿರುವಂತಾಯಿತು! ನೀನು ಹೇಳಿದ ಮ
ನಿಜವೇ ಏನು ? ನಂಬಬಹುದೇನೋ ಗ
ಪುಂಡಾ ? ಇವರು ಅವಳಿಜವಳಿಗಳು ನಿಜ
ಎಂಬುದನ್ನು ಅವರನ್ನೇ ಕೇಳಿ ತಿಳಿಯುತ್ತೇನೆ.
ಹೇಳುವರೋ ನೋಡುವಾ" ಎಂದು ಸಂಧ್ಯಾ
ಥರ ಕಡೆಗೆ ತಿರುಗಿ, "ಇವನು ಹೇಳಿದುದ
ಕೇಳಿದಿರಷ್ಟೆ ? ನಿಜವೇ ಏನು ? ನಿಜವನ್ನು ಮ
ಟ್ಟರೂ ನಿಮ್ಮ ಪ್ರಾಣಗಳುಳಿಯುವುದಿಲ್ಲ. ನಿ

ನೀವು ಅವಳಿಜವಳಿಗಳಾಗಿದ್ದರೆ ಒಂದು ಮಹತ್ತರವಾದ ಕಾರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದ ತೃಪ್ತಿಯಾದರೂ ನಿಮಗಿರುತ್ತದೆ" ಎಂದನು. ಸಂಧ್ಯಾನಿಶೀಥರು ತಲೆ ತಗ್ಗಿಸಿಕೊಂಡು "ನಿಜವೇ. ನಾವು ಮೂವರೂ ಅವಳಿಜವಳಿಗಳೇ" ಎಂದರು. ಅವರ ಕಣ್ಣುಗಳಲ್ಲಿ ನೀರು ತುಂಬಿತ್ತು. ಸಮೀಪದಲ್ಲೇ ಅಡಗಿ ನಿಂತು ನೋಡುತ್ತಿದ್ದ ಉದಯನನು ನಿಶ್ಚೇಷ್ಟಿತನಾಗಿ ಹೋದನು.

ಗಡ್ಡದ ಗಿಡ್ಡನ ಮೇಲೆ ನಂಬುಗೆಯಿಟ್ಟು, ಅವನನ್ನು ಜೀವದೊಂದಿಗೆ ಬಿಟ್ಟುದಕ್ಕೆ ಇದುವೋ ಅವನು ತೋರಿಸುವ ಫಲ? ಎಲ್ಲರಿಗಿಂತ ಮೊದಲು ಅವನನ್ನೇ ಮೂರು ತುಂಡುಮಾಡಿ ಬಿಸುಡಬೇಕೆನಿಸಿತು ಉದಯನನಿಗೆ. ಆದರೆ ಅಷ್ಟರಲ್ಲೇ ರಾಕ್ಷಸನ ಕಂಠಸ್ವರ ಮೊಳಗಿತು :

"ಹಾಗಾದರೆ ಆ ಮೂರನೇಯವನೆಲ್ಲಿದ್ದಾನೆ?" ಎಂದು ರಾಕ್ಷಸನು ಗಡ್ಡದ ಗಿಡ್ಡನನ್ನು ನೋಡಿ ಕೇಳಿದ. ಅದಕ್ಕೆ ಗಡ್ಡದ ಗಿಡ್ಡ, "ಆತ ಮನೆಗೆ ಹೋಗಿ ಬರುತ್ತೇನೆಂದು ಹೊರಟುಹೋಗಿ ಆರೇಳು ದಿನಗಳಾದುವು. ಇಷ್ಟರೊಳಗೆ ಹಿಂದಿರುಗಿ ಬರಬೇಕಿತ್ತು. ದಾರಿಯಲ್ಲಿ ಏನಾದರೂ ಅಪಾಯಕ್ಕೆ ಗುರಿಯಾದನೋ, ಮತ್ತೇನಾಯಿತೋ? ಇನ್ನು ಇಲ್ಲಿಗೆ ಬರುವನೆಂಬ ನಂಬುಗೆ ಕೂಡಾ ನನಗಿಲ್ಲ. ಯಾಕೆಂದರೆ ಬದುಕಿರುತ್ತಿದ್ದರೆ ಅವನು ಇಷ್ಟರೊಳಗೆ ಬರಲೇಬೇಕಿತ್ತು" ಎಂದ.

"ಸರಿ. ಈಗ ನನಗೆ ಲೆಕ್ಕ ಸರಿಯಾಗಿ ಹೋಗಿದೆ. ಇನ್ನು ತಡಮಾಡಬಾರದು. ದೇವಿಯನ್ನು ಪ್ರಸನ್ನ ಮಾಡಿಕೊಳ್ಳಬೇಕು. ಅದರ ಏರ್ಪಾಡುಗಳಿಗೆ ತೊಡಗುತ್ತೇನೆ. ಆದರೆ ನಿನ್ನನ್ನು ನಂಬಿ ಬಿಟ್ಟುಬಿಡುವೆನೆಂದು ಭಾವಿಸಬೇಡ." ಎಂದು ಹೇಳಿ ರಾಕ್ಷಸನು ಆ ಗಡ್ಡದವನನ್ನೂ, ಸಂಧ್ಯಾನಿಶೀಥರನ್ನೂ, ರಾಜಭಟರನ್ನೂ ಒಬ್ಬೊಬ್ಬರನ್ನಾಗಿ ಒಂದೊಂದು ಮರಕ್ಕೆ ಕಟ್ಟಿಹಾಕಿ, ದೊಡ್ಡದನಿಯಿಂದ, ದಿಕ್ಕುಗಳು ಒಡೆಯುವ ಹಾಗೆ ನಗುತ್ತ, ಹದ್ದಿನ ರೂಪಧರಿಸಿ ಆಕಾಶಮಾರ್ಗದಲ್ಲಿ ಹಾರಿಹೋದನು.





ರಾಕ್ಷಸನು ಹೊರಟುಹೋದ ಕೂಡಲೇ ಉದಯನನು, ಕತ್ತಿ ಹಿರಿದುಕೊಂಡು ಗಡ್ಡದ ಗಿಡ್ಡನ ಮುಂದೆ ನಿಂತನು. ಅವನು ಬಂದ ರಭಸವನ್ನು ನೋಡಿ, ಮರಕ್ಕೆ ಕಟ್ಟಿ ಹಾಕದಿರುತ್ತಿದ್ದರೆ ಗಡ್ಡದ ಗಿಡ್ಡ ಹೆದರಿ ಓಡಿಹೋಗುತ್ತಿದ್ದನು. ಈಗ ಅದರ ಬದಲಿಗೆ ಕೈಕಾಲು ಕುಣಿಸುತ್ತ, "ಬೇಡಯ್ಯಾ ಕೊಲ್ಲಬೇಡ. ನನ್ನ ಮಾತು ಕೇಳಿ ಆಮೇಲೆ ಬೇಕಾದರೆ. ಕತ್ತಿ ಹಿರಿ" ಎಂದು ಕೆಟ್ಟಸ್ವರದಿಂದ ಕೂಗಿದ.

ಉದಯನ ಕತ್ತಿಯನ್ನು ಬೀಸದೆ ಗಕ್ಕನೆ ನಿಲ್ಲಲು, ಗಡ್ಡದ ಗಿಡ್ಡ, "ಅವಸರಪಡಬೇಡ. ನಾನು ಹೇಳುವುದನ್ನೆಲ್ಲ ಕೇಳಿದ ಮೇಲೆ, ನಿನಗೆ ಇಷ್ಟ ಬಂದಂತೆ ಮಾಡು" ಎಂದು ಉಸಿರುಬಿಟ್ಟ.

"ಇನ್ನೇನು ಹೇಳುವೆ ಸುಳ್ಳುಸೊಟ್ಟು? ಕೇಳಿ ನಂಬಿದ್ದಕ್ಕೆ ಚೆನ್ನಾಗಿ ಪ್ರತಿಫಲ ತೋರಿಸಿದೆ! ನಿನ್ನನ್ನು ಏನು ಮಾಡಿದರೂ ಪಾಪವಿಲ್ಲ. ಇನ್ನೂ ನಿಲ್ಲಬೇಕೇ ನಾನು?" ಎಂದು ಸಿಟ್ಟಿನಿಂದ ಗರ್ಜಿಸಿದ ಉದಯನ.

"ಅಯ್ಯಾ, ನೀನು ಹೀಗೆ ನನ್ನ ಮೇಲೆ ಸಿಟ್ಟಾಗ ವುದರಲ್ಲಿ ಆಶ್ಚರ್ಯವೇನಿಲ್ಲ. ಆದರೂ ನನ್ನ ಮಾ ಕೇಳು. ಈ ಕ್ಷಣಕ್ಕೆ ತಪ್ಪಿಸಿಕೊಂಡರೆ ಸಾಕು ಎಂಬ ದಕ್ಕಾಗಿ ಹಾಗೆ ಹೇಳಿದೆ. ಬೀಸುವ ದೊಣ್ಣೆಯ ಏ ತಪ್ಪಿದರೆ ಸಾಸಿರವರುಷದ ಆಯುಸ್ಸು ಅನ್ನುತ್ತ ರಷ್ಟೆ? ಅದಕ್ಕೇ ನಾನು ಅವನಿಗೆ ನಿಮ್ಮ ಜನ್ಮರಹ ಹೇಳಿದೆ. ಆದುದರಿಂದಲೇ ಆ ಕ್ಷಣದಲ್ಲಿ ಕುತ್ತಿಗೆಗ ಬೀಳುವ ಉರುಳು ತಪ್ಪಿತು. ನನ್ನ ಸ್ಥಾನದ ನೀನಿರುತ್ತಿದ್ದರೂ ಹಾಗೇ ಮಾಡದೆ ಬೇರೆ ಮಾ ವಿಲ್ಲವೆಂದು ನಿನಗೆ ತಿಳಿಯುತ್ತಿತ್ತು. ನಾನು ಮಾಡಿ ಉಪಾಯದಿಂದ ನಾಳೆಯವರೆಗೆ ಆಯುಷ್ಯ ಉಳಿ ತಷ್ಟೆ? ಇದೊಂದು ದೊಡ್ಡ ಅದೃಷ್ಟವಲ್ಲವೇನು?" ಎಂದ ಗಡ್ಡದ ಗಿಡ್ಡ.

ಉದಯನನು ಸ್ವಲ್ಪ ಶಾಂತನಾಗಿ ತಲೆ ದೂಗುತ್ತ "ಹೌದು. ಈಗ ತಪ್ಪಿತೆನ್ನೋಣ. ನಿನ್ನನ್ನು ನಂಬಿದೇ ಅಂದುಕೋ. ನಾಳೆ ಬೆಳಗಾಗುವ ರೊಳಗೆ ರಾಕ್ಷಸನ ಬಲಿಗೆ ಬೀಳದಂತೆ ತಪ್ಪಿಸಿಕೊ ವುದು ಹೇಗೆ?" ಎಂದನು.

"ಅದನ್ನೂ ಆಲೋಚಿಸಿದ್ದೇನಪ್ಪಾ. ಹೇಳುತ್ತೇನೆ ಬೇಕಾದಷ್ಟು ಸಮಯವಿದೆ ಮೊದಲು ಇವರೆಲ್ಲ ಕಟ್ಟುಗಳನ್ನು ಬಿಡಿಸೋಣ" ಎಂದನು.

ಉದಯನನು ಅವನ ಕಟ್ಟುಗಳನ್ನು ಬಿಚ್ಚಿದನು ಅವರಿಬ್ಬರೂ ಕೂಡಿ ಸಂಧ್ಯಾನಿಶೀಥರನ್ನೂ, ರಾ ಭಟರನ್ನೂ ಬಂಧನದಿಂದ ಬಿಡಿಸಿದರು. ತರುವಾ ಉದಯನನು ಅವರೆಲ್ಲರನ್ನೂ ಕರೆದುಕೊಂಡ ಕೊಳದ ಬದಿಗೆ ಹೋದನು. ಅವರನ್ನೆಲ್ಲ ನೋಡಿ ಕೂಡಲೇ ಹಂಸರೂಪದಲ್ಲಿದ್ದ ಮೂವರು ಅ ಜವಳಿ ರಾಜಕುಮಾರಿಯರೂ ಮೇಲೆ ಬಂದು ನಿ ರೂಪಗಳಲ್ಲಿ ನಿಂತರು.

ಗಡ್ಡದವನು ಉದಯನನನ್ನು ನೋಡಿ, " ಕೆಂಪು ಅಂಜನವನ್ನು ಇತ್ತ ಕೊಡು" ಎಂದು


[illegible]ದನು. ಉದಯನನು ತನ್ನ ಜೇಬಿನೊಳಗಿನಿಂದ [illegible]ನ್ನು ತೆಗೆದುಕೊಟ್ಟ ಕೂಡಲೇ ಗಡ್ಡದ ಗಿಡ್ಡನು [illegible]ಕುಮಾರಿಯರನ್ನು ಬಳಿಗೆ ಬರುವಂತೆ ಸೂಚನೆ [illegible]ರಿದನು. ಅವರು ಬಂದ ಕೂಡಲೇ ಗಡ್ಡದ [illegible] ಕೆಂಪು ಅಂಜನವನ್ನು ತೆಗೆದು ಸುಹಾಸಿನಿಯ [illegible]ಕ್ಕೆತಿಕ್ಕಿದನು. ಕೂಡಲೇ ಅವಳ ಕೈ ಮಾಯ [illegible] ಹೋಯಿತು. ತರುವಾಯ ಸುಭಾಷಿಣಿ [illegible]ನ್ನು ಕೂತುಕೊಳ್ಳುವಂತೆ ಹೇಳಿ, ಅವಳ ಮೊಣ[illegible] ಮೇಲೆ ಅಂಜನವನ್ನು ತಿಕ್ಕಿದ ಕೂಡಲೇ [illegible] ಕಾಲು ಮಾಯ್ವವಾಯಿತು. ಆಮೇಲೆ ಸ್ವಲ್ಪ [illegible]ಜನವನ್ನು ಸುಕೇಶಿನಿಯ ಎರಡು ಕಣ್ಣುಗಳಿಗೂ [illegible]ದನು. ಆಗ ಅವಳ ಎರಡು ದೃಷ್ಟಿಗಳೂ [illegible]ಯವಾಗಿ ಶುದ್ಧ ಕುರುಡಿಯಾದಳು.

[illegible] ವಿಧವಾಗಿ ಅವನು ಮೂವರು ರಾಜಕುಮಾ[illegible]ರಿಗೂ ಅಂಗವೈಕಲ್ಯವನ್ನುಂಟು ಮಾಡಿದ್ದು[illegible] ನೋಡಿ, ಉದಯನನು "ಇದೆಂತಹ ದಾರುಣ [illegible]! ಏನೋ ಉಪಾಯ ಹೇಳುವೆನೆಂದು, [illegible]ವೋ ನೀನು ಮಾಡುವ ಕೆಲಸ?" ಎಂದು [illegible]ದಿಂದ ಕೇಳಿದ.

"ಏನು ಶೀಘ್ರಕೋಪಿಯೋ ನೀನು! ಎಲ್ಲದಕ್ಕೂ [illegible] ಅನುಮಾನಪಡುವೆಯೇಕೆ?" ಎಂದು ಗಡ್ಡದ [illegible] ಉದಯನನನ್ನು ಬಗ್ಗಲಿಕ್ಕೆ ಹೇಳಿ, ಅವನ [illegible]ಲ್ಲಿ ಏನೋ ಹೇಳಿದ.

ಉದಯನನು ಸ್ವಲ್ಪ ಶಾಂತನಾಗಿ, "ಮತೆ ಇಷ್ಟು [illegible]ದವರೆಗೆ ಯಾವದೊಂದು ಅಂಗಲೋಪವೂ [illegible]ದಿರುವವರನ್ನು ನಾಳೆ ಅವನು ಬಂದು ನೋಡಿ, [illegible]ದ್ದರೆ ನಿನ್ನ ಮೇಲೆ ಅನುಮಾನಪಡಲಾರನೆ? [illegible]ದ ನಮಗಾಗುವ ಲಾಭವಾದರೂ ಏನಿದೆ?" [illegible] ಕೇಳಿದ.


"ಅದೆಲ್ಲಾ ಸಮಯ ಬಂದ ಹಾಗೆ ನೋಡಿ[illegible]ಬೇಕಪ್ಪಾ. ಪ್ರಸ್ತುತ ಇದಕ್ಕಿಂತ ಬೇರೆ ದಾರಿ



ಯಿಲ್ಲ. ನಾಳೆ ರಾಕ್ಷಸನು ಬರುವ ಹೊತ್ತಿಗೆ ನಾವು ಅವನು ಕಟ್ಟಿದಂತೆ ಮರಕ್ಕೆ ಕಟ್ಟಲ್ಪಟ್ಟಿರುತ್ತೇವೆ. ನೀನು ಮಾತ್ರ ಭಸ್ಮವನ್ನು ಚೆಲ್ಲಿಕೊಂಡು ಅದೃಶ್ಯ ರೂಪದಲ್ಲಿದ್ದು ಏನು ನಡೆಯುತ್ತದೆಂಬುದನ್ನು ನೋಡುತ್ತಾ ಇರು" ಎಂದ ಗಡ್ಡದ ಗಿಡ್ಡ.

ಉದಯನನ ಮುಖ ಬಾಡಿತು. "ಆ ಭಸ್ಮವಿರುತ್ತಿದ್ದರೆ ಇಷ್ಟೆಲ್ಲ ಕಷ್ಟವಿರುತ್ತಿದ್ದಿಲ್ಲ. ಶ್ರಾವಸ್ತೀ ನಗರದಿಂದ ಬರುವಾಗ ಆ ಭಸ್ಮದ ಡಬ್ಬಿ ಎಲ್ಲೋ ಬಿದ್ದು ಹೋಯಿತು" ಎಂದ.

"ಹಾಗೇನೋ ಆಗಿರಬೇಕೆಂದು ತೋರಿತು ನನಗೂ. ಅದು ಇರುತ್ತಿದ್ದರೆ ನೀನು ಅದೃಶ್ಯರೂಪದಲ್ಲಿದ್ದೇ ನನ್ನ ತಲೆ ಕಡಿಯುತ್ತಿದ್ದೆ. ಒಳ್ಳೇದೇ ಆಯಿತು. ಹೋಗಲಿ, ಬಿಡು. ನೀನು ನಮಗೆ ಕೊಟ್ಟ ಆ ಭಸ್ಮ ನಾವೇನೂ ಉಪಯೋಗಿಸಲಿಲ್ಲ. ತೆಗೆದುಕೋ ಸಂತೋಷವಾಯಿತಷ್ಟೆ?" ಎನ್ನುತ್ತ ಗಡ್ಡದ ಗಿಡ್ಡ ಭಸ್ಮದ ಪೊಟ್ಟಣವನ್ನು ತೆಗೆದು



ಉದಯನನಿಗೆ ಕೊಟ್ಟ. ಅಕಸ್ಮಾತ್ ನಿಧಿ ಸಿಕ್ಕಿದ ಹಾಗೆ ಉದಯನನಿಗೆ ಉತ್ಸಾಹ ಬಂದಿತು. ಗಡ್ಡದ ಗಿಡ್ಡನ ಮೇಲೆ ನಂಬುಗೆಯೂ ಉಂಟಾಯಿತು. ಅವನು ಅವರನ್ನೆಲ್ಲ ಮೊದಲಿನ ಹಾಗೇ ಮರಗಳಿಗೆ ಕಟ್ಟಿಹಾಕಿ ತಾನು ಅದೃಶ್ಯರೂಪದಲ್ಲಿದ್ದುಬಿಟ್ಟ.

* * *

ಮರುದಿನ ಬೆಳಗಾಗುವಷ್ಟರಲ್ಲಿ ಆ ಮಾಯಾ ಭವನ ಪ್ರದೇಶದಲ್ಲಿ ವಿಚಿತ್ರ ಸುಳಿಗಾಳಿ ಪ್ರಾರಂಭ ವಾಯಿತು. ಮಹಾಬಲಿಯ ಸನ್ನಾಹದೊಂದಿಗೆ ರಾಕ್ಷಸನು ಬರುತ್ತಿದ್ದಾನೆಂದು ಎಲ್ಲರಿಗೂ ತಿಳಿಯಿತು. ಸಂಧ್ಯಾನಿಶೀಥರೂ ಗಡ್ಡದ ಗಿಡ್ಡನೂ, ರಾಜಭಟರೂ ತುಂಬಾ ಬಳಲಿಬೆಂಡಾದವರ ಹಾಗೆ ಮರದೊಂದಿಗೆ ಬಂಧನದಲ್ಲಿ ನರಳಿಕೊಂಡಿದ್ದರು.

ನೋಡ ನೋಡುತ್ತಿರಲು ರಾಕ್ಷಸನು ಬಂದು ಬಿಟ್ಟ. ಅವನ ಹಿಂದೆ ಗಂಡು ಗೊಡಲಿಯನ್ನು ಧರಿಸಿದ ಇಬ್ಬರು ಭಟರಕ್ಕಸರೂ ಇದ್ದರು. ಅವರ ಹಿಂದೆ ಇನ್ನೂ ಒಂದು ರಾಕ್ಷಸಪರಿವಾರವೇ ಬರುತ್ತಿತ್ತು. ಅವರೆಲ್ಲ ಹೂಮಾಲೆಗಳನ್ನು ಧರಿಸಿ ಕೈಯಲ್ಲಿ ಬಿಚ್ಚು ಗತ್ತಿಗಳನ್ನು ಹಿಡಿದಿದ್ದರು.

ಕ್ಷಣಮಾತ್ರದಲ್ಲಿ ಆ ಪ್ರದೇಶದಲ್ಲೊಂದು ಸಿಂಹಾಸನವು ಕಂಡುಬಂತು. ಅದರ ಮೇಲೆ ರಾಕ್ಷಸನು ಆಸೀನನಾದನು. ಆಮೇಲೆ ಅವನು ತನ್ನ ಪರಿವಾರ ವನ್ನು ಕರೆದು "ಕೊಳದಲ್ಲಿರುವ ಅವಳಿಜವಳಿಗಳ ನ್ನೆಲ್ಲಾ, ಸ್ನಾನಮಾಡಿಸಿ, ದಿವ್ಯವಾಗಿ ಅಲಂಕಾರಮಾಡಿ ಒಬ್ಬೊಬ್ಬರನ್ನೇ ನನ್ನ ಎದುರಿಗೆ ತಂದು ನಿಲ್ಲಿಸಿರಿ" ಎಂದು ಆಜ್ಞೆ ಮಾಡಿದನು.

ಕೂಡಲೇ ಎಲ್ಲರೂ ಅವರವರ ಕೆಲಸಗಳಲ್ಲಿ ತೊಡಗಿದರು. ಒಬ್ಬರು ಸ್ನಾನಮಾಡಿಸಿದರು. ಇನ್ನೊ ಬ್ಬರು ಅಲಂಕಾರಮಾಡ ತೊಡಗಿದರು. ಮತ್ತೆ ಕೆಲ ವರು ನೈವೇದ್ಯಗಳ ತಯಾರಿಗೆ ಹೋದರು. ಅಲಂ ಕರಣ ಪೂರ್ತಿಯಾದ ಅವಳಿಜವಳಿಗಳನ್ನೆಲ್ಲಾ ರಾಕ್ಷ ಸನ ಎದುರಿಗೆ ತಂದು ತಂದು ನಿಲ್ಲಿಸುತ್ತಿದ್ದಾರೆ ಒಂದೊಂದು ಜೋಡಿಯನ್ನು ನೋಡುತ್ತ ರಾಕ್ಷಸನು ಮಹಾಸಂತೋಷದಿಂದ ಅಟ್ಟಹಾಸ ಮಾಡುತ್ತಾನೆ ತನ್ನ ಎದುರು ತಂದು ನಿಲ್ಲಿಸಿದ ರಾಜಕುಮಾ ರನ್ನೂ, ಕುಮಾರಿಯರನ್ನೂ ನೋಡಿ ರಾಕ್ಷಸನು "ನೀವು ಕನಕಪುರಿಯ ರಾಜಕುಮಾರಿಯರಲ್ಲವೆ! ನೀವು ಅವಂತೀಶನ ಅಲಂಕಾರದ ಪುತ್ರಿಯರಲ್ಲವೆ! ನೀವು ಮಣಿಪುರದ ರಾಜನ ಕುಮಾರರಲ್ಲವೆ?... ಎಂದು ಕೇಳುತ್ತಾ, ರೂಢಿಪಡಿಸಿಕೊಂಡು ತೃಪ್ತಿ ಸೂಸುತ್ತಿದ್ದನು. ಪಾಪ, ಅವರೆಲ್ಲ ತಲೆ ಬಗ್ಗಿ ಕೊಂಡು ಹೀಗೆ ಸಾಯಬೇಕಾಯಿತಲ್ಲಾ ಎಂದು ದ ದಳನೆ ಕಣ್ಣೀರಿಳಿಸಿಕೊಂಡಿದ್ದರು.

ಅಷ್ಟರಲ್ಲಿ ಪರಿಚಾರಿಕೆಯೊಬ್ಬಳು ರಾಜಕುಮಾ ಯೊಬ್ಬಳನ್ನು ಕರೆದು ತಂದು "ಇದೇನು ಪ್ರಭು ಗಳೇ, ಈ ಕುರುಡಿಯನ್ನು ತಂದಿದ್ದೀರಲ್ಲಾ? ದೇವಿ ಸ್ವೀಕರಿಸುವಳೇ?" ಎಂದಳು ಗಾಬರಿಯಿಂದ.

ರಾಕ್ಷಸನು ಬೆರಗಾಗಿ "ಏನೇನು? ಕುರುಡಿಯೆ?" ಎಂದು ಕೂಗುತ್ತ ಸಿಂಹಾಸನದಿಂದಿಳಿದು ಬಂದು ಅವಳನ್ನು ಪರೀಕ್ಷಿಸುವುದರೊಳಗೆ, ಮತ್ತೊಬ್ಬಳು ಪರಿಚಾರಿಕೆ ಬಂದು "ಈ ಕುಂಟಿಯನ್ನು ತಂದಿದ್ದೀನಲ್ಲ ಪ್ರಭುಗಳೇ?" ಎಂದು ಇನ್ನೊಬ್ಬಳನ್ನು ರಾಕ್ಷಸನ ಎದುರು ನಿಲ್ಲಿಸಿದಳು. "ಆಂ!" ಎಂದು ಭೂಮಿ ಬಿರಿಯುವಂತೆ ಗರ್ಜಿಸಿದ ರಾಕ್ಷಸ. ಅವನ ಕಣ್ಣುಗಳಿಂದ ಕಿಡಿ ಹಾರುತ್ತಿರಲು, "ಮೋಸ! ದ್ರೋಹ!" ಎಂದು ಅರಚಿದ.

ಆಗ ಮತ್ತೊಬ್ಬಳು ಪರಿಚಾರಿಕೆ, "ಅಯ್ಯೊ! ಈ ಕುಮಾರಿಗೆ ಕೈಯೇ ಇಲ್ಲವಲ್ಲಾ! ಯಾಕಾದಾಳು!" ಎನ್ನುತ್ತಾ, ತನ್ನೊಂದಿಗಿದ್ದ ರಾಜಕುಮಾರಿಯನ್ನು ರಾಕ್ಷಸನಿಗೆ ತೋರಿಸಿದಳು.

ರಾಕ್ಷಸನು ಮಹಾಕೋಪದಿಂದ, ಗಡ್ಡದ ಗಿಡ್ಡನ ಬಳಿಗೆ ಹಾರಿ ಬಂದು, ಅವನನ್ನು ಮರದೊಂದಿಗೇ ಸಹಿತ ಮೇಲೆತ್ತಿ "ಏನಿದು ನಿನ್ನ ದ್ರೋಹ? ಒಳ್ಳೆಯ ಲಕ್ಷಣವಿರುವ ಅವಳಿಜವಳಿಗಳನ್ನು ತಂದೆನಲ್ಲಾ? ಈಗ ಈ ಅಂಗವಿಕಲರು ಎಲ್ಲಿಂದ ಬಂದರು? ಇದೆಲ್ಲಾ ನಿನ್ನದೇ ಮಾಯೆ! ಇದ್ದದ್ದು ಇದ್ದ ಹಾಗೆ ಹೇಳುವೆಯೋ ಇಲ್ಲದಿದ್ದರೆ ಎಲ್ಲಕ್ಕೂ ಮೊದಲು ನಿನ್ನನ್ನೇ ಬಲಿ ಹಾಕಿಬಿಡಲೋ? ಬೊಗಳು!" ಎಂದು ಗದರಿಸಿ ಕೇಳಿದ.

ಗಡ್ಡದ ಗಿಡ್ಡ ಸ್ವಲ್ಪ ಕೂಡಾ ಹೆದರದೆ, ಸ್ಥಿರವಾದ ಕಂಠದಿಂದ, "ಈ ಬೊಬ್ಬೆ ಅಬ್ಬರಗಳಿಂದ ನಿನಗೇನೂ ಪ್ರಯೋಜನವಿಲ್ಲ. ಈ ಕೆಲಸ ಮಾಡಿದವನು ನಾನೇ ಎಂದು ಅನುಮಾನಿಸುವೆಯಾ? ಸ್ವಲ್ಪ ತಾಳು, ನಾನು ಹೇಳುವುದನ್ನು ಕೇಳಿ, ಆಮೇಲೆ ನಿನ್ನಿಷ್ಟದಂತೆ ಮಾಡು" ಎಂದನು.

"ಸಾಕುಬಿಡು. ನಾನೆಲ್ಲಾ ಏರ್ಪಾಡುಗಳೊಂದಿಗೆ ಬಂದರೆ ಎಲ್ಲವನ್ನೂ ಹಾಳು ಮಾಡಿದೆ. ಇನ್ನೇನೂ ಹೇಳುವಿಯೋ ಅದನ್ನು ಬೇಗ ಹೇಳಿಬಿಡು ಹಾಳು ಮುಂಡಾ!" ಎನ್ನುತ್ತಾ, ರಾಕ್ಷಸನು ಕೈಯಲ್ಲಿರುವ ಮರವನ್ನು ಒಮ್ಮೆಗೇ ಕೆಳಗೆ ಹಾಕಿದನು. ಗಡ್ಡದ ಗಿಡ್ಡ ತನಗೆ ಪೆಟ್ಟಾಗದಂತೆ ಸಮಾಳಿಸಿಕೊಂಡು




ಹೀಗೆಂದನು: "ಸತ್ಯ ಹೇಳುತ್ತೇನೆ. ಅವರಿಗೆ ಈ ಅಂಗಲೋಪಗಳು ಹೇಗೆ ಬಂದಿತೆಂಬುದು ನನಗೂ ತಿಳಿಯದು. ಅದು ಹೀಗೇ ನಡೆದಿರಬೇಕೆಂದು ನನಗೆ ತೋರುತ್ತದೆ. ಹೀಗೆಲ್ಲಾ ಮಾಡುವಂತಹ ಸಾಮರ್ಥ್ಯ, ಒಬ್ಬ ಕುಮಾರ ತಪ್ಪಿಸಿಕೊಂಡಿದ್ದಾನಲ್ಲಾ, ಅವನಿಗೇ ಇದೆ. ಆ ಉದಯನನ ಹತ್ತಿರ ಅವರ ದೃಷ್ಟಿ ಲೋಪ ಹೋಗಲಾಡಿಸುವಾಗ ನಾನೇ ಈ ರಹಸ್ಯಗಳನ್ನು ಹೇಳಿದ್ದೆ. ಅದಕ್ಕೆ ಬೇಕಾದ ಅಂಜನ ಭಸ್ಮ ಮೊದಲಾದುವುಗಳನ್ನೂ ಕೊಟ್ಟಿದ್ದೆ. ಇಲ್ಲದಿದ್ದರೆ ನನ್ನನ್ನೇ ಕೊಲ್ಲುತಿದ್ದ. ಅವನೊಬ್ಬ ಸಿಕ್ಕಿಬಿದ್ದರೆ ಇದರ ನಿಜವೆಲ್ಲ ನಿನಗೆ ಸಿಕ್ಕಿಬಿಡುತ್ತದೆ. ಅವನು ಬದುಕಿದ್ದರೆ ನಿನ್ನ ಕೈಗೆ ಸಿಗದೆ ಹೋಗಲಾರ. ಆಗ ಅವನ ಕೈಯಿಂದಲೇ ಇವರ ವೈಕಲ್ಯಗಳನ್ನು ಹೋಗಲಾಡಿಸಬಹುದು. ಅದುವರೆಗೆ ಈ ಹುಡುಗರನ್ನು ಬಂಧನದಲ್ಲಿರಿಸು. ಇದೇ ನಾನು ಹೇಳುವ ಮಾತು. ಇನ್ನು ನಿನ್ನ ಇಷ್ಟ."

"ಓಹೋ, ಹೀಗೆ ಸಮಾಧಾನ ಹೇಳಿ ಈಗ ತಪ್ಪಿಸಿಕೊಂಡೆ. ಆಗಲಿ, ಆ ತಪ್ಪಿಸಿಕೊಂಡ ಹುಡಗನೂ ಸಿಕ್ಕಲಿ. ಹೇಗಿದ್ದರೂ ಈ ದಿನ ಮಹಾಬಲಿ ನಿಂತಿತು. ಈಗ ನಿಮ್ಮ ಸಂಗತಿ ನೋಡಬೇಕು, ನಡೆಯಿರಿ" ಎಂದು ರಾಕ್ಷಸನು ಸಂಧ್ಯಾನಿಶೀಥರನ್ನೂ ರಾಜಭಟರನ್ನೂ, ಗಡ್ಡದವನನ್ನೂ ಒಂದು ಹಗ್ಗದಲ್ಲಿ ಕಟ್ಟಿ ತನ್ನ ಹಿಂದೆ ಎಲ್ಲಿಗೋ ಮೃಗಗಳನ್ನು
ಎಳೆದುಕೊಂಡು ಹೋಗುವಂತೆ ಹೋದನು.

ಇದನ್ನೆಲ್ಲಾ ಅದೃಶ್ಯರೂಪದಲ್ಲಿ ನೋಡುತ್ತಿದ್ದ
ಉದಯನನು ರಾಕ್ಷಸನ ಬೆನ್ನ ಹಿಂದೆಯೇ ಹೋಗು
ತ್ತಿದ್ದನು. ಸ್ವಲ್ಪದೂರ ಹೋಗಿ ರಾಕ್ಷಸನು ದೊಡ್ಡ
ದೊಂದು ತರಗೆಲೆಗಳ ರಾಶಿಯ ಹತ್ತಿರ ನಿಂತು
ಹದ್ದಿನ ರೂಪವನ್ನು ಧರಿಸಿದನು. ಆಮೇಲೆ ವಿಶಾ
ವಾದ ತನ್ನ ರೆಕ್ಕೆಗಳನ್ನು ಬೀಸಿ ಆಡಿಸುತ್ತಿರಲು
ತರಗೆಲೆಗಳೆಲ್ಲ ಚೆಲ್ಲಾಚೆದರಾಗಿ ಹೋಗಿ, ಆ ಸ್ಥ
ದಲ್ಲಿ ಭೂಮಿಯೊಳಗೆ ಹೋಗುವ ಒಂದು ದ್ವಾರ
ಕಂಡಿತು. ರಾಕ್ಷಸನು ಸಂಧ್ಯಾನಿಶೀಥರನ್ನೂ, ರಾ
ಭಟರನ್ನೂ, ಗಡ್ಡದ ಗಿಡ್ಡನನ್ನೂ ಆ ದ್ವಾರ
ಮೂಲಕ ನೆಲದೊಳಕ್ಕೆ ದೂಡಿದನು. ಆಮೇಲೆ
ಗೆಲೆಗಳನ್ನೆಲ್ಲ ಕೂಡ ಹಾಕಿ ಮತ್ತೆ ಮೊದಲಿನ
ದ್ವಾರವನ್ನು ಮುಚ್ಚಿಬಿಟ್ಟನು.

ಅಲ್ಲಿಂದ ರಾಕ್ಷಸನು ಕೊಳದ ಬಳಿಗೆ ಬಂ
ಅಲಂಕರಣದೊಂದಿಗಿರುವ ಆವಳಿಜವ
ನ್ನೆಲ್ಲ ಜಾಗರೂಕತೆಯಿಂದ ನೋಡಿಕೊಂಡಿರು
ಅಲ್ಲಿಯ ಪರಿಚಾರಿಕೆಯರಿಗೂ ಭಟರಿಗೂ ಎಚ್ಚ
ಹೇಳಿ, ಅಂಗಲೋಪದಿಂದಿರುವ ಸುಹಾಸಿನಿ, ಸು
ಷಿಣಿ, ಸುಕೇಶಿನಿಯರನ್ನು ಎತ್ತಿಕೊಂಡು
ರೂಪದಲ್ಲಿ ಹಾರಿಹೋದನು. (ಇನ್ನೂ





ಅಗ್ನಿ ಮುಕ್ಕಳ ಕಥೆ

Oct. 1975

೧೫


[ರಾಕ್ಷಸನು ತನಗೆ ಬೇಕಾದ ಅವಳಿಜವಳಿಗಳು ಸಿಕ್ಕಿದರೆಂದು, ಬಹಳ ಸಂತೋಷದಿಂದ ಬಲಿಗೊಡಲು ಸಿದ್ಧನಾದನು. ಬಲಿಯ ಸಮಯಕ್ಕೆ ಮೂವರು ರಾಜಕುಮಾರಿಯರು ಅಂಗವಿಕಲರಾಗಿರುವುದನ್ನು ನೋಡಿ, ಬಲಿಗೊಡಲಾಗದೆ, ತನ್ನ ಸೇವಕರಿಗೆ ಎಚ್ಚರಿಕೆ ಹೇಳಿ, ಆ ಮೂವರು ರಾಜಕುಮಾರಿಯರನ್ನು ಎತ್ತಿಕೊಂಡು ಹದ್ದಿನ ರೂಪದಲ್ಲಿ ಎಲ್ಲಿಗೋ ಹಾರಿಹೋದನು.]

[illegible] ಮಾಯಾಭವನದಲ್ಲಿ ಸಿಕ್ಕಿಬೀಳದೆ, ಉಳಿದಿದ್ದ [illegible]ಯನನಿಗೆ ಏನು ಮಾಡಬೇಕೆಂದು ತೋರದೆ [illegible] ಚಿಟ್ಟು ಹಿಡಿದಂತಾಯಿತು. ಅದೃಶ್ಯರೂಪ [illegible] ಮುಂದಿನ ಗತಿ ಏನೆಂದು ತೀವ್ರವಾಗಿ [illegible]ಚನೆ ಮಾಡುತ್ತಲೇ ಇದ್ದನು.

[illegible]ತಾಳಗೃಹದೊಳಗೆ ಪ್ರವೇಶಿಸೋಣವೆಂದರೆ, [illegible] ತನ್ನ ಭಸ್ಮಗಳು ಅಂಜನಗಳು ಪ್ರಭಾವ [illegible]ಕೊಳ್ಳುತ್ತವೆಂದು ರಾಜಕುಮಾರಿಯರು ಈ [illegible] ಹೇಳಿದುದು ಅವನಿಗೆ ನೆನಪಿತ್ತು. ಆದರೂ [illegible]ಶಾಲಿಯಾದುದರಿಂದ ಹೇಗಾದರೂ ಪಾತಾಳ ಗೃಹವನ್ನು ನೋಡಲೇಬೇಕೆಂಬ ಕುತೂಹಲವೇ ಗೆದ್ದಿತು. ಅವನು ಪಾತಾಳಗೃಹದ ದ್ವಾರ ಪ್ರದೇಶಕ್ಕೆ ಹೋಗಿ ಅಲ್ಲಿರುವ ತರಗೆಲೆಯ ರಾಶಿಯನ್ನು ಕೆದರಿ ದೂರ ಸರಿಸಿದನು.

ಆಗ ಉದಯನನಿಗೆ ಭೂಮಿಯಲ್ಲೊಂದು ಸುರಂಗವೂ ಅದರೊಳಗೆ ಕೆಳಗಿಳಿಯುವ ಮೆಟ್ಟಿಲುಗಳೂ ಕಂಡುಬಂದುವು. ಅವನು ಒಂದೊಂದೇ ಮೆಟ್ಟಿಲನ್ನು ಇಳಿಯುತ್ತಾ ಹೋದನು.

ಹತ್ತು ಮೆಟ್ಟಿಲು ಇಳಿಯುವಷ್ಟರಲ್ಲಿ ಅವನ ಅದೃಶ್ಯರೂಪವು ಹೋಗಿ, ಎಂದಿನ ರೂಪದಲ್ಲಿ



ಕಾಣಿಸತೊಡಗಿದನು. ಅದನ್ನು ತಿಳಿದು ಅವನೇನೂ ಹೆದರಿ ಹಿಂಜರಿಯಲಿಲ್ಲ. ತನ್ನ ಕಣ್ಣುಗಳನ್ನೂ ಕಿವಿಗಳನ್ನೂ ಸೂಕ್ಷ್ಮವಾಗಿಸಿಕೊಂಡು. ಮತ್ತೆ ಹತ್ತು ಮೆಟ್ಟಿಲುಗಳನ್ನು ಇಳಿದನು.

ಅಷ್ಟೇ, ಆಮೇಲೆ ಅವನ ಹಜ್ಜೆ ಮುಂದಕ್ಕೆ ಕದಲಲಿಲ್ಲ. ಕೆಳಭಾಗದಲ್ಲಿ ಭಾರಿಯಾದ ಎರಡು ಸಿಂಹಗಳಿದ್ದುವು. ಅಷ್ಟೇ ಅಲ್ಲದೆ ಆ ಸಿಂಹಗಳ ಕೊರಳಿನಲ್ಲಿ ಭಯಂಕರವಾದ ಎರಡು ಸರ್ಪಗಳು ಸುತ್ತಿಕೊಂಡು ಭುಸುಗುಡುತ್ತಿದ್ದುವು. ಈ ಭಯಂಕರ ಪ್ರಾಣಿಗಳ ಸ್ನೇಹವನ್ನು ನೋಡಿದ ಕೂಡಲೇ ಸ್ತಂಭಿತನಾದ ಉದಯನನಿಗೆ ಮುಂದೆ ಕದಲಲು ಧೈರ್ಯವಾಗಲಿಲ್ಲ. ತಟಕ್ಕನೆ ಹಿಂದಿರುಗಿ ಸರಸರನೆ ಒಂದೇ ಉಸಿರಿಗೆ, ಸುರಂಗದಿಂದ ಹೊರಗೆ ಬಂದು ನಿಂತನು. ಈಗ ಮತ್ತೆ ಅದೃಶ್ಯರೂಪದವನಾಗಿದ್ದ.

ಅಲ್ಲಿಂದ ಅವನು ನೆಟ್ಟಗೆ ಕೊಳದ ಕಡೆಗೆ ಸಾಗಿದನು. ಆ ಕೊಳದ ಸುತ್ತಲೂ ಅಗ್ನಿಕುಂಡಗಳು ಧಗಧಗನೆ ಉರಿಯುತ್ತಿದ್ದುವು. ಆಗಾಗ ಅವುಗಳಿಂ ಛಟಛಟನೆ ಕಿಡಿಗಳು ಹಾರಿ ಯಾರನ್ನೂ ಸಮೀಪ ಲಾಗದಂತೆ ತಡೆಯುತ್ತಿದ್ದುವು. ರಾಕ್ಷಸನ ಕಾವಲುಗಾರರು ಕೊಳದ ಸುತ್ತಲೂ ಬಹಳ ಎಚ್ಚರದಿಂ ಕಾವಲು ಬೇರೆ ಕಾಯುತ್ತಿದ್ದರು. ಅಲ್ಲಿಯೂ ಅ ನಿಗೆ ಏನು ಮಾಡಲೂ ಸಾಧ್ಯವಾಗಲಿಲ್ಲ.

ಅಂಗವಿಕಲರಾಗಿದ್ದ ರಾಜಕುಮಾರಿಯರನ್ನು ರಾ ಸನು ಹಾರಿಸಿಕೊಂಡು ಹೋದ ಸಂಗತಿ ಉದ ನನಿಗೆ ತಿಳಿಯದು. ಅವರು ಕೊಳದಲ್ಲಿದ್ದಾರೆಂ ನಂಬಿ, ಎಲ್ಲಾ ಹಂಸಗಳನ್ನೂ ಎಣಿಸಿ ನೋಡಿ ನಲುವತ್ತೆಂಟು ಹಂಸಗಳಿಗೆ ಬದಲು ಈಗ ನ ವತ್ತೈದೇ ಇರುವುದನ್ನು ನೋಡಿ ಅವನನ್ನು ಅ ಮಾನವು ಬಾಧಿಸತೊಡಗಿತು. ತಾನು ಯ ರಾಜಕುಮಾರಿಯರನ್ನು ಶೋಧಿಸಲು ಇಷ್ಟ ಪಟ್ಟು ಬಂದೆನೋ ಆ ಮೂವರೇ ಕಾಣದಿ ಬೇಕೆಂದೂ ಅವನಿಗೆ ತೋರಿತು.

ಅವರೇನಾದರೂ ಅಪಾಯದಲ್ಲಿ ಸಿಕ್ಕಿರಬಹು ಯಾರನ್ನು ಕೇಳಿದರೆ ಸಂಗತಿ ತಿಳಿದೀತು? ಈ ಅದೃಶ್ಯರೂಪವನ್ನು ಕಳೆದುಕೊಂಡುಬಿಟ್ಟರೆ ಕಾವಲಿನ ರಾಕ್ಷಸರು ತನ್ನನ್ನು ಹಿಡಿಯದೆ ಲಾರರು. ಹೇಗಾದರೂ ಮಾಡಿ ಕೊಳಕ್ಕೆ ಹಂಸರೂಪ ತಾಳೋಣವೆಂದರೆ ಕೊಳದ ಸು ಅಗ್ನಿಜ್ವಾಲೆಗಳಿವೆ. ಅವುಗಳನ್ನು ದಾಟುವಾಗ ಅದೃಶ್ಯರೂಪ ಹೋಗಿಬಿಡಬಹುದು. ಹಾರ ಸ್ವಲ್ಪಮಾತ್ರ ಶಬ್ದವಾದರೂ ಕಷ್ಟವೇ.

ಇಲ್ಲಿ ಉದಯನನು ಹೀಗೆ ಚಿಂತೆಯಲ್ಲಿರು ಹದ್ದಿನ ರೂಪದಲ್ಲಿ ಆಕಾಶಕ್ಕೆ ಹಾರಿದ ರಾ ತಾನು ಎತ್ತಿಕೊಂಡಿದ್ದ, ಸುಹಾಸಿನಿ. ಸು ಸುಕೇಶಿನಿಯರನ್ನು ಒಂದು ಕಾಡಿನಲ್ಲಿ ಕೆಳಗೆ ಬಿಟ್ಟನು. ಅಂಗವಿಕಲರಾಗಿ ಉಪಯೋಗವಿಲ್ಲ ಹೇಗೆ ಬೇಕಾದರೂ ಹೋಗಲೆಂದುಕೊಂಡು,

ಯನಾದುದರಿಂದ ತಾನಾಗಿ ಕೊಲ್ಲದೆ ಬಿಟ್ಟಿದ್ದ. ವೇಳೆ ಈ ಹುಡುಗಿಯರು ತನ್ನ ಮಾಯಾ ನದ ರಹಸ್ಯವನ್ನು ಯಾರಿಗಾದ ಹೇಳುವರೇನೋ ರುಕೊಂಡು ಆ ಮೂವರಿಗೂ ಬಾಯಿ ಬಾರ ಯೂ ಮಾಡಿದ್ದ.

ಮೊದಲೇ ಅಂಗವಿಕಲರಾಗಿದ್ದ ಆ ರಾಜಕುಮಾರಿ ರಿಗೆ ಮೂಕತ್ವವೂ ಬಂದುಬಿಟ್ಟಿತು. ಏನೂ ರಲಿಲ್ಲ ಮೂವರಿಗೂ. ಕಷ್ಟಪಟ್ಟಾದರೂ ಆ ನೊಳಗಿನಿಂದ ಪಾರಾಗೋಣವೆಂದರೆ, ಸುಭಾಷಿ ಗೆ ಕಾಲಿಲ್ಲ, ಸುಕೇಶಿನಿಗೆ ಕಣ್ಣಿಲ್ಲ. ಸುಹಾಸಿನಿಯೂ ಲ್ಲದ ಮೊಂಡಿ. ಉಳಿದಿಬ್ಬರನ್ನೂ ಕರೆದು ನಡೆಯುವಂತಿಲ್ಲ. ಈಗ ಮೂವರಿಗೂ ಬಾರದು. ಏನು ಮಾಡುವರು ಪಾಪ ?

ಲ್ಲದವರಿಗೆ ದೇವರೇ ದಿಕ್ಕು ಎಂಬ ಹಾಗೆ, ವಶಾತ್ತಾಗಿ ಕಾಡಿನ ಆ ಪ್ರದೇಶಕ್ಕೇ ಒಬ್ಬ ಬೇಟೆಯಾಡುತ್ತಾ ಬಂದ. ಅವನ ಕಣ್ಣಿಗೆ ಸುಂದರಿಯರಾದ ಈ ಮೂವರು ರಾಜಕುಮಾರಿಯರೂ ಕಾಣಿಸಿದರು. ಸಮೀಪಿಸಿ ಅವರ ಅಂಗವೈಕಲ್ಯಗಳನ್ನು ಕಂಡು ಆಶ್ಚರ್ಯ ಅನುತಾಪಗಳಿಂದ ದ್ರವಿಸಿದನು ಆ ರಾಜ. ಬ್ರಹ್ಮನು ಈ ಸೌಂದರ್ಯರಾಶಿಗಳಲ್ಲಿ ಹೀಗೊಂದು ಮರೆವನ್ನು ಏಕೆ ತೋರಿಸಿದನೋ ?

"ಯಾರು ನೀವು ? ಶಾಪಗ್ರಸ್ತದೇವಿಯರೋ ? ಈ ಕಾಡಿನೊಳಗೆ ಏಕೆ ಬಂದಿರಿ ? ಹೇಗೆ ಬಂದಿರಿ ?" ಎಂದು ರಾಜನ ಬಾಯಿಯಿಂದ ಹೊರಟ ಪ್ರಶ್ನೆಗಳಿಗೆ ಬಾಯಿಯ ಮೂಲಕ ಉತ್ತರ ಬರಲಿಲ್ಲ. "ಅಯ್ಯೋ ! ಮೂಕತ್ವವೂ ಸೇರಿದೆಯಲ್ಲಾ !" ಎಂದು ದುಃಖೋದ್ಗಾರ ತೆಗೆದ ರಾಜ. ಕೇಳುವ ಶಕ್ತಿಮಾತ್ರ ಇರುವ ರಾಜಕುಮಾರಿಯರು ಕೈಸನ್ನೆಗಳ ಮೂಲಕ ತಮ್ಮ ಸ್ಥಿತಿಯನ್ನು ತಿಳಿಸಲು ಪ್ರಯತ್ನಿಸಿದರು. ಮೂವರೂ ಸನ್ನೆಗಳಿಂದ ತಮ್ಮ ಸ್ಥಿತಿಯನ್ನು ತಿಳಿಸಲು ಯತ್ನಿಸುವುದು ಕಲ್ಲೂ ಕರಗುವ ದೃಶ್ಯವಾಯಿತು. ರಾಜನು ಅವರ ಸನ್ನೆಗಳನ್ನು ನೋಡಿ ತಲೆಯಾಡಿಸುತ್ತಾ ಸುಮಾರಾಗಿ ಅರ್ಥ



ಮಾಡಿಕೊಂಡು, "ಬಾಲೆಯರಿರಾ, ನಿಮ್ಮನ್ನು ನೋಡಿದರೆ ದೊಡ್ಡ ಕುಟುಂಬಕ್ಕೆ ಸೇರಿದವರಂತೆ ಕಾಣುವಿರಿ. ಯಾವುದೋ ಕಾರಣದಿಂದ ನಿಮಗೆ ಇಂತಹ ಸ್ಥಿತಿ ಪ್ರಾಪ್ತವಾಗಿರಬೇಕು. ನಿಮ್ಮ ಪುಣ್ಯದಿಂದ ನನ್ನ ಕಣ್ಣಿಗೆ ಬಿದ್ದಿದ್ದೀರಿ. ಇನ್ನೇನೂ ಹೆದರಬೇಡಿರಿ ನಾನು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ. ನಿಮ್ಮ ಮನೆಯಲ್ಲಿ ನೀವೆಷ್ಟು ಸ್ವೇಚ್ಛೆಯಾಗಿರುವಿರೋ ಅಷ್ಟೇ ಸ್ವೇಚ್ಛೆಯಿಂದ ನನ್ನ ಮನೆಯಲ್ಲಿರಬಹುದು. ನಾನು ಮಾಳವ ದೇಶದ ರಾಜ ಪ್ರತಾಪಸಿಂಹ. ನನ್ನ ಹೆಸರನ್ನು ನೀವು ಕೇಳಿದ್ದರೂ ಇರಬಹುದು" ಎಂದು ಅವರಿಗೆ ಧೈರ್ಯ ಹೇಳಿದನು. ಅದನ್ನು ತಿಳಿದು ಮೂವರಿಗೂ ಸಂತೋಷವಾದುದೂ ಗೊತ್ತಾಯಿತು.

ಅವನ ಮಾತುಗಳನ್ನು ಕೇಳುತ್ತಿದ್ದಂತೆ ರಾಜಕುಮಾರಿಯರ ಮುಖಗಳು ಅರಳಿದುವು. ರಾಜನು ಅವರನ್ನು ತನ್ನ ಕುದುರೆಯ ಮೇಲೆ ಏರಿಸಿಕೊಂಡು, ಅವರ ಹಿಂದೆ ತಾನು ಇನ್ನೊಂದು ಕುದುರೆಯ ಮೇಲೇರಿಕೊಂಡು ಜಾಗರೂಕತೆಯಿಂದ ಹೊರಟ ಮಾಳವ ದೇಶದ ರಾಜನ ಅರಮನೆಯ ಹತ್ತಿ ಸುಹಾಸಿನಿ, ಸುಭಾಷಿಣಿ, ಸುಕೇಶಿನಿಯರನ್ನು ಕುದ ಯಿಂದಿಳಿಸಿ, ಅವರನ್ನು ಕರೆದುಕೊಂಡು ಪ್ರತ ಸಿಂಹರಾಜನು ಅರಮನೆಯೊಳಗೆ ಪ್ರವೇಶಿಸಿದ ಕೂಡಲೇ ಆ ರಾಜಕುಮಾರಿಯರ ಆರೈಕೆಗೆ ಬೇಕ ಏರ್ಪಾಡುಗಳನ್ನೂ, ತಕ್ಕ ಸೇವಕಿಯರನ್ನೂ ನಿ ಮಿಸಿದನು. ಮೂವರು ಕುಮಾರಿಯರೂ ಸೇ ಯರ ವಶರಾಗಿ ಅರಮನೆಯ ಒಳಭಾಗದ ಕೋಣ ಹೋಗಲ್ಪಟ್ಟರು.

ಆಮೇಲೆ ಪ್ರತಾಪಸಿಂಹರಾಜನು ಆಸ್ಥಾ ವಿದ್ವಾಂಸನನ್ನು ಬರಮಾಡಿಸಿ, ಆ ರಾಜಕುಮಾ ಯರ ವೃತ್ತಾಂತವನ್ನು ತಿಳಿಯುವ ಉಪಾ ವೇನೆಂದು ಆಲೋಚನೆ ಕೇಳಿದನು. ಅವರು ಅಂಗವಿಕಲರಾದುದರಲ್ಲಿ ಏನೋ ಕೃತ್ರಿಮಕಾರಣ ಬೇಕೆಂದು ಅವನಿಗೆ ಅನುಮಾನವಿತ್ತು.

ಆ ವಿದ್ವಾಂಸನು ತನ್ನ ಬುದ್ಧಿಬಲವನ್ನೆಲ್ಲಾ ಉ ಯೋಗಿಸಿ ನೋಡಿದನು. ಆಮೇಲೆ ಒಂ ಉಪಾಯವನ್ನು ನಿರ್ಣಯಿಸಿ, ಸ್ವಲ್ಪ ಮರಳ ತರಿಸಿ ಆ ಮೂವರು ರಾಜಕುಮಾರಿಯರ ಮು ರಾಶಿಹಾಕಿ ಕೈಯಿಂದ ನೆಲದಲ್ಲಿ ಮಟ್ಟಮಾಡಿ, ರಲ್ಲಿ ವಿವರಗಳನ್ನು ಬರೆಯುವಂತೆ ಸನ್ನೆಮಾಡಿದ ಸುಹಾಸಿನಿ ದುಃಖದಿಂದ "ಬರೆಯಲೂ ಓದ ನಮ್ಮಿಂದ ಸಾಧ್ಯವಿಲ್ಲ" ಎಂಬ ಅರ್ಥಬರುವ ಸಂಜ್ಞೆ ಮಾಡಿದಳು. ಇವರಿಗೆ ಓದು ಬ ಗಳೂ ತಿಳಿಯದಿರುವುದನ್ನು ನೋಡಿ ವಿದ್ವಾ ನಿಗೆ ಆಶ್ಚರ್ಯವಾಯಿತು. ತಾನೊಂದು ದೊ ಉಪಾಯ ಮಾಡಿದೆನೆಂದುಕೊಂಡ ವಿದ್ವಾಂ ಮುಖ ಸಣ್ಣದಾಗಿ ಹೋಯಿತು.

"ಇನ್ನೇನೂ ಉಪಾಯವಿಲ್ಲವೇ ?" ಎಂ ರಾಜನು ಅವನನ್ನು ಕೇಳಿದನು. "ಮಹಾರಾ

[illegible] ತೋರಿದ ಈ ಒಂದೇ ಉಪಾಯವನ್ನು [illegible]ಯೋಗ ಮಾಡಿ ನೋಡಿದೆ. ಇದಕ್ಕಿಂತ ಮೇಲೆ [illegible] ಬುದ್ಧಿಗೆ ಏನೂ ತೋರುವುದಿಲ್ಲ. ಕ್ಷಮಿಸ[illegible] " ಎಂದ ಆ ವಿದ್ವಾಂಸ.

[illegible]ಜನು ದಾಸಿಯರನ್ನು ಕರೆದು, " ಈ ಕುಮಾರಿ[illegible] ಯಾವ ಲೋಪವೂ ಆಗದಂತೆ ನೋಡು[illegible] ಅಂತಃಪುರದಲ್ಲಿ ಕಣ್ಣಿನ ರೆಪ್ಪೆಯ ಹಾಗೆ [illegible]ದುತ್ತಿರಿ. ಇವರ ವೃತ್ತಾಂತದಲ್ಲಿ ಏನೋ [illegible]ವಿರಲೇ ಬೇಕು. ಅದನ್ನು ಕಂಡುಹಿಡಿಯಲು [illegible]ಮಾಡಿ " ಎಂದು ಅಪ್ಪಣೆ ಕೊಟ್ಟನು.

[illegible] ರೀತಿಯಾಗಿ ರಾಕ್ಷಸನ ಮಾಯಾಭವನದಿಂದ [illegible]ಬಿದ್ದ ಆ ಮೂವರು ರಾಜಕುಮಾರಿಯರು [illegible]ರಾಜನ ಅಂತಃಪುರದಲ್ಲಿ ಅವರ ಮಟ್ಟಿಗೆ [illegible]ಗಿದ್ದರು.

* * *


[illegible]ದೊಮ್ಮೆ ಉದಯನನು ಶ್ರಾವಸ್ತಿನಗರಕ್ಕೆ [illegible]ವಾಗ ಒಂದಾನೊಂದು ರಾಜ್ಯದ ನಡುವಿ[illegible] ಸಾಗುತ್ತ ಅಲ್ಲೊಬ್ಬ ಕುರುಡನಿಗೆ ದೃಷ್ಟಿ [illegible] ಅಲ್ಲಿಯ ರಾಜನ ಸತ್ಕಾರಕ್ಕೆ ಪಾತ್ರನಾದ [illegible]? ಆ ರಾಜನು ಅವನನ್ನು ತನ್ನ ಬಳಿಯಲ್ಲೇ [illegible] ಹೇಳಿದ್ದನಷ್ಟೆ ? ಅದು ಮಾಳವದೇಶದ [illegible]ಹರಾಜನೇ.

[illegible] ಉದಯನನನ್ನು ಮರೆತಿರಲಿಲ್ಲ. ತನ್ನ [illegible] ಕೂಡಲೇ ಮತ್ತೆ ಬರುವೆನೆಂದು ಹೇಳಿದ [illegible]ವಂತನು ಈಗ ಬಂದರೆ ಎಷ್ಟು ಒಳ್ಳೆಯ[illegible] ಆ ರಾಜನಿಗೆ. ಅಂಗವಿಕಲರಾದ ಈ [illegible] ರಾಜಕುಮಾರಿಯರಿಗೆ ಅವನಿಂದ ವಿಕ[illegible] ಹೋಗಲಾಡಿಸಬಹುದಾಗಿತ್ತೆಂದು ಆಗಾಗ [illegible] ತೋರತೊಡಗಿತು,

[illegible]ದೆ ಆರು ದಿನಗಳಲ್ಲಿ ಉದಯನನು [illegible] ಪ್ರತಾಪಸಿಂಹನ ಬಳಿಗೆ ಬಂದೇ ಬಂದನು. ಆಕಸ್ಮಾತ್ತಾಗಿ ಅವನು ತನ್ನ ಬಳಿಗೆ ಬಂದುದನ್ನು ನೋಡಿ, ಪ್ರತಾಪಸಿಂಹನಿಗೆ ಬ್ರಹ್ಮಾನಂದವಾಯಿತು. ಉದಯನನು ಇನ್ನು ತನ್ನ ಆಸ್ಥಾನದಲ್ಲೇ ಇರಲು ಬಂದಿರುವುದಾಗಿಯೇ ಅವನು ಭಾವಿಸಿ, " ಓಹೋಹೋ ! ಬಾರಯ್ಯಾ ಬಾ. ಯಾವಾಗ ಬರುವಿಯೋ ಎಂದು ನಿನ್ನ ದಾರಿಯನ್ನು ಕಾಯುತ್ತಾ ಇದ್ದೆ. ಬರಬೇಕಾದ ಸಮಯಕ್ಕೇ ಬಂದಿರುವೆ. ಇಮ್ಮಡಿ ಸಂತೋಷವಾಯಿತು. ನೀನು ಕೈಕೊಂಡ ಕೆಲಸ ಪೂರ್ತಿಯಾಯಿತೇ ? ಇನ್ನು ಇಲ್ಲೇ ಇರುವಿಯಷ್ಟೇ ?" ಎಂದು ಕೇಳಿದ.

ಉದಯನನು ಹೀಗೆಂದ : " ಮಹಾರಾಜರೇ, ನಾನು ಕೈಕೊಂಡ ಆ ಕಾರ್ಯ ಇನ್ನೂ ಮುಗಿಯಲಿಲ್ಲ. ಅದಕ್ಕಾಗಿ ತಮ್ಮ ಸಹಾಯ ಬೇಕಾಗಿದೆ, ಅದಕ್ಕೇ ಬಂದೆ."

ರಾಜನು ಆಶ್ಚರ್ಯದಿಂದ, " ನನ್ನ ಸಹಾಯ ಬೇಕೆ ? ಏನದು ? ಏನೂ ದಾಕ್ಷಿಣ್ಯಪಡಬೇಡ, ಹೇಳಿ





ಬಿಡು. ನನ್ನಿಂದಾಗುವ ಎಂತಹ ಸಹಾಯವನ್ನಾದರೂ ಮನಃಪೂರ್ವಕ ಮಾಡುತ್ತೇನೆ" ಎಂದನು.

ಆಗ ಉದಯನನು ತನ್ನ ಹಾಗು ತನ್ನ ಸಹೋದರರ ಎಲ್ಲಾ ಸಂಗತಿಗಳನ್ನೂ ಆ ರಾಜನಿಗೆ ವಿವರವಾಗಿ ಹೇಳಿದನು. ಕಾಣೆಯಾಗಿ ಹೋದ ರಾಜಕುಮಾರಿಯರನ್ನು, ಈಗ ಪುನಃ ಹುಡುಕಬೇಕಾಗಿದೆ ಎಂದನು. ತನ್ನ ಹತ್ತಿರವಿರುವ ಭಸ್ಮ ಅಂಜನಗಳ ಮಹಿಮೆಗಳನ್ನೂ ಹೇಳಿದನು.

ಅದನ್ನೆಲ್ಲ ಕೇಳಿ ಪ್ರತಾಪಸಿಂಹನಿಗೆ. ಆ ರಾಜಕುಮಾರಿಯರೇ ತನ್ನ ಬಳಿ ಇರುವವರೋ ? ಇವನು ಅವರನ್ನು ಕರೆದೊಯ್ದು ಬಿಡುವವನೇನೋ ಎಂದು ತೋರಿತು. ಎಂತಹುದೋ ಸ್ವಾರ್ಥವೇಳಲು ಅವನು ಅದನು ಹತ್ತಿಕ್ಕಿಕೊಂಡು. "ಹಾಗಾದರೆ ಈಗ ನಾನು ಮಾಡಬೇಕಾದ ಸಹಾಯವೆಂತಹುದು, ನಿಃಶಂಕೆಯಿಂದ ಹೇಳು." ಎಂದು ಭರವಸೆ ಕೊಟ್ಟನು.

"ತಮ್ಮ ಆಸ್ಥಾನದ ಚಿತ್ರಕಾರನನ್ನು ಒಂದುಸಾರಿ ನನ್ನ ಜತೆಯಲ್ಲಿ ಕಳುಹಿಸಿಕೊಡಿರಿ. ಒಂದು ವಾ ದೊಳಗೆ ಹಿಂದಿರುಗಿ ಬರುತ್ತೇವೆ" ಎಂದ ಉದಯ

ಉದಯನನು ಬಹಳ ಆತುರವನ್ನು ವ್ಯಕ್ತಪಡಿ ದುದರಿಂದ, ತನ್ನ ಅಂತಃಪುರದಲ್ಲಿರುವ ಅಂಗವಿ ರಾದ ಹುಡುಗಿಯರ ವಿಷಯ ಆಮೇಲೆ ನೋಡೋ ವೆಂದುಕೊಂಡು ರಾಜನು, ತನ್ನ ಚಿತ್ರಕಾರನನ್ನು ಯಿಸಿ, ಅವನ ಜತೆಗೆ ಕಳುಹಿಸಿದನು.

ಉದಯನನು ಆ ಚಿತ್ರಕಾರನೊಂದಿಗೆ ಹೊರ ರಾಕ್ಷಸನ ಭವನದ ಬಳಿಗೆ ತಲಪಿದ ಕೂಡಲೇ ಮೇಲೆಯೂ, ಚಿತ್ರಕಾರನ ಮೇಲೆಯೂ ಭಸ್ಮವ ಚೆಲ್ಲಿದನು. ಇಬ್ಬರೂ ಅದೃಶ್ಯರೂಪದಲ್ಲಿ ಅಲ್ಲಿ ಕೊಳದ ಬದಿಯಲ್ಲೇ ಇದ್ದರು. ಚಿತ್ರಕಾರನಿಗೆ ವನ್ನೂ ಗಮನಿಸುವಂತೆ ಮೊದಲೇ ಹೇಳಿದ್ದ ಮರುದಿನ ಮತ್ತೆ ಅವರಿಬ್ಬರೂ ಹಿಂದಿರುಗಿ ವಾ ರಾಜ್ಯಕ್ಕೇ ಹೊರಟರು.

ಹೇಳಿದಂತೆಯೇ ಒಂದು ವಾರದೊಳಗೆ ಹಿ ರುಗಿ ಬಂದ ಉದಯನನ ಮೇಲೆ ಪ್ರತಾಪಸಿಂಹ ಇನ್ನಷ್ಟು ಮೆಚ್ಚುಗೆ ಕೂಡಿತು. ಆದರೆ ಉದಯ ಕೆಲಸ ಇನ್ನೂ ಮುಗಿದಿರಲಿಲ್ಲ. ಅವನು ಚಿತ್ರಕಾ ಕಲಾಮಂದಿರದೊಳಗೆ ಹೋದನು. ಚಿತ್ರಕಾ ಅವನ ಮುಂದೆ ತಾನು ತಯಾರಿಸಿದ ರಾಕ್ಷಸರ ಗಳನ್ನು ವರಿಸೆಯಾಗಿ ಉದಯನನ ಮುಂದಿ ಒಂದೊಂದನ್ನೇ ನೋಡುತ್ತಾ ಹೋದನು. ಆ ಗಳಲ್ಲಿ ಉದಯನನಿಗೆ ಮೇಳ ಕೂಡುವ ಯಾವುದೆಂದು ಪರೀಕ್ಷಿಸುತ್ತಿರಲು, ಒಂದು ಸರಿಹೊಂದುವಂತೆ ತೋರಿತು. ಅದನ್ನು ಯನನ ಪಕ್ಕದಲ್ಲಿಟ್ಟು. "ಈ ಚಿತ್ರ ನಿಮಗೆ ಹೋಗುತ್ತೆ. ಈ ವೇಷ ಹಾಕಿದರೆ ಯಾರಿಗೂ ಗುರುತು ಸಿಕ್ಕದು" ಎಂದನು.


"ಹೌದು" ಎಂದು ಉದಯನನೂ ಸಂತ ದಿಂದ ಒಪ್ಪಿದನು. ಆ ಕೂಡಲೇ ಚಿತ್ರಕಾ

[illegible]ಯನನಿಗೆ ರಾಕ್ಷಸರ ಅನುಚರರಲ್ಲಿ ಒಬ್ಬನ ಹಾಗೆ [illegible] ಹಾಕಿದನು. ಒಂದೆರಡುಸಾರಿ ಉದಯನನು [illegible] ವೇಷವನ್ನು ಕನ್ನಡಿಯಲ್ಲಿ ನೋಡಿಕೊಂಡನು. [illegible] ! ಬಹಳ ಚೆನ್ನಾಗಿದೆ !" ಎಂದು ತೃಪ್ತನಾಗಿ, [illegible]ದಿನವೇ ರಾಜನ ಅಪ್ಪಣೆಪಡೆದು. ರಾಕ್ಷಸನ [illegible]ಯಾಭವನಕ್ಕೆ ಹೋದನು.

[illegible]ವನು ಕೊಳದ ಬಳಿಗೆ ಹೋದ ಕೂಡಲೇ [illegible] ಮೇಲೆ ಭಸ್ಮವನ್ನು ಚೆಲ್ಲಿ, ಅದೃಶ್ಯನಾಗಬೇಕೆಂದು [illegible]ಡು ಭಸ್ಮದ ಡಬ್ಬಿಗಾಗಿ ತನ್ನ ದುಸ್ತನ್ನೆಲ್ಲ ತಡವಿ [illegible]. ಆದರೆ ಭಸ್ಮದ ಡಬ್ಬಿ ಕಾಣಲಿಲ್ಲ. ರಾಕ್ಷಸವೇಷ [illegible]ವಾಗ ಭಸ್ಮದ ಡಬಿ ಎಲ್ಲಿಯೋ ಕಳೆದು [illegible]ಗಿದೆ ಎಂದು ಗೊತ್ತಾಯಿತು. ಈಗೇನು [illegible]ವುದೆಂದು ಸ್ವಲ್ಪಹೊತ್ತು ಆಲೋಚಿಸಿ, ಕಡೆಗೆ [illegible]ದಿಂದ ಕತ್ತಲೆಯಾಗುವವರೆಗೆ ಯಾರ ಕಣ್ಣಿಗೂ [illegible]ಂತೆ ಒಂದು ಪೊದರಿನ ಮರೆಯಲ್ಲಿ ಅಡಗಿ [illegible]ದನು. ಕ್ಷಣವು ಯುಗವಾಗಿರುವಂತೆ ತೋರಿತು. [illegible] ಅವನು ಎದುರುನೋಡುವ ಕತ್ತಲೆಯ ಹೊತ್ತು ಸಮೀಪವಾಯಿತು. ರಾಕ್ಷಸನ ಪರಿವಾರದ ಕೆಲವಂದಿ ರಾಕ್ಷಸರು ಆ ಕೊಳದ ಬಳಿಗೆ ಬಂದರು. ಅದುವರೆಗೆ ಅಲ್ಲಿ ಕಾವಲಾಗಿದ್ದವರು, ತಮ್ಮ ಕಾವಲಿನ ಕೆಲಸವನ್ನು ಬಂದವರಿಗೆ ಒಪ್ಪಿಸಿ ಅಲ್ಲಿಂದ ಹೊರಟರು. ಹಾಗೆ ಹೊರಟವರು ಪಾತಾಳಗೃಹದ ದಾರಿ ಹಿಡಿದು, ಒಬ್ಬೊಬ್ಬರೇ ಸುರಂಗದೊಳಗೆ ಪ್ರವೇಶಿಸಿದರು. ಕಡೆಗೆ ಉಳಿದಿದ್ದವನು ಸುರಂಗದೊಳಗೆ ಪ್ರವೇಶಿಸುವಾಗ ಉದಯನನು ಅವನ ಹಿಂದೆಯೇ ಸುರಂಗದೊಳಗೆ ಇಳಿದುಬಿಟ್ಟನು.

ತನ್ನ ಮಾಯದ ವೇಷವನ್ನು ಯಾವ ರಾಕ್ಷಸನಾದರೂ ಕಂಡುಹಿಡಿಯುವನೇನೋ ಎಂದು ಉದಯನನಿಗೆ ದಿಗಿಲಾಗಿಯೇ ಇದ್ದಿತು. ಅವನು ತಮ್ಮೊಂದಿಗಿರುವುದು ಗೊತ್ತಾದರೂ ಯಾವ ರಾಕ್ಷಸನೂ ಸಂದೇಹಪಟ್ಟಂತೆ ತೋರಲಿಲ್ಲ. ಉದಯನನ ವೇಷವು ಆ ರಾಕ್ಷಸ ಸೇವಕರಲ್ಲೊಬ್ಬನ ಹಾಗೆಯೇ ಇದ್ದಿತು.

ಈಸಾರಿ ಉದಯನನು ಸ್ವಲ್ಪ ಕೂಡ ಶಂಕೆ ತಾಳದೆ ಎಲ್ಲಾ ಮೆಟ್ಟಿಲುಗಳನ್ನೂ ಇಳಿದು ಆ ಸಿಂಹ



ಗಳ ಬದಿಯಿಂದಲೇ ಹೋದನು. ಸಿಂಹಗಳು ಕೂಡ ತನ್ನ ಗುರುತು ಹಿಡಿಯಲಾರವೆಂದೇ ಉದಯನ ನಂಬಿದ್ದ. ಆದರೆ ಹೊಸ ಮನುಷ್ಯನ ವಾಸನೆಯನ್ನು ಕಂಡುಹಿಡಿದ ಆ ಸಿಂಹಗಳು ಒಮ್ಮೆಲೇ ಉದಯನನ ಮೇಲೆ ಹಾರಿದುವು. ಕಿರ್ರನೆ ಕಿರುಚಿ ನೆಲಕ್ಕೆ ಬಿದ್ದು ಬಿಟ್ಟ ಉದಯನ.

ಈ ದೃಶ್ಯವನ್ನು ನೋಡಿದ ಕೂಡಲೇ ಉಳಿದವರೆಲ್ಲಾ ಓಡಿ ಬಂದು ಒಂದೇಟಿಗೆ ಎರಡು ಸಿಂಹಗಳನ್ನೂ ಕಡಿದು ತುಂಡು ಮಾಡಿಬಿಟ್ಟರು. ತರುವಾಯ ಉದಯನನನ್ನು ಎತ್ತಿ ಕರೆದುಕೊಂಡು ಹೋಗಿ ಅವನ ಸುತ್ತಲೂ ಕೂಡಿದರು. "ನಮ್ಮವನನ್ನೇ ಕೊಲ್ಲಲು ನೋಡಿದುವಲ್ಲಾ ಈ ಹಾಳು ಸಿಂಹಗಳು! ಏನು ಸೊಕ್ಕು!. ಒಳ್ಳೇ ಶಿಕ್ಷೆ ಅನುಭವಿಸಿದುವು!" ಎಂದು ಸಿಂಹಗಳನ್ನು ಕೊಂದವನನ್ನು ಉಳಿದವರು ಮೆಚ್ಚಿಕೊಂಡರು.

ತರುವಾಯ ಅವರು ಉದಯನನಿಗೆ ತಗಲಿದ ಗಾಯಗಳಿಗೆ ತಕ್ಕ ಪರಿಚರ್ಯೆ ಮಾಡಿದರು. ಏನೋ ಔಷಧ ಪೂಸಿ ಕಟ್ಟುಕಟ್ಟಿದರು. "ತಮ್ಮಪ್ಪಾ, ನಿನ್ನ ಗಾಯಗಳು ಪೂರ್ತಿ ಮಾಯುವವರೆಗೆ ಎರಡು ಮೂರು ದಿನ ಇಲ್ಲಿಯೇ ಇರು. ಅದುವರೆಗೆ ಕಾವಲಿನ ಕೆಲಸ ನಾವೇ ನೋಡಿಕೊಳ್ಳುತ್ತೇವೆ" ಎಂದರು. "ಹಾಗಾದರೆ ಒಂದು ಉಪಕಾರ ಮಾಡಿ ಹೋಗಿರಪ್ಪ. ನನಗೆ ಕಾಲು ಕದಲಿಸಲಿಕ್ಕೇ ಆಗುವುದಿ
ಹಸಿವಾದರೇನು ಮಾಡಲಿ? ಹೊಟ್ಟೆಗಿಷ್ಟು ಆ
ರದ ಏರ್ಪಾಡು ಕೂಡಾ ಮಾಡಿಟ್ಟುಬಿಡಿ. ನಿ
ಪುಣ್ಯಬರುತ್ತೆ" ಎಂದ ಉದಯನ.

"ಆಗಲಪ್ಪ" ಎಂದು ರಾಕ್ಷಸರು ಉದಯ
ಗಾಗಿ, ಮಧುಮಾಂಸ ಹಣ್ಣು ಮೊದಲಾದುವ
ತಂದಿಟ್ಟು, ಮಲಗುವ ಸದುಪಾಯಗಳನ್ನೂ ಮಾ
ಅವರವರ ದಾರಿ ಹಿಡಿದು ಹೊರಟುಹೋದರು.

ಬೆಳಗಾಯಿತು. ರಾಕ್ಷಸ ಅನುಚರರು ಕೋ
ಬಳಿಗೆ ಹೋಗಿ ಅಲ್ಲಿರುವ ಕಾವಲಿನವರನ್ನು ಬಿ
ಗಡೆ ಮಾಡಿದರು. ಮತ್ತೆ ಸ್ವಲ್ಪಹೊತ್ತಿಗೆ ಅವ
ಉದಯನನ ಬಳಿಗೆ ಬಂದು. "ಅದೃಷ್ಟವಂತ
ನೀನು. ಗಮ್ಮತ್ತು ನಿದ್ದೆ ಮಾಡಿದಿ!" ಎಂದು
ರಾತ್ರಿ ಪೂರಾ ಕಣ್ಣುಬಿಟ್ಟು ಕಾವಲು ಕಾದ
ರಾಕ್ಷಸರು, ಅಲ್ಲಲ್ಲಿ ಬಿದ್ದುಕೊಂಡು, ಸ್ವಲ್ಪಹೊ
ಗೊರಕೆ ಹೊಡೆಯತೊಡಗಿದರು.

ಅರ್ಧರಾತ್ರಿಯ ಹೊತ್ತಿನಲ್ಲಿ ಒಡೆಯ ರಾ
ಅಲ್ಲಿಗೆ ಬಂದ. ಅವನು ಸುರಂಗದೊಳಗೆ ಬರು
ಅಲ್ಲಿ ಸತ್ತುಬಿದ್ದ ಎರಡು ಸಿಂಹಗಳನ್ನು ನೋ
ಮಹಾಕೋಪದಿಂದ, "ಯಾರ ಕೆಲಸ ಇದು
ಎಂದು ಬೊಬ್ಬಿಡುತ್ತ ಉದಯನನು ಮಲ
ವಲ್ಲಿಗೇ ಬಂದ. (ಇನ್ನೂ







ಅವಳಿ ಮಕ್ಕಳ ಕಥೆ

Nov 1975


೧೩

[ದೊಡ್ಡ ರಾಕ್ಷಸ ಮೂವರು ರಾಜಕುಮಾರಿಯರನ್ನೂ ಮೂಕರನ್ನಾಗಿ ಮಾಡಿ ಅರಣ್ಯದಲ್ಲಿ ಬಿಟ್ಟು ಬಿಟ್ಟನು. ಉದಯನನು ರಾಕ್ಷಸನ ಸೇವಕರಂತೆ ವೇಷ ಹಾಕಿಕೊಂಡು ಸೇವಕರೊಂದಿಗೆ ಭೂಗೃಹಕ್ಕೆ ಇಳಿದನು. ಆಗ ಅಲ್ಲಿದ್ದ ಸಿಂಹಗಳನ್ನು ಕೊಲ್ಲಬೇಕಾಯಿತು. ಅರ್ಧರಾತ್ರಿಯಲ್ಲಿ ರಾಕ್ಷಸನು ಬಂದು ಸತ್ತ ಸಿಂಹಗಳನ್ನು ನೋಡಿ ಉದಯನನ ಬಳಿಗೆ ಬಂದನು.]

ಸಿಂಹಗಳು ಸತ್ತು ಬಿದ್ದುದನ್ನು ನೋಡಿ ಆ ರಾಕ್ಷಸನಿಗೆ ಭಯಂಕರ ಕೋಪ ಬಂತು. ಅವನು ಭೂಮಿ ಸೀಳುವಂತೆ ಗರ್ಜಿಸುತ್ತಾ ತನ್ನ ಬಳಿಗೆ ಬರುವುದನ್ನು ನೋಡಿ ಉದಯನನು ಗದಗದಿಸಿ ಹೋದನು.

"ಯಾರು ಈ ಸಿಂಹಗಳನ್ನು ಕೊಂದವರು ?" ಎಂಬ ರಾಕ್ಷಸನ ಕರ್ಕಶ ಪ್ರಶ್ನೆ ನೆಲಮನೆಯೊಳಗೆಲ್ಲಾ ಪ್ರತಿಧ್ವನಿಸಿತು. ಆ ಪ್ರಶ್ನೆಗೆ ಏನಾದರೂ ಉತ್ತರ ಕೊಡಬೇಕೆಂದು ಉದಯನನು ಬಾಯಿ ತೆರೆಯುವಷ್ಟರಲ್ಲಿ, ರಾಕ್ಷಸನ ಸೇವಕರು ಹೆದರಿ ಬಿದ್ದೆದ್ದು ಕೊಂಡು ಓಡುತ್ತಾ ಅಲ್ಲಿಗೆ ಬಂದುಬಿಟ್ಟರು.

ಅವರಲ್ಲಿ ಸಿಂಹಗಳನ್ನು ಕೊಂದವನು ಕೈಗಳನ್ನು ಕಟ್ಟಿಕೊಂಡು ಮುಂದೆ ಬಂದು, "ನಾನೇ, ದೊರೆಗಳೇ, ಈ ಕೆಲಸ ಮಾಡಿದವನು ನಾನೇ. ನಮ್ಮ ಆಶ್ರಯದಲ್ಲಿರುವಾಗ, ನಮ್ಮ ಕೈಯಿಂದ ಆಹಾರ ತಿಂದು ಬೆಳೆಯುವಾಗ ಈ ಸಿಂಹಗಳು ನಮ್ಮನ್ನೇ ಕೊಂದು ಹಾಕಲು ನೋಡಿದುವು. ಅಷ್ಟರಲ್ಲಿ ನಾನು ಹೀಗೆ ಮಾಡದೇ ಹೋಗಿದ್ದರೆ, ಇಷ್ಟು ಹೊತ್ತಿಗೆ ಅವನು ಸತ್ತು ಬಹಳ ಹೊತ್ತಾಗುತ್ತಿತ್ತು. ನನ್ನ ಕೆಲಸ ತಪ್ಪಾದರೆ ಕ್ಷಮಿಸಬೇಕು" ಎಂದು ಕೈಮುಗಿದು ಬಿನ್ನವಿಸಿಕೊಂಡನು.



"ಓ! ಹಾಗೇನು? ದ್ರೋಹೀ ಸಿಂಹಗಳೇ! ಒಳ್ಳೇ ಕೆಲಸ ಮಾಡಿದಿ. ಈ ಸಿಂಹಗಳಿಗೆ ಸ್ವಲ್ಪ ಕೊಬ್ಬು ಹೆಚ್ಚಾಯಿತು. ಇದನ್ನು ನೋಡಿಯಾದರೂ ಇವುಗಳಿಗೆ ಬುದ್ಧಿ ಬರಲಿ! ಹುಂ, ಈ ಉಳಿದ ಸಿಂಹ ಗಳಿಗೆ ಒಂದು ವಾರದವರೆಗೆ ಅರೆಹೊಟ್ಟೆಯೇ ಹಾಕಿರಿ. ಏರಿದ ಕೊಬ್ಬು ಇಳಿದು ಹೋಗುತ್ತದೆ. ಜಾಗರೂಕತೆ ಯಿಂದಿರಿ," ಎಂದು ಹೇಳಿ, ರಾಕ್ಷಸನು ಅಲ್ಲಿಂದ ಬೇಗ ಬೇಗನೆ ಹೊರಟುಹೋದನು.

ನಡುಗುತ್ತಿದ್ದ ಉದಯನನ ಜೀವ ಯಥಾ ಸ್ಥಾನ ದಲ್ಲಿ ನಿಂತಿತು. ಅವನು ಏನೂ ತಿಳಿಯದವನಂತೆ ಮಲಗಿಕೊಂಡಿದ್ದನೇ ಹೊರತು, ಅವನ ಕಣ್ಣು ರಾಕ್ಷಸನ ಮೇಲೆಯೇ ಇತ್ತು. ಅವನು ಆ ನೆಲಮನೆ ಯಲ್ಲಿ ಎಲ್ಲಿಗೆ ಹೋಗುತ್ತಾನೆ, ಏನು ಮಾಡುತ್ತಾ ನೆಂಬುದನ್ನು ನೋಡುತ್ತಲೇ ಇದ್ದನು.

ರಾಕ್ಷಸನು ಆ ದೊಡ್ಡ ಚಾವಡಿಯ ಕೊನೆಯ ಒಂದು ಬಾಗಿಲಿನ ಬಳಿಗೆಹೋಗಿ ನಿಂತು, ಟೊಂಕ ದಿಂದೊಂದು ಸಣ್ಣ ಬೀಗದ ಕೈಯನ್ನು ತೆಗೆದು, ಏನೋ ಮಂತ್ರವನ್ನು ಗುಣುಗುಣಿಸ ತೊಡಗಿದನು. ಅವನು ಹೇಳುವ ಮಂತ್ರ ಪೂರ್ತಿಯಾದ ಕೂಡಲೇ ಆ ಸಣ್ಣ ಬೀಗದ ಕೈ ಏಳು ಅಡಿಗಳಷ್ಟು ಉದ್ದವೂ, ತುಸುಧಪ್ಪವೂ ಆಯಿತು. ಆ ಬೀಗದ ಕೈಯಿಂದ ರಾಕ್ಷಸನು ಬಾಗಿಲು ತೆರೆದು ಅದರೊಳಗೆ ಪ್ರವೇಶಿಸಿ ಬಾಗಿಲು ಹಾಕಿಕೊಂಡನು.

ಆ ಕೊಟಡಿಯೊಳಗೆ ಏನಿದೆಯೋ ನೋಡ ಬೇಕೆಂದು ಉದಯನನಿಗೆ ಕುತ್ತಿಗೆಯವರೆಗೆ ಕುತೂ ಹಲವಾಯಿತು. ಆದರೆ ಯಾವ ಮೂಲೆಯಲ್ಲಿ ಯಾರಿರುವರೋ? ಆ ಮಾಯದ ಬೀಗದ ಕೈಯ ಹಾಗೆ ಇನ್ನೇನು ಮಂತ್ರವಾಯೆ ತನ್ನ ಮೇಲೆ ಕಣ್ಣಿಟ್ಟಿರುವುದೋ? ತಾನೆಲ್ಲಿಯಾದರೂ ಸಿಕ್ಕಿಬಿದ್ದರೆ ಈಸಾರಿ ಖಂಡಿತ ಸಾವೇ ಗತಿ. ಅಂತೆಯೇ ಹಾಗೆಯೇ ಸುಮ್ಮನೆ ಬಿದ್ದುಕೊಂಡಿದ್ದ.

ಮತ್ತೆ ಸ್ವಲ್ಪ ಹೊತ್ತಿನ ಮೇಲೆ ರಾಕ್ಷಸನು ಹೊರಗೆ ಬಂದು ಮೊದಲಿನಂತೆ ಬಾಗಿಲು ಮುಚ್ಚಿ ಬೀಗ ಹಾಕಿದನು. ಆಮೇಲೆ ಮಂತ್ರೋಚ್ಚಾರ ಮಾಡಲು ಬೀಗದ ಕೈ ಮೊದಲಿನಂತೆ ಸಣ್ಣದಾಯಿತು. ಅದನ್ನು ಸೊಂಟದಲ್ಲಿ ಸಿಕ್ಕಿಸಿಕೊಂಡು ಬಂದ ದಾರಿಯಿಂದಲೇ ಹಿಂದಿರುಗಿ ಆ ಪಾತಾಳ ಗೃಹದಿಂದ ಮೇಲೆ ಹೊರಟುಹೋದನು.

ಉಳಿದವರೆಲ್ಲ ಏನೋ ಭಾರ ಕಳೆದುಕೊಂಡವರಂತೆ ತಮ್ಮ ತಮ್ಮ ಸ್ಥಳದಲ್ಲಿ ಬಿದ್ದುಕೊಂಡು ನಿದ್ದೆಯೊಂದಿಗೆ ಸೇರಿ ಗೊರಿಕೆ ಹೊಡೆಯ ತೊಡಗಿದರು. ರಾಕ್ಷಸನು ಸದ್ಯಬರಲಾರನೆಂದು ಆ ನಿಶ್ಚಿಂತೆಯ ಗೊರಿಕೆಗಳು ಹೇಳುತ್ತಿದ್ದುವು. ಇದೇ ಸಮಯವೆಂದುಕೊಂಡು ಉದಯನನು ಸಪ್ಪಳಿಲ್ಲದೆ ಎದ್ದು, ರಾಕ್ಷಸನು ತೆರೆದು ಮುಚ್ಚಿದ ಬಾಗಿಲಿನಬಳಿಗೆ ಹೋಗಿ ಬೀಗದ ಕೈಯ ರಂಧ್ರದಲ್ಲಿ ಕಣ್ಣಿಟ್ಟು ಒಳಕ್ಕೆ ನೋಡಿದನು. ಆಗ ಅವನ ಕಣ್ಣಿಗೆ ಬಿದ್ದ ಆ ದೃಶ್ಯವು ನಿಜವೋ

ತನ್ನ ಭ್ರಮೆಯೋ ಎಂದು ಅನುಮಾನ ...ತು. ಏಕೆಂದರೆ, ಅವನು ಯಾರನ್ನು ಕುರಿತು ...ತ್ತಿದ್ದಾನೋ ಆ ಗಡ್ಡದ ಜಾಣ ಮಾಂತ್ರಿಕ ...ಲೆ ಕೆಳಗಾಗಿ ನೇತಾಡುತ್ತಿದ್ದಾನೆ. ಅಂಥ ಗತಿ ...ಕೆ ಬಂತೋ ?


...ರೆ ಸಂಧ್ಯಾ ನಿಶೀಥರು ಕಾಣಿಸಲಿಲ್ಲ. ಅವರ ಗತಿ ...ಬಹುದು ? ಈ ಗಡ್ಡದ ಜಾಣನಿಗೆ ಗೊತ್ತಿರ... ...ಇವನು ಹೀಗೆ ನೇತಾಡಿಕೊಂಡು ಎಷ್ಟು ... ಅನುಭವಿಸುತ್ತಿದ್ದಾನೋ ? ಬೀಗದ ಕೈಯಿಲ್ಲದೆ ... ಪ್ರವೇಶಿಸಲೂ ಸಾಧ್ಯವಿಲ್ಲ. ಯಾವ ರೀತಿ ...ಲೂ ಭೇದಿಸಲಾಗದ ಬಾಗಿಲು. ಏನು ಏನು ...ಕೆಂದು ಉದಯನನಿಗೆ ಗೊತ್ತಾಗಲಿಲ್ಲ..

... ಹೊತ್ತು ಬಾಗಿಲಬಳಿಯಲ್ಲಿ ನಿಂತನೋ ... ಗೊತ್ತಾಗಲಿಲ್ಲ. ನಿಂತು ನಿಂತು ಒಂದೂ ..., ಬೇಸತ್ತು ಮೆಲ್ಲಗೆ ಹಿಂದಿರುಗಿ ತಾನು ... ಜಾಗದಲ್ಲೇ ಮಲಗಿದನು.

...ನೆ ಮಲಗಿದುದೇ ಹೊರತು ನಿದ್ದೆ ... ಮಾತಿರಲಿಲ್ಲ. ಆ ಕೋಣೆಯೇ ಈಗ .... ಅದರೊಳಗೆ ಪ್ರವೇಶಿಸುವ ಬಗೆ ಹೇಗೆ? ...ಕೊಡನೆ ಮಾತಾಡುವುದು ಹೇಗೆ? ...ದ ಕೂಗಿದರೆ ಅವನಿಗೆ ಕೇಳಿಸುವುದೆ ? ...ಗಿ ಮಾತಾಡಿದರೆ ಬೇರೆ ಯಾರಿಗೋ ಕೇಳಿ ... ಅಪಾಯ ಬಂದೀತೇ ? ಸೋದರರು ...? ರಾಜಕುಮಾರಿಯರ ಗತಿ ಏನಾಗಿದೆ ? ...ಗೆ ಇಡೀ ರಾತ್ರಿ ಇದೇ ಯೋಚನೆ.


...ತು. ಕೊಳದ ಬದಿಯಲ್ಲಿ ರಾತ್ರಿ ಕಾವ ... ಪರಿಚಾರಕರೆಲ್ಲ ಪಾತಾಳಗೃಹಕ್ಕೆ ... ಬಂದ ಕೂಡಲೇ ಅಲ್ಲಿದ್ದವರೆಲ್ಲಾ ಕೊಳದ ...ದರು.

...ವರ ಮುಖಾಂತರವಾಗಿ, ಆ ಕೋಣೆ ... ರಹಸ್ಯವನ್ನು ತಿಳಿದುಕೊಳ್ಳಲಾಗುವುದೋ



ಎಂದು ಉದಯನನು ಯೋಚನೆ ಮಾಡಿದನು. ಹಾಗೆ ಕೇಳಿಬಿಟ್ಟರೆ ತನ್ನ ಗುಟ್ಟು ಬಯಲಾಗಿ ಬಿಡುವುದೇನೋ ಎಂಬ ಸಂದೇಹವೂ ಎದ್ದಿತು. ಯಾರಿಗೂ ಚೂರು ಸಂದೇಹವೂ ಬಾರದಂತೆ ನಡೆದುಕೊಳ್ಳಬೇಕಾದುದು ಎಲ್ಲಕ್ಕಿಂತ ಮುಖ್ಯವೆಂದು ತೋರಿದುದರಿಂದ, ತನ್ನ ಆಲೋಚನೆಗಳನ್ನೆಲ್ಲ ಹತ್ತಿಕ್ಕಿಕೊಂಡು ಹಾಗೆಯೇ ಕಾಲ ಕಳೆಯ ತೊಡಗಿದನು.

ಹೀಗೆ ಸಂಕಟಪಡುತ್ತಾ ಉದಯನನು ಒಂದರ ಮೇಲೊಂದು ಏಳು ದಿನಗಳನ್ನು ಕಳೆಯಲು, ದೊಡ್ಡ ರಾಕ್ಷಸ ಮತ್ತೆ ಪಾತಾಳಗೃಹಕ್ಕೆ ಬಂದ. ಆ ಕ್ಷಣವೇ ಉದಯನನೂ ಚುರುಕಾಗಿಬಿಟ್ಟ. ಹಿಂದಿನಂತೆಯೇ ಮಂತ್ರದ ಬೀಗದಕೈಯಿಂದ ಅದೇ ಕೋಣೆಯ ಬಾಗಿಲು ತೆರೆದು ಅದರೊಳಗೆ ಪ್ರವೇಶ ಮಾಡಿದ. ಬಹು ಜಾಗರೂಕತೆಯಿಂದ ಹೊಂಚಿಕೊಂಡಿದ್ದ ಉದಯನನು ಯುಕ್ತಿಯಿಂದ ಅವನ ಬೆನ್ನ ಹಿಂದೆಯೇ ಕೋಣೆಯೊಳಕ್ಕೆ ಹೊಕ್ಕು ಹತ್ತಿರವೇ



ಇದ್ದ ಒಂದು, ಭಾರೀ ಗುಡಾಣದ ಹಿಂದೆ ಅಡಗಿದ. ಅಂತಹ ಮೂರು ಗುಡಾಣಗಳು ಅಲ್ಲಿದ್ದುವು. ಮೂರಕ್ಕೂ ಮುಚ್ಚಳವಿದ್ದುವು. ಉದಯನನು ಮೊದಲನೇ ಗುಡಾಣದ ಮುಚ್ಚಳ ತೆಗೆದು ನೋಡಿದ. ಅದರೊಳಗೆ ಒಬ್ಬ ಮನುಷ್ಯನಿರುವಂತೆ ತೋರಿದುದರಿಂದ ಗಬಕ್ಕನೆ ಮುಚ್ಚಿಬಿಟ್ಟ.

ಎರಡನೇ ಗುಡಾಣದ ಮುಚ್ಚಳ ಎತ್ತುವಾಗ, ಅದರೊಳಗೂ ಯಾವನೋ ಇರುವಂತೆ ತೋರಿದುದರಿಂದ ಅದನ್ನೂ ಥಕ್ಕನೆ ಮುಚ್ಚಿಬಿಟ್ಟ. ಮೂರನೇ ಗುಡಾಣ ಖಾಲಿಯಾಗಿತ್ತು. ಅವನು ತಟಕ್ಕನೆ ಅದರೊಳಗೆ ಇಳಿದು ಮುಚ್ಚಳ ಮುಚ್ಚಿಕೊಂಡು ಭದ್ರವಾಗಿ ಕುಳಿತುಬಿಟ್ಟ. ಇಷ್ಟಾಗುವಾಗ ರಾಕ್ಷಸನು ಎಲ್ಲಿ ಹೋದ, ಏನು ಮಾಡಿದ ಎಂಬುದೊಂದೂ ಉದಯನನಿಗೆ ಗೊತ್ತಾಗಲಿಲ್ಲ. ಅದಕ್ಕಾಗಿ ಕೂತಲ್ಲೇ ೇಕಡವಡಿಸಿಕೊಂಡು, ಕಿವಿಯನ್ನುಮಾತ್ರ ಚೂಪಾಗಿಸಿ ...ನ ನಿದ್ದ.

ಮತ್ತೆ ಸ್ವಲ್ಪ ಹೊತ್ತಿಗೆ ಆ ರಾಕ್ಷಸನು ಧ... ಹೆಜ್ಜೆಯ ಸಪ್ಪಳದೊಂದಿಗೆ ಆ ಗುಡಾಣದ ... ಬಂದ. "ಒಂದು" ಎಂದು ದೊಡ್ಡ ದನಿಯ... ಹೇಳುತ್ತಾ ಮೊದಲನೇ ಗುಡಾಣದ ಮುಚ್ಚಳ... ಎತ್ತಿದ. "ಹುಂ" ಎಂದು ರಾಕ್ಷಸ ಹೇಳಿದ ಕೂ... ಒಳಗಿದ್ದ ಮನುಷ್ಯ ಎದ್ದು ನಿಂತ. ರಾಕ್ಷಸನು ಅ... ಜುಟ್ಟು ಹಿಡಿದುಕೊಂಡು ಮೇಲಕ್ಕೆ ಎತ್ತಿದ. ... ಮೇಲೆ "ಎರಡು" ಎಂದು ಕೂಗುತ್ತ ಎರ... ಗುಡಾಣದ ಮುಚ್ಚಳ ಎತ್ತಿದ. ಅದರೊ... ಮನುಷ್ಯನನ್ನೂ ತನ್ನ "ಹುಂ"ಕಾರದಿಂದ ... ನಿಲ್ಲಿಸಿ ಜುಟ್ಟು ಹಿಡಿದು ಮೇಲಕ್ಕೆ ಎಳೆದುಕೊಂ... ತನ್ನ ಅಕ್ಕಪಕ್ಕದ ಗುಡಾಣದಲ್ಲಿ ಏನೋ ನಡೆ... ತ್ತಿರುವಂತೆ ಉದಯನನಿಗೆ ಗೊತ್ತಾದರೂ, ... ಯಾರೆಂಬುದು ತಿಳಿಯಲಿಲ್ಲ. ಅವನು ಎದ್ದುನಿಂ... ಹೊರಗಿನದೇನೂ ಕಾಣಿಸದಷ್ಟು ದೊ... ಗುಡಾಣವದು.

ರಾಕ್ಷಸನು ಅವರಿಬ್ಬರನ್ನೂ ಕರೆದುಕೊಂಡು ಕೋಣೆಯಿಂದ ಹೊರಕ್ಕೆ ಹೋದನು. ಕೋಣೆ... ಬಾಗಿಲನ್ನು ಹಾಕಿ ಬೀಗ ತಿರುಗಿಸಿ, ಬೀಗದ ಕೈಯ... ಟೊಂಕಕ್ಕೆ ಕುತ್ತಿಕೊಂಡನು.

ಆಮೇಲೆ ಅವರಿಬ್ಬರನ್ನೂ ಒಂದೊಂದು ಮ... ಯಲ್ಲಿ ಎತ್ತಿಕೊಂಡು ಪಾತಾಳಗೃಹದ ಮೆಟ್ಟಿಲ... ಭೂಮಿಯ ಮೇಲೆ ಹೋದನು.

ಶಬ್ದದಿಂದ ರಾಕ್ಷಸನು ಹೊರಟು ಹೋದ... ಗೊತ್ತಾದ ಕೂಡಲೇ ಉದಯನನಲ್ಲಿ ಒಮ್ಮೆ... ಹೊಸ ಚುರುಕಿದ್ದಿತು. ಅವನು ಗುಡಾಣದ ಮು... ಎತ್ತಿ ಹೊರಗೆ ಬರಲು ನೋಡಿದನು. ಅದು ... ಸುಲಭವಾಗಿರಲಿಲ್ಲ. ಅವನು ಗುಡಾಣದ ಮೇ... ಹಾರಿ ಹಾರಿ ಒದ್ದಾಡುವಾಗ ಆ ಮಣ್ಣಿನ ಗು... ಹತ್ತೆಂಟು ತುಂಡುಗಳಾಗಿ ಹೋಯಿತು. ಅ... ಉದಯನ ಗುಡಾಣದೊಳಗಿನಿಂದ ಹೊರ...


...ಸ್ವಲ್ಪ ದೂರದಲ್ಲಿ ನೇತಾಡಿಕೊಂಡಿರುವ ಗಡ್ಡ... ಬಳಿಗೆ ಓಡುತ್ತಾ ಹೋದನು. "ಇದೇನಯ್ಯಾ ... ಈ ಶಿಕ್ಷೆ? ಯಾಕೆ? ನೋಡಲಾಗುವುದಿಲ್ಲ! ...ಯಿತು? ಬೇಗ ಹೇಳು. ರಾಕ್ಷಸನು ಮತ್ತೆ ...ವ ಮೊದಲೇ ನಾನು ಹೋಗಬೇಕು!" ಎಂದು ...ರಪಡಿಸಿದನು.


ಉದಯನನು ವೇಷ ಬದಲಾಯಿಸಿಕೊಂಡಿದ್ದರೂ ...ವನು ಅವನ ಗುರುತು ಹಿಡಿದು, "ಓಹ್! ...ನಾ? ಏನೂ ಗಾಬರಿಯಾಗಬೇಡ. ರಾಕ್ಷಸನು ... ಒಂದು ವಾರದ ವರೆಗೂ ಬರಲಾರ. ಮೊದಲು ... ಕಟ್ಟು ಬಿಚ್ಚು" ಎಂದನು.

ಉದಯನನು ಗಡ್ಡದವನ ಕಟ್ಟುಬಿಚ್ಚಿ ಕಾಲು ...ಗೆ ಮಾಡಿಸಿದನು. ಗಡ್ಡದವನು ಒಂದೆರಡು ಬಾರಿ ... ಮುರಿದು ಬಲವಾಗಿ ನಿಂತು, "ನೀನು ಈ ...ಳಕ್ಕೆ ಬಂದುದೂ, ಗುಡಾಣಗಳ ಮುಚ್ಚಳ ...ದುದೂ, ಅಡಗಿ ಕುಳಿತುದೂ ಎಲ್ಲಾ ನೋಡು ... ಇದ್ದೆ. ಆ ಎರಡು ಗುಡಾಣದೊಳಗೆ ನೀನು ನೋಡಿದ ಮನುಷ್ಯರು ಯಾರೆಂದುಕೊಂಡಿದ್ದೆ? ಅವರು ನಿನ್ನ ಸಹೋದರರೇ. ನಿನ್ನ ಪುಣ್ಯ, ರಾಕ್ಷಸ ಮೂರನೇ ಗುಡಾಣದ ಮುಚ್ಚಳ ತೆರೆಯಲಿಲ್ಲ. ಎಲ್ಲಿ ತೆರೆಯುವನೋ ಎಂದು ನನ್ನ ಎದೆ ದಡದಡಿಸುತ್ತಲೇ ಇತ್ತು. ಒಂದು ವೇಳೆ ತೆಗೆದಿದ್ದರೆ ನಿನ್ನ ಗತಿ ಏನಾಗುತಿತ್ತೋ!" ಎಂದನು.

ಅವನ ಮಾತು ಕೇಳಿ ಉದಯನನು ಆತುರದಿಂದ "ಏನೇನು! ಅವರು ನನ್ನ ಸಹೋದರರೆ? ಸಂಧ್ಯಾ ನಿಶೀಥರೇ? ಮೊದಲು ಅವರನ್ನು ಬಿಡಿಸಿಕೊಳ್ಳಲೇ ಬೇಕು" ಎಂದನು.

ಗಡ್ಡದ ಕುಳ್ಳ ಮಾಂತ್ರಿಕ ಬಿದ್ದುಬಿದ್ದು ನಗುತ್ತ, "ಅಯ್ಯಾ, ಹುಚ್ಚಪ್ಪಾ, ಅವರು ಈಗ ಗುಡಾಣದೊಳಗಿರುವರೆಂದುಕೊಂಡಿಯಾ? ಒಂದು, ಎರಡು ಎಂದು ಅವನು ಕೂಗಿದ್ದು ನಿನ್ನ ಕಿವಿಗೆ ಬಿದ್ದಿದೆಯಷ್ಟೆ? ಹಾಗೆ ಹೇಳುತ್ತಾ ಅವರನ್ನು ಗುಡಾಣದಿಂದ ಎತ್ತಿ ತನ್ನೊಂದಿಗೆ ಎಲ್ಲಿಗೋ ಒಯ್ದಿದ್ದಾನೆ." ಎಂದನು. "ಎಲ್ಲಿಗೆ ಒಯ್ದನೆಂದು ನಿನಗೆ ಗೊತ್ತೇ?" ಎಂದು





ಕೇಳಲು, "ಎಲ್ಲಿಗೋ ಗೊತ್ತಾಗಲಿಲ್ಲ. ಈ ಭೂಗೃಹದಿಂದ ಮೇಲೆ ಎತ್ತಿಕೊಂಡು ಹೋದ. ಅಷ್ಟುಮಾತ್ರ ಗೊತ್ತು." ಎಂದ ಗಡ್ಡದವ.

"ಓಹೋ! ಹಾಗಾದರೆ ನಿನ್ನ ಸಂಗತಿ ಹೇಳು. ನಿನ್ನನ್ನೇಕೆ ತಲೆ ಕೆಳಗಾಗಿ ತೂಗು ಹಾಕಿದ್ದಾನೆ? ಇದೇನಾದರೂ ದಂಡನೆಯೆ? ನನ್ನ ಸೋದರರನ್ನು ಗುಡಾಣದೊಳಗೆ ಮುಚ್ಚಿಟ್ಟನೇಕೆ? ಆ ದಿನ ನಿಮ್ಮನ್ನೆಲ್ಲ ಈ ಪಾತಾಳಗೃಹಕ್ಕೆ ತಂದ ಮೇಲೆ ಏನೆಲ್ಲ ನಡೆಯಿತು?" ಎಂದು ಕೇಳಿದ ಉದಯನ.

"ಮೊದಲು ಒಡೆದುಹೋದ ಗುಡಾಣದ ತುಂಡು ಚೂರುಗಳನ್ನು ಅಡಗಿಸಿಡಬೇಕು. ಇದನ್ನು ಯಾವ ಕಾವಲುಗಾರ ನೋಡಿದರೂ ಕಷ್ಟವೇ. ಆಮೇಲೆ ಎಲ್ಲಾ ವಿವರ ಹೇಳುತ್ತೇನೆ" ಎಂದು ಗಡ್ಡದವನು ಗುಡಾಣದ ತುಂಡುಗಳನ್ನು ಹೆಕ್ಕಲು ತೊಡಗಿದ. ಅದನ್ನೆಲ್ಲ ಕತ್ತಲೆ ಮೂಲೆಗೆ ಸೇರಿಸಿದ ಮೇಲೆ, ಉದಯನನ ಬಳಿಗೆಬಂದು, "ಈಗ ಆ ರಾಕ್ಷಸನ ಮಾನಸ್ಸಿನಲ್ಲಿರುವುದೆಲ್ಲಾ ನಿನ್ನ ವಿಚಾರವೇ. ನ… ಎಲ್ಲಿಗೆ ಹೋಗಿರುವೆ ಎಂಬ ಸಂಗತಿ ನಮಗೆ ತಿಳಿದ… ಹೇಳುವುದಿಲ್ಲವೆಂದು ಅವನು ತಿಳಿದಿದ್ದಾನೆ. ಅದ… ತಿಳಿಸುವವರೆಗೂ ನಮ್ಮನ್ನು ನಾನಾ ಹಿಂಸೆಗಳಿಗೆ … ಪಡಿಸುವೆನೆಂದು ಹೆದರಿಸಿದನು. ಆದರೆ ನಾವು ಒ… ಚೂರು ಕೂಡಾ ಬಾಯಿ ಬಿಡಲಿಲ್ಲ. ಆಗ ಅ… ನಾವು ಮೂವರನ್ನೂ ಆ ಮೂರು ಗುಡಾಣ… ಹಾಕಿ ಬಂಧಿಸಿಟ್ಟನು. ಆಗಲೂ ನಾವು ರಹಸ್ಯ… ಹೊರಗೆಡವದೆ ಹೋಗಲು, ನನ್ನನ್ನು ಹೀಗೆ ನೇ… ಗಟ್ಟಿದನು. ಆದರೂ ನಾನು ನನಗೇನೂ ಗೊ…ವೆಂದೇ ಹೇಳುತ್ತಾ ಬಂದಿದ್ದೇನೆ. ನನ್ನ… ನೇತಾಡಿಸಿದ ಹಾಗೆಯೇ ನಿನ್ನ ಸೋದರರನ್ನು ಕೂ… ನೇತಾಡಿಸುವನೇನೋ ಎಂದು ಮಾಡಿದೆ. ಆ… ಹಾಗೆ ಮಾಡಲಿಲ್ಲ. ಅವರನ್ನು ಈಗ ಎಲ್ಲಿಗೆ ಕ… ಕೊಂಡು ಹೋದನೋ, ಏಕೆ ಕರೆದುಕೊಂ… ಹೋದನೋ, ನನಗೆ ಗೊತ್ತಾಗುವುದಿಲ್ಲ." ಎಂ…

ಉದಯನನು ತಾನು ಹೇಗೆ ವೇಷಬದಲಾ… ಅಲ್ಲಿಗೆ ಬಂದನೆಂಬ ವಿವರಗಳನ್ನೆಲ್ಲ ಚಿಟುಕಾಗಿ … ಭಸ್ಮ, ಅಂಜನಗಳನ್ನು ಕಳೆದುಕೊಂಡ ಸಮಾ…ವನ್ನೂ ಹೇಳಿದನು.

ಅದನ್ನು ಕೇಳಿ ಗಡ್ಡದವನು, "ಭಸ್ಮ ಅಂ…ಗಳನ್ನು ಆ ರಾಜನೇ ಅಪಹರಿಸಿರಬೇಕು. ಏ… ಒಂದು ಉಪಾಯದಿಂದ ಇಲ್ಲಿಂದ ಹೊರಬ… ಆ ರಾಜನಬಳಿಗೆ ಹೋಗಿ ಅವುಗಳನ್ನು ತಿ… ಪಡೆಯುವ ಮಾರ್ಗ ನೋಡಬೇಕು. ಅದು ತು… ಮುಖ್ಯ. ಅಂತಹುದು ಪರಾಧೀನವಾಗುವು… ಸರಿಯಲ್ಲ." ಎಂದನು. ಉದಯನನೂ ಗಡ್ಡದವ… ಕೂಡಿ ಇನ್ನೂ ಆಲೋಚನೆ ಮಾಡ ತೊಡಗಿ…

* * *

ಈ ಸಮಯದಲ್ಲಿ ಮಾಳವದೇಶದ ರಾಜ… ಪ್ರತಾಪಸಿಂಹನ ಕೋಟೆಯೊಳಗೆ ಸಿಕ್ಕಿಕೊಂಡಿ…

ಮೂವರು ರಾಜಕುಮಾರಿಯರ ವಿಷಯದಲ್ಲಿ ಒಂದು ಚಿತ್ರ ಉಂಟಾಯಿತು. ಉದಯನನು ಆ ರಾಜನ ಹತ್ತಿರ ಬಂದು ಮಾರನೇದಿನ ಹೊರಟುಹೋಗುವೆನೆಂದಾಗ, ಆ ರಾಜನು ಧೂರ್ತ ತನದಿಂದ ಒಂದು ಉಪಾಯ ಮಾಡಿದ್ದನು.

ಉಪಾಯವೆಂದರೆ, ರಾತ್ರಿಯಲ್ಲಿ ಉದಯನನು ಗಾಢ ನಿದ್ರೆಯಲ್ಲಿದ್ದಾಗ ಅವನ ಹತ್ತಿರವಿದ್ದ ಭಸ್ಮ ಅಂಜನಗಳನ್ನು ರಾಜನು ಕದ್ದುಕೊಂಡು ಏನೂ ಅರಿಯದವನಂತೆ ಸುಮ್ಮನಿದ್ದನು. ಮರುದಿನ ಉದಯನನು ಹೊರಟುಹೋದ ಮೇಲೆ ಆ ರಾಜನು ತಾನೇ ಮೂವರು ರಾಜಕುಮಾರಿಯರನ್ನು ತನ್ನ ಬಳಿಗೆ ಕರೆಯಿಸಿ, ಅಂಜನಗಳನ್ನೂ ಭಸ್ಮಗಳನ್ನೂ ಪ್ರಯೋಗಿಸಿ ಅವರಿಗಿರುವ ಅಂಗವೈಕಲ್ಯಗಳನ್ನು ಹೋಗಲಾಡಿಸಿಬಿಟ್ಟನು. ಈಗ ಅವರು ಯಾವ ಲೋಪವೂ ಇಲ್ಲದೆ, ಸರ್ವಾಂಗ ಸುಂದರಿಯರಾಗಿ ಕಂಗೊಳಿಸಿದರು. ಈಗ ಅವರನ್ನು ನೋಡಿ ಆ ರಾಜನು ತನ್ಮಯನಾಗಿ ಹೋದನು.

ರಾಜನಾದುದರಿಂದ ಅವನು ಹಿಂದುಮುಂದು ನೋಡದೆ, ನಿರ್ಭಯದಿಂದ ಆ ಮೂರು ಮಂದಿ ಅವಳಿಜವಳಿಗಳನ್ನೂ ತಾನೇ ಮದುವೆಯಾಗುವೆನೆಂದು ಅವರೊಡನೆಯೇ ಹೇಳಿದನು. ಅದನ್ನು ಕೇಳಿ ಆ ಹುಡುಗಿಯರು ಆಶ್ಚರ್ಯಪಟ್ಟು, ತಮಗೆ ಇಷ್ಟವಿಲ್ಲವೆಂದು ಒಕ್ಕೊರಲಿನಿಂದ ಹೇಳಿಬಿಟ್ಟರು.

ರಾಜನು ಅಷ್ಟಕ್ಕೆ ಬಿಡಲಿಲ್ಲ. ಮೊದಲು ನಯವಾಗಿಯೇ ಒತ್ತಾಯಿಸಿದನು. ಆಮೇಲೆ ಅವರನ್ನು ಹೆದರಿಸಿ ಬೆದರಿಸಿ ನೋಡಿದನು. ಪ್ರಯೋಜನವಿಲ್ಲದ ಮೇಲೆ, ಆ ಮೂವರು ರಾಜಕುಮಾರಿಯರನ್ನೂ ಸೆರೆಮನೆಯಲ್ಲಿ ಬಂಧಿಸಿಟ್ಟನು. ತಮ್ಮ ಮೇಲೆ ಬಂದ ಈ ಹೊಸ ಕಷ್ಟದಿಂದಾಗಿ ರಾಜಕುಮಾರಿಯರು ದುಃಖದಿಂದ ಕಂದಿಹೋಗ ತೊಡಗಿದರು.

ಇತ್ತ ನೆಲಮನೆಯೊಳಗಿನಿಂದ ಸಂಧ್ಯಾ ನಿಶೀಥರನ್ನು ತೆಗೆದುಕೊಂಡು ಹೋದ ರಾಕ್ಷಸನು ಅವರಿಬ್ಬರನ್ನೂ ಕೊಳದ ತೀರದಲ್ಲಿ ನಿಲ್ಲಿಸಿ, "ಎಲೋ ಪೋರರಿರಾ! ಕಡೆಯಬಾರಿ ನಿಮಗೊಂದು ಅವಕಾಶ



ಕೊಡುತ್ತಿದ್ದೇನೆ. ನಿಮ್ಮ ಸಹೋದರನೊಬ್ಬ ಎಲ್ಲಿಗೆ ಓಡಿಹೋದ? ಈಗಲಾದರೂ ನಿಜ ಹೇಳಿಬಿಡಿ. ಇಲ್ಲದಿದ್ದರೆ ಇನ್ನೊಂದು ಕ್ಷಣದಲ್ಲಿ ನಿಮ್ಮ ತಲೆಗಳು ಹಾರುತ್ತವೆ." ಎಂದು ಗಂಡುಗೊಡಲಿಗಳನ್ನು ಹಿಡಿದುಕೊಂಡು ಅಕ್ಕಪಕ್ಕಗಳಲ್ಲಿ ನಿಂತ ರಾಕ್ಷಸ ಬಂಟರನ್ನು ತೋರಿಸಿದನು.

ಸಂಧ್ಯಾ ನಿಶೀಥರು ಎರಡು ಕ್ಷಣ ಹಾಗೇ ನಿಂತರು. ಆಮೇಲೆ ನಿಶೀಥನು ಧೈರ್ಯ ತಂದುಕೊಂಡು, "ಅಯ್ಯಾ, ಈ ಸ್ಥಿತಿಯಲ್ಲಿ ನಾವು ಹೇಳುವುದನ್ನು ನಂಬದಿದ್ದರೆ ನಾವೇನು ಮಾಡಬಲ್ಲೆವು? ನಿಜವಾಗಿಯೂ ನಮಗೆ ತಿಳಿಯದು. ಆದರೆ ನಾವು ಇಲ್ಲಿಂದ ಹೊರಬಿದ್ದರೆ ಹೇಗೋ ಕಷ್ಟಪಟ್ಟು ಅವನನ್ನು ಹುಡುಕಿ ಕಂಡು ಹಿಡಿಯಬಹುದೆಂಬ ಆಶೆ ನನಗಿದೆ. ಒಂದುಸಾರಿ ನಮ್ಮನ್ನು ನಂಬಿ ಬಿಡುಗಡೆ ಮಾಡಿಬಿಡು. ಬೇಗನೇ ನಮ್ಮ ಸಹೋದರನೊಂದಿಗೆ ಹಿಂದಿರುಗಿ ಬರುತ್ತೇವೆ" ಎಂದನು.


"ಓಹೋ! ದೊಡ್ಡ ಉಪಾಯದ ಮಾತು ಹೇಳುವೆಯಾ? ನಿನ್ನ ಸುಳ್ಳುಪೊಳ್ಳು, ಬೇಳೆ ನನ್ನ ಮುಂದೆ ಬೇಯಲಾರವು. ಇದುವರೆಗೆ ನೀವು ಮಾಡಿದ ಮೋಸಗಳನ್ನು ಮರೆತೆನೆಂದುಕೊಂಡೆಯಾ? ಎಲೋ ಪೋರಾ, ನೀನು ಇಲ್ಲಿಗೆ ತಿರುಗಿ ಬರುವುದಕ್ಕೆ ಆಧಾರ ಏನಿದೆ?" ಎಂದ ರಾಕ್ಷಸ.


ನಿಶೀಥನು ಸಂಧ್ಯಾನನ್ನು ರಾಕ್ಷಸನಿಗೆ ತೋರಿಸುತ್ತ, "ಇವನನ್ನು ನಿನ್ನ ಹತ್ತಿರವೇ ಬಂಧನದಲ್ಲಿಟ್ಟುಕೋ. ನಾನು ಈ ಸೋದರನನ್ನು ಅಗಲಿರಬಲ್ಲೆನೆ? ಇವನನ್ನು ರಕ್ಷಿಸಿಕೊಳ್ಳಲಿಕ್ಕಾದರೂ ನಿನ್ನಬಳಿಗೆ ಬರಲೇಬೇಕಷ್ಟೆ?" ಎಂದನು.

"ಹೂಂ, ಹಾಗಾದರೆ ಸರಿ. ಇನ್ನೊಂದು ವಿಷಯ ಹೇಳುತ್ತೇನೆ. ಮುಖ್ಯವಾಗಿ ನಾನು ನಿಮ್ಮ ಆ ಸೋದರನನ್ನು ಹಿಡಿಯ ಬೇಕೆನ್ನುವುದು ಏತಕ್ಕೆ ಗೊತ್ತೇ? ಅವನ ಹತ್ತಿರ ನಮ್ಮ ಮುಖ್ಯವಾದ ಭಸ್ಮ ಅಂಜನಗಳಿವೆ. ಅವುಗಳು ಅವನ ಹತ್ತಿರ ಇರುವಷ್ಟುಕಾಲ ನನಗೆ ನಿದ್ದೆ ಬಾರದು. ಆದುದರಿಂದ ಅವನೇ ಬರಬೇಕೆಂದಿಲ್ಲ, ನೀನಾದರೂ ಸರಿ, ಆ ಭಸ್ಮ ಅಂಜನಗಳನ್ನು ತಂದು ನನಗೆ ಒಪ್ಪಿಸಿಬಿಟ್ಟರೆ ಸಾಕು. ಯಾವಾಗ ನೀನು ಆ ಕೆಲಸ ಮಾಡಿದರೆ ಆ ದಿನವೇ ನಿನ್ನ ಸಹೋದರನನ್ನೂ ಬಿಡುಗಡೆ ಮಾಡಿಬಿಡುತ್ತೇನೆ. ತಿಳಿಯಿತೋ?" ಎಂದ ರಾಕ್ಷಸ.

ಸಂಧ್ಯಾಕುಮಾರನು ಈ ಪದ್ಧತಿಯನ್ನು ಒಪ್ಪಿಕೊಂಡನು. ಆಮೇಲೆ ರಾಕ್ಷಸನು ನಿಶೀಥನನ್ನು ಹೋಗಲು ಬಿಟ್ಟು, ಸಂಧ್ಯಾಕುಮಾರನನ್ನು ಕೊಳದಲ್ಲಿರುವ ಹಂಸಗಳ ಜತೆಯಲ್ಲಿ ಹಂಸವನ್ನಾಗಿ, ಹದ್ದಿನ ರೂಪದಲ್ಲಿ ಹಾರಿ ಹೊರಟುಹೋದನು.

(ಇನ್ನೂ ಇದೆ)





ಅವಳಿ ಮಕ್ಕಳ ಕಥೆ


೧೭

[ಪಾತಾಳ ಗೃಹದ ಕೋಣೆಯೊಂದರಲ್ಲಿ ನೇತಾಡುತ್ತಿದ್ದ ಗಡ್ಡದ ಮಾಂತ್ರಿಕನನ್ನು ಉದಯನನು ಸಂಧಿಸಿದ. ಸಂಧ್ಯಾ ನಿಶೀಥರು ರಾಕ್ಷಸನ ಬಂದಿಗಳಾಗಿ ಹಿಂಸಿಸಲ್ಪಡುವರೆಂದೂ ಗಡ್ಡದವನಿಂದ ತಿಳಿಯಿತು. ನಿಶೀಥನು ರಾಕ್ಷಸನಿಗೆ ತಾನು ಉದಯನನನ್ನು ಹುಡುಕಿ ಕರೆದು ತರುವೆನೆಂದು ಭರವಸೆ ಕೊಟ್ಟು ಬಿಡುಗಡೆಯಾಗಿ ಎಲ್ಲಿಗೋ ಹೊರಟುಹೋದನು.]

ತನ್ನ ಸಹೋದರರಲ್ಲೊಬ್ಬರಾದ ಉದಯನನನ್ನು ಹುಡುಕಿಕೊಂಡು ಕರೆತರಲಾಗದಿದ್ದರೆ, ಅವನ ಹತ್ತಿರ [illegible] ಭಸ್ಮ ಅಂಜನಗಳನ್ನಾದರೂ ತಾರದೆ ಬಿಡ [illegible]ನೆಂದು ನಿಶೀಥನು ಆಣೆಹಾಕಿ ರಾಕ್ಷಸನಿಗೆ ಗಟ್ಟಿ [illegible] ಕೊಟ್ಟಿದ್ದನು.

ಅದನ್ನು ನಂಬಿ ರಾಕ್ಷಸನು ಅವನನ್ನು ಹೋಗಲು [illegible] ದೊಡ್ಡದು. ರಾಕ್ಷಸನಿಗೆ ಬೇಕಾದುದು [illegible] ಸಂಬಂಧಿಸಿದ ಮಾಯೆಯ ಭಸ್ಮ ಅಂಜನ [illegible] ಅದು ಹೊರಗಿನವರಿಗೆ ಸಿಕ್ಕಿದರೆ ರಾಕ್ಷಸನಿ[illegible] ಅಪಾಯವಿರಬೇಕು. ಆದಕ್ಕಾಗಿಯೇ ಬೇರೆ ಉಪಾಯವಿಲ್ಲದೆ ನಿಶೀಥನನ್ನು ಹೋಗಲು ಬಿಟ್ಟರೂ ಯಾವುದಕ್ಕೂ ಒಳ್ಳೆಯದೆಂದುಕೊಂಡು ಆ ರಾಕ್ಷಸ ಅವನಿಗೆ ತನ್ನ ಮಾಯೆಯಿಂದ ಬಾಯಿ ಬಾರದಂತೆ ಮಾಡಿದ್ದನು. ಆದುದರಿಂದ ನಿಶೀಥನು ತನಗೆ ತಿಳಿದ ರಾಕ್ಷಸನ ಗುಟ್ಟುಗಳನ್ನು ಎಲ್ಲಿಯೂ ಬಾಯಿಬಿಡಲು ಸಾಧ್ಯವಿಲ್ಲವಷ್ಟೇ? ಇದೊಂದು ಬಂಧನ ಅವನನ್ನು ಬಾಧಿಸಿಕೊಂಡಿತ್ತು.

ಹೀಗೆ ಮೂಕನಾಗಿ ಬಿಡುಗಡೆಯಾದ ನಿಶೀಥನು ಕೆಲವು ದಿನ ಪ್ರಯಾಣ ಮಾಡಿ ಮಾಳವದೇಶವನ್ನು ತಲುಪಿದನು. ರಾಜಭಟರಿಗೆ ಅವನನ್ನು ನೋಡಿ



ನ
ವಾಗಿಯ
ಇಲ್ಲಿಂದ ಹೆ
ನನ್ನು ಹು
ನನಗಿ

ಆಶ್ಚರ್ಯವಾಯಿತು. ಒಳ್ಳೆಯ ಲಕ್ಷಣಗಳಿರುವವನಿಗೆ ಬಾಯಿ ಬರುವುದಿಲ್ಲವೆಂದರೇನು? ಅವರು ಅವನನ್ನು ರಾಜನ ಬಳಿಗೆ ಕರೆದೊಯ್ದರು.

ಅವಳಿ ಜವಳಿಗಳಾದ ಉದಯನನಿಗೂ ನಿಶೀಥನಿಗೂ ರೂಪಾಕಾರದಲ್ಲಿ ಯಾವ ವ್ಯತ್ಯಾಸವೂ ಇಲ್ಲದುದರಿಂದ, ರಾಜಭಟರೂ, ಅರಮನೆಯ ನೌಕರರೂ ತಮಗೆ ಪರಿಚಿತನಾದ ಉದಯನನೇ ಇವನೆಂದುಕೊಂಡುದರಲ್ಲಿ ಆಶ್ಚರ್ಯವೇನಿಲ್ಲ.

ಪ್ರತಾಪಸಿಂಹ ರಾಜನು ಕೂಡಾ ಬಂದವನು ಉದಯನನೆಂದೇ ತಿಳಿದನು. ಅವನ ಬಳಿ ಇದ್ದ ಭಸ್ಮ ಅಂಜನಗಳನ್ನು ತಾನು ಅಪಹರಿಸಿದದವನಾದುದರಿಂದ, ಅದನ್ನು ತಿರುಗಿ ಪಡೆಯಲಿಕ್ಕೇ ಇವನು ಬಂದಿರಬೇಕೆಂದು ತೋರಿ ಪ್ರತಾಪಸಿಂಹನ ಕಳ್ಳ ಮನಸ್ಸಿಗೆ ಭಯವಾಯಿತು. ಅದನ್ನು ತೋರ್ಪಡಿಸದೆ, ನಗುತ್ತ ಸ್ವಾಗತಿಸುವವನಂತೆ "ಏನಪ್ಪಾ, ಆಗಲೇ ಬಂದೆಯಲ್ಲಾ? ನೀನು ಹೋದ ಕೆಲಸ ಏನಾಯಿತು? ಕಾಯೋ ಹಣ್ಣೋ?" ಎಂ ಬಹಳ ಆತ್ಮೀಯತೆಯಿಂದ ಕೇಳಿದ.

ನಿಶೀಥನಿಗೆ ಮೊದಲು ಆಶ್ಚರ್ಯವಾಯಿ ಆ ದೇಶಕ್ಕೆ ತಾನು ಈವರೆಗೂ ಬಂದಿರಲಿಲ್ಲ. ಆದ ರಾಜನ ಸೇವಕರೂ, ರಾಜನು ಸಹ ತನ್ನನ್ನು ಪರಿ ನಂತೆ ಕಾಣುವುದನ್ನು ನೋಡಿ ಆಶ್ಚರ್ಯಪಟ್ಟ ಬಹುಶಃ ಉದಯನನು ಇಲ್ಲಿಗೆ ಬಂದಿರಬ ದೆಂಬ ಅನುಮಾನವೂ ಅವನಿಗಾಯಿತು. "ನನ್ನ ಯಾರೆಂದುಕೊಳ್ಳುವಿರೋ?" ಎಂದು ಹೇಳ ಬಾಯಿ ತೆರೆದರೆ. ತನಗೆ ಬಾಯಿಯೇ ಬಾರದಾಗಿ ಆ ಸ್ಥಿತಿಯಲ್ಲಿ ಮುಖ ಭಾವ, ಕೈಸನ್ನೆಗಳಿಂದ ತಾ ಬಾಯಿಬಾರದ ಮೂಕನೆಂದು ರಾಜನಿಗೆ ತಿಳಿ ಪಡಿಸಲಿಕ್ಕಷ್ಟೇ ಅವನಿಂದ ಸಾಧ್ಯವಾಯಿತು.


ಪ್ರತಾಪಸಿಂಹನು ಆಶ್ಚರ್ಯವನ್ನೂ ಅನುತಾ ವನ್ನೂ ಸಹಾನುಭೂತಿಯನ್ನೂ ವ್ಯಕ್ತಪಡಿಸು "ಅದೇನಪ್ಪಾ ಉದಯನಾ? ಕಳೆದಬಾರಿ ಇಲ್ಲಿ ಹೋಗುವಾಗ ಸುಲಕ್ಷಣವಾಗಿ ಮಾತಾಡಿಕೊಂ ಯಲ್ಲಾ? ಈಗ ಮೂಕನಾಗಲು ಏನಾಯಿತೋ?" ಎಂದು ವಿಚಾರಿಸಿದ.

ರಾಜನ ಬಾಯಿಯಿಂದ "ಉದಯನಾ" ಎಂ ಶಬ್ದ ಹೊರಟ ಕೂಡಲೇ ನಿಶೀಥನಿಗೆ ಸಂದೇಹ ಯಿಲ್ಲದಂತೆ ಎಲ್ಲವೂ ಅರ್ಥವಾಯಿತು. ಕೂಡ ಅವನು ಬರೆಯುವ ಸಾಮಗ್ರಿಗಳನ್ನು ತರುವ ಸಂಜ್ಞೆ ಮಾಡಿದನು. ಅವು ಬಂದ ಕೂಡಲೇ, "ನಾ ಉದಯನನಲ್ಲ, ಅವನ ಸಹೋದರ. ಅವನನ್ನು ಹುಡುಕುತ್ತಾ ಹೀಗೆ ಬಂದಿದ್ದೇನೆ. ಅವನು ಇಲ್ಲಿದ್ದ ಬೇಗನೆ ಕರೆಯಿರಿ. ಇಲ್ಲದಿದ್ದರೆ ಅವನು ಎಲ್ಲಿ ಹೋಗಿರುವನೆಂದು ತಿಳಿದರೆ ಸಂತೋಷಿಸುತ್ತೇ ಮಾಂತ್ರಿಕರಾಕ್ಷಸನೊಬ್ಬ ನನ್ನನ್ನು ಮಾಯೆಯಿಂ ಮೂಕ ಮಾಡಿದ್ದಾನೆ" ಎಂದು ಬರೆದನು ಅದನ್ನು ನೋಡಿ ಪ್ರತಾಪಸಿಂಹನಿಗೆ ಸಂಗ

ಯಿತು. ಎಲ್ಲಿ ತನ್ನ ಕಳ್ಳತನದ ಗುಟ್ಟು ಬಯಲಾಗುವುದೋ ಎಂಬ ದಿಗಿಲಿನಿಂದ, ಕಹಿಬೇವಿನ ಗೆ ನುಂಗಿದವನಂತಾದನು. "ಹೇಗೋ ಮಾಡಿ ಯದ ಭಸ್ಮ ಅಂಜನಗಳನ್ನು ಕದ್ದುಕೊಂಡೆನೆಂದು ಪಟ್ಟರೆ, ಇವನೊಬ್ಬ ಬಂದನಲ್ಲ! ಇವನಿಗೆ ಹುಡುಗಿಯರು ಇಲ್ಲಿರುವುದರ ಗಂಧ ಕೂಡ ಯಗೊಡಬಾರದು. ಉದಯನನ ಸಮಾಚಾರ ಗೆ ಗೊತ್ತಿರುವುದನ್ನು ಇವನಿಗೆ ಹೇಳಿದರೆ ಯವನ್ನು ಕೇಳಿ ತಂದುಕೊಂಡ ಹಾಗಾದೀತು ತ್ತಿಲ್ಲವೆಂದು ಹೇಳುವುದೇ ಕ್ಷೇಮ" ಎಂದು ಂಡ ಆ ಧೂರ್ತರಾಜ.

ಇನ್ನೊಂದು ದುರ್ಬುದ್ಧಿ ಕೂಡಾ ಪ್ರತಾಪಸಿಂಹ ಲ್ಲಿ ತಲೆದೋರಿತು. "ಉದಯನನು ಇಷ್ಟು ತ್ತಿಗೆ ರಾಕ್ಷಸನ ಕೈಗೆ ಸಿಕ್ಕಿಬಿದ್ದು ಸತ್ತುಹೋಗಿ ನು. ಹಾಗಿಲ್ಲದಿದ್ದರೆ ಅವನೂ ಒಂದುದಿನ ನನ್ನ ಗೆ ಸಿಕ್ಕಿಬೀಳುವನು. ಇವರಿಬ್ಬರನ್ನೂ ತೀರಿಸಿಬಿಟ್ಟ ದರೆ ಆ ಮೇಲೆ ಈ ರಾಜಕುಮಾರಿಯರಿಗೆ ನನ್ನ ರತು ಬೇರೆ ದಿಕ್ಕು ಯಾವುದೂ ಇಲ್ಲ" ಎಂದು ಂಡು ತನ್ನೊಳಗೆ ತಾನೇ ಉಬ್ಬಿದ.

ಇಷ್ಟೆಲ್ಲ ಮನಸ್ಸಿನಲ್ಲಿ ಮಥಿಸಿಕೊಂಡು ಪ್ರತಾಪ ಹನು ನಿಶೀಥನನ್ನು ಕುರಿತು, "ನಿನ್ನ ಸೋದರ ಉದಯನ ಇಲ್ಲಿಗೆ ಬಂದು ಹೋದುದೇನೋ ನಿಜ. ಆದರೆ ಅವನು ಇಲ್ಲಿ ಒಂದು ಹೊತ್ತು ಮಾತ್ರವೇ ಉಳಿದಿದ್ದ. ಆ ಮೇಲೆ ಅವನ ಪಾಡಿಗೆ ಎತ್ತೋ ಹೊರಟುಹೋದ. ಎಲ್ಲಿಗೆ ಹೋದನೆಂಬುದು ನನಗೆ ತಿಳಿಯದು. ಆ ದಿಕ್ಕಿಗಾಗಿಯೇ ಹೋದ. ಈಗ ನಿನ್ನ ಷ್ಟ ನನಗೆ ಅರ್ಥವಾಗುತ್ತದಪ್ಪ. ಈ ಸ್ಥಿತಿಯಲ್ಲಿ ನಾನು ನಿನಗೆ ನನ್ನಿಂದಾದ ಸಹಾಯ ಮಾಡುತ್ತೇನೆ. ಅವನನ್ನು ಹುಡುಕುವ ನಿನ್ನ ಕೆಲಸಕ್ಕೆ ಒತ್ತಾಸೆಯಾಗಿರುವಂತೆ, ನನ್ನ ಸೇವಕರು ಒಬ್ಬಿಬ್ಬರನ್ನು ನಿನ್ನೊಂದಿಗೆ ಕಳುಹಿಸುತ್ತೇನೆ. ನಿನಗೆ ಪಾಪ, ಬಾಯಿ



ಕೂಡ ಬಾರದಂತಾಗಿದೆಯಲ್ಲಾ!" ಎಂದನು.

"ಆಗಲಿ, ಅಷ್ಟು ಮಾಡಿ" ಎಂಬಂತೆ ನಿಶೀಥನು ತಲೆಯಲ್ಲಾಡಿಸಿದನು. ಪ್ರತಾಪ ಸಿಂಹನು ಮಂತ್ರಿಯನ್ನು ಕರೆಯಿಸಿ, ಅವನ ಕಿವಿಯಲ್ಲಿ ಗುಟ್ಟಾಗಿ, "ಈ ಯುವಕನ ಜತೆಯಲ್ಲಿ ನಮ್ಮ ಸೇವಕರಿಬ್ಬರನ್ನು ಕಳುಹಿಸು. ಊರಿನ ಹೊರಗೆ ಹೋದ ಮೇಲೆ ಎಲ್ಲೋ ಒಂದುಕಡೆ ಯಾರಿಗೂ ಗೊತ್ತಾಗದ ಹಾಗೆ ಅವನನ್ನು ಮುಗಿಸಿಬಿಡಲು ಹೇಳಿಬಿಡು. ಇದು ರಾಜಾಜ್ಞೆ ಎಂದೇ ತಿಳಿಯಿರಿ" ಎಂದನು.

ಈ ಮಾತು ಕೇಳಿದ ಕೂಡಲೇ ಮಂತ್ರಿ ನಿಶ್ಚೇಷ್ಟನಾದನು. ಆದರೆ ರಾಜಾಜ್ಞೆಯನ್ನು ನೆರವೇರಿಸದೇ ಹೋದರೆ ಮೊದಲು ತನ್ನ ತಲೆ ಹಾರಿಹೋದೀತೆಂದು ಅವನಿಗೆ ಭಯವಾಯಿತು. ಮಾತಾಡದೇ ಇಬ್ಬರು ಟೊಣಪಬಂಟರ ಕಿವಿಯಲ್ಲಿ ರಾಜನು ಹೇಳಿದಂತೆಯೇ ಹೇಳಿ ನಿಶೀಥನೊಂದಿಗೆ ಹೋಗುವಂತೆ ಏರ್ಪಡಿಸಿದನು. ದೊಡ್ಡ ಉಪಕಾರ ಮಾಡಿದನೆಂಬಂತೆ ರಾಜ



ನಿಗೆ ನಮಸ್ಕಾರಮಾಡಿ ನಿಶೀಥನು ಆ ಭಟರೊಂದಿಗೆ ಹೊರಟನು. ತಾನೀಗ ಹೋಗುವುದು ಯಮಪುರಿ ಗೆಂಬ ಸಂಗತಿ ನಿಶೀಥ ಬಲ್ಲನೇ ?

ಇವನು ಹೀಗೆ ಹೊರಟಾಗ, ಅಲ್ಲಿ ಗಡ್ಡದ ಮಾಂತ್ರಿಕನೊಂದಿಗಿದ್ದ ಉದಯನನು, ರಾಕ್ಷಸನು ಮತ್ತೆ ಬರುವ ದಿನ ಸಮೀಪಿಸುವುದನ್ನು ನೋಡಿ ಏನು ಮಾಡುವುದೆಂದು ಮಾತಾಡಿಕೊಂಡಿದ್ದನು. ಚೆನ್ನಾಗಿ ಆಲೋಚನೆ ಮಾಡಿದ ಮೇಲೆ ಗಡ್ಡದ ಮಾಂತ್ರಿಕನು, "ಉದಯನಾ, ಸದ್ಯ ಒಂದು ಮಾಡು. ನನ್ನನ್ನು ಮೊದಲಿನಂತೆಯೇ ನೇತಾಡಿಸಿಬಿಡು. ನೀನು ಮಾತ್ರ ರಾಕ್ಷಸನು ಬಂದಾಗ ಕೋಣೆಯ ಯಾವು ದಾದರೂ ಮೂಲೆಯಲ್ಲಿ ಅಡಗಿರು. ಸಂದು ನೋಡಿ ಕೊಂಡು ಹೊರಗೆ ಜಾರಿಬಿಡು. ನಿನ್ನ ವೇಷವು ಸಾಕ್ಷಾತ್ ರಾಕ್ಷಸ ಕಾವಲಿನವರಂತೆಯೇ ಇರುವುದ ರಿಂದ ಹೊರಗೆ ಉಳಿದ ಕಾವಲಿನವರೊಂದಿಗೆ ಕೂಡಿ ನೀನೂ ಕಾವಲು ಕೆಲಸಕ್ಕೆ ಹೋಗು. ಹಾಗೆಯೇ ನಿನ್ನ ಸೋದರರು ಏನಾದರೆಂಬುದನ್ನು ತಿಳಿಯ ಪ್ರಯತ್ನಿಸು. ಈಗ ಇದಕ್ಕಿಂತ ಹೆಚ್ಚೇನೂ ಮಾ ತೋರುವುದಿಲ್ಲ. ಮುಂದೆ ದೇವರಿದ್ದಾನೆ" ಎಂದ

"ಆ ರಾಕ್ಷಸ ಇಲ್ಲಿಗೆ ಬಂದ ಕೂಡಲೇ ಮೂ ಗುಡಾಣ ಎಲ್ಲಿ ಎಂದು ಕೇಳಿದರೆ ಏನು ಹೇಳುತ್ತೀ ಎಂದು ಕೇಳಿದ ಉದಯನ.

"ಅಂದ ಹಾಗೆ ಸರಿಯಾದ ಹೊತ್ತಿಗೆ ನ ಮಾಡಿದೆ. ಅದಕ್ಕೊಂದು ಉಪಾಯ ಮಾಡಬೇ ಅದೇ ಸರಿ. ಆ ಮೂರನೇ ಗುಡಾಣದ ತು ಗಳನ್ನೆಲ್ಲ ಮತ್ತೆ ಇಲ್ಲಿ ತಂದು ಚೆದರಿದ ಇಡಬೇಕು" ಎಂದ ಗಡ್ಡದ ಮಾಂತ್ರಿಕ.

ಅದೇ ಪ್ರಕಾರ ಇಬ್ಬರೂ ಮೂಲೆ ಸೇರಿ ಗುಡಾಣದ ತುಂಡುಗಳನ್ನೆಲ್ಲ ಹೆಕ್ಕಿ ತಂದು ಹಾಕಿದ ರಾಕ್ಷಸನು ನಾಳೆ ಬರುವನೆಂದಿರುವಾಗ ಮುಂ ದಿನ ಉದಯನನು ಗಡ್ಡದ ಮಾಂತ್ರಿಕನನ್ನು ಕೆಳಗಾಗಿ ನೇತಾಡಗಟ್ಟಿ, ತಾನು ಅಡಗಿ ಕು ಕೊಳ್ಳಲು ಒಂದು ಮೂಲೆಯ ಸ್ಥಳವನ್ನು ಗೊ ಮಾಡಿ, ರಾಕ್ಷಸನ ಬರುವಿಕೆಯನ್ನು ಕಾ ಕೊಂಡಿದ್ದನು.

ಅವರ ಲೆಕ್ಕ ತಪ್ಪದಂತೆ ಮೂರನೇ ದಿನ ರಾಕ್ಷಸ ಬಂದೇ ಬಂದನು. ಅವನು ಕೋಣೆಯ ಬಾಗಿ ತೆರೆದ ಕೂಡಲೇ ಮೂರನೇ ಗುಡಾಣ ಒಡೆ ಹೋಗಿರುವುದನ್ನು ನೋಡಿ, "ಯಾರ ಕೆಲ ಇದೂ ?" ಎಂದು ಕೂಗಿ ಗಡ್ಡದ ಮಾಂತ್ರಿಕನನ್ನು ಚುರುಚುರು ನೋಡಿದ.


ಕೂಡಲೇ ಗಡ್ಡದವ ಏನೂ ಬೆದರ "ನನ್ನಿಂದಲೇ ಒಡೆಯಿತು. ಏನು ಮಾಡಲಿ ನೇತು ನೇತು ಬೇಸರವಾಗಿ ಜೋಕಾಲಿಯಾಡೋ ವೆನಿಸಿ, ನನಗೆ ಗೊತ್ತಿಲ್ಲದಂತೆಯೇ ಜೋರಾ ಜೋಕಾಲಿಯಾಡಿದೆ. ಆ ವೇಗದಲ್ಲಿ ಗುಡಾಣ ನನ್ನ ಶರೀರ ಹೊಡೆದುಕೊಂಡು, ಅದು

ಬಾಯಿತು. ನನಗೂ ಪೆಟ್ಟಾಯಿತು! ಇದಕ್ಕೆ ನನ್ನನ್ನು ದೂರಿಯೂ ಪ್ರಯೋಜನವಿಲ್ಲ. ನೀನೇ ನನ್ನನ್ನು ಸ್ವಲ್ಪದೂರ ಇಟ್ಟಿರುತ್ತಿದ್ದರೆ ಹೀಗಾಗು ತ್ತಿತ್ತೆ?" ಎಂದನು.

"ಎಂಥಾ ಸೊಕ್ಕು ನಿನಗೆ!" ಎಂದು ಭುಸು ಗುಟ್ಟಿದ ರಾಕ್ಷಸ. ಗಡ್ಡದ ಮಾಂತ್ರಿಕ ರಾಕ್ಷಸನೊಡನೆ ಜಗಳವಾಡುತ್ತಿದ್ದ ಸಂದು ನೋಡಿ, ಅಡಗಿದ್ದ ಉದಯ ನನು ಸಪ್ಪಳವಿಲ್ಲದೆ ಆ ಕೋಣೆಯಿಂದ ಹೊರಕ್ಕೆ ಬಂದನು.

ಆಗ ಹಗಲು ಕಾವಲು ಕಾಯುವ ಗುಂಪಿನವರು ಕೊಳದ ಬಳಿಗೆ ಹೊರಡುವ ಎತ್ತುಗಡೆಯಲ್ಲಿದ್ದರು. ಅವರೊಂದಿಗೆ ಉದಯನನೂ ಸೇರಿ ಕೊಳದ ಬಳಿ ಹೋದ. ಆಗ ಅವನಿಗೆ ಇತರರು ಮಾತಾಡಿ ಕೊಂಡದರ ಮೂಲಕವಾಗಿ, ತನ್ನನ್ನು ಹುಡುಕಿ ಬಂದಿದ್ದ ರಾಕ್ಷಸನು ನಿಶೀಥನನ್ನು ಕಳುಹಿಸಿದ್ದಾನೆಂಬ ಸಂಗತಿ ತಿಳಿಯಿತು. ಕೊಳದಲ್ಲಿ ಹಂಸವಾಗಿ ಸಂಧ್ಯಾ ವಳಿಯೇ ಇರುವುದನ್ನೂ ತಿಳಿದುಕೊಂಡ. ಅದ ರಿಂದ ಅವನಿಗೆ ಸಮಾಧಾನವಾದರೂ, ಅದೊಂದು ಸಮಾಧಾನವೆಂದು ತೋರಲೇ ಇಲ್ಲ.


ಈ ಸಮಾಚಾರ ತಿಳಿದ ಮೇಲೆ ಉದಯನನಿಗೆ ಮತ್ತಷ್ಟೇ ಹೆಚ್ಚಾಗತೊಡಗಿತು. ತಾನು ಇಲ್ಲಿಯೇ ಇರುವಾಗ, ನಿಶೀಥನು ಪಾಪ, ತನ್ನನ್ನು ಎಲ್ಲಿ ಹುಡುಕ ಬಲ್ಲ? ಎಲ್ಲೆಲ್ಲಾ ಅಲೆದಾಡುತ್ತಿರುವನೋ? ಹೇಗಾದರೂ ಅವನಿರುವ ದಿಕ್ಕನ್ನು ಕಂಡು ಹಿಡಿಪರೆ ಚೆನ್ನಾಗಿತ್ತು. ಅದು ಹೇಗೆ ಸಾಧ್ಯ? ಉದಯ ನನಿಗೆ ಮುಂದೇನು ಮಾಡಬೇಕೆಂದು ತೋರಲಿಲ್ಲ. ಯಾರಾದರೂ ಉಪಾಯ ಹೇಳುವುದಾದರೆ ಅದಕ್ಕಿಲ್ಲ ಯೋಗ್ಯನಾದವನು ಗಡ್ಡದ ಮಾಂತ್ರಿಕನೇ. ಅವ ನೊಡನೆ ಮಾತಾಡಬೇಕಾದರೆ ಪಾತಾಳಗೃಹಕ್ಕೆ ಹೋಗಬೇಕು. ತಾನೊಬ್ಬನೇ ಹೋಗಲು ಈಗ ಸಾಧ್ಯವಿಲ್ಲ. ಅದು ಪದ್ಧತಿಗೆ ವಿರುದ್ಧ. ಯಾವಾಗ ಆ ಕಾವಲುಗಾರರು ಹಿಂದಿರುಗುವ ವೇಳೆ ಬರು ತ್ತದೋ ಎಂದು ಚಡಪಡಿಸಿದ ಉದಯನ.



ಸಾಯಂಕಾಲವಾಯಿತು. ಕಾವಲಿನವರೆಲ್ಲ ಪಾತಾಳ ಗೃಹಕ್ಕೆ ಹೋದರು. ಉದಯನನು ಒಂದೇ ಉಸಿ ರಿಗೆ ಗಡ್ಡದ ಮಾಂತ್ರಿಕನಿರುವ ಕೋಣೆಯ ಬದಿಗೆ ಹೋದನು. ಅಲ್ಲಿ ಅವನಿಗೆ ಅತ್ಯಾಶ್ಚರ್ಯವೇ ಕಾದಿತ್ತು. ಕೋಣೆಯ ಬಾಗಿಲು ತೆರೆದೇ ಇದ್ದಿತು. ಒಳಗೆ ಗಡ್ಡದವನೇ ಇಲ್ಲ.

ರಾಕ್ಷಸನ ಜಾಡೂ ಇಲ್ಲ. ಬರೀ ಹಗ್ಗ ಮಾತ್ರ ನೇತಾಡಿಕೊಂಡಿತ್ತು. ಇದೇನಾದರೂ ರಾಕ್ಷಸನ ಮತ್ತೊಂದು ಮಾಯವಾಗಿರಬಹುದೆ?

ಈ ದೃಶ್ಯವನ್ನು ನೋಡಿ ಉದಯನನು ತೀರಾ ಹತಾಶನಾದನು. "ಅಯ್ಯೋ! ನನ್ನ ಆಶೆಗಳನ್ನೆಲ್ಲಾ ಈ ಗಡ್ಡದ ಜಾಣನ ಮೇಲೆ ಇಟ್ಟುಕೊಂಡು ಬಂದರೆ, ಹೀಗಾಗಿದೆಯಲ್ಲಾ? ಅವನೆಲ್ಲಿ ಹೋದ? ಇದನ್ನು ನೋಡುವಾಗ ರಾಕ್ಷಸನು ಗಡ್ಡದವನ ಮೇಲೆ ಬಹಳ



ಕೋಪವಾಗಿರುವಂತೆ ತೋರುತ್ತದೆ. ಆ ಯುಕ್ತಿ ಕೋವಿದನಾದ ಗಡ್ಡದವನನ್ನು ರಾಕ್ಷಸನು ಕೊಂದು ಗಿಂದುಹಾಕಿರಲಾರನಷ್ಟೆ ? ಇರಲಾರದು. ಹಾಗೆಲ್ಲಾ ಸಿಕ್ಕಿಬೀಳುವವನಲ್ಲ ಅವನು. ಆ ಮಹಾತಂತ್ರಗಾರನು ರಾಕ್ಷಸನಿಗೆ ಏನಾದರೂ ತಿರುಮಂತ್ರಹಾಕಿ ಮಂಕು ಕವಿಸಿ ಎಲ್ಲೋ ಅಡಗಿಕೊಂಡಿರಬೇಕು. ಅಥವಾ ಬೇರೆ ಎಲ್ಲಿಯಾದರೂ ಅವನನ್ನು ಬಂಧಿಸಿದ್ದಾನೇನೋ ಆ ರಾಕ್ಷಸ ? " ಎಂದುಕೊಳ್ಳುತ್ತ ಉದಯನನು ಕೋಣೆಗಳನ್ನೆಲ್ಲಾ ಗಾಳಿಸತೊಡಗಿದನು. ಮೇಲೆ ಕೆಳಗೆ ಮೂಲೆಮೂಡುಕು ಎಲ್ಲಾ ನೋಡಿದನು. ಎಲ್ಲಿಯೂ ಯಾವ ಜಾಡೂ ಗೊತ್ತಾಗದೆ ತಿರುಗಿದಲ್ಲೇ ತಿರುಗುತ್ತಿದ್ದ.

ಅತ್ತಿತ್ತ ತಿರುಗಾಡುವಾಗ ಉದಯನನ ಕಾಲು ನೆಲದ ಮೇಲಿದ್ದ ಒಂದು ಬೆಣೆಯನ್ನು ಮೆಟ್ಟಿತು. ಆ ಕ್ಷಣದಲ್ಲಿ ಇದಿರಿನಲ್ಲಿದ್ದ ಗೋಡೆ ಎರಡುಭಾಗವಾಗಿ ಬಿಡಿಸಿಕೊಂಡು ಒಂದುದಾರಿ ಏರ್ಪಟ್ಟಿತು. ಉದಯನನು ಒಂದು ಹೆಜ್ಜೆ ಮಾತ್ರ ಮುಂದಿಟ್ಟ ಎರಡನೆ ಹೆಜ್ಜೆ ಕದಲಲೇ ಇಲ್ಲ. ಅವನು ವಿಸ್ಮ ದಿಂದ ಸ್ತಂಭಿಸಿಬಿಟ್ಟಿದ್ದ.

ಏಕೆಂದರೆ ಅವನ ಇದಿರಿನಲ್ಲಿ ಒಂದು ಬಂಗಾ ದ್ವಾರವೂ, ಅದರ ಮೇಲಿನಿಂದ ನೇತಾಡುತ್ತಿ ಮೂರು ಭೀಕರ ಸರ್ಪಗಳೂ ಕಂಡುಬಂದವು. ಸ ಗಳು ಉದಯನನನ್ನು ನೋಡಿ ಭುಸುಗುಟ್ಟಿದು ಹಾಗಾದರೆ ಗಡ್ಡದವನು ಆ ಕೋಣೆಯೊಳಗೆ ಬಂ ನಾಗಿರಬೇಕು. ಈ ಮೂರು ಸರ್ಪಗಳನ್ನು ತ ಕೊಂಡು ಒಳಗೆ ಹೋಗುವ ಬಗೆ ಹೇಗೆ ? ಉ ಯನನ ತಲೆಯಲ್ಲಿ ಒಂದು ಉಪಾಯ ಮಿಂ

ಕೋಣೆಯಲ್ಲಿದ್ದ ಒಂದು ಗುಡಾಣವನ್ನು ಹ ಳಿಸಿಕೊಂಡುಬಂದು, ತಾನು ಅದರೊಳಗೆ ಕು ಮುಚ್ಚಳ ಮುಚ್ಚಿ ಅದನ್ನು ವೇಗವಾಗಿ ಉರು ಕೊಂಡು ಬಂಗಾರದ ಬಾಗಿಲಿನಿಂದ ನುಗ್ಗಿ ಒ ಹೋದನು. ಸರ್ಪಗಳು ಆ ಗುಡಾಣವನ್ನು ತಾ ವಾಗಲೀ ಉದಯನ ಸುರಕ್ಷಿತನಾಗಿ ಪಾರಾದ. ಮೇಲೆ ಮುಚ್ಚಳವೆತ್ತಿ ನೋಡಿ, ಅಪಾಯವಿಲ್ಲವೆ ತಿಳಿದು ಆ ಗುಡಾಣದಿಂದ ಹೊರಗೆ ಬಂದನು.

ಆ ಕೋಣೆಯನ್ನು ನೋಡಿ ಉದಯನನ ಮಿಂಚಿತು. ಕೋಣೆಯ ಗೋಡೆಗಳೂ ನೆ ಬಂಗಾರದ ಮಯ. ಅವನು ಸ್ತಬ್ಧನಾಗಿ ಸುತ್ತ ಪರೀಕ್ಷಿಸಿ ನೋಡಿದನು. ಮರುನಿಮಿಷದಲ್ಲಿ ಬಂದ ಕೆಲಸವನ್ನು ಜ್ಞಾಪಿಸಿಕೊಂಡು ಗ ಮಾಂತ್ರಿಕನನ್ನು ಅಲ್ಲೆಲ್ಲಾ ಹುಡುಕತೊಡಗಿ ಎಲ್ಲಿಯೂ ಗಡ್ಡದವನ ಸುಳಿವು ಸಿಗಲಿಲ್ಲ. ಹುಡುಕುವಾಗ ನೆಲದಲ್ಲಿದ್ದ ಇನ್ನೊಂದು ಬೆ ಮೇಲೆ ಅವನ ಪಾದ ಊರಿತು.

ಪುನಃ ಇನ್ನೊಂದು ಅಚ್ಚರಿ ! ಕೂಡಲೇ ನಲ್ಲಿದ್ದ ಗೋಡೆ, ಸೀಳಿ ದಾರಿ ಬಿಟ್ಟಿತು. ನಂತೆಯೇ ಇಲ್ಲಿ ಏನೋ ಅದ್ಭುತವಿದೆಯ

ಬಂದು ಉದಯನನು ಆ ಕಡೆಗೆ ಅಡಿಯಿಟ್ಟನು. ಅಲ್ಲಿ ಕಂಡ ದೊಡ್ಡ ದ್ವಾರವು ಬೆಳ್ಳಿಯದಾಗಿತ್ತು. ಆ ದ್ವಾರದ ಮೇಲಿನಿಂದ ಆರು ಸರ್ಪಗಳು ನೇತಾಡುತ್ತಿದ್ದುವು. ಮೊದಲು ಮಾಡಿದ ಉಪಾಯದಂತೆಯೇ ಗುಡಾಣದೊಳಗೆ ತೂರಿಕೊಂಡು ಉರುಳುತ್ತಾ ಈ ದ್ವಾರವನ್ನು ಕೂಡಾ ದಾಟಿ ಒಳಗೆ ಹೋದನು. ಆದರೆ ಈಸಾರಿ ಆ ಗುಡಾಣ ಜೋರಾಗಿ ಉರುಳಿ ಎದುರಿನ ಗೋಡೆಗೆ ಗುದ್ದಿಕೊಂಡು ಪುಡಿಪುಡಿಯಾಗಿ ಹೋಯಿತು. ಪುಣ್ಯವಶಾತ್ ಉದಯನನು ಥಕ್ಕನೆ ಹೊರಕ್ಕೆ ಜಿಗಿದುದರಿಂದ ಅವನಿಗೇನೂ ಪೆಟ್ಟಾಗದೆ ಉಳಿದುಕೊಂಡ.

ಆ ಕೋಣೆಯ ಗೋಡೆನೆಲಗಳೆಲ್ಲಾ ಬೆಳ್ಳಿಯದಾಗಿದ್ದುವು. ಆದರೆ ಅಲ್ಲಿಯ ಅದ್ಭುತದಲ್ಲಿ ತಲ್ಲೀನನಾಗುತ್ತ ಹೊತ್ತು ಕಳೆಯದೆ, ಉದಯನನು ಮುಂದೆ ಹೋಗುವ ಮಾರ್ಗ ಹೇಗೆಂದು ಯೋಚಿಸತೊಡಗಿದನು. ನೆಲದಲ್ಲೇನಾದರೂ ಬೇಣೆಯೋ ಕಿಂಡಿಯೋ ಇರುವುದೋ ನೋಡಿದನು. ಅಂತಹುದಾವುದೂ ಕಾಣಲಿಲ್ಲ. ಆದರೆ ಮೇಲಿನ ಭಾಗದಿಂದ ಒಂದು ಸಂಕಲೆ ನೇತಾಡುತಿದ್ದಿತ್ತು.

ಉದಯನನು ಏನಾದರಾಗಲೆಂದುಕೊಂಡು ಹಾರಿ ಅದನ್ನು ಹಿಡಿದು ಎಳೆದನು. ಆಗ ಇದಿರಿನಲ್ಲಿದ್ದ ಬೆಳ್ಳಿಯ ಗೋಡೆ ಮೆಲ್ಲಗೆ ಮೇಲಕ್ಕೆದ್ದು ದಾರಿ ಬಿಟ್ಟಂತಾಯಿತು. ಉದಯನನು ಮುಂದೆ ಹೋಗಲು ತೊಡಗಿದ. ಅಲ್ಲಿ ಕಾಣಸಿದ ಮಹಾದ್ವಾರವು ರತ್ನಗಳಿಂದ ಥಳಥಳಿಸುತ್ತಿತ್ತು. ಅದರ ಮೇಲಿನಿಂದ ಹನ್ನೆರಡು ಭಯಂಕರ ಸರ್ಪಗಳು ನೇತಾಡುತ್ತಿದ್ದುವು, ಬುಸುಗುಟ್ಟುತ್ತಾ. ಅವು ಈ ಮೊದಲಿನ ಸರ್ಪಗಳಿಗಿಂತಲೂ ರೌದ್ರವಾಗಿದ್ದುವು.

ಈಗ ಅವುಗಳನ್ನು ದಾಟಿಕೊಂಡು ಹೋಗುವ ಉಪಾಯವಿರಲಿಲ್ಲ. ಗುಡಾಣವಿರಲಿಲ್ಲ. ಹೀಗೆ ಇನ್ನೆಷ್ಟು ದ್ವಾರಗಳಿವೆಯೋ ? ಅವುಗಳಲ್ಲಿ



ಎಷ್ಟೆಷ್ಟು ಭಯಂಕರಗಳಿವೆಯೋ ? ಈ ಜಾಗದಿಂದ ಹಿಂದಿರುಗಿ ಹೋಗುವುದಾದರೂ ಇನ್ನು ಹೇಗೆ ? ಆ ವಿಷಸರ್ಪಗಳ ಬಾಧೆ ಇದ್ದೇ ಇದೆ. ಅದು ಹಾಗಿರಲಿ, ಈಗ ಈ ರತ್ನಗಳ ದ್ವಾರವನ್ನು ಬಿರುಗಾಳಿಯ ವೇಗದಲ್ಲಿ ದಾಟಿದರೂ ಹನ್ನೆರಡು ಸರ್ಪಗಳಿಂದ ತಪ್ಪಿಸಿಕೊಳ್ಳಲಾದೀತೆ ? ಇದಿಷ್ಟೂ ಸಾಹಸ ಆ ಗಡ್ಡದ ಮಾಂತ್ರಿಕನಿಗಾಗಿ ತಾನೆ ? ಹೌದು. ಉದಯನನು ಅಂದುಕೊಂಡ ಕಾರ್ಯಗಳನ್ನು ಸಾಧಿಸುವವರೆಗೂ ಹಿಂಜರಿಯುವ ಗುಣದವನಲ್ಲ.

ಉದಯನನು ತಲೆಯ ಮೇಲೆ ಕೈಯಿಟ್ಟುಕೊಂಡು "ದೇವರೇ ಗತಿ!" ಎಂದು ಕುಳಿತುಬಿಟ್ಟ. ಹಾಗೆ ಸುಮ್ಮನೆ ಕುಳಿತುಕೊಳ್ಳುವ ಪ್ರಕೃತಿಯಲ್ಲ ಅವನದು. ಸಾಹಸದ ಹೊರತು ಬೇರೆ ಮಾರ್ಗ ಕಾಣಲಿಲ್ಲ. ಮೊದಲು ದ್ವಾರದಲ್ಲಿ ನೇತಾಡುತ್ತಿರುವ ಸರ್ಪಗಳನ್ನು ಸಂಹರಿಸಿಬಿಡಬೇಕು. ಒಂದು ಸರ್ಪಕ್ಕೆ ಏಟುಬಿದ್ದರೆ ಉಳಿದ ಸರ್ಪಗಳು ಹೆದರಿದರೂ ಹೆದರಿಯಾವು.

ತನ್ನ ನಂಬಿಕೆಯ ಖಡ್ಗಕ್ಕೇ ಶರಣಾದ ಉದಯನ. ಉದಯನನು ತಟಕ್ಕನೆ ಹಾರಿ ಎದ್ದು ತನ್ನ ಕತ್ತಿಯನ್ನು ಹಿರಿದು ನೇತಾಡುತ್ತಿರುವ ಸರ್ಪಗಳ ಮೇಲೆ ಬೀಸಿದನು. ಆ ಏಟಿಗೆ ಆರು ಸರ್ಪಗಳ ತಲೆಗಳು ತುಂಡಾಗಿ ಹಾರಿಬಿದ್ದುವು. ಇದರಿಂದ ವಿಜಯದ ಉತ್ಸಾಹಗೊಂಡ ಉದಯನ ಮತ್ತೊಂದು ಏಟು ಹಾಕಿದ. ಈ ಸಾರಿ ಐದು ಸರ್ಪಗಳ ತಲೆಗಳು ಹೋದುವು. ಒಂದೇ ಒಂದು ಸರ್ಪ ವಿಪರೀತ ಕೋಪದಿಂದ ಭುಸುಗುಡುತ್ತಿದೆ. ಅದನ್ನು ಕೊಂದು ಬಿಟ್ಟರೆ ನಿರ್ಭಯವಾಗಿ ಒಳಕ್ಕೆ ಹೋಗಬಹುದು.

ಉದಯನನು ಗುರಿಯಿಟ್ಟು ಮೂರನೇ ಸಾರಿ ಕತ್ತಿ ಬೀಸಿದನು. ಆದರೆ ಆ ಸರ್ಪ ಏಟನ್ನು ತಪ್ಪಿಸಿಕೊಂಡು, ಬೀಸಿ ಬಂದು ಉದಯನನ ಕೈಯನ್ನು ಕಚ್ಚಿಬಿಟ್ಟಿತು. "ಹಾಯ್," ಎಂದು ಚೀರುತ್ತಾ ಉದಯನ ಹಿಂದೆ ಹಾರಿದ. ಕತ್ತಿ ಕೆಳಗೆ ಬಿತ್ತು.

ಉದಯನನಿಗೆ ವಿಷವೇರುತ್ತಾ ಇದೆ. ಶರೀರದಿಂದ ಧಾರೆ ಧಾರೆಯಾಗಿ ಬೆವರಿಳಿಯತೊಡಗಿತು. ತಡಮಾಡಿದರೆ ಪ್ರಾಣಕ್ಕೇ ಅಪಾಯವಿದೆ. ಉದಯನನು ಕತ್ತಿ ಎತ್ತಿಕೊಂಡು ಒಂದೇಟಿಗೆ ಆ ಕೈಯ ಭಾಗವನ್ನು ಕಡಿದುಕೊಂಡನು. ಅದೇ ವೇಗದಲ್ಲಿ ಮತ್ತೊಂದೇಟು ಕೊಟ್ಟು ಆ ಸರ್ಪವನ್ನೂ ಹತಮಾಡಿದನು. ಮರುಕ್ಷಣದಲ್ಲಿ ಅವನಿಗೆ ಸ್ಮೃಹೆ ತಪ್ಪಿತು.

ಹಾಗೆ ಎಷ್ಟು ಹೊತ್ತು ಬಿದ್ದಿದ್ದನೋ ಅವನಿ ತಿಳಿಯದು. ಮತ್ತೆ ಅವನಿಗೆ ಎಚ್ಚರ ಬಂದು ನೋ ದಾಗ, ತುಂಡಾದ ಕೈಯಿಂದ ಇಳಿದುಹೋದ ರಕ್ತ ಮಡುವಿನಂತೆ ಕಂಡಿತು. ಬಾಧೆಯನ್ನು ಹಲ್ಲುಕ ಸಹಿಸುತ್ತ ಎದ್ದು ಮುಂದಕ್ಕೆ ನಡೆಯತೊಡಗಿದ.

ಸ್ವಲ್ಪದೂರ ನಡೆಯಲು ದೊಡ್ಡದೊಂದು ಗು ಇದಿರಾಯಿತು. ಆ ಗುಹೆಯೊಳಗೆ ದೇದೀಪ್ಯಮಾ ವಾದ ದೇವಿಯ ವಿಗ್ರಹವಿದ್ದಿತು. ಈ ದೇವಿಯ ರಾಕ್ಷಸನ ಆರಾಧ್ಯದೇವತೆಯಾಗಿರಬೇಕು. ದೇವಿಯ ಕೊರಳಿನಲ್ಲಿ ನೂರೊಂದು ರುಂಡಗಳ ಮಾಲೆಯಿದ್ದಿತು ದೇವಿಯ ಬಾಯಿಯಿಂದ ಭಗಭಗನೆ ಅಗ್ನಿಜ್ವಾಲೆಗಳ ಬರುತ್ತಿದ್ದವು. ದೇವಿಯ ಚಾಚಿದ ಕೈಗಳೊಂದರ ಒಂದು ಹದ್ದು ನಿಂತಿದೆ. ದೇವಿಯ ವಿಗ್ರಹವೂ ವಾತಾವರಣವೂ ಬಹಳ ಭಯಂಕರವಾದ್ದಿತು.

ಆದರೂ ಉದಯನನು ಚಂಚಲನಾಗಲಿಲ್ಲ ಧೈರ್ಯವನ್ನು ಬಿಡದೆ ಎದೆಸೆಟೆದುಕೊಂಡೇ ವಿ ಹದ ಸಮೀಪಕ್ಕೆ ಹೋದ. ಅವನು ನಾಲ್ಕು ಹೆಜ್ಜೆ ಮುಂದಿಡುವಷ್ಟರಲ್ಲಿ ದೇವಿಯ ಹಣೆಯಿಂ ಬ್ರಹ್ಮಾಂಡವಾದ ಹೊಗೆ ಹಾಯಲು ತೊಡಗಿ ಗು ಯೊಳಗೆ ತುಂಬಿಕೊಂಡಿತು. ಆ ಹೊಗೆಯಲ್ಲಿ ಸಿ ಉದಯನನು ತಿಕ್ಕು ಮುಕ್ಕಾಗ ತೊಡಗಿದನು.

(ಮುಂದಿನ ಸಂಚಿಕೆಯಲ್ಲಿ ಮುಗಿಯುತ್ತದೆ)





ಅಮ್ಮಿ ಮಕ್ಕಳ ಕಥೆ


Jan 1976

೧೮

[ರಾಕ್ಷಸನ ಅನುಮತಿಯಿಂದ ಉದಯನನನ್ನು ಹುಡುಕುತ್ತಾ ನಿಶೀಥನು ಹೊರಟನು. ಈ ಮಧ್ಯದಲ್ಲಿ ಪಾತಾಳ ಗೃಹದಲ್ಲಿದ್ದ ಉದಯನನು ಘೋರ ಸರ್ಪಗಳು ಕಾಯುವ ಕೆಲವು ದ್ವಾರಗಳನ್ನು ದಾಟಿ, ಅದ್ಭುತವಾದೊಂದು ದೇವಿಯ ವಿಗ್ರಹವನ್ನು ನೋಡಿದ ಕೂಡಲೇ ಆ ವಿಗ್ರಹದ ಬಾಯಿಯಿಂದ ತೀವ್ರವಾಗಿ ಹೊಗೆ ಬರ ತೊಡಗಿತು. ಉದಯನ ಹೊಗೆಯಲ್ಲಿ ಸಿಕ್ಕಿಕೊಂಡ.]

ಮುದ್ದೆಮುದ್ದೆಯಾಗಿ ಹೊರಡುವ ಹೊಗೆಯಲ್ಲಿ ಸಿಕ್ಕಿಬಿದ್ದು ಉದಯನನಿಗೆ ಉಸಿರು ಕಟ್ಟುತ್ತಿರಲು. ಇನ್ನು ತನಗೆ ಸಾವೆ ಗತಿ ಎಂದುಕೊಂಡನು. ಆ ಕೂಡಲೇ ಬಗೆಬಗೆಯ ಧ್ವನಿಗಳಿಂದ ದೇವಿಯ ವಿಗ್ರದ ಇರುವ ಆ ಗುಹೆಯೊಳಗೆಲ್ಲಾ ಶಬ್ದಮಯವಾಯಿತು. ಪ್ರತಿ ಶಬ್ದವೂ ಮಾರ್ಮೊಳಗುತ್ತಿದೆ. ಹೊಗೆಯ ಸಾಂದ್ರತೆ ಕಡಮೆಯಾಗಿ ಉದಯನನಿಗೆ ಹೋದ ಉಸಿರು ಹಿಂದಿರುಗಿತು. ಅವನು ಧೈರ್ಯದಿಂದ ದೇವಿಯ ವಿಗ್ರಹವನ್ನು ನೋಡುತ್ತ, "ಅಮ್ಮಾ, ಲೋಕಮಾತೆಯೇ, ನೀನು ಇಷ್ಟೊಂದು ಸಾಧು ಜನರ ಪ್ರಾಣಗಳನ್ನು ಬಲಿತೆಗೆದುಕೊಳ್ಳುವುದು ನ್ಯಾಯವೇ? ದುಷ್ಟನಾದ ರಾಕ್ಷಸನಿಗೆ ಇನ್ನಿಷ್ಟು ಶಕ್ತಿಯನ್ನು ಕೊಡುವುದರಿಂದ ಪ್ರಪಂಚಕ್ಕೆ ನೀನು ಮೇಲುಮಾಡಿದಂತಾಗುತ್ತದೆಯೇ? ಹೇಳು ಅಮ್ಮಾ!" ಎಂದನು.

ದೇವಿಯಿಂದ ಯಾವ ಶಬ್ದವೂ ಬರಲಿಲ್ಲ: ನಿಶ್ಚಲಳಾಗಿದ್ದಳು. ಮತ್ತೆ ಉದಯನನೆಂದ: "ಅಮ್ಮಾ, ನಾವು ಇಷ್ಟರವರೆಗೂ ನಿದ್ರಾಹಾರಗಳಿಲ್ಲದೆ ಪಡಬಾರದ ಕಷ್ಟಗಳನ್ನು ಪಟ್ಟೆವು. ನನ್ನ ಒಡಲಲ್ಲಿ ಜೀವವಿರುವವರೆಗೆ ಆ ರಾಕ್ಷಸನನ್ನು ಕೊಲ್ಲದೆಬಿಡಲಾರೆ.



ಅವನ ಪ್ರಾಣ ಎಲ್ಲಿರುವುದೆಂದು ನೀನೇ ಹೇಳಿ ಬಿಡುವೆಯಾ? ದೀನನಾಗಿ ಕೇಳುತ್ತೇನೆ!"

ಅವನ ಈ ಕೋರಿಕೆಗೂ ಪ್ರತ್ಯುತ್ತರ ಬರಲಿಲ್ಲ. "ನನ್ನ ಧೈರ್ಯವನ್ನು ಪರೀಕ್ಷಿಸುವಿಯಾ ದೇವೀ? ನೀನು ನನ್ನನ್ನು ಕೊಂದರೂ ಚಿಂತಿಲ್ಲ, ನಿನ್ನ ಮೇಲೆಯೇ ಖಡ್ಗವೆತ್ತುತ್ತೇನೆ" ಎಂದು ಹೇಳಿ ಉದಯನನು ದೇವಿಯ ಕೈಯಲ್ಲಿದ್ದ ಹದ್ದಿನ ಮೇಲೆ ಹೊಡೆದು ಅದನ್ನೆರಡು ತುಂಡುಮಾಡಿ ಬೀಳಿಸಿದನು. ಅದು ಪಕ್ಕದಲ್ಲಿದ್ದ ಅಗ್ನಿಕುಂಡದಲ್ಲಿ ಬಿದ್ದು ಭಗ್ಗನೆ ಉರಿಯಿತು. ಮರುಕ್ಷಣ ದೇವಿಯ ವಿಗ್ರಹವು ಮಾಯವಾಗಿ ಹೋಯಿತು. ಆ ಪ್ರದೇಶವೆಲ್ಲಾ ಮಹಾ ಪ್ರಕಾಶದಿಂದ ತುಂಬಿಹೋಯಿತು.

ಅತ್ಯಾಶ್ಚರ್ಯದಿಂದ ಉದಯನನು ಹಿಂದಿರುಗಿ ನೋಡಿದನು. ಸ್ವಲ್ಪ ಮೊದಲು ತಾನು ದಾಟಿಕೊಂಡು ಬಂದ ಒಂದಕ್ಕಿಂತ ಒಂದು ಭಯಂಕರವಾದ ದ್ವಾರಗಳೂ ಕೋಣೆಗಳೂ ಯಾವುದೂ ಕಾಣಲಿಲ್ಲ. ಕೇವಲ ಒಂದು ಮರುಭೂಮಿಯಲ್ಲಿ ಅವನು ನಿಂತಿ… ಅವನು ಬಂದ ದಾರಿಯಲ್ಲೇ ಹಿಂದಿರುಗಿ ನಡೆ… ತೊಡಗಿದನು. ಮೊದಲು ರತ್ನಗಳ ಬಾಗಿಲಿದ್ದ ಸ್ಥಳದ… ಒಂದು ಬಾತುಕೋಳಿಯ ಮೊಟ್ಟೆಯಂತಹ ವಸ… ಕಂಡುಬಂತು. ಅದನ್ನೆತ್ತಿಕೊಂಡು ಮತ್ತಿಷ್ಟು ಮುಂ… ವರಿಯಲು ಅಂತಹುದೇ ಬೆಳ್ಳಿಯ ಮೊಟ್ಟೆ ಕಾಣಿಸಿ… ಅದನ್ನೆತ್ತಿಕೊಂಡು ಮತ್ತಿಷ್ಟು ಮುಂದೆ ಹೋಗಲು… ಬಂಗಾರದ ಮೊಟ್ಟೆಯೊಂದು ಸಿಕ್ಕಿತು. ಅದನ್ನು… ಕೂಡಾ ಎತ್ತಿಕೊಂಡು ಮುಂದುವರಿದ ಸ್ಥಳ… ಮೊದಲು ಗಡ್ಡದ ಮಾಂತ್ರಿಕನನ್ನು ಸೇತುಹಾ… ಕೋಣೆಯಾಗಿತ್ತು. ಆದರೆ ಈಗ ಅದೆಲ್ಲಾ ಬ… ಖಾಲಿ ಸ್ಥಳವಾಗಿತ್ತು.

ಉದಯನನು ಇನ್ನೇನು ಮಾಯೆ ಬರುವುದೋ… ಎಂದು ಆತಂಕಗೊಳ್ಳುತ್ತ ಆ ಪಾತಾಳ ಪ್ರದೇಶದಿ… ಮೇಲಕ್ಕೆ ಬಂದನು. ತನ್ನ ಸುತ್ತಲೂ ರಾಕ್ಷಸ… ಸೇವಕರು ಬಂದು ಮುತ್ತಿಕೊಂಡುದನ್ನು ನೋಡಿ… ತಾನು ಪಾತಾಳದಿಂದ ಮೇಲಕ್ಕೆ ಬಂದೆನೆಂ… ತಿಳಿದು ಆಶ್ಚರ್ಯದಿಂದ ಅವರನ್ನೂ ಸುತ್ತ… ಮುತ್ತಲಿನ ಖಾಲೀ ಸ್ಥಳವನ್ನೂ ನೋಡಿದನು. … ರಾಕ್ಷಸನ ಸೇವಕರೊಂದಿಗೆ ಮಂತ್ರಜಲದ ಕೊಳದ… ಹಂಸರೂಪದಲ್ಲಿದ್ದವರೆಲ್ಲರೂ, ನಿಜರೂಪಗಳನ್ನು… ಪಡೆದುಕೊಂಡು ಅಲ್ಲಿ ಬಂದು ಸೇರಿದ್ದರು. ಅ… ರೊಂದಿಗೆ ತನ್ನ ಸಹೋದರನೊಬ್ಬನನ್ನು ನೋಡಿ… ಕೂಡಲೇ ಉದಯನನು ಒಂದೇ ಓಟದಿಂದ ಹೋ… ಅವನನ್ನು ಆಲಿಂಗಿಸಿಕೊಂಡನು.

ರಾಕ್ಷಸನ ಸೇವಕರು ತಮಗಾದ ಆನಂದವನ್ನು… ತಾಳಲಾರದೆ ಕೇಕೇಹಾಕುತ್ತ, ಉದಯನನನ್ನು ತಮ್ಮ… ಭುಜಗಳ ಮೇಲೆ ಎತ್ತಿಕೊಂಡು, "ನೀನು ನಮ… ದೇವರಾಗಿ ಬಂದೆ. ನಮ್ಮ ರಾಜಾ! ನಿನ್ನ ಪುಣ್ಯದಿ… ಇಷ್ಟು ಕಾಲದ ಮೇಲೆ ನಮಗೆ ಮುಕ್ತಿ ಸಿಕ್ಕಿತು" ಎಂದು ನಲಿದಾಡಿದರು.

ಒಬ್ಬನು ಉದಯನನ ಮೊಂಡುಕೈಯಿಂದ ರಕ್ತವು ಸುರಿಯುವುದನ್ನು ನೋಡಿ ಉಳಿದವರೊಂದಿಗೆ, "ಏನು ಕಣಿಯುವಿರಿ ? ಮೊದಲು ಗಾಯಕ್ಕೆ ಔಷಧ ಮಾಡಿರಿ ! ಇಷ್ಟು ದೊಡ್ಡ ಪೆಟ್ಟುಬಿದ್ದರೂ ಏನೂ ಆಗದವನಂತಿದ್ದಾನಲ್ಲ ! ಏನು ಸಹನೆ ! ಎಂಥ ಧೈರ್ಯ !" ಎಂದು ಹೇಳಿಕೊಂಡನು.

ಕೂಡಲೇ ಒಬ್ಬನು ಹಸಿರೆಲೆಗಳನ್ನು ಗುದ್ದಿ ರಸ ತೆಗೆದು ಉದಯನನ ಕೈತುಂಡಾದ ಗಾಯಕ್ಕಿಟ್ಟು ಕಟ್ಟಿದ. ಆಮೇಲೆ ಉದಯನನು ಅವರನ್ನೆಲ್ಲಾ ಕರೆದುಕೊಂಡು ಕೊಳವಿರುವಲ್ಲಿಗೆ ಹೋದನು. ಈಗ ಅಲ್ಲಿ ಕೊಳವಿದ್ದರೆ ತಾನೆ ? ಕೊಳವಾಗಲಿ, ಅದರ ಪಕ್ಕಲಿದ್ದ ಮರಗಳಾಗಲಿ ಏನೂ ಇಲ್ಲ. ಎಲ್ಲಾ ಪಾಳುಬಡಿದ ಖಾಲೀ ಜಾಗ. ಆ ಜಾಗದಲ್ಲಿ ರಾಕ್ಷಸನನ್ನು ಕೊಲ್ಲಲು ಬಂದು ಶಿಲಾರೂಪ ಧರಿಸಿದ ಅದೃಷ್ಟಶಾಲಿಗಳನೇಕರ ಪ್ರತಿಮೆಗಳು ಮಾತ್ರ ಉಳಿದಿದ್ದುವು. ಅವುಗಳನ್ನು ನೋಡಿದರೆ ಎಂಥವರಿಗೂ ಕರಬರಬೇಕು ! ಎಲ್ಲೆಲ್ಲಿಯವರೋ ಪಾಪ !

ಉದಯನನಿಗೆ ಏನೂ ಅರ್ಥವಾಗದೆ, "ಇಲ್ಲಿದ್ದ ಕೊಳವೇನಾಯಿತು ?" ಎಂದು ಕೇಳಿದ. "ಇನ್ನೆಲ್ಲಿಯ ಕೊಳವಯ್ಯಾ ? ಅಸಲು ದೇವಿಯೇ ಮಾಯವಾದ ಮೇಲೆ ಎಲ್ಲಾ ಮಾಯವಾಗಿ ಹೋದುವು" ಎಂದರು ರಾಕ್ಷಸನ ಸೇವಕರು.

"ಹಾಗಾದರೆ ಈ ಶಿಲಾಪ್ರತಿಮೆಗಳ ಗತಿ ಏನು ?" ಎಂದು ಉದಯನನು ಕೇಳಲು, "ಇವುಗಳಿಗೆ ಇನ್ನು ಬೇರೆ ಗತಿ ಇಲ್ಲ. ಕೊಳದ ಮಂತ್ರಜಲ ಹೋದ ಮೇಲೆ, ಇನ್ನು ಇವರಿಗೆ ನಿಜರೂಪ ಬರುವ ಮಾರ್ಗ ಸಿಗುವುದೂ ಇಲ್ಲ. ಇವರು ಹೀಗೇ ಅಮರರಾಗಿರಬೇಕಾದ್ದೇ !" ಎಂದರು ಆ ಸೇವಕರು.

"ಅಯ್ಯೋ ! ಇದೆಂತಹ ದಾರುಣ ! ಯಾವ ಕಾರಣವೂ ಇಲ್ಲದೆ ಇಷ್ಟೊ ಮಂದಿಯ ಗತಿ ಹೀಗಾಗಲು ನಾನೇ ಕಾರಣನಾದೆನಲ್ಲ !" ಎನ್ನುತ್ತಾ



ಉದಯನ ತುಂಬಾ ಚಿಂತೆಗೊಳಗಾದನು. ಅನಂತರ, ತಮ್ಮನ ಕೈಹಿಡಿದು "ಇನ್ನೊಬ್ಬ ಸಹೋದರ ನಿಶೀಥನು ಎಲ್ಲಿ ಹೋದನೋ ? ಆ ಗಡ್ಡದ ಸ್ನೇಹಿತನೇನಾದನೋ ? ಅವಳಿಜವಳಿಗಳಾಗಿ ಯಾರನ್ನು ಹುಡುಕಲು ಬಂದೆವೋ ಆ ರಾಜಕುಮಾರಿಯರು ಏನಾದರೋ ? ಅದೆಲ್ಲಾ ತಿಳಿದುಬರುವ ದಾರಿ ಹೇಗೆ ?" ಎಂದನು.

"ಹುಡುಕಿ ನೋಡೋಣ, ಬನ್ನಿ" ಎಂದು ಸೇವಕರು ಅತ್ತಿತ್ತ ಚಲಿಸಲು ನೋಡುವಾಗ ಉದಯನನು, "ಹಾಗೆ ಬೇಡ. ನೀವೆಲ್ಲಾ ಇಲ್ಲೇ ಇರಿ. ನಾನೊಂದು ನಿಶ್ಚಯಕ್ಕೆ ಬಂದಿದ್ದೇನೆ. ಅದೇ ಸರಿ." ಎಂದು ಸೇವಕರನ್ನು ಅಲ್ಲೇ ಕಾವಲಾಗಿರುವಂತೆ ಹೇಳಿ, ಸಂಧ್ಯನನ್ನೂ ಇತರ ಪರಿವಾರವನ್ನೂ ತನ್ನೊಂದಿಗೆ ಕರೆದುಕೊಂಡು ಅಲ್ಲಿಂದ ಹೊರಟನು.

ಮೊದಲು ಅವನು ತನ್ನ ಪರಿಚಯದವನಾದ ಪ್ರತಾಪಸಿಂಹ ರಾಜನ ಬಳಿಗೇ ಹೋಗಿ, ಅವಳಿಜವಳಿ



ಗಳಾದ ಮೂವರು ರಾಜಕುಮಾರಿಯರ ಸಮಾಚಾರ ಗಳನ್ನು ಹೇಳಿ "ನಿಮಗೇನಾದರೂ ಅವರ ಸಂಗತಿ ಗೊತ್ತೇ ?" ಎಂದು ಕೇಳಿದನು.

"ಇಲ್ಲವಲ್ಲಾ! ಇತ್ತಕಡೆ ಯಾರೂ ಬರಲಿಲ್ಲ. ನಿನ್ನನ್ನು ಮತ್ತೆ ಈಗತಾನೇ ನೋಡುತ್ತಿದ್ದೇನೆ. ಆ ರಾಕ್ಷಸನನ್ನು ತಪ್ಪಿಸಿಕೊಂಡು ಹೇಗೆ ಬಂದೆಯಪ್ಪಾ ?" ಎಂದು ಕೇಳಿದ ಕಳ್ಳ ಪ್ರತಾಪಸಿಂಹ.

"ಆ ರಾಕ್ಷಸನ ಸಮಾಚಾರವೊಂದೂ ನನಗೆ ಗೊತ್ತಾಗಲಿಲ್ಲ. ಆದರೆ ಯಾರ ಪುಣ್ಯದಿಂದಲೋ ಅವನ ಮಾಯಾ ಭವನವನ್ನು ಮಾತ್ರ ಮಣ್ಣುಪಾಲು ಮಾಡಿಬಿಟ್ಟೆ. ಈಗ ಮೊದಲು ನನ್ನ ಸಹೋದರನೂ, ಮೂವರು ರಾಜಕುಮಾರಿಯರೂ ಏನಾದರೆಂದು ತಿಳಿಯಬೇಕಾಗಿದೆ. ಅದು ತಿಳಿಯದೆ ಇಷ್ಟೆಲ್ಲಾ ಕಷ್ಟ ಪಟ್ಟದ್ದೂ ಪ್ರಯೋಜನವಿಲ್ಲದಾಗಿದೆ." ಎಂದ ಉದಯನ. "ನಾನೇನು ಮಾಡಲಪ್ಪಾ ? ಬೇಕಾದರೆ ನನ್ನ ಪರಿವಾರವನ್ನು ಕೂಡಾ ನಿನ್ನ ಸಹಾಯಕ್ಕೆ ಕಳುಹಿಸುತ್ತೇನೆ. ಹೆಚ್ಚೇನು ಮಾಡಲಿ ಹೇಳು." ಎಂದು ರಾಜನು ಬಹಳ ಸಹಾನುಭೂತಿಯನ್ನು ವ್ಯಕ್ತಪಡಿಸಿದನು.

"ನಿಮ್ಮ ಅಭಿಮಾನವಿದ್ದರೇ ಸಾಕು" ಎಂದು ಹೇಳಿ ಉದಯನನು ರಾಜನಿಂದ ಅಪ್ಪಣೆಪಡೆದು ತನ್ನ ಪರಿವಾರದೊಂದಿಗೆ ಅಲ್ಲಿಂದ ಹೊರಟನು.

* * *

ನಿಶೀಥನು, ಧೂರ್ತನಾದ ಪ್ರತಾಪಸಿಂಹನ ಮಾತನ್ನು ನಂಬಿ, ಅವನು ಕಳುಹಿಸಿದ ಸೇವ ರೊಂದಿಗೆ ಹೊರಟುದು ಅವನ ಪ್ರಾಣಕ್ಕೇ ಬಂತು. ಸಮಯ ನೋಡಿ ಕಾಡುದಾರಿಯಲ್ಲಿ ಪ್ರತಾಪಸಿಂಹ ಸೇವಕರು ಕೊಲೆಗಾರರಂತೆ ನಿಶೀಥನ ತಲೆ ಕಡಿದು ಕಾಡಿನಲ್ಲಿ ಕೆಡವಿ ಹೊರಟು ಹೋಗಿಬಿಟ್ಟರು. ಮಾರ ದಿನ ಆ ಪ್ರಾಂತದಲ್ಲಿದ್ದ ಒಬ್ಬ ಋಷಿ ಆ ದಾರಿಯಾಗಿ ಬರುತ್ತ ನಿಶೀಥನ ರುಂಡಮುಂಡಗಳನ್ನು ನೋಡಿ ಕನಿಕರದಿಂದ ಅವುಗಳನ್ನು ತನ್ನ ಆಶ್ರಮಕ್ಕೆ ಎ ಕೊಂಡು ಹೋದನು. ಅವು ಕೆಡದಂತೆ ಮೂ ಗಳಿಂದ ಜೋಪಾನ ಮಾಡಿಟ್ಟು, ಈ ನಿರ್ಭಾಗ್ಯ ಸಂಬಂಧಿಕರಾರಾದರೂ ಬರುವರೇನೋ, ಎಂದು ನೋಡುತ್ತಾ ಇದ್ದನು ಆ ಋಷಿ.

ಕೆಲವು ದಿನಗಳಲ್ಲಿ ದಾನಶೀಲ ಮಹಾರಾಜ ಕಳುಹಿಸಿದ ಮಂತ್ರಿ ಈ ಋಷಿಯ ಆಶ್ರಮವಿರು ದಾರಿಯಲ್ಲೇ ಬಂದನು. ಆ ಮಂತ್ರಿ ಆಶ್ರಮದಲ್ಲಿರು ತಲೆಯನ್ನೂ ಮುಂಡವನ್ನೂ ನೋಡಿ, "ಅಯ್ಯೊ ಏನನ್ನು ನೋಡುತ್ತಿದ್ದೇನೆ! ಇದೇನು ಘೋರ! ಎನ್ನುತ್ತಾ ಕಣ್ಣೀರು ತುಂಬಿ ಕೊಂಡನು.

ಋಷಿ ಅವನಿಗೆ ಸಮಾಧಾನ ಹೇಳುತ್ತ, " ಚಿಂತಿಸಿ ಪ್ರಯೋಜನವಿಲ್ಲವಪ್ಪಾ. ದುಃಖಿಸಬಾರ ನಾನೂ ನಿನ್ನೊಂದಿಗೆ ಬರುತ್ತೇನೆ. ಇಬ್ಬ ಕೂಡಿಯೇ ಹೋಗೋಣ. ನಾನು ಮಾಡಬಹುದ ಉಪಕಾರ ಒಂದೇ ಒಂದು: ಹೋದ ಪ್ರಾಣವ

ಮರಳಿ ತರಲು ನನ್ನಿಂದಾಗದು. ಆದರೆ ಈ ಕಳೇಬರವು ಎಷ್ಟುದಿನಗಳಾದರೂ ಕೆಟ್ಟುಹೋಗದಂತೆ ಇರಿಸಬಲ್ಲೆ." ಎಂದನು.

"ಅಷ್ಟೊಂದು ಮಾಡಿರಿ ಸ್ವಾಮೀ! ಈ ದುಃಖದ ಪ್ರಸಂಗದಲ್ಲಿ ನೀವೂ ನಮ್ಮೊಂದಿಗೆ ಬರುವೆನೆಂದುದು ಮಹಾ ಉಪಕಾರವೇ ನಿಜ. ನೀವು ದೇವರಂತೆ ಒದಗಿದ್ದೀರಿ. ನಾವು ಈ ಸ್ಥಿತಿಯಲ್ಲಿ ಶ್ರಾವಸ್ತೀ ನಗರವನ್ನು ತಲಪಿದರೆ ಸಾಕು. ಉಳಿದ ಸಂಗತಿಗಳನ್ನು ನಮ್ಮ ಮಹಾರಾಜರೇ ನೋಡಿಕೊಳ್ಳುತ್ತಾರೆ." ಎಂದ ಮಂತ್ರಿ.

ನಿಶೀಥನ ಕಳೇಬರವನ್ನು ಸಾಗಿಸಿಕೊಂಡು, ಮಂತ್ರಿ ಋಷಿಯನ್ನೂ ಕರೆದುಕೊಂಡು ಶ್ರಾವಸ್ತೀ ನಗರವನ್ನು ಸೇರಿದನು. ನಿಶೀಥನ ಕಳೇಬರವನ್ನು ನೋಡಿ ಎಲ್ಲರೂ ಸ್ತಂಭೀಭೂತರಾದರು. ಅಲ್ಲಿದ್ದ ಸಂಧ್ಯ ಉದಯನರೂ, ಅವರ ತಾಯಿಯೂ ಕಲ್ಲು ಕರಗು ವಂತೆ ಅಳತೊಡಗಿದರು. ಹೀಗೆ ಅಲ್ಲೊಂದು ಶೋಕ ಸಮುದ್ರವೇಳುತಿದ್ದಾಗ, ಗಡ್ಡದ ಮಾಂತ್ರಿಕ ಅಲ್ಲಿಗೆ ಬಂದು ಸೇರಿದನು.

ಈ ಗಡ್ಡದ ಜಾಣ ಬಹಳ ವಿಚಿತ್ರ ಪರಿಸ್ಥಿತಿಯಲ್ಲಿ ಅಲ್ಲಿಗೆ ಬಂದು ಸೇರಿದ್ದ. ರಾಕ್ಷಸನಿಗೆ ತನ್ನ ಅನುಯಾಯಿ ಯಾದ ಅವನ ಮೇಲೆ ಯಾವಾಗಲೂ ಅನುಮಾನವೇ. ತನ್ನ ಮಾಯಾ ಭವನದಲ್ಲಿ ಅವನನ್ನು ಬಿಟ್ಟು ಹೋದರೆ, ಏನಾದರೂ ಕೇಡುಬಗೆದಾನೆಂದು ಭಾವಿಸಿ, ತಾನು ಸಂಚಾರಕ್ಕೆ ಹೊರಟಾಗ ಅವನನ್ನೂ ತನ್ನೊಂದಿಗೆ ಕರೆದುಕೊಂಡಿದ್ದನು.


ಹೀಗೊಂದು ದಿನ ರಾಕ್ಷಸನು ಆ ಗಡ್ಡದ ಮಾಂತ್ರಿಕ ನೊಂದಿಗೆ ಆಕಾಶ ಮಾರ್ಗದಲ್ಲಿ ಸಂಚರಿಸುತ್ತಿರಲು, ಕೆಳಗೆ ಮಹಾ ಸಮುದ್ರವಿದ್ದಿತು. ಸರಿಯಾಗಿ ಅದೇ ಸಮಯದಲ್ಲಿ ಅತ್ತಕಡೆ ಉದಯನನು ದೇವಿಯ ಗುಡಿಯಲ್ಲಿದ್ದ ಹದ್ದನ್ನು ಎರಡು ತುಂಡುಮಾಡಿ ಹಾಕಿದ ಮೇಲೆಯೇ ಆಕಾಶದಲ್ಲಿ ಹದ್ದಾಗಿ ಹಾರುತ್ತಿದ್ದ



ರಾಕ್ಷಸನು, ನಿಜರೂಪದಿಂದ ಕೂಗುತ್ತಾ ಸಮುದ್ರ ದಲ್ಲಿ ಬಿದ್ದನು. ಬೀಳುವಮೊದಲೇ ಆತನ ಪ್ರಾಣ ಹೊರಟುಹೋಗಿತ್ತು.

ರಾಕ್ಷಸನೊಂದಿಗೆ ಸಮುದ್ರಕ್ಕೆ ಬಿದ್ದ ಗಡ್ಡದ ಮಾಂತ್ರಿಕ, ಸಮುದ್ರದಲ್ಲಿ ಈಜಾಡಲು ತೊಡಗಿದ್ದ. ಒಳ್ಳೆಯ ಈಜುಗಾರನಾದ ಅವನು ಎರಡು ದಿನಗಳ ವರೆಗೆ ಬಹಳ ಕಷ್ಟಪಟ್ಟು ಈಜಾಡುತ್ತ, ಕೊನೆ ಯುಸಿರಿನೊಂದಿಗೆ ಯಾವುದೋ ಒಂದು ತೀರಕ್ಕೆ ಸೇರಿ ಮರಳಿನ ಮೇಲೆ ಬಿದ್ದ.

ಪ್ರಾಣಕ್ಕೆ ಚೇತನ ಬಂದ ಮೇಲೆ ಅವನು ಎದ್ದು ಎಲ್ಲವನ್ನೂ ಆಲೋಚನೆ ಮಾಡಿದ. ರಾಕ್ಷಸನು ಸತ್ತ ಮೇಲೆ ರಾಕ್ಷಸನ ಮಾಯಭವನವೂ ಮಾಯವಾಗಿದೆ ಯೆಂದು ಅವನಿಗೆ ತಿಳಿಯಿತು. ಇನ್ನು ಯಾವ ಭಯವೂ ಇಲ್ಲವೆಂದು ಸಂತೋಷವಾಯಿತು. ಅವನು ಮುಂದಿನ ಸಂಗತಿ ಏನೆಂಬುದನ್ನು ಯೋಚಿಸುತ್ತಾ, ಸಿಕ್ಕಿದವರ ಹತ್ತಿರ ಅದು ಯಾವ ಪ್ರದೇಶವೆಂದು



ವಿಚಾರಿಸಿ, ಶ್ರಾವಸ್ತಿನಗರವೆಂದು ತಿಳಿದನು. ಆಗ ಅವನ ಸಂತೋಷಕ್ಕೆ ಪಾರವಿಲ್ಲದಾಯಿತು. ಅಲ್ಲಿಂದ ನೇರಾಗಿ ರಾಜನ ಅರಮನೆಗೆ ಬಂದಿದ್ದನು.

ಅವನು ಅತ್ಯುತ್ಸಾಹದಿಂದ ಅಳುತ್ತಿರುವವರನ್ನು ನೋಡಿದನು. ಅಲ್ಲಿನವರನ್ನು ಮಾತಾಡಿಸಿ. ನಡೆದ ಸಂಭವಗಳನ್ನು ತಿಳಿದು ಉದಯನನಿಗೂ ರಾಜನಿಗೂ ಸಮಾಧಾನ ಹೇಳತೊಡಗಿದನು.

ನಿಜಕ್ಕೂ ಈ ಗಡ್ಡದ ಮಾಂತ್ರಿಕನಿಗೆ ಗಡ್ಡವಿಲ್ಲದಿದ್ದರೂ ಮೊತ್ತ ಮೊದಲು ಅವನ ಗಡ್ಡದ ಗಿಡ್ಡನಾಗಿ ಹೆಸರುವಾಸಿಯಾದುದರಿಂದ ಅದೇ ನೆಲೆಸಿ ಹೋಯಿತು. ಅವನು ರಾಕ್ಷಸನ ಸಹಚರನಾಗಿದ್ದು ಎಷ್ಟೋ ಮಂತ್ರ ತಂತ್ರ ಮಾಯೆಗಳನ್ನು ಕಲಿತವನು. ಪ್ರತಿ ವಿಷಯದಲ್ಲಿಯೂ ಅವನು ಸಾಧಾರಣ ಮನುಷ್ಯರಂತೆ ಅಧೈರ್ಯ ಪಡುವವನಲ್ಲ. ಅಂತೆಯೇ ಅವನು "ಏನೂ ಆಗಿಲ್ಲವೆಂದು ತಿಳಿಯಿರಿ. ಎಲ್ಲವೂ ಸರಿಯಾಗಿಯೇ ನಡೆದಿದೆ. ಗಾಬರಿಯಾಗಬೇಡಿ. ಈ ಸಣ್ಣ ವಿಷಯಕ್ಕೆ ಸ್ವಲ್ಪವೂ ಅಳಬೇಕಾಗಿಲ್ಲ" ಎಂದು ಎಲ್ಲರನ್ನೂ ಸಮಾಧಾನಪಡಿಸಿದನು.


ತರುವಾಯ ಗಡ್ಡದ ಮಾಂತ್ರಿಕ ಉದಯನನನ್ನು ಪ್ರತ್ಯೇಕವಾಗಿ ಕರೆದು, "ಇದಿಷ್ಟೂ ದುಷ್ಟನಾದ ಅ ಪ್ರತಾಪಸಿಂಹ ರಾಜನಿಂದಲೇ ಆಯಿತು. ಭಸ್ಮ ಅಂಜನಗಳನ್ನು ಕೂಡ ಅವನೇ ಕದ್ದಿದ್ದಾನೆಂದು ನನಗೆ ತೋರುತ್ತದೆ. ಈಗ ಮೊದಲು ಅವನ್ನನ್ನೇ ಸರಿಯಾಗಿ ಪರೀಕ್ಷಿಸಿಬಿಡಬೇಕು. ನಡೆ, ಹೊರಡು" ಎಂದನು.

ಉದಯನನು ಆ ಕೂಡಲೇ ದಾನಶೀಲ ಮಹಾರಾಜನಿಂದ ಒಂದು ಸೈನ್ಯವನ್ನು ಸಹಾಯಕ್ಕೆ ತೆಗೆದುಕೊಂಡನು. ತನ್ನೊಂದಿಗೆ ಗಡ್ಡದ ಮಾಂತ್ರಿಕನನ್ನು ಕರೆದುಕೊಂಡು ವೇಗವಾಗಿ ಮಾಳವರಾಜನ ಅರಮನೆಯವರೆಗೂ ಸಾಗಿದನು. ಆಗ ರಾಜಭವನ ವಿವಾಹದ ವೈಭವದಿಂದ, ಚಪ್ಪರ ತಳಿರು ತೋರಣಾದಿ ಅಲಂಕಾರಗಳಿಂದ, ಸಾಲಂಕೃತರಾದ ಜನರಿಂದ, ವಾದ್ಯಘೋಷಣೆಗಳಿಂದ ಕೋಲಾಹಲವಾಗಿದ್ದಿತು. ಮದುವೇ ಮಂಟಪದ ಪೀಠಗಳ ಮೇಲೆ ಸಾಲಾಗಿ ಸುಹಾಸಿನಿ, ಸುಭಾಷಿಣಿ, ಸುಕೇಶಿನಿಯರು ಮದುಮಗಳ ಶೃಂಗಾರಗಳಿಂದ ಕುಳಿತಿದ್ದಾರೆ! ಮದುಮಗನ ಸ್ಥಾನದಲ್ಲಿ ಪ್ರತಾಪಸಿಂಹನು ಮೂರು ಮಂಗಳ ಸೂತ್ರಗಳನ್ನು ಹಿಡಿದುಕೊಂಡು ನಿಂತಿದ್ದಾ

ಮೂವರು ರಾಜಕುಮಾರಿಯರನ್ನು ಹಿಂದಿನ ಕೆಲವು ಹೆಂಗಸರು ಸುಮ್ಮನಿರುವಂತೆ ಚುಚ್ಚುತ್ತಿರು ದನ್ನು ನೋಡಿದ ಕೂಡಲೇ ಉದಯನನಿಗೆ ಎಲ್ಲ ಅರ್ಥವಾಗಿ ಹೋಯಿತು. ಕೂಡಲೇ ಉದಯನ ಆತ್ಮಾಗ್ರನಾಗಿ ಕತ್ತಿಯನ್ನು ಹಿರಿದು ಮುಂದಕ್ಕೆ ದನು. ಅಷ್ಟರಲ್ಲಿ ಗಡ್ಡದ ಮಾಂತ್ರಿಕ ಅವನನ್ನು ತಡೆ ನಿಲ್ಲಿಸಿದನು. ಉದಯನನನ್ನೂ ಸೈನ್ಯವನ್ನೂ ನೋ ಕೂಡಲೇ ಪ್ರತಾಪಸಿಂಹನು ಗಡಗಡನೆ ನಡುಗ ಗಿದನು. ಉದಯನನ ಕಣ್ಣು ಸನ್ನೆಯಿಂದ ಸೈನಿ ಪ್ರತಾಪಸಿಂಹನನ ಕೈಗಳಿಗೆ ಸಂಕಲೆಗಳನ್ನು ತೊ

ು. ತನ್ನ ಬಂಡವಾಳವೆಲ್ಲಾ ಬಯಲಾಗಿ ಹೋದು ್ನು ನೋಡಿ ಪ್ರತಾಪಸಿಂಹನು ಉದಯನನ ುಂದೆ ದೀನನಾಗಿ ದಾಸಾನುದಾಸನಂತೆ, ತಾನು ಾಡಿದ ಎಲ್ಲ ತಪ್ಪುಗಳನ್ನೂ ಒಪ್ಪಿದನು. ಕದ್ದು ಂದ ಭಸ್ಮ ಅಂಜನಗಳನ್ನು ಉದಯನನಿಗೆ ಒಪ್ಪಿಸಿ ು. ಕಡೆಗೆ ಉದಯನ ಹಾಗೂ ಗಡ್ಡದ ಮಾಂತ್ರಿಕ ್ಬರ ಕಾಲಿಗೂ ಬೀಳುತ್ತ, "ನನ್ನ ಜೀವ ಉಳಿಸಿರಿ. ್ಮ ದಾಸ ನಾನು. ನನ್ನ ಸರ್ವಸ್ವವೂ ನಿಮ್ಮದೇ. ್ಷಿಸಿ ಕಾಪಾಡಬೇಕು" ಎಂದು ಬೇಡಿಕೊಂಡನು.

ದಿರಾದ ಅನೇಕ ಕಷ್ಟಗಳನ್ನು ತಾಳಿಕೊಂಡು, ಂತರಗಳನ್ನು ದಾಟಿ, ತಮ್ಮನ್ನು ರಕ್ಷಿಸಲಿಕ್ಕಾಗಿ ್ರಾಣವನ್ನೇ ತೃಣಪ್ರಾಯವಾಗಿ ಎಣಿಸಿದ ಮಹಾ ್ರುಷ ಉದಯನನನ್ನು ನೋಡಿದ ಕೂಡಲೇ ೂವರು ಅವಳಿ ಜವಳಿಗಳಾದ ರಾಜಕುಮಾರಿ ುರಿಗೆ ಉಕ್ಕಿ ಬಂದ ಹರ್ಷಕ್ಕೆ ಮೇರೆ ಇರಲಿಲ್ಲ. ುರು ಮೂವರೂ ಹಿಡಿಸಲಾರದಷ್ಟು ಆನಂದದಿಂದ ುದಯನನ ಬಳಿಗೆ ಓಡಿಬಂದರು. ಅವರ ಕಣ್ಣು ಂದ ಧಾರೆಧಾರೆಯಾಗಿ ಆನಂದಬಾಷ್ಪ ಇಳಿಯು ್ತಿತು. ಆದರೆ ಉದಯನನ ಕೈ ಮೊಂಡಾಗಿರುವು ್ನು ನೋಡಿ ಅವರು ಗಕ್ಕನೆ ನಿಂತರು. ಅಲ್ಲಿ ಅವಸರದ ಗದ್ದಲದಲ್ಲಿ ಅವನ ಕೈಯ ಸಂಗತಿ ೂ ಗಮನಿಸಿರಲಿಲ್ಲ. ಈಗ ಅದನ್ನು ನೋಡಿದ ಲೇ ಗಡ್ಡದ ಮಾಂತ್ರಿಕ ನಾಗಾಲೋಟದಿಂದ ್ಷಸ ಸ್ಥಾನಕ್ಕೆ ಹೋಗಿ, ಪಾತಾಳಗೃಹ ಜಾಗದಲ್ಲಿ ಉದಯನನ ಕೈಯನ್ನು ತೆಗೆದುಕೊಂಡು ವರೆಗೂ ಎಲ್ಲರೂ ಅವನ ದಾರಿಯನ್ನು ಕಾಯು ್ತಿದ್ದರು. ಆ ಕೈಯೊಂದಿಗೆ ಬಂದ ಗಡ್ಡದ ಮಾಂತ್ರಿಕನು, ವನ್ನು ಪ್ರಯೋಗಿಸಿ, ಕೈಯನ್ನು ಉದಯನನಿಗೆ ಸರಿಮಾಡಿಬಿಟ್ಟನು. ಉದಯನ ಎಂದಿ ದನು. ರಾಜಕುಮಾರಿಯರೂ ಎಂದಿನಂತಿದ್ದಾರೆ! ್ಷಸನು ಆ ಮೂವರು ರಾಜಕುಮಾರಿಯರನ್ನು



ಮೂಕ ಮಾಡಿಬಿಟ್ಟಿದ್ದನಷ್ಟೆ? ಯಾವಾಗ ದೇವಿಯ ಕೈಯಲ್ಲಿದ್ದ ಹದ್ದು ತುಂಡಾಗಿ ಬಿದ್ದಿತೋ ಆಗಲೇ ರಾಕ್ಷಸನೂ ಸತ್ತು ಸಮುದ್ರಕ್ಕೆ ಬಿದ್ದು, ಅವನ ಮಾಯೆ ಗಳೂ ಹೊರಟು ಹೋಗಿದ್ದುವು. ರಾಜಕುಮಾರಿ ಯರ ಮೂಗತನವೂ ಹೋಗಿತ್ತು. ಈಗ ಅವರು ಮೊದಲಿನಂತೆ ಚೆನ್ನಾಗಿ ಮಾತಾಡುತ್ತಿದ್ದರು.

ಈ ವಿಧವಾಗಿ ರಾಜಕುಮಾರಿಯರನ್ನೂ, ಮಾಳವ ರಾಜ್ಯವನ್ನೂ ಸಂಪಾದಿಸಿಕೊಂಡು ಬಂದ ಉದಯ ನನು ಎಲ್ಲರನ್ನು ಕರೆದುಕೊಂಡು ಶ್ರಾವಸ್ತೀ ನಗರಕ್ಕೆ ಬಂದನು. ಗಡ್ಡದ ಮಾಂತ್ರಿಕ ನಿಶೀಥನ ತಲೆಯನ್ನೂ ಮುಂಡವನ್ನೂ ಸೇರಿಸಿ, ಅಂಜನದಿಂದ ಬದುಕಿಸಿದನು. ಈಗ ನಿಶೀಥ ಎಂದಿನಂತೆ ಸರಿಯಾಗಿಯೇ ಇದ್ದನು.

ರಾಜ್ಯದ ಪ್ರಜೆಗಳೂ ಆನಂದಸಾಗರದಲ್ಲಿ ತೇಲಾಡ ತೊಡಗಿದರು. ರಾಜನೂ ರಾಣಿಯೂ ಅವಳಿ ಜವಳಿ ಕುಮಾರರ ಋಣವನ್ನು ಎಷ್ಟು ಜನ್ಮಗಳಾದರೂ ತೀರಿಸಲಾರೆನೆಂದು ಹೇಳುತ್ತ ಆನಂದಬಾಷ್ಪದೊಂದಿಗೆ

ಅವರಿಗೆ ಅಭಿನಂದನೆ ತಿಳಿಸಿದಳು. ಅಷ್ಟೇ ಅಲ್ಲ, ಬೇಗನೇ ಒಂದು ಶುಭ ಮುಹೂರ್ತವನ್ನು ನೋಡಿ ದಾನಶೀಲ ಮಹಾರಾಜನು ಸುಹಾಸಿನಿಯ ಕೈಯನ್ನು ಉದಯನನ ಕೈಯಲ್ಲಿಯೂ, ಸುಭಾಷಿಣಿಯ ಕೈಯನ್ನು ಸಂಧ್ಯಾನ ಕೈಯಲ್ಲಿಯೂ, ಸುಕೇಶಿನಿಯ ಕೈಯನ್ನು ನಿಶೀಥನ ಕೈಯಲ್ಲಿಯೂ ಇರಿಸಿ ಮದುವೆ ಮಾಡಿದನು. ಗಡ್ಡದ ಮಾಂತ್ರಿಕನು ಈಗ ಎಲ್ಲರಿಗೂ ಗುರುವಿನಂತೆ ಆದುದರಿಂದ ಅವನಿಗೆ ವಿಶೇಷ ಮರ್ಯಾದೆ ಸಂದಿತು. ಮೂವರು ಕುಮಾರರೂ ತಂತಮ್ಮ ಪತ್ನಿಯರೊಂದಿಗೆ ಅವನ ಪಾದಕ್ಕೆ ಮಣಿದಾಗ, ಆಶೀರ್ವದಿಸುತ್ತ ಆನಂದಬಾಷ್ಪಗರೆದ ವಿರಾಗಿಯಾದ ಗಡ್ಡದ ಮಾಂತ್ರಿಕ.

ಮದುವೆಯ ವೈಭವ ಮುಗಿದ ಮೇಲೆ ದಾನಶೀಲ ಮಹಾರಾಜನು ಗಡ್ಡದ ಮಾಂತ್ರಿಕನನ್ನು ಮಾಳವ ದೇಶದ ಅಧಿಪತಿಯಾಗಿರುವಂತೆ ಕೇಳಿಕೊಂಡನು. ಸರ್ವಸಂಗ ಪರಿತ್ಯಾಗಿಯಾದ ಗಡ್ಡದ ಮಾಂತ್ರಿಕನಿಗೆ ರಾಜ್ಯವಾಳಬೇಕೆಂಬ ಆಶೆಯೇನಿರಲಿಲ್ಲ. ಮಾಳವದ ರಾಜ ಪ್ರತಾಪಸಿಂಹನು ಸಂಪೂರ್ಣ ಪಶ್ಚಾತ್ತಾಪ ಪಡುತ್ತಿರುವುದರಿಂದ, ಅವನೇ ಆ ರಾಜ್ಯವನ್ನಾಳಿಕೊಂಡಿರಲಿ ಎಂದು ಗಡ್ಡದ ಮಾಂತ್ರಿಕ ತನ್ನ ಅಭಿಪ್ರಾಯ ತಿಳಿಸಲು ಎಲ್ಲರೂ ಒಪ್ಪಿದರು. ದಾನಶೀಲ ಮಹಾರಾಜನು ತನ್ನ ರಾಜ್ಯವನ್ನು ಮೂವರು ಸಹೋದರರಿಗೂ ಹಂಚಿಕೊಡಲು ನಿಶ್ಚಯಿಸಿದನು. ಆದರೆ ಆ ಸಹೋದರರು ರಾಜ್ಯವನ್ನು ಒಡೆಯಲು ಒಪ್ಪಲಿಲ್ಲ. ಸರ್ವ ಸಮರ್ಥನಾದ ಉದಯನನು, ರಾಕ್ಷಸನ ಭವನ ಪ್ರಾಂತದಲ್ಲಿ ದೊರೆತ ಮೂರು ಮೊಟ್ಟೆಯಂತಹ ವಸ್ತುಗಳನ್ನು ಹೊರಕ್ಕೆ ತೆಗೆದನು. ಗಡ್ಡದ ಮಾಂತ್ರಿಕನ ಸಲಹೆಯಂತೆ ಆ ಮೂರು ಮೊಟ್ಟೆಗಳನ್ನು ಸ್ವಲ್ಪ ದೂರ ದೂರದಲ್ಲಿ ಒಡೆದನು. ಕೂಡಲೇ ಆ ಸ್ಥಳದಲ್ಲಿ ಕ್ರಮವಾಗಿ ಬೆಳ್ಳಿಯಕೋಟೆ, ಬಂಗಾರದಕೋಟೆ, ರತ್ನದಕೋಟೆಗಳು ಉದ್ಭವಿಸಿದುವು. ಹೀಗೆ ನಿರ್ಮಾಣವಾದ ಮೂರು ಬೇರೆಬೇರೆ ಕೋಟೆಗಳೊಳಗೆ ಮನೆ ಕಟ್ಟಿಕೊಂಡು ಮೂವರು ಸಹೋದರರೂ ತಮ್ಮ ತಮ್ಮ ಪತ್ನಿಯರೊಂದಿಗೆ ಇರತೊಡಗಿದರು.

ಹೀಗೆ ಸುಖಸಂತೋಷಗಳಿಂದಿರುವಾಗ, ಒಂದು ವಿಷಯವನ್ನು ಮಾತ್ರ ಮರೆಯಲು ಸಾಧ್ಯವಾಗದೆ ಅವರಿಗೆ ದುಃಖವಾಗುತ್ತಿತ್ತು. ದುಷ್ಟ ರಾಕ್ಷಸನ ಮಾಯದಿಂದ ಶಿಲೆಗಳಾಗಿ ಬದಲಾಯಿಸಿದ ಆ ಪ್ರತಿಮೆಗಳ ಸಂಗತಿ ಉದಯನನನ್ನು ನೋಯಿಸುತ್ತಲೇ ಇದ್ದಿತು. ಆ ಮಹಾವೀರರಿಗೆ ಸ್ಮಾರಕಚಿಹ್ನವಾಗಿ ಒಂದು ಭವನವನ್ನು ಕಟ್ಟಿಸಿ, ಆ ಭವನದ ಸುತ್ತಲೂ ಈ ಪ್ರತಿಮೆಗಳನ್ನು ಆಧಾರಸ್ತಂಭಗಳಾಗಿ ಕಾಣುವಂತೆ ನಿಲ್ಲಿಸಿ ಅಲಂಕರಿಸಿದನು. (ಮುಗಿಯಿತು)

